is a simple thing.

MR. CHAIRMAN:- Whatever it may be. Whether it is simple or complicated.

SHRI QUMARUL ISLAM:- They don't want any scales. They want that they should be continued in job on the same consolidated pay of Rs. 900 to Rs.1040. In kerala, in Gao and in Rajasthan States and in almost all the States, because of the very heavy work of census, the recruitment was done on contract basis. The other States have agreed to continue them. I wanted to know whether Government of Karnataka will also continue them on the same consolidated pay. This is my question and for that agitation is going on.

MR. CHAIRMAN:- All of a sudden, Government cannot make a statement.

SHRI QUMARUL ISLAM:- Atleast Tomorrow or day after tomorrow, the reply should come from the Government. That is all.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ಅವರು ರೂಲ್ಸ್ ಪ್ರಕಾರ ಬರೆದು ಕಳಿಸಲಿ. ಸರ್ಕಾರದ ವತಿಯಿಂದ ಹೇಳಿಕೆ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ತಿಳಿಸುತ್ತೇವೆ. ಒಮ್ಮಿಂದೊಮ್ಮೆಗೆ ಈ ರೀತಿ ಮಾಡಿದರೆ ಸರ್ಕಾರದಿಂದ ಹೇಳಿಕೆ ಕೊಡುವುದಕ್ಕೆ ಕಷ್ಟವಾಗುತ್ತದೆ.

ಚೇರ್ಮನ್:- ನೀವು ಬರೆದುಕೊಡಿ.

SHRI QUMARUL ISLAM:- OK. I will sentit under the rules also but at the same time, the situation should not become grave. Through you, Sir, let the Hon'ble Minister come tomorrow with the reply.

MR. CHAIRMAN:- He has positively said.

ಡಾ. ಎನ್. ಬಿ. ನಂಜಪ್ಪ:- ನಮಗೂ ಮನವಿಗಳು ಬಂದಿವೆ.

ಚೇರ್ಮನ್:- ನಿಮಗೆ ಬಂದಿದ್ದರೆ ನೀವೂ ಬರೆದು ಕಳಿಸಿ ಕೊಡಿ.

1992-93ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಮಾನ್ಯ ಅಧ್ಯಕ್ಷರೇ, 1992-93ನೇ ಸಾಲಿನ ಲೋಕೋಪಯೋಗಿ, ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು, ವಿದ್ಯುಚ್ಛಕ್ತಿ ಯೋಜನೆಗಳು, ಸಣ್ಣ ನೀರಾವರಿ, ವಾರ್ತಾ ಮತ್ತು ಪ್ರವಾಸೋದ್ಯಮ ಈ ಇಲಾಖೆಗಳ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಸನ್ಮಾನ್ಯ ಮಂತ್ರಿಗಳು ಕೇಳಿಕೊಂಡಿದ್ದಾರೆ. ಈ ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಸಮಾಜ ಸುಧಾರಣೆಗೆ, ಸಮಾಜದ ಸ್ವರೂಪವನ್ನೇ ಬದಲಾವಣೆ ಮಾಡತಕ್ಕಂಥ ದಿಕ್ಕಿನಲ್ಲಿ ಈ ಇಲಾಖೆಗಳು ಬಹಳವಾದಂಥ ಪ್ರಾಮಾಣಿಕ ಪಾತ್ರವನ್ನು ವಹಿಸುತ್ತವೆ.

ಈ ವರ್ಷ, 1992ನೇ ಸಾಲಿನಲ್ಲಿ ನೀರಾವರಿ, ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಅತಿ ಹೆಚ್ಚಿನ ಹಣವನ್ನು ನಮ್ಮ ಸರ್ಕಾರ ಬಿಡುಗಡೆ ಮಾಡಿದೆ. ಇವತ್ತು ವಿರೋದಪಕ್ಷದವರು ಇದ್ದಿದ್ದರೆ, ಈ

ಸರ್ಕಾರಕ್ಕೆ, ಈ ಸರ್ಕಾರದ ನಾಯಕರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಅವರು ಹೂವಿನ ಹಾರವನ್ನು ಹಾಕಬೇಕಾಗಿತ್ತು. ಈ ರಾಜ್ಯದಲ್ಲಿ ಸುಮಾರು 5-6 ವರ್ಷಗಳಿಂದ, ಕೆಲವರು ನೀರಾವರಿಗೆ ಮುನ್ನೂರು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿ, ಬರೀ ಮಾತನ್ನೇ ಆಡಿ, ಆ ಮಾತಿನಲ್ಲಿಯೇ ಮುಖ್ಯಮಂತ್ರಿ ಆಗುವ ಕನಸನ್ನೂ ಕೂಡ ಕಂಡು ಹೋದರು. ಆದರೆ, ಈ ಸರ್ಕಾರ ಮಾತನಾಡಿ ಹೋಗಬೇಕೆಂಬ ಸದಿಚ್ಛೆಯಿಂದ ಅಧಿಕಾರಕ್ಕೆ ಬಂದಿಲ್ಲ., ಈ ಸರ್ಕಾರ, ಈ ರಾಜ್ಯದ ರೈತವರ್ಗಕ್ಕೆ ಏನಾದರೂ ಅನುಕೂಲಮಾಡಿ ಹೋಗಬೇಕೆಂಬ ಸದಿಚ್ಛೆಯಿಂದ ಅಸ್ತಿತ್ವಕ್ಕೆ ಬಂದಿದೆ. ಉದಾಹರಣೆಗೆ ಸುಮಾರು 550ಕೋಟಿ ರೂಪಾಯಿಗಳನ್ನು ನೀರಾವರಿ ಇಲಾಖೆ ಒಂದಕ್ಕೇ ಈ ವರ್ಷದ ಆಯವ್ಯಯದಲ್ಲಿ ಒದಗಿಸಿದ್ದಾರೆ. ಹಾಗೆಯೇ ವಿದ್ಯುಚ್ಛಕ್ತಿ ಇಲಾಖೆಗೂ ಕೂಡ, ಸುಮಾರು 495 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿರತಕ್ಕಂಥಾದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಅದಕ್ಕಾಗಿಯೇ ನಾನು ಹೇಳಿದೆ, ವಿಧಾನ ಸಭೆಯಲ್ಲಿ ವಿರೋದ ಪಕ್ಷದವರಿದ್ದು, ಈ ಸರ್ಕಾರದ ಕ್ರಮದ ಬಗ್ಗೆ ಸ್ವಾಗತ ಮಾಡಬೇಕಾಗಿತ್ತು. ಶ್ಲಾಘನೆ ಮಾಡಬೇಕಾಗಿತ್ತು. ಆದರೆ ಅವರು ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಏನೆಂದರೆ, ಸರ್ಕಾರ , ರೈತರ ಜಮೀನಿಗೆ ನೀರು ಕೊಡಬೇಕು, ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂಬ ದೃಷ್ಟಿಯಿಂದ ನಾವು ನಿರೀಕ್ಷೆ ಮಾಡಿದುದಕ್ಕಿಂತಲೂ ಹೆಚ್ಚು ಹಣವನ್ನು ಕೊಟ್ಟಿದ್ದಕ್ಕಾಗಿ , ನಾನು ಬಹಳ ಸಂತೋಷದಿಂದ ಈ ಬೇಡಿಕೆಗಳನ್ನು ಸ್ವಾಗತ ಮಾಡುತ್ತಿದ್ದೇನೆ. ಸನ್ಮಾನ್ಯ ಬಂಧುಗಳೇ, ಜೊತೆಯಲ್ಲಿ ಕೆಲವು ಕಹಿ ಮಾತುಗಳನ್ನು ಕೂಡ ಹೇಳಬೇಕಾಗುತ್ತದೆ. ಮನುಷ್ಯನಿಗೆ ರೋಗ ಬಂದರೆ ,ಕಹಿ ಮಾತ್ರೆಗಳನ್ನು ನುಂಗುತ್ತಾನೆ, ಅದು ಮನಸ್ಸಿಗೆ ಮೈಗೆ ಹಿತವಾಗಿ ಕಾಣುವುದಿಲ್ಲ, ಆದರೆ ರೋಗ ಮಾತ್ರ ಗುಣವಾಗುತ್ತದೆ. ಆ ದಿಕ್ಕಿನಲ್ಲಿ ಕೆಲವು ಲೋಪದೋಷಗಳ ಬಗ್ಗೆ ಈ ಸಂದರ್ಭದಲ್ಲಿ ಹೇಳದಿದ್ದರೆ, ನನ್ನ ಕರ್ತವ್ಯ ಲೋಪವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸಂಬಂಧಪಟ್ಟ ಇಲಾಖಾ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಇಲಾಖೆಗಳಿಗೆ ಸ್ವಲ್ಪ ಗೆದ್ದಲು ಕಾಟ ಜಾಸ್ತಿ. ನಮ್ಮ ಹಳ್ಳಿಯಲ್ಲಿ ಗೆದ್ದಲು ಕಾಟ ಎಂದು ಹೇಳುತ್ತಾರೆ. ಗೆದ್ದಲು ಕಾಟ ಎಂದರೆ, ಕಟ್ಟಿದ ಕಟ್ಟಡಗಳು ಬೇಗ ಕುಸಿಯುತ್ತವೆ,ಮಾಡಿದ ರಸ್ತೆಗಳು ಬೇಗ ಗುಂಡಿ ಬೀಳುತ್ತವೆ., ತೋಡಿದ ಕಾಲುವೆಗಳು ಬೇಗ ಒಡೆದು ಹೋಗುತ್ತವೆ. ಆ ಗೆದ್ದಲು ಕಾಟದಿಂದ ಈ ಇಲಾಖೆಯ ನೇತೃತ್ವವನ್ನು ವಹಿಸಿರತಕ್ಕಂಥ ಮಂತ್ರಿಗಳು, ಪಾರು ಮಾಡಿದೆ, ಸರ್ಕಾರ ಇಷ್ಟು ಹೆಚ್ಚು ಹಣವನ್ನು ಕೊಟ್ಟಿದ್ದಕ್ಕೆ ಸಾರ್ಥಕವಾಗುತ್ತದೆ. ಈ ದಿಕ್ಕಿನಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಈ ಇಲಾಖೆಗೆ ಕೊಟ್ಟು , ಗೆದ್ದಲು ಕಾಟವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಗೆದ್ದಲು ಕಾಟ ಎಂದರೆ ತಮಗೆ ಗೊತ್ತಿದೆ. ಇಲಾಖೆಯಲ್ಲಿ ಸೋರಿ ಹೋಗತಕ್ಕ ಹಣವನ್ನು, ಭ್ರಷ್ಟಾಚಾರವನ್ನು, ಪರ್ಸೆಂಟೇಜ್ ಹಾವಳಿಯನ್ನು ತಪ್ಪಿಸಬೇಕು. ಒಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ, ಮಾನ್ಯ ಮಂತ್ರಿಯವರ ಗಮನಕ್ಕೆ ತಂದರೆ ಅತಿಶಯೋಕ್ತಿಯಾಗಲಾರದೆಂದು ನಾನು ಭಾವನೆಮಾಡಿಕೊಂಡಿದ್ದೇನೆ. ನಮ್ಮ ಪೂರ್ವಿಕರು, ಹೇಳುತ್ತಿದ್ದ ಮಾತನ್ನು ಈ ಸಂದರ್ಭದಲ್ಲಿಹೇಳಬೇಕಾಗುತ್ತದೆ. ಹಳ್ಳಿಗಳಲ್ಲಿ ತೊಟ್ಟಿ ಮನೆಗಳನ್ನು ಕಟ್ಟಿದ್ದಾರೆ, ಅವರು ಏನು ಇಂಜಿನಿಯರಿಂಗ್ ಓದಿರಲಿಲ್ಲ,ಆಗ ಇಂಜಿನಿಯರಿಂಗ್ ಕಾಲೇಜುಗಳೂ ಇರಲಿಲ್ಲ, ಅವರು ಅವಿದ್ಯಾವಂತರು. ಆ ತೊಟ್ಟಿ ಮನೆಗಳಿಗೆ ಸಿಮೆಂಟ್ ಉಪಯೋಗ ಮಾಡಿಲ್ಲ,ಹೆಂಚುಗಳಿಲ್ಲ, ನಾಡ ಹೆಂಚುಗಳನ್ನು ಹಾಕಿದ್ದಾರೆ ಮತ್ತು ಗಳಗಳನ್ನು ಹಾಕಿದ್ದಾರೆ. ಬರೀ ಮಣ್ಣಿನಲ್ಲಿ ತೊಟ್ಟಿ ಮನೆಗಳನ್ನು ಕಟ್ಟಿದ್ದಾರೆ. ಆ ಮನೆಗಳನ್ನು ಕಟ್ಟಿ 100 ವರ್ಷ, 200 ವರ್ಷವಾದರೂ ಕೂಡ ಒಂದು ಬಿರುಕನ್ನೂ ಕೂಡ ಕಾಣುವುದಕ್ಕೆ ಆಗುವುದಿಲ್ಲ. ಅವರು ಅಷ್ಟೊಂದು ಕಾಯಕ ಮಾಡಿ ನಿಷ್ಠೆಯನ್ನು ತೋರಿ ಕೆಲಸ ಮಾಡುತ್ತಿದ್ದರು. ಅವತ್ತು ಎಂಜಿನಿಯರ್‌ಗಳು ಇರಲಿಲ್ಲ. ಇವತ್ತು ಎಂಜಿನಿಯರ್‌ಗಳು ಕಟ್ಟಡ ಕಟ್ಟಿದ್ದಾರೆ. ನಾವು ಹಳ್ಳಿಗಳ ಕಡೆ ಹೋದಾಗ , ಶಾಲೆಗಳನ್ನು , ಸೇತುವೆಗಳನ್ನು , ನೀರಾವರಿ ಕಾಲುವೆಗಳನ್ನು ತೋಡಿರುವುದನ್ನು ನೋಡುತ್ತೇವೆ. ಅವು ಒಂದೇ ವರ್ಷದಲ್ಲಿ ಎಲ್ಲಾ ಕುಸಿದು ಬೀಳುತ್ತವೆ. ಇಂತಹ ಎಂಜಿನಿಯರ್‌ಗಳು ನಮಗೆ ಬೇಕೇ ಎಂಬ

ಪ್ರಶ್ನೆಯನ್ನು ಇಲ್ಲಿ ಹಾಕಬೇಕಾಗುತ್ತದೆ. ಅಂತಹ ಇಂಜಿನಿಯರ್‌ಗಳನ್ನು ನೀವು ಸೃಷ್ಟಿ ಮಾಡುವುದಕ್ಕಿಂತ, ಉತ್ಪತ್ತಿ ಮಾಡುವುದಕ್ಕಿಂತ, ಇವರನ್ನು ವಾಪಸ್ ಕರೆಸಿಕೊಂಡು , ಹಳ್ಳಿಯಲ್ಲಿರುವ ಅವಿದ್ಯಾವಂತರನ್ನು, ಕಾಯಕವೇ ಕೈಲಾಸ ಎಂದು ಬಸವಣ್ಣನವರ ವಚನ ಏನಿದೆ ಅದಕ್ಕೆ ಬದ್ಧರಾಗಿ ದುಡಿಯುತ್ತಿದ್ದಾರಲ್ಲ ಅವರನ್ನು ನೇಮಕ ಮಾಡಿಕೊಂಡು ಕೆಲಸ ಮಾಡಿಸಿ, ಸಿಮೆಂಟ್ ಕೊಟ್ಟು ಕೆಲಸ ಮಾಡಿಸಿದರೆ ನೂರು ವರ್ಷ ಅಲ್ಲ, ಇನ್ನೂರು ವರ್ಷ ಅಲ್ಲ, ಇನ್ನೂ ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಆ ದಿಕ್ಕಿನಲ್ಲಿ ತಾವು ಆಲೋಚನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಸ್ವಾಮಿ ಇವತ್ತು ಎಷ್ಟೋ ಕಡೆ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಪಿ.ಎಸ್.ಸಿ.ಯಿಂದ ಇಂಜಿನಿಯರ್‌ಗಳ ಸೆಲೆಕ್ಷನ್ ಆಯಿತು, ಈ ಹಿಂದೆ ಲೋಕಸೇವಾ ಆಯೋಗದ ವತಿಯಿಂದ ಈ ಸದನದಲ್ಲಿ ಈ ವಿಚಾರವಾಗಿ ನಾನೂ ಕೂಡ ಪ್ರಸ್ತಾಪ ಮಾಡಿದೆ, ಅನೇಕರು ಪ್ರಸ್ತಾಪ ಮಾಡಿದ್ದಾರೆ. ತಮಗೆ ಗೊತ್ತಿದೆ ಆ ಸಂದರ್ಭದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳ ಆಯ್ಕೆ ಆಯಿತು ಆಯ್ಕೆಗಾಗಿ 4ಲಕ್ಷ, 6 ಲಕ್ಷ ಕೊಡುವುದರ ಮೂಲಕ ಭ್ರಷ್ಟಾಚಾರದ ಹಾವಳಿ ನಡೆದಿದೆ ಎಂಬ ಆರೋಪ ನಡೆಯಿತು. ನಾಲ್ಕು ಲಕ್ಷ ಆರು ಲಕ್ಷ ಕೊಟ್ಟು ಕೆಲಸಕ್ಕೆ ಬಂದಿರತಕ್ಕಂಥವರು ಏನು ಕೆಲಸ ಮಾಡುತ್ತಾರೆ. ಈ ರೀತಿ ದುಡ್ಡು ಕೊಟ್ಟವರನ್ನು ನೀವು ನೇಮಕ ಮಾಡಿಕೊಂಡರೆ ಎಷ್ಟರ ಮಟ್ಟಿಗೆ ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಆದ್ದರಿಂದ ಈ ಆಯ್ಕೆಯನ್ನು ರದ್ದು ಮಾಡಬೇಕೆಂದು ಈ ಸದನದಲ್ಲಿ ನಾವೆಲ್ಲರೂ ಒತ್ತಾಯ ಮಾಡಿದೆವು. ಈಗ ಆ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂಬ ವಿಚಾರ ತಿಳಿಸಬೇಕೆಂಬ ಮಾತನ್ನು ಹೇಳುತ್ತೇನೆ. ವಿಧಾನಸೌಧದ ಪೂರ್ವ ದಿಕ್ಕಿನಲ್ಲಿ ನಮ್ಮ ಹನುಮಂತಯ್ಯನವರು ಒಂದು ದೊಡ್ಡ ವ್ಯಾಕ್ಯವನ್ನು ಬರೆಸಿದ್ದಾರೆ. ಏನೆಂದರೆ ಸರ್ಕಾರದ ಕೆಲಸ ಅಂದರೆ ದೇವರ ಕೆಲಸ ಎಂದು, ಇದು ಇವತ್ತು ಎಷ್ಟರಮಟ್ಟಿಗೆ ಅನ್ವಯವಾಗುತ್ತದೋ ಗೊತ್ತಿಲ್ಲ. ಅವತ್ತಿನ ಕಾಲದಲ್ಲಿ ಅವರು ಈ ಕಟ್ಟಡ ಏನು ಕಟ್ಟಿಸಿದರು, ಇದು ಇಷ್ಟೊಂದು ಭದ್ರವಾಗಿದೆ. ಅವರು ಅವತ್ತು ಸರ್ಕಾರದ ಕೆಲಸ ದೇವರ ಕೆಲಸ ಎಂದು ತಿಳಿದುಕೊಂಡು ಕೆಲಸ ಮಾಡಿದರು. ಇವತ್ತು ಸರ್ಕಾರದ ಕೆಲಸ ಎಂದರೆ ಸ್ವಂತ ಕೆಲಸ ಎಂದು ತಿಳಿದುಕೊಂಡು ಈ ಕಟ್ಟಡ ಕಟ್ಟಿದ್ದರೆ ಒಂದು ವರ್ಷಕ್ಕೇ ರಿಪೇರಿ ಮಾಡಬೇಕಾಗಿತ್ತೋ ಏನೋ? ಆ ದಿಕ್ಕಿನಲ್ಲಿ ಇದೇ ತರಹ ಇಲಾಖೆಗಳನ್ನು ನಡೆಸಿಕೊಂಡು ಹೋಗುವುದಾದರೆ, ಸರ್ಕಾರದ ಕೆಲಸ ದೇವರ ಕೆಲಸ ಎಂಬುದನ್ನು ತೆಗೆದು ಹಾಕಿ, ಸರ್ಕಾರದ ಕೆಲಸ ಎಂದರೆ ಸ್ವಂತ ಕೆಲಸ ಎಂಬ ಬೋರ್ಡನ್ನು ಹಾಕಬೇಕಾಗುತ್ತದೆ. ಈ ದಿಕ್ಕಿನಲ್ಲಿ ಕೂಡ ತಾವು ಆಲೋಚನೆಮಾಡಬೇಕು. ಕಿಂಚಿತ್ತಾದರೂ ತತ್ವ ನೀತಿ ಏನಿದೆ ಅದಕ್ಕೆ ಬದ್ಧರಾಗಿ ನಡೆದುಕೊಳ್ಳುವುದಕ್ಕೆ ನಿಮ್ಮ ಇಲಾಖೆಗಳಲ್ಲಿ ಕಾಯಕಲ್ಪ ಮಾಡಬೇಕೆಂದು ಹೇಳುತ್ತೇನೆ. ರಾಜಭವನದ ದಿಕ್ಕಿನಲ್ಲಿ ಮತ್ತೊಂದು ವಾಕ್ಯವನ್ನು ಬಳಕೆ ಮಾಡಿದ್ದಾರೆ. ಧರ್ಮವನು ರಕ್ಷಿಪನ ಧರ್ಮ ರಕ್ಷಿಪುದು ಎಂದು. ನಮ್ಮ ಹಳ್ಳಿಗಳಲ್ಲಿ ಗಾದೆ ಮಾತು ಹೇಳುತ್ತಾರೆ. ಏನೆಂದರೆ ಅನ್ಯಾಯ ಮಾಡಿದವನು ಅನ್ನ ಉಣ್ಣುತ್ತಿದ್ದಾನೆ, ಸತ್ಯವಾಗಿ ನಡೆದವನು ಸತ್ತೇ ಹೋದ ಎಂದು, ಹಾಗೆ ಈ ಇಲಾಖೆಗಳಲ್ಲಿ ಏನಾಗಿದೆ ಎಂದರೆ ಯಾರು ನ್ಯಾಯವಾಗಿ ತನ್ನ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾನೆ, ಅವನಿಗೆ ಹೇಳುವವರು ಕೇಳುವವರು ಯಾರೂ ಇಲ್ಲ, ಗುರುತಿಸುವುದೇ ಇಲ್ಲ, ಎಲ್ಲಿಗೋ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಯಾರು ಇಲ್ಲಸಲ್ಲದ ಚಾರ್‌ಸೌಬೀಸ್ ಕೆಲಸ ಮಾಡಿಕೊಂಡು ಹಣವನ್ನು ಹೆಚ್ಚು ಲೂಟಿ ಮಾಡಿಕೊಂಡು ತಿರುಗಾಡುತ್ತಿದ್ದಾನೆ ಅವರಿಗೆ ಬೇಕಾದ ಕೆಲಸವನ್ನು ಕೊಡುತ್ತಾರೆ. ಅದಕ್ಕಾಗಿ ಯಾರು ಧರ್ಮವನ್ನು ರಕ್ಷಿಸುತ್ತಾರೆ, ಯಾರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ,ಯಾರು ನ್ಯಾಯವಾಗಿ ನಡೆಯುತ್ತಾರೆ ಅವರನ್ನು ಗುರುತಿಸಿ ಒಳ್ಳೆಯ ಕೆಲಸಮಾಡುವುದಕ್ಕೆ ಒಳ್ಳೆಯ. ಜಾಗ ಕೊಡಬೇಕು. ಆಗ ಮಾತ್ರ ಏನು ಅವತ್ತು ಅವರು ಬರೆಸಿದ್ದಾರೆ, ಧರ್ಮವನ ರಕ್ಷಿಪನ ಧರ್ಮ ರಕ್ಷಿಪುದು ಎಂದು ಹೇಳಿ ಅದು ನಿಜಕ್ಕೂ ಕೂಡ ಸಾರ್ಥಕವಾಗುತ್ತದೆ. ಆ ದಿಕ್ಕಿನಲ್ಲಿ ಗಂಭೀರವಾಗಿ ತಾವು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ವಿನಂತಿಸಿಕೊಳ್ಳುತ್ತೇನೆ. ಸ್ವಾಮಿ, ಈ ಇಲಾಖೆಯಲ್ಲಿ ತಾನು ಒಪ್ಪಿಕೊಳ್ಳಬಹುದು.

ಮಾನ್ಯ ಮಂತ್ರಿಗಳು ಕೂಡ ಒಪ್ಪಿಕೊಳ್ಳಬಹುದು. ಏನೆಂದರೆ ಹಣ ಸೋರಿ ಹೋಗುತ್ತಿದೆ. ಕೆಲಸದ ಗುಣ ಮಟ್ಟ ಸರಿಯಾಗಿಲ್ಲ ಅಂತ ಹೇಳಿ ಆದರೆ ಎಷ್ಟು ಜನ ಅಧಿಕಾರಿಗಳು ಅದಕ್ಷರಿದ್ದಾರೆ, ಅಪ್ರಾಮಾಣಿಕರಿದ್ದಾರೆ ಎಂದು ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಇಲ್ಲವೇ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ತಮಗೆ ಗೊತ್ತಿಲ್ಲವೇ ಈ ವಿಚಾರ? ಗೊತ್ತಿದ್ದರೆ ಏತಕ್ಕೆ ಸುಮ್ಮನೆ ಇದ್ದೀರಿ? ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಸ್ವಲ್ಪ ಮುಚ್ಚುಮರೆ ಇಲ್ಲದೆ ಹೇಳಬೇಕಾಗುತ್ತದೆ. ಅವರೆಲ್ಲಾ ಚೆನ್ನಾಗಿ ಉಂಡು ಹೋಗುತ್ತಾರೆ. ಮೈ ಮೂಳೆ ಮುರಿದು ದುಡಿಯತಕ್ಕಂಥ ರೈತನಿಗೆ ಮೈ ತೊಳೆಯಲು ಸೋಪ್ ಇಲ್ಲ. ಆದರೆ ಎರಡು ವರ್ಷ ಮೂರು ವರ್ಷ ಇಲಾಖೆಗಳಲ್ಲಿ ನೌಕರಿ ಮಾಡಿದರೆ ಸಾಕು. ಬೆಂಗಳೂರಿನಲ್ಲಿ ಒಂದು ಮನೆ. ಮೈಸೂರಿನಲ್ಲಿ ಒಂದು ಮನೆ. ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ಮನೆ ಮಾಡಿಕೊಳ್ಳುತ್ತಾರೆ. ಇದು ಹೇಗೆ ಆಗುತ್ತದೆ ಸ್ವಾಮಿ? ಇದರ ಬಗ್ಗೆ ತನಿಖೆಯಾಗಿದೆಯೇ? ತನಿಖೆ ಮಾಡಿ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಏತಕ್ಕೆ ತೆಗೆದುಕೊಳ್ಳುತ್ತಿಲ್ಲ? ಅವರು ಸರ್ಕಾರಕ್ಕೆ ನೆಕ್ಕಿಸಿ ಅವರು ಪೂರ್ಣ ಉಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬಾರದು. ತನ್ಮೂಲಕ ಹೇಳುವುದಾದರೆ ಈ ಸಾಮಾಜಿಕ ಸ್ವರೂಪವನ್ನು ಬದಲಾವಣೆಮಾಡತಕ್ಕಂಥ ಶಕ್ತಿ ನಿಮ್ಮ ಇಲಾಖೆಗಳಲ್ಲಿ ಇದೆ. ಆ ದಿಟ್ಟಿನಲ್ಲಿ ತಾವು ಆಲೋಚನೆ ಮಾಡಬೇಕು. ಅಂತ ಹೇಳಿ ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಒತ್ತಾಯವನ್ನು ಮಾಡುತ್ತೇನೆ. ಈ ರಾಜ್ಯದಲ್ಲಿ ಹಿಂದೆ ಎಷ್ಟು ಜನರು ಚೀಫ್ ಇಂಜಿನೀಯರ್ಸ್ ಇದ್ದರು. ಇವತ್ತು ಎಷ್ಟು ಜನ ಚೀಫ್ ಇಂಜಿನಿಯರ್ಸ್ ಇದ್ದಾರೆ ಎಂಬುದನ್ನು ತಾನು ಯೋಚನೆ ಮಾಡಿ. ಇವತ್ತು ಒಬ್ಬ ಚೀಫ್ ಇಂಜಿನಿಯರ್ ಇದ್ದಾಗ ನಿಮ್ಮ ಇಲಾಖೆಗಳಲ್ಲಿ ಕಾರ್ಯವೈಖರಿ, ದಕ್ಷತೆ, ಪ್ರಮಾಣಿಕತೆ, ಎಫಿಷಿಯನ್ಸಿ ಎಷ್ಟರ ಮಟ್ಟಿಗೆ ಇತ್ತು. ಇವತ್ತು ಸುಮಾರು 50 ಹೆಚ್ಚು ಜನ ಚೀಫ್ ಇಂಜಿನೀಯರ್ಸ್ ಇರಬಹುದು. ಇವತ್ತು ಎಷ್ಟರ ಮಟ್ಟಿಗೆ ದಕ್ಷತೆ ಪ್ರಮಾಣಿಕತೆ ಎಫಿಷಿಯನ್ಸಿ ನಿಮ್ಮ ಇಲಾಖೆಗಳಲ್ಲಿ ಹೆಚ್ಚಿದೆ ಎನ್ನತಕ್ಕಂಥ ಒಂದು ಆತ್ಮಾವಲೋಕನವನ್ನು ನೀವೇ ಮಾಡಿಕೊಳ್ಳಿ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಖಡಾಖಂಡಿತವಾಗಿ ಹೇಳುತ್ತೇನೆ. The increasing number of posts will not increase the efficiency. ಆ ಅದಿಕ್ಕಿನಲ್ಲಿ ತಾವು ಆಲೋಚನೆ ಮಾಡಬೇಕು. ಸಾಮಾನ್ಯವಾಗಿ 50ಜನ ಚೀಫ್ ಇಂಜಿನೀಯರ್ಸ್‌ಗಳನ್ನು ಇಟ್ಟು ಕೊಂಡಿದ್ದೀರಿ. ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಚೀಫ್ ಇಂಜಿನಿಯರ್ ಅನ್ನು ಕೊಟ್ಟು ಬಿಡಿ. ಅವರು ಕೆಲಸ ಮಾಡಿಕೊಂಡು ಹೋಗಲಿ. ಸರ್ಕಾರದ ಬೊಕ್ಕಸಕ್ಕೆ ಎಷ್ಟು ಖರ್ಚು? ಹೋಗಲಿ, ನೀವು ಚೀಫ್ ಇಂಜಿನಿಯರ್‌ಗಳನ್ನು ಹೆಚ್ಚು ಮಾಡಿದ್ದೀರಲ್ಲಾ, ನಿಮ್ಮ ಇಲಾಖೆಯಲ್ಲಿ ಕೆಲಸದ ಗುಣಮಟ್ಟ ಹೆಚ್ಚಿದೆಯೇ, ದಕ್ಷತೆ ಪ್ರಾಮಾಣಿಕತೆ ಹೆಚ್ಚಾಗಿದೆಯೇ? ಹೆಚ್ಚದಿದ್ದರೆ ಏತಕ್ಕೆ ನೀವು ಅವರನ್ನು ಇಟ್ಟುಕೊಂಡಿದ್ದೀರಿ? ನಾನು ಮೊದಲೇ ಹೇಳಿದ ಹಾಗೆ ಹಳ್ಳಿಯಲ್ಲಿರತಕ್ಕಂಥ ಒಬ್ಬ ಬಡಬೋರೇಗೌಡನನ್ನು ಇಲ್ಲಿಗೆ ತಂದು ಬಿಡಿ., ಅವನು ನಿಷ್ಠೆಯಿಂದ ಇವರಿಗಿಂತ ಚನ್ನಾಗಿ ಈ ಕೆಲಸವನ್ನು ಮಾಡಿಕೊಂಡು ಹೋಗುತ್ತಾನೆ. ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮತ್ತೆ ಒತ್ತಿ ಈ ಸಂದರ್ಭದಲ್ಲಿ ಹೇಳುತ್ತಾ ಈಗ ನಮ್ಮ ಹೇಮಾವತಿ ಪ್ರಾಜೆಕ್ಟ್‌ಗೆ ಒಬ್ಬ ಚೀಫ್ ಇಂಜಿನೀಯರನ್ನು ನಿಮ್ಮ ನೀರಾವರಿ ಇಲಾಖೆಯವರು ಹಾಕಿದ್ದಾರೆ. ಎರಡು ಎರಡೂವರೆ ತಿಂಗಳು ಆಗಿದೆ. ಈ ತಿಂಗಳ ಕೊನೆಗೆ ಅವರು ರಿಟೈರ್ಡ್ ಆಗುತ್ತಾರೆ. ಆ ಎರಡು ಎರಡೂವರೆ ತಿಂಗಳ ಅವಧಿ ಇರತಕ್ಕಂಥ ಒಬ್ಬ ಅಧಿಕಾರಿಗೆ ನೀವು ಬಡ್ತಿ ಕೊಟ್ಟು ಚೀಫ್ ಇಂಜಿನಿಯರ್ ಅಂತ ಒಂದು ದೊಡ್ಡ ಯೋಜನೆಗೆ ಹಾಕಿದರೆ ಅವರು ಬಂದು ಕುಳಿತುಕೊಂಡು ಮತ್ತೆ ಎದ್ದು ಬರುವುದು ಆಗುತ್ತದೆ. ಹೀಗಾದರೆ ಆ ಯೋಜನೆ ಬಗ್ಗೆ ಅವರು ಏನು ಅಭ್ಯಾಸಮಾಡುತ್ತಾರೆ? ಕೆಲಸ ಕಾರ್ಯಗಳು ಹೇಗೆ ನಡೆಯುತ್ತವೆ? ಹೀಗಾದರೆ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಮುಗಿಸಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನತಕ್ಕಂಥದ್ದನ್ನು ತಾವು ವಿಚಾರ ಮಾಡಬೇಕು. ಯಾರಿಗಾದರೂ ಮುಂಬಡ್ತಿ ಕೊಟ್ಟರೆ ಕನಿಷ್ಟ ಆ ಸ್ಥಳದಲ್ಲಿ ಸೇವೆ ಮಾಡಲಿಕ್ಕೆ ಕನಿಷ್ಟ ಎರಡು ವರ್ಷವಾದರೂ

ಇರಬೇಕು. ಆ ದಿಕ್ಕಿನಲ್ಲಿ ತಾವು ಆಲೋಚನೆ ಮಾಡಬೇಕು ಎನ್ನುವಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮತ್ತೆ ನೀವೇನು ಇಂಜಿನಿಯರ್ ಇನ್ ಚೀಫ್ ಅಂತ ಹೇಳಿ ಈ 50 ಜನ ಚೀಫ್ ಇಂಜಿನಿಯರ್ಸ್ ಮೇಲೆ ಒಂದು ಹುದ್ದೆ ಇಂಜಿನಿಯರ್ ಇನ್ ಚೀಫ್ ಅಂತ ಏನು ಸೃಷ್ಟಿ ಮಾಡಿದ್ದೀರಿ ಆ ಹುದ್ದೆಗೆ ಈ ವರ್ಗಾವರ್ಗಿ ಬಂದರೆ ದೊಡ್ಡ ಸುಗ್ಗಿ . ಈಗ ಏನಾಗಿದೆ ಮೊದಲು ಇಲ್ಲಿಂದ ವರ್ಗ ಮಾಡಿ ಚೀಫ್ ಇಂಜಿನಿಯರ್‌ಗೆ ಕೊಡುತ್ತಿದ್ದೀರಿ. ಆ ಚೀಫ್ ಇಂಜಿನಿಯರ್ ಪ್ಲೇಸ್ ಅಲಾಟ್ ಮಾಡುತ್ತಿದ್ದರು. ನೀವು ಇಲ್ಲಿಂದ ಮತ್ತೆ ಅದರ ಕಂಟ್ರೋಲ್‌ಗೆ ಕೊಟ್ಟಿದ್ದೀರಿ. ಇಂಜಿನಿಯರಿಂಗ್ ಇನ್ ಚೀಫ್‌ಗೆ. ಅಲ್ಲಿಂದ ಮತ್ತೆ ಚೀಫ್ ಇಂಜಿನಿಯರ್‌ಗೆ. ಅವರು ಎಲ್ಲೆಲ್ಲಿ ಓಡಾಡಬೇಕು? ಸ್ವಾಮಿ, ಈ ವರ್ಗಾವರ್ಗಿ ಶುರುವಾದರೆ ತಮಗೆ ಗೊತ್ತಿದೆ. ಏಪ್ರಿಲ್ ತಿಂಗಳಿಂದ ಜೂನ್ ಜುಲೈ ಆಗಸ್ಟ್ ತಿಂಗಳವರೆಗೂ ಏನೂ ಕೆಲಸಗಳು ಆಗುವುದಿಲ್ಲ. ನೀವು ನನಗೆ ಒಂದು ಮಾಹಿತಿ ಕೊಡಬೇಕು. ಏನೆಂದರೆ ನಿಮ್ಮ ಇಲಾಖೆಯಲ್ಲಿ ಕಳೆದ ವರ್ಷ ಅದಕ್ಕಿಂತ ಹಿಂದಿನ ವರ್ಷಎಷ್ಟು ಹಣವನ್ನು ಈ ಇಲಾಖೆ ಕೆಲಸಗಳಿಗೆ ನಿಗಧಿಪಡಿಸಲಾಗಿತ್ತು. ಆ ಹಣದಲ್ಲಿ ಏಪ್ರಿಲ್‌ನಿಂದ ಮಾರ್ಚಿ ತಿಂಗಳವರೆಗೆ ಯಾವ ಯಾವ ವರ್ಷ ಎಷ್ಟೆಷ್ಟು ಖರ್ಚು ಆಯಿತು? ಈ ಅಂಕಿ ಅಂಶಗಳನ್ನು ತೆಗೆದು ನೋಡಿದರೆ ಹೆಚ್ಚು ಹಣ ಫೆಬ್ರವರಿ ಮಾರ್ಚಿ ತಿಂಗಳಲ್ಲಿ ಖರ್ಚು ಆಗಿರುವುದು ಗೊತ್ತಾಗುತ್ತದೆ. ಸುಮಾರು 11 ತಿಂಗಳಲ್ಲಿ ಕುಂಭಕರ್ಣನ ನಿದ್ರೆ ಮಾಡುತ್ತಿರುತ್ತಾರೆ. ಮಾರ್ಚಿ ತಿಂಗಳಲ್ಲಿ ಇದ್ದಬದ್ದ ಎಸ್ಟಿಮೇಟ್ಸ್ ಮಂಜೂರಾಗುತ್ತದೆ. ಎಲ್ಲಾ ಕೆಲಸಗಳನ್ನು ಪ್ರಾರಂಭ ಮಾಡುತ್ತಾರೆ. ಎಲ್ಲಾ ಬಿಲ್‌ಗಳು ಪಾಸಾಗುತ್ತವೆ. ಇನ್ನುಳಿದ 11 ತಿಂಗಳಲ್ಲಿ ಏನು ಮಾಡುತ್ತಾರೆ ಸ್ವಾಮಿ, ತಾವೇನಾದರೂ ಪರಿಶೀಲನೆ ಮಾಡಿದ್ದೀರಾ? ಏತಕ್ಕೆ 12 ತಿಂಗಳೂ ಕೆಲಸಮಾಡಿಲ್ಲವೆಂದು ರಿವ್ಯೂ ಮಾಡಿದ್ದೀರಾ? ಆಕ್ಷನ್ ಏನಾದರೂ ತೆಗೆದುಕೊಂಡಿದ್ದೀರಾ? ಏತಕ್ಕೆ ತೆಗೆದುಕೊಂಡಿಲ್ಲ? ಒಂದೇ ತಿಂಗಳಲ್ಲಿ ಎಸ್ಟಿಮೇಟ್ ಮಾಡಿ ಕೆಲಸ ಮಾಡಿಧರೆ ಬಿಲ್ ಮಾಡಿ ತಾವೇ ಆಲೋಚನೆ ಮಾಡಿ ಒಂದೇ ತಿಂಗಳಲ್ಲಿ ಎಷ್ಟು ಹಣ ಖರ್ಚು ಮಾಡಿದರೆ ಕೆಲಸ ಸಮರ್ಪಕವಾಗಿ ಆಗುತ್ತದೆಯೇ? ಎನ್ನತಕ್ಕಂಥಾದ್ದನ್ನು ಆಲೋಚನೆ ಮಾಡಬೇಕು. ಈ ಪದ್ಧತಿ ಹೋಗಬೇಕು. ಒಂದೇ ವರ್ಷದಲ್ಲಿ ಎಲ್ ಓ ಸಿ ಯಾವ ಯಾವ ತಿಂಗಳಲ್ಲಿ ಎಷ್ಟೆಷ್ಟು ಬಿಡುಗಡೆ ಆಗಿದೆ ಎನ್ನುವುದನ್ನು ನೋಡಬೇಕು. ಎಲ್ ಓ ಸಿ ಬಿಡುಗಡೆಯಾಗತಕ್ಕದ್ದನ್ನು ನೋಡಬೇಕು. ತಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೇಳಬೇಕು. ಏನೆಂದರೆ ಎಲ್ಲಾ ಹಣವನ್ನು ಒಂದೇ ತಿಂಗಳಲ್ಲಿ ಬಿಡುಗಡೆ ಮಾಡಿಬಿಟ್ಟರೆ ಖರ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಕೆಲಸಗಳು ಸಮರ್ಪಕವಾಗಿ ಆಗುವುದಿಲ್ಲ. ಆದ್ದರಿಂದ ಎಲ್ಲಾ ತಿಂಗಳು ಸಮನಾಗಿ ಕೊಡಿ ಎಂದು , ಯಾವಾಗಲಾದರೂ ಆ ರೀತಿ ಕೇಳಿದ್ದೀರಾ ಸ್ವಾಮಿ? ಮಾರ್ಚ್ ತಿಂಗಳಿನಲ್ಲೇ ಏಕೆ ಇಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ, ಎಲ್ಲಾ ತಿಂಗಳೂ ಸಮನಾಗಿ ಬಿಡುಗಡೆ ಮಾಡಿ ಎಂದು ಹೇಳಿ ಈ ದೇಶದ ಕೆಲಸವನ್ನು ಸಮರ್ಪಕವಾಗಿ ಮಾಡತಕ್ಕಂಥ ರೀತಿಯಿಂದ ಆ ದಿಕ್ಕಿನಲ್ಲಿ ಉತ್ತರ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ , ಚೀಫ್ ಇಂಜಿನಿಯರ್‌ಗಳ ಮೇಲೆ ಇಂಜಿನಿಯರಿಂಗ್ ಚೀಫ್ ಹುದ್ದೆಗಳು ಏನು ಇದ್ದಾವೆ, ಈ ಎಲ್ಲಾ ಅಡೆತಡೆಗಳನ್ನು ತಾವು ತೆಗೆದುಹಾಕಬೇಕು. ಮಿತವ್ಯಯವನ್ನು ಅನುಸರಿಸಬೇಕೆಂದು ಹೇಳುತ್ತಿರುವಾಗ ಈ ಚೀಫ್ ಇಂಜಿನಿಯರ್ಸ್ ಬೇಕಾಗಿಲ್ಲ. ಅದರ ಮೇಲೆ ಇಂಜಿನೀಯರಿಂಗ್ ಚೀಫ್, ಏತಕ್ಕೆಬೇಕು? ಯಾರಿಗಾದರೂ ಹುದ್ದೆ ಸೃಷ್ಟಿ ಮಾಡಿ ಅಧಿಕಾರ ಕೊಡಬೇಕೆಂದರೆ ಬೇಕು. ಇವತ್ತಿನ ನಮ್ಮ ಆರ್ಥಿಕ ವ್ಯವಸ್ಥೆ ಹಿನ್ನೆಲೆಯಲ್ಲಿ ಅದು ಬೇಕಾಗುವುದಿಲ್ಲ. ತಾವು ದಯವಿಟ್ಟು ಅದನ್ನು ತೆಗೆಯಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ಸ್ವಾಮಿ, ಅಣೆಕಟ್ಟುಗಳನ್ನು ಕಟ್ಟುತ್ತಾರೆ. ನಿಮಗೆ ಉದಾಹರಣೆ ಹೇಳುತ್ತೇನೆ, ಹೇಮಾವತಿ ಅಣೆಕಟ್ಟು ಕಟ್ಟಿದರು. ಅಲ್ಲಿ ಬಂದು ತಾವು ನೋಡಬೇಕು. ಆ ಅಣೆಕಟ್ಟು ಕಟ್ಟುತಕ್ಕಂಥ ಸಂದರ್ಭದಲ್ಲಿ ದೊಡ್ಡ ದೊಡ್ಡ ಮೆಷನರಿಗಳು, ಲಾರಿಗಳು, ಬುಲ್ಡೋಜರ್‌ಗಳನ್ನು ಎಲ್ಲಾ ತಂದರು. ಈ ಹೆವಿ ಮೆಷಿನರಿಗಳನ್ನು ಆ ಕೆಲಸ ಆದಮೇಲೆ ಬೇರೆ ಕೆಲಸಕ್ಕೆ ತೆಗೆದುಕೊಂಡು ಹೋಗಬಹುದಾಗಿತ್ತು. ತೆಗೆದುಕೊಂಡು ಹೋಗಲಿಲ್ಲ. ಅವು ಅಲ್ಲೇ ಐಡ್ಲ್ ಆಗಿ ಬಿದ್ದಿವೆ. ಒಂದೊಂದು ಟೈರುಗಳನ್ನು ನೋಡಿದರೆ,

ಒಂದೊಂದು ಲಾರಿ ಗಾತ್ರ ಇವೆ. ಅವೆಲ್ಲಾ ಬಿಸಿಲಲ್ಲಿ ಒಣಗಿ, ಮಳೆಯಲ್ಲಿ ನೆಂದು ಹಾಳಾಗಿ ಹೋದವು. ಯಾರು ಅದಕ್ಕೆ ಜವಾಬ್ದಾರಿ ಫಿಕ್ಸ್ ಮಾಡಿದ್ದೀರಿ?ಇದು ಯಾರ ಸ್ವತ್ತು ಎಂದು ಸುಮ್ಮನೆ ಇದ್ದಾರೆ? ನೀವು ಏಕೆ ಸುಮ್ಮನೆ ಇದ್ದೀರಿ? ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ಕೆಲಸವಾದ ಮೇಲೆ ಬೇರೆ ಕಡೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿರಲಿಲ್ಲವಾ? ಅದನ್ನು ಅಲ್ಲೇ ಬಿಟ್ಟು ಬಿಡುವುದು. ಬೇರೆ ಡ್ಯಾಮ್ ಕನ್‌ಸ್ಟ್ರಕ್ಷನ್ ಮಾಡುವುದಾದರೆ ಅಲ್ಲಿ ಹೊಸದು ಪರ್ಚೇಸ್ ಮಾಡುವುದು. ಆದರೆ, ಅವರದೇ ಮನೆ ಕೆಲಸವಾದರೆ, ನಿಮ್ಮದೇ ಮನೆ ಕೆಲಸವಾದರೆ ಈ ರೀತಿ ಹಾಳು ಆಗಲಿಕ್ಕೆ ಕೋಟ್ಯಾಂತರ ರೂಪಾಯಿ ಮೆಷಿನರಿಗಳನ್ನು ತಾವು ಬಿಡುತ್ತಿದ್ರಾ? ಅವು ಬೇಡವೆಂದರೆ ವಿಲೇ ಮಾಡಬೇಕಾಗಿತ್ತು. ಇಲ್ಲಾ ಬೇರೆ ಕಡೆ ಕೆಲಸ ನಡೆಯುತ್ತಿಲ್ಲವೇ? ಅಲ್ಲಿಗೆ ತೆಗೆದುಕೊಂಡು ಹೋಗಿ ಉಪಯೋಗ ಮಾಡಬಹುದಾಗಿತ್ತು. ಈ ದಿಕ್ಕಿನಲ್ಲೂ ಕೂಡಾ ತಾವು ದಯವಿಟ್ಟು ಗಮನಹರಿಸಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸ್ವಾಮಿ, ಮತ್ತೊಂದು ತಮ್ಮಲ್ಲಿ, ಕ್ವಾಲಿಟಿ ಕಂಟ್ರೋಲ್ ಎಂದು ಇದೆ. ಕ್ವಾಲಿಟಿ ಕಂಟ್ರೋಲನ್ನು ಏತಕ್ಕೆ ಇಟ್ಟುಕೊಂಡಿದ್ದೀರೊ ಗೊತ್ತಿಲ್ಲ? ಇದು ಕ್ವಾಲಿಟಿ ಕೆಡಿಸಲಿಕ್ಕೆ ಇರತಕ್ಕಂಥ ಇಲಾಖೆ. ಕ್ವಾಲಿಟಿಯನ್ನು ಇಂಪ್ರೂವ್ ಮಾಡತಕ್ಕಂಥ ಇಲಾಖೆ ಅಲ್ಲ. ಯಾರಾದರೂ ಅವರ ಮೇಲೆ ಅರ್ಜಿ ಬರೆದರೆ, ಕ್ವಾಲಿಟಿ ಇಲ್ಲವೆಂದು ಹೇಳಿದರೆ , ಮತ್ತೆ ಅವರು ಹೋಗುತ್ತಾರೆ ತಪಾಸಣೆ ಮಾಡಿ ಮತ್ತಷ್ಟು ವಸೂಲು ಮಾಡಿಕೊಂಡು ಮನೆಗೆ ಬರುತ್ತಾರೆ. ಇಂಥಾ ಇಲಾಖೆಗಳನ್ನು ಇಟ್ಟುಕೊಳ್ಳುವುದಕ್ಕಿಂಥ ತೆಗೆಯುವುದು ಮೇಲು. ಆ ದಿಕ್ಕಿನಲ್ಲೂ ಕೂಡಾ ತಾವು ಗಮನ ಹರಿಸಬೇಕೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಸ್ವಾಮಿ ರೋಡ್ಸ್ ಮೇನ್‌ಟೆನೆನ್ಸ್ ಬಗ್ಗೆ ನಾನು ಸ್ವಲ್ಪ ಹೇಳಬೇಕಾಗಿದೆ. ಈ ರಾಜ್ಯದಲ್ಲಿ ಸುಮಾರು 1 ಲಕ್ಷ 19ಸಾವಿರ ಕಿಲೋಮೀಟರ್ ಉದ್ದ ರಸ್ತೆ ಇದೆ. ಅದರಲ್ಲಿ ಪಿ.ಡಬ್ಲ್ಯೂ.ಡಿ. ಮತ್ತು ಜಿಲ್ಲಾಪರಿಷತ್ತಿಗೆ ಸುಮಾರು 80 ಸಾವಿರ ಕಿಲೋಮೀಟರ್ ರಸ್ತೆ ಸೇರಿದೆ. ಇನ್ನು ಉಳಿಕೇದು 40 ಸಾವಿರ ಕಿಲೋಮೀಟರ್ ಈ ವಿಲೇಜ್ ರೋಡ್ಸ್. ಈ ರಸ್ತೆಗಳನ್ನು ತಾವು ಏನು ಮಾಡಿದ್ದೀರೆಂದು ತಾವು ಸ್ವಲ್ಪ ನೋಡಬೇಕು. ವಿಧಾನ ಸೌಧದ ಮುಂದುಗಡೆ ನಿಮ್ಮ ಮೂಗಿನ ಅಡಿಯಲ್ಲಿಯೇ ಸ್ವಲ್ಪಹೋಗಿ ನೋಡಿ. ಎಡ ಭಾಗದಲ್ಲಿ ತಾವು ನಡೆದುಕೊಂಡು ಹೋಗುವುದಿಲ್ಲ, ಕಾರಿನಲ್ಲಿ ಹೋಗಿಬಿಡುತ್ತೀರಿ. ಮೋಟಾರ್ ಸೈಕಲ್ ನಿಲ್ಲಿಸಿದರೆ, ಸ್ಕೂಟರ್ ನಿಲ್ಲಿಸಿದರೆ ಒಂದೊಂದು ಬೆಟ್ಟು ಉದ್ದ ಗುಂಡಿ ಬಿದ್ದಿವೆ ಸ್ವಾಮಿ. ಈಗ ಒಂದೂವರೆ ತಿಂಗಳ ಹಿಂದೆ ಟಾರ್ ರೋಡ್ ಮಾಡಿದ್ದಾರೆ. ಈಗಾಗಲೇ ಬೆಟ್ಟು ಉದ್ದ ಗುಂಡಿ ಬಿದ್ದಿದ್ದಾವೆ. ಇಂಥಾ ರೋಡ್ ಕೆಲಸವನ್ನು ಮಾಡುತ್ತಾರೆ. ಹೀಗಾದರೆ, ಒಂದು ಸಾರಿ ಡಾಂಬರ್ ರಸ್ತೆ ಮಾಡಿದರೆ ಕನಿಷ್ಟ ಐದಾರು ವರ್ಷ ಅದರ ಡ್ಯೂರಬಿಲಿಟಿ ಇಲ್ಲವೆಂದರೆ ಏತಕ್ಕೆ ಸ್ವಾಮಿ ಡಾಂಬರ್ ರೋಡ್ ಮಾಡಿಸುತ್ತೀರಿ ? ಏತಕ್ಕೆ ಸರ್ಕಾರದ ಖರ್ಚು ಹಾಕುತ್ತೀರಿ? ಇದು ಸಾರ್ವಜನಿಕರ ಹಣ. ಯಾರೋ ಬಡ ಬೋರೇಗೌಡ ಹಳ್ಳಿಯಲ್ಲಿ ಬೆವರು ಸುರಿಸುವುದಿಲ್ಲ, ರಕ್ತ ಸುರಿಸಿ ತೆರಿಗೆ ಕೊಡತಕ್ಕಂಥ ದುಡ್ಡು. ಅದನ್ನು ಅಪವ್ಯಯ ಮಾಡಲಿಕ್ಕೆ ದಯಮಾಡಿ ಅವಕಾಶ ಮಾಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ವಿಲೇಜ್ ರೋಡ್ಸ್ ಮಾಡಿದ್ದೀರಿ. ಅದರಲ್ಲೂ ಕೂಡ ಇರಿಗೇಷನ್‌ನಲ್ಲಿ ಕೂಡಾ ರೋಡ್ಸ್, ಪುನರ್‌ವಸತಿ ರೋಡ್ ಎಂದು ಮಾಡಿಬಿಡುತ್ತಾರೆ. ಮಾಡಿಯಾದ ಮೇಲೆ ಅವುಗಳಿಗೆ ಮೇನ್‌ಟೆನೆನ್ಸ್ ಗ್ರ್ಯಾಂಟ್ ಇಲ್ಲವೆಂದು ಹೇಳುತ್ತಾರೆ. ಜೆಲ್ಲಿ ರೊಡ್ ಎಂದು ಮಾಡಿದಮೇಲೆ ಮೇನ್‌ಟೆನೆನ್ಸ್ ಗ್ರ್ಯಾಂಟ್ ಕೊಡದಿದ್ದರೆ ಒಂದೂವರೆ ವರ್ಷ ಎರಡು ವರ್ಷ ಬಿಟ್ಟರೆ ಜೆಲ್ಲಿ ರೋಡ್ ಪೂರ್ಣವಾಗಿ ಹಾಳಾಗಿ ಕಿತ್ತು ಹೋಗುತ್ತದೆ. ಅವನ್ನು ಮೇನ್‌ಟೆನ್ ಮಾಡದಿದ್ದರೆ,. ಆಗಾಗ್ಗೆ ಗ್ರಾವೆಲ್ ಹಾಕದಿದ್ದರೆ ರೋಡ್ ಹಾಳಗುತ್ತದೆ. ನೀವು ಇದರ ಬಗ್ಗೆ ಚಿಂತನೆ ಮಾಡಿಲ್ಲವಾ?ನಿಮ್ಮ ಇಲಾಖೆ ಅಧಿಕಾರಿಗಳು ತಮ್ಮ ಗಮನಕ್ಕೆ ತಂದಿಲ್ಲವಾ? ಎರಡುವರ್ಷಕ್ಕೇ ಅದು ಕಿತ್ತುಹೋಗುತ್ತದೆ. ಮತ್ತೊಂದು ಎಸ್ಟಿಮೇಟ್ ಮಾಡುತ್ತಾರೆ. ಮತ್ತೆ ಮತ್ತೆ ರೀ ಮೆಟ್ಲಿಂಗ್ ಮಾಡುವುದಕ್ಕೆ ಅದಕ್ಕೆ ಜೆಲ್ಲಿ ಕಲೆಕ್ಟ್

ಮಾಡುತ್ತಾರೆ. ಇದೇ ತರಹ ರಿಹ್ಯಾಬಿಲಿಟೇಷನ್ ರೋಡ್ಸ್‌ಗಳಿಗೆ, ಕೆಲವು ವಿಲೇಜ್ ರೋಡ್ಸ್‌ಗಳಿಗೆ ನಾಲ್ಕೈದು ಸಾರಿ ರೀ ಮೆಟಲಿಂಗ್ ಮಾಡಿದ್ದಾರೆ. ಮೇನ್‌ಟನೆನ್ಸ್ ಗ್ರ್ಯಾಂಟ್ ಕೊಡದಿದ್ದರೆ ನೀವು ಈ ರಸ್ತೆಯನ್ನು ಏಕೆ ಮಾಡುತ್ತೀರಿ? ನೀವು ಏಕೆ ಇದರ ಬಗ್ಗೆ ಗಮನಪರಿಸಿಲ್ಲ? ನೀವು ಒಂದು ಸಾರಿ ರಸ್ತೆ ಮಾಡಿಸಿದ ಮೇಲೆ ಅದನ್ನು ಮೇನ್‌ಟೇನ್ ಮಾಡಬೇಕು. ಆಗ ಮಾತ್ರ ದೀರ್ಘಕಾಲ ಬಾಳಿಕೆ ಬರುತ್ತದೆ. ಇಲ್ಲವೆಂದರೆ ಅದು ಮಾಡಿದ್ದು ಸಾರ್ಥಕವಾಗಲಿಕ್ಕಿಲ್ಲ. ಈ ದಿಕ್ಕಿನಲ್ಲಿ ನೀವು ರಸ್ತೆಗಳನ್ನು ಮಾಡುವುದು ಮುಖ್ಯ ಅಲ್ಲ. ಅವುಗಳನ್ನು ಮೈಂಟೇನೆನ್ಸ್ ಮಾಡದಿದ್ದರೆ ರಸ್ತೆಗಳನ್ನು ಮಾಡಿಯೂ ಪ್ರಯೋಜನವಾಗಲಾರದು ಎಂದು ತಮ್ಮ ಗಮನಕ್ಕೆ ತರುತ್ತಾ, ಇನ್ನೂ ಅನೇಕ ಊರುಗಳಿಗೆ ಒಂದು ರಸ್ತೆ ಕೂಡ ಮಾಡಿಲ್ಲ. ಮಾನ್ಯ ಲೋಕೋಪಯೋಗಿ ಮಂತ್ರಿಯವರು ಇದನ್ನು ಗಮನಿಸಬೇಕು. ಈ ಬಗ್ಗೆ ಕಾಲಮಿತಿ ಕಾರ್ಯಕ್ರಮ ಯೋಜನೆಯನ್ನು ಹಾಕಿಕೊಳ್ಳಬೇಕು. ಯಾವ ಊರಿಗೆ ಒಂದು ರಸ್ತೆ ಸಂಪರ್ಕ ಕೂಡ ಇಲ್ಲ ಅಂಥ ಊರುಗಳನ್ನು ಗುರುತಿಸಿ ಅಂಥ ಊರುಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡುವ ಕೆಲಸವನ್ನು ತಾವು ಮಾಡಿಕೊಡಬೇಕೆಂದು ಹೇಳಿ, ನೀರಾವರಿ ಇಲಾಖೆಯಲ್ಲಿ ಯಾವುದೋ ಒಬಿರಾಯನ ಕಾಲದ ಲೆಕ್ಕಾಚಾರವನ್ನು ಹಾಕಿದ್ದಾರೆ. ಒಂದು ಎಕರೆಗೆ 40 ರೂಪಾಯಿಗಳನ್ನು ಮೈಂಟೇನೆನ್ಸ್ ಚಾರ್ಜನ್ನು ಕೊಡುತ್ತಾ ಇದ್ದಾರೆ. ಇದರಿಂದಾಗಿ ಅವರು ಈವತ್ತು ತೋಪು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಕಾಲುವೆ ರಿಪೇರಿ ಮಾಡುವುದಕ್ಕಾಗುವುದಿಲ್ಲ, ಫೀಡ್ ಚಾನಲ್ಸ್ ರಿಪೇರಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಕೂಡ ತಾವುಗಳು ಪುನರ್ ವಿಮರ್ಶೆ ಮಾಡಬೇಕಾಗಿ ಕೇಳಿ ಕೊಳ್ಳುತ್ತೇನೆ. ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಹಳೆ ಕಾಲದಲ್ಲಿ ಕಟ್ಟಿದ್ದ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕಾಗುತ್ತದೆ. ಇವೊತ್ತು ನಾವು ಹೊಸ ಕಟ್ಟಡಗಳನ್ನು ಕಟ್ಟಿಸಿಕೊಂಡು ಹೋಗುತ್ತಾ ಇದ್ದೇವೆ. ಆದರೆ ಹಳೆಯ ಬಿಲ್ಡಿಂಗ್‌ಗಳನ್ನು ರಿಪೇರಿ ಮಾಡಿಸದೆ ಬಿದ್ದು ಹೋಗುತ್ತಾ ಇವೆ. ಆವೊತ್ತು ಕಟ್ಟಿದಂತ ಒಂದು ಎಸ್ಟಿಮೇಟ್ ಏನಿದೆ ಅದರ ಮೇಲೆ ಮೂರು ಪರ್‌ಸೆಂಟನ್ನು ರಿಪೇರಿ ಚಾರ್ಜಸ್ ಎಂದು ಕೊಡುತ್ತಾ ಇದ್ದಾರೆ. ಇವೊತ್ತು ಒಂದು ಲಕ್ಷ ಆಗುವುದು 10 ವರ್ಷಗಳ ಹಿಂದೆ 10 ಸಾವಿರ ರೂಪಾಯಿಗಳಷ್ಟು ಇತ್ತು. ಅಂದರೆ ಅದಕ್ಕೆ ಇವರ ಲೆಕ್ಕದ ಪ್ರಕಾರ ಮೂನ್ನೂರು ರುಪಾಯಿಗಳು ರಿಪೇರಿ ಚಾರ್ಜ್ ಬರುತ್ತದೆ. ಆ ಹಣದಿಂದ ಕಟ್ಟಡ ರಿಪೇರಿ ಮಾಡುವುದಕ್ಕೆ ಸಾಧ್ಯವೇ? ನಮ್ಮ ಹಿಂದಿನವರು ಚೆನ್ನಾಗಿ ಕಟ್ಟಿದಂಥ ಕಟ್ಟಡಗಳು ಇಂದು ಕುಸಿದು ಬೀಳುತ್ತಾ ಇವೆ. ಅವುಗಳನ್ನು ನಾವು ಈಗ ರಿಪೇರಿ ಮಾಡಿಸಿ ಉಳಿಸಿಕೊಂಡು ಹೋಗೋಣ. ಆ ದಿಕ್ಕಿನಲ್ಲಿ ತಾವು ಈಗ ಕೊಡುತ್ತಿರುವ ಮೂರು ಪರ್‌ಸೆಂಟನ್ನು ಹೆಚ್ಚು ಮಾಡಲೇ ಬೇಕು. ಅದರ ಬಗ್ಗೆ ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಹಾಸನ ಜಿಲ್ಲೆಯ ಕೆಲವು ಭಾಗಗಳಾದ ಚಿಕ್ಕಮಗಳರು, ಮಡಿಕೇರಿ, ಕೊಡಗು ಇವೆಲ್ಲವೂ ಮಲೆನಾಡು ಪ್ರದೇಶಗಳು. ಅಲ್ಲಿಗೆ ಹಾರಂಗಿ, ಹೇಮಾವತಿ ಯೋಜನೆಗಳ ನೀರು ಕೊಟ್ಟಿದ್ದೀರಿ. ಅಲ್ಲಿ ನೀರಾವರಿ ಬೆಳೆ ಎಂದು ಬೆಳೆ ಬೆಳೆಯುವುದಕ್ಕೆ ತಾವು ನೀರು ಕೊಡುತ್ತಾ ಇದ್ದೀರಿ. ಮಲೆನಾಡು ಪ್ರದೇಶದಲ್ಲಿ ಮೂರೂ ನಾಲ್ಕು ತಿಂಗಳು ಜಡಿ ಮಳೆ ಇರುತ್ತದೆ. ಅರೆನೀರಾವರಿ ಬೆಳೆ ಅಲ್ಲಿ ಬೆಳೆಯಲು ಆಗುವುದಿಲ್ಲ. ಆದ್ದರಿಂದ ಆ ಪ್ರದೇಶಗಳಲ್ಲಿ ಭತ್ತ ಬೆಳೆಯಲು ಅವಕಾಶಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನೀರಾವರಿ ಇಲಾಖೆಯಲ್ಲಿ ಎರಡು ಏತ ನೀರಾವರಿ ನಿಗಮಗಳನ್ನು ಸ್ಥಾಪನೆ ಮಾಡಿದ್ದಾರೆ. ಅದನ್ನು 1986ರಲ್ಲಿ ತಾವುಗಳು ಪ್ರಾರಂಭ ಮಾಡಿದ್ದು ಎಂದು ಕಾಣುತ್ತದೆ. ಆ ಎರಡು ಏತನೀರಾವರಿ ನಿಗಮಗಳ ಮೂಲಕ ಇದುವರೆಗೆ ಎಷ್ಟು ಯೋಜನೆಗಳನ್ನು ಕಾರ್ಯಗತ ಮಾಡಿ ಮುಗಿಸಿದ್ದೀರಿ. ನನಗೆ ಗೊತ್ತಿರತಕ್ಕಂಥ ಮಾಹಿತಿಗಳ ಪ್ರಕಾರ ಒಂದು ವರ್ಷಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಅವರಿಗೆ ಸಂಬಳಕ್ಕಾಗಿ ಏನು ಖರ್ಚು ಮಾಡುತ್ತಿದ್ದೀರಿ ಅಷ್ಟು ಕೆಲಸವನ್ನು ಕೂಡ ಅವರಿಂದ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಎರಡೂವರೆ ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದೀರಿ, ಅವುಗಳನ್ನು ಸ್ಪೀಡ್ ಅಪ್ ಮಾಡುತ್ತೇವೆ. ಅವರಿಗೆ

ಹೆಚ್ಚು ಹಣಕಾಸು ಒದಗಿಸುತ್ತೇವೆ, ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳುತ್ತಾ ಇದ್ದಿರಿ. ಆದರೆ ಸಾಧನೆ ಮಾತ್ರ ಏನೇನೂ ಆಗಲಿಲ್ಲ. ದಯಮಾಡಿ ಇನ್ನು ಮುಂದೆ ಆ ತರಹದ ಯಾವುದೇ ಸಬೂಬನ್ನು ಹೇಳಿಕೊಂಡು ಹೋಗದೆ ದಯಮಾಡಿ ಅವುಗಳಿಗೆ ಕಾಯಕಲ್ಪ ಕೊಡಬೇಕು ಮತ್ತು ಈ ನಿಗಮಗಳ ಸದುಪಯೋಗ ಮಾಡಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಮೂರು ಕೋಟಿ ಎಕರೆಗಳಷ್ಟು ಜಮೀನು ಇದೆ. ಅದರ ಪೈಕಿ ಸುಮಾರು 125 ಲಕ್ಷ ಎಕರೆ ಜಮೀನಿಗೆ ನೀವು ಎಲ್ಲಾ ತರದ ಗ್ರೌಂಡ್‌ವಾಟರ್, ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್, ಮುಂತಾದ ಎಲ್ಲವನ್ನೂ ಉಪಯೋಗ ಮಾಡಿಕೊಂಡು ಸುಮಾರು 55 ಲಕ್ಷ ಎಕರೆಗೆ ನೀವು ನೀರು ಕೊಡಬಹುದು. ಇವೊತ್ತು ಎಷ್ಟು ಕೆಲಸ ಮಾಡಿದರೂ ಕೂಡ ಕೆಲಸ ಮುಂದಕ್ಕೆ ಹೋಗುತ್ತಾ ಇದೆಯೇ ಹೊರತು ನೀರು ಮುಂದಕ್ಕೆ ಹೋಗುತ್ತಾ ಇಲ್ಲ. ಕಾರಣ ಅಂದರೆ ಆ ಕೆಲಸಗಳ ಗುಣಮಟ್ಟ ಸರಿಯಿಲ್ಲ. ಆದ್ದರಿಂದ ಮೂರು ಕೋಟಿ ಎಕರೆ ಜಮೀನಿಗೆ ನೀರಾವರಿಯನ್ನು ಕೊಡುವ ದಿಕ್ಕಿನಲ್ಲಿ ಸೂಕ್ತವಾದ ಕಾರ್ಯಕ್ರಮವನ್ನು ತಾವುಗಳು ರೂಪಿಸಿಕೊಳ್ಳಬೇಕು. ಹಾಗೆಯೇ ಆ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಈ ಸರ್ಕಾರಕ್ಕೆ ಒಂದು ಗ್ರಹಣ ಹಿಡಿದಿದೆ. ಎಂದು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಈ ಸರ್ಕಾರವು ರೈತರ ಕೆಲಸವನ್ನು ಚೆನ್ನಾಗಿ ಮಾಡುತ್ತಾ ಇದೆ. ಯಾವುದೇ ಸರ್ಕಾರದವರು ಮಾಡಿದ ಮತ್ತು ಕೊಡದಷ್ಟು ಹಣವನ್ನು ಈ ಸರ್ಕಾರದವರು ಕೊಟ್ಟು ಕೆಲಸ ಮಾಡುತ್ತಿರುವುದಕ್ಕಾಗಿ ನಾನು ಶ್ಲಾಘನೆಯನ್ನು ಮೊದಲಿಗೇ ಮಾಡಿದ್ದೇನೆ. ಆದರೆ 1947 ರಿಂದಲೂ ಕೂಡ ನಾವುಗಳು ನೋಡಿಕೊಂಡು ಬಂದರೆ, ಒಂದೊಂದು ವರ್ಷಕ್ಕೂ ಕೂಡ ಭ್ರಷ್ಟಾಚಾರ ಎನ್ನತಕ್ಕಂಥಾದ್ದು That is increasing in an increasing rate. ಹಿಂದಿನ ಸರ್ಕಾರದವರು ಈ ಬಗ್ಗೆ ಮತ್ತೊಂದು ಸರ್ಕಾರವನ್ನು ದೂರಿಕೊಂಡು ಬರುತ್ತಾ ಇದ್ದಾರೆಯೇ ಹೊರತಾಗಿ ಭ್ರಷ್ಟಾಚಾರ ಮಾತ್ರ ಕಡಿಮೆ ಆಗಲೇ ಇಲ್ಲ. ಹಿಂದಿನ ಸರ್ಕಾರವೇ ಚೆನ್ನಾಗಿತ್ತೆಂದು 1947 ರಿಂದ ಹೇಳಿಕೊಂಡು ಬರುತ್ತಿದ್ದಾರೆ. ಇದು ಮಾತ್ರ ಏರಿಕೆಯ ಪ್ರಮಾಣದಲ್ಲಿ ಹೋಗುತ್ತಾ ಇದೆ. Quality is also detericrating year by year.

ಹೀಗಾಗಿ ಈ ಭ್ರಷ್ಟಾಚಾರ ಅದರಲ್ಲಿಯೂ ಕೂಡ ಈ ಬೇಡಿಕೆಗಳನ್ನು ಏನು ಇಟ್ಟಿದ್ದೀರಿ, ಈ ಇಲಾಖೆಯಲ್ಲಿ ಭ್ರಷ್ಟಾಚಾರವನ್ನು ತಪ್ಪಿಸಿದರೆ ಇಲ್ಲವೇ ಕಡಿಮೆ ಮಾಡಲು ಪ್ರಯತ್ನಿಸಿದರೆ ನಮ್ಮ ಸರ್ಕಾರಕ್ಕೆ ಬರುವ ಒಂದು ಅಪಕೀರ್ತಿಯನ್ನಾದರೂ ತಪ್ಪಿಸಬಹುದೆಂದು ನನಗನ್ನಿಸುತ್ತದೆ. ಆ ದಿಕ್ಕಿನಲ್ಲಿ ಸರ್ಕಾರಕ್ಕೆ ಹಿಡಿದಿರತಕ್ಕಂಥ ಗ್ರಹಣವನ್ನು ಕೂಡ ತಾವುಗಳು ತಪ್ಪಿಸಬಹುದು. ಆ ಬಗ್ಗೆ ತಾವುಗಳು ಆಲೋಚನೆಯನ್ನು ಮಾಡಬೇಕು. ಈ ಬಗ್ಗೆ ತಾವುಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಇದರ ಉತ್ಪಾದನೆ ಜಾಸ್ತಿಯಾಗಿಲ್ಲ ಎಂಬುದು ತಮಗೆ ಗೊತ್ತಿದೆ. ಆದರೆ ಅದರ ಬೇಡಿಕೆಯೂ ಜಾಸ್ತಿಯಾಗಿದೆ. ಹೀಗಾಗಿ ಉತ್ಪಾದನೆ ಜಾಸ್ತಿ ಮಾಡದೇ ಬೇಡಿಕೆ ಇದೆ ಎಂದು ಎಲ್ಲದಕ್ಕೂ ಕನೆಕ್ಷನ್ ಕೊಟ್ಟುಕೊಂಡು ಹೋದರೆ, ಯಾವುದೇ ಸರ್ಕಾರಕ್ಕೂ ವೋಲ್ಟೇಜ್ ನಿಯಂತ್ರಣ ಮಾಡಿ ಕೊಂಡು ಹೋಗುವುದಕ್ಕೆ ಆಗಲಾರದು. ಇದನ್ನು ಒಂದು ವರ್ಷ, ಅಥವಾ ತಿಂಗಳಲ್ಲಿ ಬಗೆಹರಿಸುವುದಕ್ಕೂ ಆಗುವುದಿಲ್ಲ. ಈ ಸಮಸ್ಯೆಯನ್ನು ರೈತರು ಮತ್ತು ಜನರು ಕೂಡ ಅರ್ಥ ಮಾಡಿಕೊಳ್ಳಬೇಕು. ಹಿಂದಿನ ಸರ್ಕಾರಗಳು ಕೂಡ ಅದಕ್ಕೆ ಎಷ್ಟು ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಹೆಚ್ಚಿನ ಆದ್ಯತೆ ಮತ್ತು ಹಣವನ್ನು ಕೊಟ್ಟು ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಲು ಒಂದು ಗಮನವನ್ನು ಕೊಟ್ಟಿದೆ. ಇದು ಬಹಳ ಸಂತೋಷದ ವಿಚಾರವಾಗಿದೆ. ಆದರೆ ಮಾನ್ಯ ರಾಮಪ್ಪನವರು ಹಿಂದೆ ಸದಸ್ಯರಿದ್ದಾಗ ಆಗಿನ ಮಂತ್ರಿಗಳನ್ನು ಕೇಳುತ್ತಾ ಇದ್ದರು, ಏನೆಂದರೆ, ನಿಮ್ಮ ಹತ್ತಿರ ಆಗುತ್ತದೋ ಇಲ್ಲವೋ ಎರಡರಲ್ಲಿ ಒಂದು ಹೇಳಿ ಎಂದು, ಅದು ತಮಗೂ ಗೊತ್ತಿದೆ. ತಮಗೆ ಕೇವಲ ಜ್ಞಾಪಕ ಮಾಡುತ್ತಾ ಇದ್ದೇನೆ. ಇವೊತ್ತು ನಾವು ರಾಮಪ್ಪನವರಿಗೆ ಕೇಳಬೇಕಾಗುತ್ತದೆ, ನಿಮಗೆ ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು?

ಅವರು ಹಿಂದೆ ಇದೇ ಪ್ರಶ್ನೆಗಳನ್ನು ಬೇರೆ ಮಂತ್ರಿಗಳಿಗೆ ಕೇಳುತ್ತಾ ಇದ್ದರು. ಅದನ್ನು ನಾವುಗಳು ಇಲ್ಲಿಯೇ ಕುಳಿತುಕೊಂಡು ಕೇಳುತ್ತಿದ್ದೇವೆ. ಇವೊತ್ತು ರಾಜ್ಯದಲ್ಲಿ ಕರೆಂಟ್‌ನ ಸಮಸ್ಯೆಗಳ ಬಗ್ಗೆ ಪಕ್ಷಭೇದ ಇಲ್ಲದೆ ಪ್ರತಿಭಟನೆ ಮಾಡುತ್ತಾ ಇದ್ದಾರೆ. ಇಡೀ ರಾಜ್ಯದಲ್ಲಿ ಈ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ನಡೆದಿದೆ ಮತ್ತು ಇದು ಅಷ್ಟೇ ಗಂಭೀರವಾದಂಥ ಸಮಸ್ಯೆಯೂ ಆಗಿದೆ. ಆ ವಿಚಾರದಲ್ಲಿ ರಾಮಪ್ಪನವರು ಮೈಕೊಡವಿ ನಿಲ್ಲಬೇಕು. ಈಗ ಕಂಬ ಗುದ್ದಿದರೆ ಕಂಬ ಮುರಿದು ಹೋಗುತ್ತದೆ, ಸರಿಯಾಗಿ ನಿಲ್ಲಿಸಿದರೆ ಅದು ನಿಂತುಕೊಳ್ಳುತ್ತದೆ. ಕ್ವಾಲಿಟಿ ಸರಿಯಾಗಿ ಇರುವ ಕಂಬವನ್ನು ಸರಿಯಾಗಿ ನೆಟ್ಟಿದ್ದರೆ ಮಾತ್ರ ಅದು ಸರಿಯಾಗಿ ಇರುತ್ತದೆ. ಹಾಗೆಯೇ ಅವರೂ ಕೂಡ ಗಟ್ಟಿಯಾಗಿ ನಿಂತುಕೊಂಡು ಈ ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಆದ್ದರಿಂದ ಅವರು ಶೆಡ್ಡು ಹೊಡೆದು ಮೈಕೊಡವಿ ನಿಂತು ದೃಢ ಮನಸ್ಸಿನಿಂದ ಕೆಲಸ ಮಾಡಬೇಕೆಂದು ಹೇಳುತ್ತಾ, ಇನ್ನು ಥರ್ಮಲ್ ಪ್ಲಾಂಟ್ ಬಗ್ಗೆ ಅನೇಕ ವಿಚಾರಗಳನ್ನು ನಾವು ಕೇಳಿದ್ದೇವೆ. ಅದನ್ನು ಮಾಡಬಾರದು ಹಾನಿಕಾರಕ, ಉಪಯುಕ್ತವಲ್ಲ ಎಂದು ಬೇರೆ ದೇಶಗಳಲ್ಲಿ ನಿಲ್ಲಿಸುತ್ತಾ ಇದ್ದಾರೆ. ಆದರೆ ನಮ್ಮಲ್ಲಿ ಅದಕ್ಕೆ ಉತ್ತೇಜನ ಕೊಡುತ್ತಾ ಇದ್ದಾರೆ. ಉತ್ತೇಜನ ಕೊಡಬೇಕೇ ಬೇಡವೇ, ಅಥವಾ ಇರತಕ್ಕಂಥ ಜಲವಿದ್ಯುತ್ ಯೋಜನೆಗಳನ್ನು ನಾವು ಎಷ್ಟರ ಮಟ್ಟಿಗೆ ಬಳಕೆ ಮಾಡಿಕೊಳ್ಳಲು ಸಾಧ್ಯವಿದೆ, ಎಷ್ಟು ಎಂ.ವಿ.. ವಿದ್ಯುತ್ ನಾವು ತಯಾರು ಮಾಡಬಹುದು, ಅದರಿಂದ ನಮ್ಮ ರಾಜ್ಯದ ಬೇಡಿಕೆಯನ್ನು ಪೂರೈಕೆ ಮಾಡಿಕೊಳ್ಳಲು ಸಾಧ್ಯವಿದೆಯೇ ಎಂಬುದನ್ನು ನೋಡಬೇಕಾಗುತ್ತದೆ. ಹಾಗೆಯೇ ಕೆರೆಕಲ್ಯಾಣ ಯೋಜನೆಯನ್ನು ನಮ್ಮ ಸರ್ಕಾರದವರು ಜಾರಿಗೆ ತಂದಿದ್ದಾರೆ. ಇದಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಸುಮಾರು 37 ಸಾವಿರ ಕೆರೆಗಳು ಇದ್ದಾವೆ. ಇವೆಲ್ಲವುಗಳಿಗೆ 50ಲಕ್ಷ ರೂಪಾಯಿಗಳನ್ನು ಕೊಟ್ಟು ಕೆರೆಕಲ್ಯಾಣ ಮಾಡುತ್ತೇವೆ ಅಂದರೆ ಮಲ್ಲಿಕಾರ್ಜುನ ಪ್ರಸನ್ನರವರು ಪ್ರಸನ್ನನಾಗಿ ಮಲ್ಲಿಕಾರ್ಜುನನ ಹತ್ತಿರ ಮಾತ್ರ ಹೋಗಬೇಕಾಗುತ್ತದೆ. ಆ ದಿಕ್ಕಿನಲ್ಲಿ ಈ ಐವತ್ತು ಲಕ್ಷ ರೂಪಾಯಿಗಳು ಏತಕ್ಕೂ ಸಾಲದು. ಏಕೆಂದರೆ ಕೆರೆ ಅಚ್ಚುಕಟ್ಟಿನಲ್ಲಿ ಸುಮಾರು ಏಳು ಲಕ್ಷ ಹತ್ತಿರ ಹತ್ತಿರ ಹೆಕ್ಟೇರ್ ಭೂಮಿ ಇದೆ. ಇಷ್ಟರಲ್ಲಿ ನೀವು ನೀರಾವರಿಯನ್ನು ಮಾಡಬಹುದು. ಅದಕ್ಕೆ ಬರೀ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಏತಕ್ಕೂ ಸಾಲದು ಎನ್ನತಕ್ಕಂಥದ್ದನ್ನು ತಾವು ಆಲೋಚನೆ ಮಾಡಬೇಕು. ಆ ದಿಕ್ಕಿನಲ್ಲಿ ಹೆಚ್ಚು ಹಣವನ್ನು ಮಾನ್ಯ ಮುಖ್ಯ ಮಂತ್ರಿಗಳು ಒದಗಿಸಬೇಕು. ಕನಿಷ್ಟ ಒಂದು ಹತ್ತು ಕೋಟಿ ರೂಪಾಯಿಗಳನ್ನಾದರೂ ಕೊಟ್ಟು ಕೆರೆ ಕಲ್ಯಾಣ ಎಂದು ಏನು ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಿ ಅದರ ಮುಖಾಂತರ ಈ ಹಳ್ಳಿಯಲ್ಲಿರತಕ್ಕಂಥ ತೂಬು, ಕೋಡಿ, ಎಲ್ಲಾ ರಿಪೇರಿ ಮಾಡಿಸಬೇಕು. ಕೆರೆಗಳಲ್ಲಿ ಹೂಳು ಮುಚ್ಚಿಕೊಂಡಿದೆ ಕೆರೆಗಳಲ್ಲಿ ಹೂಳು ತೆಗೆಯುವುದು ಎಂದರೆ ಯಾರಿಗಾದರೂ ಕೆರೆಯಲ್ಲಿ ಹೂಳು ತೆಗೆಯುವುದಕ್ಕೆ ಮಂಜೂರಾತಿ ನೀಡಿದರೆ ಕಂಟ್ರಾಕ್ಟರ್‌ಗಳು ಮೇಲೆ ಬಿದ್ದು ಬರುತ್ತಾರೆ, ಅದನ್ನು ನೋಡಬೇಕು. ಹೂಳನ್ನು ತೆಗೆಯುವುದು ಬಹಳ ಸುಲಭ ಕೆಲಸ ಎಂದು ಹೇಳಿ ಬರುತ್ತಾರೆ. ಚೆನ್ನಾಗಿ ದುಡ್ಡು ಮಾಡಬಹುದು ಎಂದು ಹೇಳಿ ಬರುತ್ತಾರೆ. ಬರೀ ಹೂಳನ್ನು ತೆಗೆಸುವುದಕ್ಕೆ ಹೋಗಬೇಡಿ. ನಮ್ಮ ನಿಮ್ಮ ಹೂಳನ್ನು ತೆಗೆದುಬಿಡುತ್ತಾರೆ. ಕೆರೆಗಳಲ್ಲಿ ಏನು ಕೋಡಿ ಹೋಗಿದೆ, ತೂಬು ಹೋಗಿದೆ, ಏರಿ ಹೊಡೆದುಹೋಗಿದ್ದರೆ ಅದನ್ನು ಮೊದಲು ರಿಪೇರಿ ಮಾಡಿಸಿ. ಹೂಳನ್ನು ತೆಗೆಯಬೇಕಾದರೆ ಯಾವುದಾದರೂ ಒಂದು ಒಳ್ಳೆಯ ಸಿಸ್ಟಮ್ಯಾಟಿಕ್ ಆದ ಯೋಜನೆಯನ್ನು ತಯಾರು ಮಾಡಿಕೊಂಡು ತಾವು ದಯವಿಟ್ಟು ಆ ದಿಕ್ಕಿನಲ್ಲಿ ಆಲೋಚನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಹೆಚ್ಚು ಹಣವನ್ನು ತಾವು ತಮ್ಮ ಒಂದು ಪ್ರಭಾವವನ್ನು ಉಪಯೋಗ ಮಾಡಿ ತೆಗೆದು ಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ತಮ್ಮ ಗಮನಕ್ಕೆ ತರುತ್ತೇನೆ. ನಾನು ಮೊದಲೇ ಹೇಳಿದಂತೆ ಇಲಾಖೆಗಳು ಮನಸ್ಸು ಮಾಡಿದರೆ, ಈ ಸಮಾಜದ ಚಿತ್ರಣವನ್ನು ಹಾಗೂ ಸ್ವರೂಪವನ್ನೇ ಬದಲಾವಣೆ ಮಾಡಬಹುದಿತ್ತು. ಅದಕ್ಕೆ ತಮಗೆ ಪೊಲಿಟಿಕಲ್ ವಿಲ್ ಬೇಕು ಸ್ವಾಮಿ. ಪೊಲಿಟಿಕಲ್ ವಿಲ್ ಇದ್ದರೆ ನಾವು ಎದ್ದು ನಿಲ್ಲುತ್ತೇವೆ. ಏನೇ ಆಗಲಿ, ಇತಿಹಾಸದಲ್ಲಿ ಒಳ್ಳೆಯ ಒಂದು ಚರಿತ್ರೆಯನ್ನು ಇತಿಹಾಸವನ್ನು

ತಾವು ನಿರ್ಮಾಣ ಮಾಡಬೇಕು ಎನ್ನತಕ್ಕಂಥ ಪೊಲಿಟಿಕಲ್ ವಿಲ್ ತಮಗೆ ಇದ್ದರೆ ಈ ಇಲಾಖೆಗಳಲ್ಲಿ ಇರತಕ್ಕಂಥ ಅವ್ಯವಹಾರವನ್ನು ಅದಕ್ಷತೆಯನ್ನು ಕಡಿಮೆ ಮಾಡುವುದಕ್ಕೆ ದಯವಿಟ್ಟು ಪ್ರಯತ್ನವನ್ನು ಮಾಡಬೇಕು. ಮತ್ತು ಕೊಟ್ಟ ಹಣ ಕೂಡ ಸದುಪಯೋಗವಾಗಬೇಕು. ತನ್ಮೂಲಕ ನಮ್ಮ ಸಮಾಜದ ಸ್ವರೂಪವನ್ನೇ ಬದಲಾವಣೆ ಮಾಡತಕ್ಕಂಥ ಈ ಇಲಾಖೆಗಳಿಗೆ ತಾವು ಕಾಯಕಲ್ಪ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾ ಇವತ್ತು ಈ ಸದನದ ಮುಂದೆ ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಆ ಎಲ್ಲಾ ಬೇಡಿಕೆಗಳನ್ನು ತುಂಬು ಹೃದಯದಿಂದ ಸ್ವಾಗತ ಮಾಡಿ ನನ್ನ ಮಾತನ್ನು ಮೂಗಿಸುತ್ತೇನೆ.

ಛೇರ್ಮನ್:- ಶ್ರೀ ಅಲ್ಲಂ ವೀರಭದ್ರಪ್ಪನವರು. ತಾವು 15 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಂ.ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ, ಇಂಧನ, ಸಣ್ಣ ನೀರಾವರಿ, ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಪವರ್ ಬಗ್ಗೆ ಮಾತನಾಡುವುದಾದರೆ ನಮ್ಮ ಸರ್ಕಾರವು ಕಳೆದ ಹಿಂದಿನ ಸರ್ಕಾರಗಳು ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ. ಇವತ್ತು ಹೋದವರ್ಷ ಬಹಳಷ್ಟು ರೈತರುಗಳು ಬಂದು ಪಂಪ್‌ಸೆಟ್‌ಗಳಿಗೆ ಕರೆಂಟ್ ಇಲ್ಲ ಎಂದು ಹೇಳಿದಾಗ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು 60 ಸಾವಿರದಿಂದ 70 ಸಾವಿರದವರೆಗೆ ಹೊಸ ಕನೆಕ್ಷನನ್ನು ಕೊಡಿಸುತ್ತೇವೆ ಎಂದು ಹೇಳಿ ಆ ಗುರಿಯನ್ನು ಮುಟ್ಟಿದ್ದಾರೆ. ಅದೇ ರೀತಿಯಾಗಿ ಸರ್ಕಾರ ಈ ವರ್ಷ ರೈತರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು, ರೈತರ ಅಭಿವೃದ್ಧಿಯಾಗಬೇಕು ಎಂದು ಹೇಳಿ ಇವುತ್ತು ಹತ್ತು ಹೆಚ್.ಪಿ.ಪಂಪ್‌ಸೆಟ್ಟುಗಳಿಗೂ ಫ್ರೀಯಾಗಿ ವಿದ್ಯುತ್ ಕೊಡುವುದರ ಮುಖಾಂತರ ಸರ್ಕಾರದವರು ಒಂದು ದಿಟ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈಗ ನಮ್ಮ ರಾಮಸ್ವಾಮಿಯವರು ಹೇಳಿದಂತೆ ಕರೆಂಟ್ ಒಂದು ದಿನದಲ್ಲಿ ಪ್ರೊಡ್ಯೂಸ್ ಮಾಡತಕ್ಕಂಥ ವಸ್ತುವಲ್ಲ. ಕಳೆದ ಸರ್ಕಾರಗಳು ಇದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಇವತ್ತು ಯಾವುದಾದರೂ ದೇಶ ಪ್ರಗತಿಯನ್ನು ಹೊಂದಬೇಕಾದರೆ, ಹಾಗೂ ಅಭಿವೃದ್ಧಿ ಹೊಂದಬೇಕಾದರೆ ಬಹಳಷ್ಟು ಇಂಡಸ್ಟ್ರಿಗಳು ಬೇಕು. ಕೈಗಾರಿಗೆಗಳು ಬೇಕು. ಆ ದೃಷ್ಟಿಯಿಂದಾಗಿ ಅತೀ ಮುಖ್ಯ ಸಾಮಗ್ರಿ ಅಥವಾ ರಾ_ಮೆಟೀರಿಯಲ್ ಎಂದು ಹೇಳಿದರೆ ಅದು ಎಲೆಕ್ಟ್ರಿಸಿಟಿ. ಇವತ್ತು if you take any western country, it has developed, progressed because of the electricity and because of the industry. Therefore, Electricity plays a very big role in the prosperity of a country.

ಈ ದಿಸೆಯಲ್ಲಿ ಈ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಗಮನವನ್ನು ಕೊಟ್ಟು ಯಾವ ರೀತಿಯಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು ಎಂದು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಿನ್ನೆ ತಾನೆ ನಮ್ಮ ಮಾನ್ಯ ಮಂತ್ರಿಗಳು ಬೇಡ್ತಿ ಯೋಜನೆಯನ್ನು ಕೂಡ ಪ್ರಾರಂಭ ಮಾಡುತ್ತೇವೆ. ಆದರಿಂದ ಕೂಡ ಕರೆಂಟ್ ಉತ್ಪಾದನೆಯಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದಾರೆ. ಇದು ನಾವು ನಿಜವಾಗಿಯೂ ಹೆಮ್ಮೆ ಪಡಬೇಕಾದಂಥ ವಿಷಯ. ಇವತ್ತು ನನ್ನ ಕ್ಷೇತ್ರದಲ್ಲಿ ಬಹಳಷ್ಟು ಸಣ್ಣ ಸಣ್ಣ ಕ್ಯಾಂಪ್‌ಗಳು ಇವೆ. ಇವುಗಳನ್ನು ಹ್ಯಾಮ್ಲೆಟ್‌ಗಳೆಂದು ಹೇಳುತ್ತಾರೆ. ಇವುಗಳಿಗೆಲ್ಲಾ ಕರೆಂಟನ್ನು ಕೊಡಬೇಕೆಂದು ನಾನು ಐದಾರು ವರ್ಷಗಳಿಂದಲೂ ಕೇಳುತ್ತಿದ್ದೇವೆ. ಅದು ಸಿಕ್ಕಿಲ್ಲ. ಈ ವರ್ಷವಾದರೂ ಅವುಗಳಿಗೆ ವಿದ್ಯುತ್ ಸಂಪರ್ಕ ಕೊಡುತ್ತಾರೆಯೇ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಪಿ.ಡಬ್ಲ್ಯೂ.ಡಿ ಬಗ್ಗೆ ಹೇಳಬೇಕೆಂದರೆ ರಾಜ್ಯದ ಮುಖ್ಯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ನ್ಯಾಷನಲ್ ಹೈವೇಸ್ ಬಹಳಷ್ಟು ಕಡಿಮೆ ಇವೆ. ಅದನ್ನು ಕನ್‌ವರ್ಟ್ ಮಾಡಿದರೆ ನಮಗೆ

ಮೆಂಟೆನನ್ಸ್ ಫಂಡ್‌ನಲ್ಲಿ ಉಳಿತಾಯವಾಗುತ್ತದೆ ಹಾಗೂ ಆರ್ಥಿಕವಾಗಿ ನಮ್ಮ ಭಾರ ಕಡಿಮೆಯಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ತಾವು ಈ ದಿಸೆಯಲ್ಲಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಕಾರವಾರದಿಂದ ಬೀದರ್‌ನಿಂದ ಬೆಂಗಳೂರಿನವರೆಗೆ ಹೈವೇ ಮಾಡಬೇಕೆಂಬುದಕ್ಕೆ ಹೋದಸಾರ್ತಿ ನೀವೇನು ಹೇಳಿದ್ದೀರಿ, ಅದು ಎಷ್ಟರ ಮಟ್ಟಿಗೆ ಜಾರಿ ಆಗಿದೆಯೋ ನನಗೆ ಗೊತ್ತಿಲ್ಲ. ಅದು ಇನ್ನೂ ಕಾರ್ಯರೂಪಕ್ಕೆ ಬಾದಿಲ್ಲ. ಅದನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಈಗ ನಮಗೆಲ್ಲಾ ತಿಳಿದಂತೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಏನಿದೆ ಅದನ್ನು ಸ್ಥಾಪನೆ ಮಾಡಿದ್ದು ಬಹಳ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಹಣಕಾಸು ಕೊಟ್ಟು ಆ ಭಾಗಗಳನ್ನು ಏಳಿಗೆ ಮಾಡಬೇಕೆಂಬುದು ಸರ್ಕಾರದ ಮೂಲ ಉದ್ದೇಶವಾಗಿತ್ತು. ಆದರೆ ಈಗ ಏನಾಗಿದೆ ಅಂದರೆ ಈ ಫಂಡ್ ಅನ್ನು ನಾಲ್ಕು ಜಿಲ್ಲೆಗಳಿಗೆ ಸೇರಿಸಿ 40-50 ಕೋಟಿ ರೂಪಾಯಿಗಳವರೆಗೆ ಮಾತ್ರ ಕೊಡುತ್ತಾ ಬಂದಿದ್ದಾರೆ. ಇದನ್ನು ಬಿಟ್ಟರೆ ಯಾವ ತರಹದಲ್ಲೂ ಹೆಚ್ಚಿನ ಅಲೊಕೇಷನ್ ಅನ್ನು ಕೊಟ್ಟಿಲ್ಲ. ಪಿ. ಡಬ್ಲ್ಯೂ. ಡಿ ಗೆ ಅಲೊಕೇಷನ್ ಕೊಟ್ಟಿಲ್ಲ. ಮೈಂಟ್‌ನೆನ್ಸ್‌ಗೆ ಅಲೊಕೇಷನ್ ಕೊಟ್ಟಿಲ್ಲ. ಹೊಸ ರೋಡಿಗೆ ಅಲೊಕೇಷನ್ ಕೊಟ್ಟಿಲ್ಲ. ಇದರಿಂದ ಬಹಳ ಅನ್ಯಾಯವಾಗಿದೆ. ಆದ್ದರಿಂದ ಇದನ್ನು ಹೇಗಾದರೂ ಸರಿ ಮಾಡಿ ಹೆಚ್ಚಿನ ರೆಗ್ಯುಲರ್ ಅಲೊಕೇಷನ್ ಅನ್ನು ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟರೆ ಮಾತ್ರ ನಾವೇನಾದರೂ ಬೇರೆಯವರ ಜೊತೆಗೆ ಸಮಾನತೆಯನ್ನು ಹೊಂದುತ್ತೇವೆಯೇ ಹೊರತು ನೀವು ಹೈದರಾಬಾದ್ ಕರ್ನಾಟಕಕ್ಕೆ ಹೆಚ್ಚಿಗೆ ಕೊಟ್ಟಿದ್ದೇವೆಂದು ಹೇಳಿ ರೆಗ್ಯುಲರ್ ಆಗಿ ಕೊಡುವುದನ್ನು ಕಟ್ ಮಾಡಿದರೆ ಬಹಳ ಅನ್ಯಾಯವಾಗುತ್ತದೆ. ಇವತ್ತು ನೀವು ಅಲೊಕೇಷನ್ ಆಫ್ ಫಂಡ್ಸ್ ಒಂದೊಂದು ತಾಲ್ಲೂಕಿಗೆ ನೋಡಿದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನಿಂದ ಒಂದು ಕೋಟಿ ರೂಪಾಯಿ ಬರಬಹುದು. ನೀವು ಯಾವುದಾದರೂ ಒಂದು ಬ್ರಿಡ್ಜ್ ಅನ್ನು ಲೋಕೋಪಯೋಗಿ ಇಲಾಖೆ ಮೂಲಕ ಕಟ್ಟಿದರೆ 2-3ಕೋಟಿ ರೂಪಾಯಿಯಾಗುತ್ತದೆ. ನಾನು ಶಾಸಕನಾಗಿ ಎರಡೂವರೆ ವರ್ಷವಾಯಿತು. ಇಲ್ಲಿಯವರೆಗೆ ಯಾವ ಹೊಸ ರೋಡ್ಸ್ ಮಾಡಿಲ್ಲ. ಜೊತೆಗೆ ಹಳೆಯ ರೋಡುಗಳು ಸರಿಯಾಗಿ ಮೈಂಟೆನ್ ಆಗಿಲ್ಲ. ಆದಕಾರಣ ದಯವಿಟ್ಟು ಇದಕ್ಕೆ ಗಮನಕೊಟ್ಟು ನಾನು ಕೊಟ್ಟಿರುವ ಬೇಡಿಕೆಗಳನ್ನು ಹೇಗಾದರೂ ಮಾಡಿ ಈ ಸಲ ಈಡೇರಿಸಿ ಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ತಮ್ಮ ಕೆಎಸ್‌ಆರ್‌ಟಿಸಿ ಬಸ್ಸುಗಳು ನಮ್ಮ ಬಹಳ ಹಳ್ಳಿಗಳಿಗೆ ಹೋಗುತ್ತಿಲ್ಲ. ಏಕೆಂದರೆ ನಮ್ಮ ಪಿ.ಡಬ್ಲ್ಯೂ.ಡಿ. ರೋಡುಗಳು ಸರಿಯಾಗಿಲ್ಲ ಎಂಬುದು ಅವರ ಕಂಪ್ಲೇಂಟು. ಅವರ ಹತ್ತಿರ ಬಸ್ಸು ಇರುವುದಿಲ್ಲ. ಅವರ ಹತ್ತಿರ ಡ್ರೈವರುಗಳು ಇರುವುದಿಲ್ಲ. ಆದರೂ ಸಹ ಏನೋ ಒಂದು ಕಾರಣಕ್ಕೋಸ್ಕರ ನಮ್ಮ ಪಿ.ಡಬ್ಲ್ಯೂ.ಡಿ. ರೋಡುಗಳು ಸರಿಯಾಗಿಲ್ಲವೆಂದು ನೆಪ ಹೇಳಿ ಹಳ್ಳಿಗಳಿಗೆ ಬಸ್‌ಗಳನ್ನು ಓಡಿಸುತ್ತಿಲ್ಲ. ಆದ ಕಾರಣ ನಮ್ಮ ರೋಡ್ಸ್‌ಗಳನ್ನು ಸರಿಪಡಿಸಬೇಕೆಂದು ಕೇಳುತ್ತೇನೆ. ಸಿ.ಆರ್.ಫಂಡ್ಸ್ ಬಗ್ಗೆ ಹೇಳಬೇಕಾದರೆ ಕೇಂದ್ರ ಸರ್ಕಾರದಿಂದ 100 ಕೋಟಿ ರೂಪಾಯಿ ಬರಬೇಕೆಂದು ಕಳೆದ ಸಲ ಹೇಳಿದ್ದಿರಿ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತಿಳಿಸಬೇಕು. ಈ ವರ್ಷವಾದರೂ ಆ ಫಂಡ್ ಅನ್ನು ತೆಗೆದುಕೊಂಡು ಬಂದು ಈ ರೋಡ್‌ಗಳಿಗೆ ಉಪಯೋಗಿಸಬಹುದೆಂಬ ಸಲಹೆಯನ್ನು ಕೊಡುತ್ತಿದ್ದೇನೆ. ಈಗ ಸಣ್ಣ ನೀರಾವರಿಯ ಬಗ್ಗೆ ಮಾತನಾಡಬೇಕೆಂದರೆ ಈ ಇಲಾಖೆಯು ಸಣ್ಣದಾಗಿದ್ದರೂ ಕೂಡ ಇದರಿಂದ ನಮ್ಮ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಬಹಳಷ್ಟು ಸಣ್ಣ ಸಣ್ಣ ಹಳ್ಳಿಗಳಿವೆ. ನಾವೇನಾದರೂ ಬಡ ರೈತರಿಗೆ ಬಹಳಷ್ಟು ಸಹಾಯ ಮಾಡಬೇಕೆಂದರೆ ಈ ಸಣ್ಣ ನೀರಾವರಿಯ ಪಾತ್ರ ಬಹಳ ಮುಖ್ಯವಾದುದು. ನಮ್ಮ ರಾಜ್ಯದಲ್ಲಿ ಬಹಳ ಲಾಭವನ್ನು ರೈತರು ಪಡೆಯಬೇಕೆಂದರೆ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಮತ್ತು ನನ್ನ ಪಕ್ಕದ ಸಿರುಗುಪ್ಪ ಜಿಲ್ಲೆಯಲ್ಲಿ ನಮಗೆ ತುಂಭದ್ರ ಯೋಜನೆಯಿಂದ ನೀರಾವರಿಯ ಸೌಕರ್ಯ ಉಂಟು. ಆದರೆ ಬಹಳಷ್ಟು ನೀರು ವ್ಯರ್ಥವಾಗಿ ಹರಿದು

ಹೋಗುತ್ತಿದೆ. ಅಲ್ಲಿ ಎರಡು ಮೂರು ಸಣ್ಣ ನದಿಗಳು ಇವೆ. ಹಾಗೂ ಹಳ್ಳಗಳು ಇವೆ. We are not able to tap it ಇವತ್ತು ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಇವತ್ತು ಕಾವೇರಿಯಾಗಲಿ, ಅಪ್ಪರ್ ಕೃಷ್ಣ ಆಗಲಿ ಅವು ದೊಡ್ಡ ದೊಡ್ಡ ಸ್ಕೀಮ್‌ಗಳು. ಹಣದ ಕೊರತೆಯಿಂದ 10-20 ವರ್ಷಗಳಾದರೂ ಈ ಯೋಜನೆಗಳ ಕೆಲಸ ಮುಗಿಯುವುದಿಲ್ಲ. ಆದಕಾರಣ ನಾವು ಹೆಚ್ಚಿನ ಮಹತ್ವವನ್ನು ಈ ಸಣ್ಣ ನೀರಾವರಿ ಯೋಜನೆಗಳಿಗೆ ಕೊಡಬೇಕು. ಈಗ ಇಲಾಖೆಯಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಸುಮಾರು 10 ಯೋಜನೆಗಳು ಕಳೆದ 4-5 ವರ್ಷಗಳಿಂದ ಬಾಕಿ ಇವೆ. ಇವತ್ತಿನವರೆಗೂ ಯಾವ ಕಾರ್ಯಕ್ರಮಗಳನ್ನು ಈ ಬಗ್ಗೆ ತೆಗೆದುಕೊಂಡಿಲ್ಲ. ಪ್ರತಿ ಬಜೆಟ್ ಅಧಿವೇಶನದಲ್ಲಿಯೂ ಇದರ ಬಗ್ಗೆ ನಾವು ಹೇಳುತ್ತೇವೆ. ಇದರ ಬಗ್ಗೆ ಏನೇನೂ ಉತ್ತರ ಕೊಡುತ್ತಾರೆ, ನಮಗೆ ಸರಿಯಾದ ಉತ್ತರ ಸಿಕ್ಕಿಲ್ಲ. 2-3 ವರ್ಷಗಳ ಹಿಂದೆ ಇದ್ದಂತಹ ಸರ್ಕಾರ ಕೂಡ ಸಣ್ಣ ನೀರಾವರಿ ಯೋಜನೆಯ ಬಗ್ಗೆ ಸಾಕಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದರೂ ಸಹ ನಾನು ಹೇಳಿದ ಯೋಜನೆಗಳು ಕಾರ್ಯರೂಪಕ್ಕೆ ಬಂದಿಲ್ಲ. ನಾನು ಇರುವ ತನಕ ಆಗುತ್ತದೋ ಇಲ್ಲವೋ ಎಂಬುದು ಅನುಮಾನವಾಗಿದೆ. ನಾವು ಇದಕ್ಕೆ ಫೌಂಡೇಷನ್ ಹಾಕುತ್ತೇವೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಮಂತ್ರಿಗಳು ದಯವಿಟ್ಟು ಗಮನಕೊಟ್ಟು ರೈತರ ಅನುಮಾನವನ್ನು ಹೋಗಲಾಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ನಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ, ಅವೆಲ್ಲಾ ಕಾರ್ಯರೂಪಕ್ಕೆ ಬರಬೇಕು.

It should not only schemes; But it should also be implemented. People should feel that this government works. In the next two years, people should say this government works for the poor people, works for the poor farmers and works for the rural people.

ಎಂಬ ನಂಬಿಕೆ ಬರುವ ದೃಷ್ಟಿಯಲ್ಲಿ ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕು. ಈ 10-12 ಯೋಜನೆಗಳಲ್ಲದೆ, ನನ್ನ ತಾಲ್ಲೂಕಿನಲ್ಲಿ ಇನ್ನೂ 30-40 ಯೋಜನೆಗಳನ್ನಾದರೂ ಮಾಡಬಹುದು. ಬಹಳಷ್ಟು ನೀರು ವೇಸ್ಟ್ ಆಗಿ ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಿದೆ. ನಾವು ಅವರಿಗೆ ಸುಮ್ಮನೆ ನೀರನ್ನು ಕೊಡುತ್ತಿದ್ದೇವೆ. ಆದುದರಿಂದ, ಇದರ ಕಡೆ ಸರ್ಕಾರ ಗಮನ ಕೊಡಬೇಕು. ಅನಂತರ ಮಾನ್ಯ ಸದಸ್ಯರಾದ ಶ್ರೀ ರಾಮಸ್ವಾಮಿಯವರು ಹೇಳಿದಂತೆ ಇವೊತ್ತು ಅಪ್ಪರ್ ಕೃಷ್ಣಾ ಬೇಸಿಸ್‌ನಲ್ಲಿ ಏನು ಇರಿಗೇಷನ್ ಪ್ರಾಜೆಕ್ಟ್ ಮಾಡಿದ್ದಾರೆ, ಅಲ್ಲಿಗೆ ಬರುವ ವ್ಯವಸ್ಥಾಪಕ ನಿರ್ದೇಶಕರು ಕೇವಲ 3 ತಿಂಗಳು, 6 ತಿಂಗಳುಗಳವರೆಗೆ ಮಾತ್ರ ಇರುತ್ತಾರೆ. ಕಳೆದ 4 ವರ್ಷಗಳಿಂದ 8-10 ಜನ ವ್ಯವಸ್ಥಾಪಕ ನಿರ್ದೇಸಕರು ಬದಲಾವಣೆಯಾಗಿದ್ದಾರೆ. ಅಲ್ಲಿರುವ ಸೀನಿಯರ್ ಇಂಜಿನಿಯರ್ ಅನ್ನು ವ್ಯವಸ್ಥಾಪಕ ನಿರ್ದೇಸಕರನ್ನಾಗಿ ಮಾಡುತ್ತಾರೆ. ಆಗ, ಅವರು ಯಾವುದೇ ತರಹದ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಏನೆಂದರೆ, Let it not be a Chief Engineer, you appoint a Managing Director of the Superintending Engineer cadre also who can work for atleast three years; who can go round the places, who can see the difficulties of the local people and he can take a decision.

ಇವೊತ್ತು ಬಳ್ಳಾರಿಯಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕುವಂಥ ಒಂದು ಅವಕಾಶವಿದೆ. ಅಲ್ಲೊಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಅಲ್ಲಿ ಸರಿಯಾದ ವ್ಯವಸ್ಥೆಯಿಲ್ಲ, ಫೋನಿನ ವ್ಯವಸ್ಥೆಯೂ ಇಲ್ಲ. ಅವರು ತಾಲ್ಲೂಕು ಸಮಿತಿಗೆ ಹಾಜರಾಗಬೇಕಾದರೆ ಪ್ರತಿ ಸಲ ನಮ್ಮ ಜೀಪ್ ಕೊಟ್ಟು ಅವರನ್ನು ಕರೆಸಬೇಕಾಗಿದೆ. ಕರೆಸಿದರೂ ಅವರು ಇರುವುದಿಲ್ಲ. ನಾನು ಏನೇ ಕೇಳಿದರೂ ಅವರಿಂದ ರಿಪೋರ್ಟ್ ಸಿಗುವುದಿಲ್ಲ. ಇದರ ಬಗ್ಗೆ ಮಂತ್ರಿಗಳಿಗೆ ಬರೆದರೂ ಏನೂ ಪ್ರಯೋಜನವಾಗಲಿಲ್ಲ. ಆದುದರಿಂದ, ಮಾನ್ಯ

ಮಂತ್ರಿಗಳು ಕನಿಷ್ಠ ಪಕ್ಷ 10-12 ಯೋಜನೆಗಳಿಗಾದರೂ ಪ್ರಾಶಸ್ತ್ಯ ಕೊಟ್ಟು ಈ ವರ್ಷದಲ್ಲಿ ಬಜೆಟ್ ಅಲೊಕೇಷನ್ ಮಾಡಿ ಕಾರ್ಯರೂಪಕ್ಕೆ ತರಬೇಕೆಂದು ಮತ್ತೊಂದು ಸಲ ನಾನು ರೈತರ ಪರವಾಗಿ ಹಾಗೂ ವೈಯಕ್ತಿಕವಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ಬಳ್ಳಾರಿ ಜನರು ಹೇಗಿದ್ದಾರೆಂದರೆ, ನೀರು ಜಾಸ್ತಿ ಇದೆಯೆಂದು ಒಂದು ಕಡೆ ಹೇಳಿದರೆ, ಮತ್ತೊಂದು ಕಡೆ ಕೆರೆಯನ್ನು ಕಟ್ಟಿರಿ ಎಂದು ಹೇಳುತ್ತಿದಾರೆ.

ಶ್ರೀ ಅಲ್ಲಂ ವೀರಭದ್ರಪ್ಪ :-ಬಹಳಷ್ಟು ನೀರು ಆಂಧ್ರ ಪ್ರದೇಶಕ್ಕೆ ವೇಸ್ಟ್ ಆಗಿ ಹರಿದು ಹೋಗುತ್ತಿರುವುದರಿಂದ, ಅದನ್ನು ಟ್ರ್ಯಾಪ್ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ನೀರು ಅಣೆಕಟ್ಟೆನಲ್ಲಿರದೆ, ವೇಸ್ಟ್ ಆಗಿ ಹರಿದು ಹೋಗುತ್ತಿರುವುದನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. I am coming to that point next. ಕೊನೆಯದಾಗಿ , ಭಾರಿ ಮತ್ತು ಮಧ್ಯಮ ನೀರಾವರಿ ಬಗ್ಗೆ ಹೇಳಬೇಕೆಂದರೆ, ಮೊಟ್ಟಮೊದಲನೆಯದಾಗಿ ನಾನು ನಮ್ಮ ಜಿಲ್ಲೆಯ ಹಾಗೂ ಶಾಸಕರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರನ್ನು ಮತ್ತು ಶ್ರೀಮಾನ್ ಮಲ್ಲಾರಿ ಪಾಟೀಲರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇವೊತ್ತು ನಮ್ಮ ಭಾಗದ ರೈತರಿಗೆ ನೀರಿಲ್ಲದೆ ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಒಟ್ಟಿಗೆ ಸುಮಾರು 3ಲಕ್ಷ ಎಕರೆಗಳಿಂದ 6 ಲಕ್ಷ ಎಕರೆ ಪ್ರದೇಶಗಳವರೆಗೆ ನೀರಿಲ್ಲದೆ ಹಾಳಾಗಿ ಹೋಗುವುದನ್ನು ತಪ್ಪಿಸಲು ಭದ್ರಾದಿಂದ 4-5ಟಿಎಂಸಿ ನೀರನ್ನು ಕೊಟ್ಟು ಆ ಬೆಳೆಯನ್ನು ಉಳಿಸಿ, ಬಡ ಕುಟುಂಬಗಳ ಜೀವನವನ್ನು ಉದ್ಧಾರ ಮಾಡಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹೀಗೆ ನಮ್ಮ ಸರ್ಕಾರದವರು ಬಡ ರೈತರಿಗೋಸ್ಕರವಾಗಿ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದೇ ರೀತಿ ಇವೊತ್ತು ಅಪ್ಪರ್ ಕೃಷ್ಣಾ, ಕಾವೇರಿ ಬೇಸಿಸ್‌ಗಳ ಬಗ್ಗೆ ಹೆಚ್ಚು ಮಾತನಾಡದೆ, ನಮ್ಮದೇ ಆಗಿರತಕ್ಕಂಥ ತುಂಗಭದ್ರಾ ಯೋಜನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತುಂಗಭದ್ರಾ ಅಣೆಕಟ್ಟಿನಿಂದ ಸುಮಾರು20-25 ಟಿಎಂಸಿ ನೀರು ವೇಸ್ಟ್ ಆಗಿ ಹರಿದು ಹೋಗುತ್ತಿದೆ. ಸಿಲ್ಟ್ ಅಕ್ಯುಮೂಲೇಟ್ ಆಗಿದೆ. ಅದನ್ನು ಯಾವ ಪರಿಸ್ಥಿತಿಯಲ್ಲಿ ತೆಗೆಯಬೇಕೆಂದು ಸರ್ಕಾರ ಬಹಳ ಪ್ರಯತ್ನ ಪಡುತ್ತಿದೆ. ಇವೊತ್ತು ರೈತರ ಕೋಟಾ ಕಡಿಮೆಯಾಗುತ್ತಾ ಬಂದಿದೆ. ಸಿಲ್ಟ್ ಇರುವುದರಿಂದ ಸುಮಾರು 20-25 ಟಿಎಂಸಿ ಸ್ಟೋರೇಜ್ ಕ್ಯಪಾಸಿಟಿ ಕಡಿಮೆಯಾಗುತ್ತಿದೆ. ಅದೇ ರೀತಿ distribution of water to each HLC or low level canal or High level canal, right bank, or left bankಗೆ ಕಡಿಮೆಯಾಗಿದೆ. ಇವೊತ್ತು ಕ್ರಾಪಿಂಗ್ ಪ್ಯಾಟ್ರನ್ ಅನ್ನು ನೋಡಿದರೆ, ಒಂದು ಕಾಲದಲ್ಲಿ ಜುಲೈ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಇತ್ತು. ಜನರು ಒಂದೇ ಒಂದು ಬೆಳೆಯನ್ನು ಹಾಕುತ್ತಿದ್ದರು. ಆಮೇಲೆ ಹತ್ತಿಯನ್ನು ಬೆಳೆಯಲು ಪ್ರಾರಂಭ ಮಾಡಿದರು. ಹತ್ತಿಯಲ್ಲಿ ಮೊದಲು ಹಂಪೆಯ ಹೈಬ್ರೀಡ್ ಎಂದು ಬಂತು. ಅದು ಸುಮಾರು 90 ರಿಂದ 100 ದಿನದಲ್ಲಿ ಬೆಳೆಯಾಗುತ್ತದೆ. ಅದು ಸರಿಯಾಗಿ ಡಿಸೆಂಬರ್ ತಿಂಗಳವರೆಗೆ ನಡೆಯುತ್ತಿತ್ತು. ಈಗ ಲಾಂಗ್ ಸ್ಟೇಪಲ್ ಕಾಟನ್ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇದು ರೈತರಿಗೆ ಲಾಭದಾಯಕವಾಗಿದೆ. ಈ ಬೆಳೆಗೆ ಇವತ್ತು 150 ರಿಂದ 160 ದಿನಗಳವರೆಗೆ ನೀರು ಬೇಕಾಗುತ್ತದೆ. This has become a high technology which is developed by Agriculture Department which gives more yield, more profit to the poor farmers. Hence, people are cultivating this crop.

ಈ ದೃಷ್ಟಿಯಿಂದ ಹೇಗಾರೂ ಮಾಡಿ ಜುಲೈನಿಂದ ಜನವರಿಯವರೆಗೆ ನೀರನ್ನು ಕೊಡಬೇಕು, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಅದೇ ರೀತಿ low level canal ನಲ್ಲಿ Hybird variety ಭತ್ತವನ್ನು ಬೆಳೆಯುತ್ತಿದ್ದಾರೆ. ಅವರಿಗೆ ಕೂಡ90 ರಿಂದ 100ದಿನಗಳವರೆಗೆ ನೀರು ಸಾಕಾಗುವುದಿಲ್ಲ, ಅವರಿಗೂ ಕೂಡ 130 ರಿಂದ 150

ದಿನಗಳವರೆಗೆ ನೀರು ಬೇಕಾಗುತ್ತದೆ. ಆದುದರಿಂದ ಅವರಿಗೆ ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ನೀರು ಬೇಕಾಗುತ್ತದೆ. ಕಳೆದ ಎರಡು ಮೂರು ವರ್ಷದಿಂದ ನಮ್ಮ ಅಧಿಕಾರಿಗಳು ಬಹಳ ಒಳ್ಳೆಯ ಸಹಕಾರವನ್ನು ನೀಡಿ ರೈತರನ್ನು ಉಳಿಸಿದ್ದಾರೆ. ಇದೇ ರೀತಿ ಬರುವವರ್ಷ ಬಂದರೆ ಬಹಳ ಕಷ್ಟವಾಗುತ್ತದೆ ಆದುದರಿಂದ ಇದರ ಕಡೆ ದಯಮಾಡಿ ಗಮನವನ್ನು ಕೊಟ್ಟು, ನೀವು pick-ups ಗೆ ಹೆಚ್ಚು ಮಾನ್ಯತೆಯನ್ನು ಕೊಡಬೇಕು, ಆ ರೀತಿ ಕೊಡದಿದ್ದರೆ ಮುಂದಿನ ವರ್ಷದಲ್ಲಿ ಬಹಳ ಕಷ್ಟವಾಗುತ್ತದೆ.

ಆಮೇಲೆ ನೀವು ರಸ್ತೆಗಳ ಮೆಂಟೆನೆನ್ಸ್‌ಗಾಗಿ ತಾವು ಕೂಡಾ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ಈ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಡಾ. ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ):- ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿನದ ಲೋಕೋಪಯೋಗಿ ಇಲಾಖೆ, ಇಂಧನ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳ ಮೇಲಿನ ಬೇಡಿಕೆಗಳನ್ನು ಅನುಮೋದಿಸುತ್ತಾ ಈ ಬೇಡಿಕೆಗಳ ಮೇಲೆ ಕೆಲವು ಮಾತುಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಛೇರ್ಮನ್:- ಈಗ ಮಾತನಾಡುವವರು ಬಹಳಷ್ಟು ಜನರಿದ್ದಾರೆ. ಇವತ್ತೇ ಬೇಡಿಕೆಗಳನ್ನು ಮೇಲಿನ ಚರ್ಚೆ ಪೂರೈಸಿ ರಿಪ್ಲೆಯನ್ನು ಕೊಡಬೇಕಾಗಿದೆ. ಅದುದರಿಂದ ತಾವು ಹೇಳುವುದನ್ನು ಆದಷ್ಟು ಸಂಕ್ಷಿಪ್ತವಾಗಿ 10 ನಿಮಿಷದಲ್ಲಿ ಹೇಳಿ ಮುಗಿಸಬೇಕು.

Dr. N. B. NANJAPPA:- I do not go out of the way. All of a sudden, water has taken a very important place in India. ಪ್ರತಿ ಒಂದು ಹನಿ ನೀರೂ ಸಹ it is nothing but gold now. ಇವತ್ತು ರೈತರು ನೀರನ್ನು ಹುಡುಕಿಕೊಂಡು ತಿರುಗತಕ್ಕ ಪರಿಸ್ಥಿತಿ ಇದೆ. ಇವತ್ತು ಪ್ರತಿ ಹನಿ ನೀರನ್ನು ಉಪಯೋಗಿಸಿಕೊಳ್ಳತಕ್ಕ ಕಾತುರತೆ ನಮ್ಮ ಕರ್ನಾಟಕದ ರೈತರಿಗೆ ಬಂದಿದೆ ಎಂದರೆ ತಪ್ಪಾಗುವುದಿಲ್ಲ. ನಾನು ಭಾರಿ ಮತ್ತು ಮಧ್ಯಮ ನೀರಾವರಿಯ ಇಲಾಖೆ ಮತ್ತು ಸಣ್ಣ ನೀರಾವರಿಯ ಇಲಾಖೆಯ ಬಗ್ಗೆ ಪ್ರಪ್ರಥಮವಾಗಿ ಮಾತನಾಡುತ್ತಾ, ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ವರ್ಷ ಮತ್ತು ಕಳೆದ ವರ್ಷ ಅಂದರೆ ನಮ್ಮ ಸರ್ಕಾರ ನೀರಾವರಿ ಇಲಾಖೆಗೆ ಬಹಳಷ್ಟು ಆದ್ಯತೆಯನ್ನು ಕೊಟ್ಟಿದೆ. ಇದನ್ನು ಎಲ್ಲರೂ ಕೂಡ ನಿರ್ವಿವಾದದಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಬಜೆಟನ್ನು ತಯಾರು ಮಾಡತಕ್ಕ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ resources ಗೂ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರತಕ್ಕದ್ದು ತಮಗೆಲ್ಲರಿಗೂ ಕೂಡ ಗೊತ್ತಿದೆ. ಇದರ ಸದುಪಯೋಗವನ್ನು ಸಂಪೂರ್ಣವಾಗಿ ಪಡೆದುಕೊಳ್ಳತಕ್ಕದ್ದು ಈ ಇಲಾಖೆಯ ಮತ್ತು ಇದಕ್ಕೆ ಸೇರಿದವರೆಲ್ಲರ ಕರ್ತವ್ಯವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ 1991-92ರಲ್ಲಿ 383 ಕೋಟಿಯನ್ನು ಇದಕ್ಕೆ ಕೊಡಲಾಗಿತ್ತು. ಆದರೆ ಈ ವರ್ಷ ಇದಕ್ಕೆ ಸುಮಾರು 549 ಕೋಟಿಯನ್ನು ಮುಡುಪಾಗಿ ಇಟ್ಟಿದ್ದು, ಅದರಲ್ಲಿ ಕಾವೇರಿ ಜಲಾನಯನ ಪ್ರದೇಶಕ್ಕೆ ಯಾವಾಗಲೂ ಕೂಡ ಕೊಟ್ಟಿರದಿದ್ದನ್ನು ಅಂದರೆ ಸುಮಾರು 200 ಕೋಟಿ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದಾರೆ. ಆದರೂ ನಮಗೆ ಈ ನೀರಿನ ಉಪಯೋಗವನ್ನು ಏತಕ್ಕೆ ಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ಆಗಲಿಲ್ಲ? ನಮಗೆ ಇಷ್ಟೊಂದು ನೀರಿನ ಸೌಲಭ್ಯ ಇದ್ದರೂ ಕೂಡ ಸಾವಿರಾರು ವರ್ಷಗಳಿಂದ ಈ ನೀರೆಲ್ಲವೂ ಕೂಡ ಸಮುದ್ರಕ್ಕೆ ಸೇರುತ್ತಿರುವುದು ನಮಗೆಲ್ಲರಿಗೂ ಗೊತ್ತಿದೆ. ಅದಕ್ಕೆ ಅನೇಕ ಕಾರಣಗಳಿವೆ. ಅದರ ಬಗ್ಗೆ ನಾನು ಜಾಸ್ತಿ ಮಾತನಾಡುವುದಿಲ್ಲ. ನಮ್ಮಲ್ಲಿ ಇರತಕ್ಕಂಥ ನೀರಿನ ಸಂಪತ್ತು ಏನು ಇದೆ, ಅದನ್ನು ಸರಿಯಾದ ರೀತಿಯಲ್ಲಿ ಕಳೆದ ನೂರು ವರ್ಷಗಳಿಂದ ಉಪಯೋಗಿಸಿಕೊಳ್ಳತಕ್ಕಂಥ ಒಂದು ಅದೃಷ್ಟವೇನಾದರೂ ನಮಗೆ ಇದ್ದಿದ್ದರೆ ಇವತ್ತು ಇದರ ಬಗ್ಗೆ ಚರ್ಚೆ ಮಾಡುವಂಥ ಅವಶ್ಯಕತೆಯೇ

ಇರುತ್ತಿರಲಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. 1947ರಲ್ಲಿ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಹಾಗೂ 1950 ರಲ್ಲಿ ಗಣರಾಜ್ಯ ಸ್ಥಾಪನೆಯಾದ ಮೇಲೆ ಇದರ ಬಗ್ಗೆ ಚಿಂತನೆ ಪ್ರಾರಂಭವಾಯಿತು. ಈಗ ಇದರ ಬಗ್ಗೆ ಸಾಕಾದಷ್ಟು ಕೆಲಸ-ಕಾರ್ಯಗಳು ನಡೆದಿದೆಯೆಂದರೆ ತಪ್ಪಾಗುವುದಿಲ್ಲ. ನಾವು ಬಹಳಷ್ಟು ಕೇಳಬಹುದು, ಹಾಗೆ ಮಾತನಾಡುವ ಸಂದರ್ಭದಲ್ಲಿ ಇನ್ನೂ ಕೂಡ ಅನೇಕ ಕೆಲಸಗಳು ಆಗಬೇಕಾಗಿದೆ. ಏನು ನಮ್ಮ ಪಕ್ಕದ ರಾಜ್ಯವಾದ ತಮಿಳು ನಾಡಿನಲ್ಲಿ ಎಷ್ಟು ಕೆಲಸ-ಕಾರ್ಯಗಳು ಆಗಿದೆ ಅಷ್ಟು ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಿಲ್ಲ. ಹಾಗೆ ಆಗದಿರುವುದಕ್ಕೆ ನಮಗೆ ಹಿಂದೆ ಇದ್ದಂತಹ ಕಟ್ಟುಪಾಡುಗಳೇ ಕಾರಣ. ನಮ್ಮ ಮೇಲೆ ಬ್ರಿಟಿಷರ ಕಾಲದಲ್ಲಿ ಹೇರಿದಂತಹ ನಿಯಮಗಳು ಅಡ್ಡ ಬಂದಿದ್ದರಿಂದ ಈ ರೀತಿ ಆಯಿತು ಎಂದು ನಾನು ತಿಳಿದುಕೊಂಡಿದ್ದೇನೆ. 1930ರಲ್ಲಿ ನಮ್ಮ ಕೆ.ಆರ್.ಸಾಗರ ಅಣೆಕಟ್ಟು ಕಟ್ಟಿದಂತಹ ಸಮಯದಲ್ಲಿ ನಾವು ಈ ಎಲ್ಲಾ ನದಿಗಳಿಗೆ ಅಡ್ಡಗಟ್ಟೆ ಹಾಕತಕ್ಕಂಥ ಒಂದು ವ್ಯವಸ್ಥೆ ಏನಾದರೂ ಕರ್ನಾಟಕ ರಾಜ್ಯದಲ್ಲಿ ಬಂದಿದ್ದರೆ ಇವತ್ತು ನಾವು ಈ ಒಂದು ವಿಷಯದ ಬಗ್ಗೆ ಜಾಸ್ತಿ ಮಾತನಾಡಬೇಕಾಗಿರಲಿಲ್ಲ. ಆದರೂ ಕೂಡ ಅದು ಆಗಿ ಹೋಗಿದೆ, ಇವತ್ತು ಆಗಬೇಕಾದ್ದು ಏನಿದೆಯೆಂದರೆ, ಈಗ ಕೊಟ್ಟಿರತಕ್ಕಂಥ ಹಣದ ಸದುಪಯೋಗ ಆಗಬೇಕಾಗಿದೆ. ಬಹಳಷ್ಟು ಬೇಗ ಕೆಲಸ-ಕಾರ್ಯಗಳು ಆಗಬೇಕಾಗಿದೆ. ಈ ಕೆಲಸ-ಕಾರ್ಯಗಳು ಆಗತಕ್ಕಂಥ ಸಂದರ್ಭಗಲ್ಲಿ ನಿಜವಾಗಿ ಸರಿಯಾದ ರೀತಿಯಲ್ಲಿ ಕೆಲಸ-ಕಾರ್ಯಗಳನ್ನು ಮಾಡತಕ್ಕಂಥವರ ಕೈಗೆ ಕೆಲಸವನ್ನು ಕೊಡಬೇಕಾಗಿದೆ. ಇಷ್ಟು ಕೆಲಸಗಳು ಸರ್ಕಾರದ ವತಿಯಿಂದ ಮತ್ತು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಿಂದ ಆಗಬೇಕಾಗಿದೆ. ಈಗ ಕೆಲಸ ತರಾತುರಿಯಿಂದ ನಡೆಯುತ್ತಿರುವುದನ್ನು ನಾವು ಎಲ್ಲಾ ಕಡೆ ನೋಡಿದ್ದೇವೆ. ಅದರ ಬಗ್ಗೆ ಸರ್ಕಾರಕ್ಕೂ ಕೂಡ ಕಾಳಜಿ ಇದೆ. ಜೊತೆಗೆ ಡಿಪಾರ್ಟ್‌ಮೆಂಟಿನ ಮೇಲೂ ಒತ್ತಡವಿದೆ. ಈಗ ಕೊಟ್ಟಿರತಕ್ಕಂತಹ ಹಣವನ್ನು ಖರ್ಚು ಮಾಡಬೇಕಾಗಿದೆ. ಇದನ್ನು ಖರ್ಚು ಮಾಡತಕ್ಕಂತಹ ಸಂದರ್ಭದಲ್ಲಿ ಈ ಕೆಲವು ಕಡೆ ಕೆಲಸ-ಕಾರ್ಯಗಳು I do not know whether it is due to technical problem or ಅಲ್ಲಿ ಇರತಕ್ಕಂತಹ ಆಫೀಸರ್ಸ್ ಅದರ ಬಗ್ಗೆ ಜಾಸ್ತಿ ನಿಗಾ ಇಡದ ಕಾರಣ ಕೆಲವು ಕಡೆ ಕೆಲಸ-ಕಾರ್ಯಗಳು ಆಗುತ್ತಿಲ್ಲವೋ ಹೇಗೆ ಎಂಬುದು ತಿಳಿಯುತ್ತಿಲ್ಲ. ಕಳೆದ ವರ್ಷ ಸಾಕಾದಷ್ಟು ಹಣವನ್ನು ಕೊಟ್ಟಿದ್ದರು. ನಮ್ಮ ತಾಲ್ಲೂಕಿನ ಶ್ರೀ ರಾಮದೇವರ ನಾಲೆ ರಿಪೇರಿಗೆ ಸರ್ಕಾರ ಹಣ ಕೊಟ್ಟಿತ್ತು. ನಮ್ಮ ಮುಖ್ಯಮಂತ್ರಿಗಳು ಅದರ ಪ್ರಾರಂಭೋತ್ಸವ ಮಾಡಿಬಿಟ್ಟು ಬಂದರು. ಅದು 100ವರ್ಷದ ಹಳೆಯ ನಾಲೆ. ಆದರೆ, ಇವತ್ತು ಅಲ್ಲಿ ಕೆಲಸ ಇನ್ನೂ ಪ್ರಾರಂಭವಾಗಲಿಲ್ಲ. ಅದೇ ಬಾಗೂರು ನವಲೆ ಟನಲ್ ಜಾಗದಲ್ಲಿ ಈಗ ಓಪನ್ ಕಟಿಂಗ್ ಕೆಲಸ ಕೂಡ ಆಗದೆ ಇನ್ನೂ ನೆಗೋಷಿಯೇಷನ್ ಹಂತದಲ್ಲಿಯೇ ಉಳಿದು ಕೊಂಡಿದೆ. ಜೊತೆಗೆ ಅಲ್ಲಿರತಕ್ಕಂಥ ರೈತರಿಗೆ ಕೊಡಬೇಕಾಕಂಥ ಬೆಳೆ ಪರಿಹಾರ ಕೊಡಲಿಲ್ಲ. ಇದೆಲ್ಲದಕ್ಕೂ ಡಿಪಾರ್ಟ್‌ಮೆಂಟೇ ಕಾರಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರ ಜವಾಬ್ದಾರಿಯನ್ನು ವಹಿಸಿಕೊಂಡಿರುವವರು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡದೆ, ಇದರ ಬಗ್ಗೆ ಚಿಂತನೆ ಮಾಡದೆ, ಇದರ ಬಗ್ಗೆ ಯೋಚನೆ ಮಾಡದಿರುವ ಕಾರಣ ಈ ಕೆಲಸ-ಕಾರ್ಯಗಳು ವಿಳಂಬವಾಗುತ್ತಿವೆ. ಸರ್ಕಾರದಿಂದ ಕಳೆದ ಎರಡು ವರ್ಷಗಳಿಂದ ಸಾಕಷ್ಟು ಹಣವನ್ನು ನೀರಾವರಿ ಯೋಜನೆಗಳಿಗೆ ಕೊಡತಕ್ಕಂಥ ವ್ಯವಸ್ಥೆಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಡೀಟೇಲ್ಸ್‌ಗೆ ಹೋಗದೆ ಇವತ್ತು ನಮಗೆ ಏನು ಸರ್ಕಾರ ಹಣ ಒದಗಿಸಿದೆ, ಅದಕ್ಕೆ ನಾನು ಮಾನ್ಯ ಮಂತ್ರಿಗಳಾದ ಮಲ್ಲಾರಿಗೌಡ ಪಾಟೀಲ್‌ರವರನ್ನು ಶ್ಲಾಘನೆ ಮಾಡಬೇಕಾಗುತ್ತದೆ. ಅವರ ಮುಗ್ಧ ಸ್ಥಿತಿಗೋಸ್ಕರವಲ್ಲ, ಅವರು ಮಂತ್ರಿಯಾದ ಮೇಲೆ ನಾನು ಅವರ ಜೊತೆ ಒಂದೆರಡು ಕಡೆ ಪ್ರವಾಸ ಕೂಡ ಮಾಡಿದ್ದೆ, ಅವರ ಜೊತೆ 2-3ದಿವಸ ಪ್ರವಾಸ ಮಾಡಿದಂಥ ಸಮಯದಲ್ಲಿ ಅವರು ಒಳ್ಳೆಯ ಕೆಲಸ-ಕಾರ್ಯಗಳನ್ನು ಮಾಡಬೇಕೆನ್ನುವ ಒಂದು ಕಾಳಜಿಯನ್ನು ಹೊಂದಿದ್ದರು. ಅದೇ ರೀತಿ ಇವತ್ತು ಅವರಿಗೆ ಅವರ ಕೈಯನ್ನು ಬಲಪಡಿಸುವುದಕ್ಕೆ ಸಾಕಷ್ಟು ಹಣ ಕೂಡ ಸಿಕ್ಕಿದೆ. ಈ ಹಣ ಸಿಕ್ಕಿದಂಥ ಸಂದರ್ಭದಲ್ಲಿ ಅವರು ತಮ್ಮ

ಇಲಾಖೆಯ ಕೆಲಸ-ಕಾರ್ಯಗಳನ್ನು ಚೆನ್ನಾಗಿ ಮಾಡಿಸಬೇಕು. 50 ಲಕ್ಷ ಹೆಕ್ಟೇರ್ ಪ್ರದೇಶವನ್ನು ಇರಿಗೇಟ್ ಮಾಡತಕ್ಕಂಥ ದಿಸೆಯಲ್ಲಿ ಕ್ರಮ ಕೈಗೊಂಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ಇನ್ನೂ ಕೂಡ 1/3 of the area, we are not able to cover. ಇದು ಏತಕ್ಕೆ ಈ ಒಂದು ಸ್ಥಿತಿಗೆ ತಲುಪಿದ್ದೇವೆಂದರೆ ನಾವು ಇದರ ಬಗ್ಗೆ ಚೆನ್ನಾಗಿ ಯೋಚನೆ ಮಾಡಿಲ್ಲ. ನಮ್ಮ ಪೂರ್ವಿಕರಿಗೆ ಏನು ಗೊತ್ತಿಲ್ಲದೇ ಇದ್ದರೂ ಕೂಡ ಅವರು ಬಹಳ ಅವಿದ್ಯಾವಂತರಾಗಿದ್ದರೂ ಕೂಡ ನೀರಿನ ಶೇಖರಣೆ ಬಗ್ಗೆ ಕ್ರಮ ಕೈಗೊಂಡಿದ್ದರು. ಅವರಿಗೆ ಸರಿಯಾಗಿ ಹಲ್ಲು ಉಜ್ಜುವುದಕ್ಕೆ ಬರುತ್ತಿರಲಿಲ್ಲ, ಅವರು ದಿನವೂ ಸ್ನಾನ ಮಾಡುತ್ತಿರಲಿಲ್ಲ. ಅಂತಹವರು ಪ್ರತಿ ಊರಿನಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿ, ಅದರಲ್ಲಿ ಮಳೆ ನೀರನ್ನು ಶೇಖರಣೆ ಮಾಡಿ ಅದನ್ನೇ ಉಪಯೋಗಿಸಿಕೊಳ್ಳುವಂಥ ವ್ಯವಸ್ಥೆಯನ್ನು ನೂರಾರು ವರ್ಷಗಳ ಹಿಂದೆಯೇ ಮಾಡಿದ್ದರು. ಆದರೆ, ಇಂದು we have developed in every respect - - - ಟೆಕ್ನಾಲಜಿ ಬಂದಿದೆ, ಹಣ ಇದೆ. ಆದರೆ, We are not progressing. ಇಂದು ನಮ್ಮ ಹಳ್ಳಿಗಳಲ್ಲಿರತಕ್ಕಂಥ ಕೆರೆ ಕಟ್ಟೆಗಳ ಗತಿ ಏನಾಗಿದೆ? ಈ ಕೆರೆ ಕಟ್ಟೆಗಳ ಬಗ್ಗೆ ನಾವು ಚಿಂತೇನೇ ಮಾಡಿದ್ದಿಲ್ಲ. ಇವತ್ತು ನಾವು ಅದನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದರಿಂದ ಏನಾಯಿತು? The impounding of rain water is more important than your bigger dams. The impounding of rain water will help in many ways. ಕೆರೆಗಳ ಹಿಂಭಾಗದಲ್ಲಿ ಇರತಕ್ಕಂಥ ಭೂಮಿ ಎಲ್ಲವೂ ಫಲವತ್ತಾಗುವುದಕ್ಕೆ ಅದು ಅನುಕೂಲ ಮಾಡುತ್ತದೆ. ಅದರಲ್ಲಿ ಕಲೆಕ್ಟ್ ಆದ ಸಿಲ್ಟನ್ನು ಪಕ್ಕದ ಜಮೀನುಗಳಿಗೆ ರೈತರು ಉಪಯೋಗಿಸಿಕೊಂಡಿದ್ದೇ ಆದರೆ ಅದರಿಂದ ಒಂದು ಆರ್ಗಾನಿಕ್ ಮೆನ್ಯೂರ್ ಯೂಸ್ ಮಾಡಿದಂತೆ, ಹಾಗೂ ನ್ಯಾಚುರಲ್ ಮೆನ್ಯೂರ್ ಅನ್ನು ಸಪ್ಲೈ ಮಾಡಿದಂತಾಗುತ್ತದೆ. ಅದರ ಸುತ್ತಮುತ್ತ ಮರ ಗಿಡಗಳನ್ನು ನೆಡುವುದಕ್ಕೆ ಅನುಕೂಲವಾಗುತ್ತದೆ. ಅದರಿಂದ ಇಕಲಾಜಿಕಲ್ ಬ್ಯಾಲೆನ್ಸ್‌ಗೆ ಅನುಕೂಲವಾಗುತ್ತದೆ. ಗ್ರಾಮಗಳಿಗೆ ಅಲ್ಲಲ್ಲಿ ನೀರನ್ನು ಉಪಯೋಗಿಸಿಕೊಳ್ಳುವಂಥ ಒಂದು ಒಳ್ಳೆಯ ಕೆಲಸವನ್ನು ಹಿಂದೆಯೇ ನಮ್ಮ ರಾಜ ಮಹಾರಾಜರ ಕಾಲದಿಂದ ಹಳ್ಳಿಗಳಲ್ಲಿ ನಡೆದಿರತಕ್ಕದ್ದನ್ನು ಇವತ್ತು ನಾವು ಮರೆತಿದ್ದೇವೆ. We have totally neglected; we are entirely depending upon some of the big dams. ಇವತ್ತು ಒಂದು ಕಡೆ ದೊಡ್ಡ ದೊಡ್ಡ ಡ್ಯಾಮ್ಸ್ ಆಗಿದ್ದು ಒಳ್ಳೆಯದು. ಈಗ ಭಾಕ್ರಾ ನಂಗಲ್, ತುಂಗಭದ್ರಾ ಇದೆಲ್ಲಾ ಇಲ್ಲದಿದ್ದರೆ ಎಲೆಕ್ಟ್ರಿಸಿಟಿ ಉತ್ಪತ್ತಿಯಾಗುತ್ತಿರಲಿಲ್ಲ. ಲಕ್ಷಾಂತರ ಎಕರೆಗಳನ್ನು ನೀರಾವರಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈಗ ನಮ್ಮ ರಾಜ್ಯದಲ್ಲಿರುವ ಕೆರೆಗಳಲ್ಲಿನ ಸಿಲ್ಟ್ ಅನ್ನು ತೆಗೆಯಲು ಡಿ-ಸಿಲ್ಟಿಂಗ್ ಎಂದು ಹೇಳಿ ಒಂದು ಸ್ಕೀಮ್ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ಅದಕ್ಕೆ ಹೆಚ್ಚಿಗೆ ಹಣವನ್ನು ಕೊಡಬೇಕಾದುದು ಸರ್ಕಾರದ ಕರ್ತವ್ಯ. ನೂರಾರು ವರ್ಷಗಳ ಹಿಂದೆ ಕಟ್ಟಿದಂಥ ದೊಡ್ಡ ದೊಡ್ಡ ಕೆರೆಗಳೆಲ್ಲವೂ ಕೂಡ ಇವತ್ತು ಮಟ್ಟವಾಗಿವೆ. ಅವು ಕೋಡಿ ಮಟ್ಟಕ್ಕೆ ಬಂದಿದೆ. ಇದರಿಂದ ನೀರನ್ನು ಶೇಖರಣೆ ಮಾಡುವುದಕ್ಕೆ ಆಗುತ್ತಿಲ್ಲ, ಹೂಳು ತುಂಬಿಕೊಂಡಿದೆ. ಅದರ ಹಿಂದುಗಡೆ ಇರತಕ್ಕಂಥ ನೀರಾವರಿ ಪ್ರದೇಶಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಈಗ ಲೋಡಿಂಗ್‌ಗೆ ಡಿಪ್ಪರ್ಸ್ ಬಂದಿರುವುದರಿಂದ ಈ ಪೋಕ್‌ಲೈನರ್ಸ್ ಅನ್ನು ಪರ್ಚೇಸ್ ಮಾಡಿ ಅವುಗಳ ಮೂಲಕ ಡಿ-ಸಿಲ್ಟಿಂಗ್ ಮಾಡಿ ನೂರಾರು ವರ್ಷಗಳಿಂದ ಅಕ್ಯುಮಿಲೇಟ್ ಆಗಿರತಕ್ಕಂಥ ಆ ಸಿಲ್ಟ್ ಅನ್ನು ಕೆರೆಯ ಹೊರ ಭಾಗದಲ್ಲಿ ತೆಗೆದು ಹಾಕಿದರೆ ರೈತರು ಅದನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಕಾವೇರಿ ಬೇಸಿಸ್‌ನಲ್ಲಿ ವಿವಾದ ಇರುವುದರಿಂದ, ಈ ಭಾಗದ ಕೆಲಸ-ಕಾರ್ಯಗಳು ತ್ವರಿತವಾಗಿ ಆಗಬೇಕಾಗಿದೆಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ, ವಿದ್ಯುಚ್ಛಕ್ತಿ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ 10 ವರ್ಷಗಳಿಂದ ಒಂದು ಯೂನಿಟ್ ಜಾಸ್ತಿ ವಿದ್ಯುತ್ ಉತ್ಪಾದನೆ ಮಾಡತಕ್ಕಂಥದನ್ನು

ನಾನು ಮಾಡಿಲ್ಲ. ರಾಯಚೂರು ಥರ್ಮಲ್ ಪ್ರಾಜೆಕ್ಟ್‌ನಲ್ಲಿ ಇನ್‌ಕ್ರೀಸ್ ಮಾಡಿರುವುದು ಬಿಟ್ಟರೆ ಇದರ ಬಗ್ಗೆ ಕಳೆದ 10 ವರ್ಷಗಳಿಂದಲೂ ಯಾವ ಚಿಂತನೆಯನ್ನೂ ಮಾಡಲೇ ಇಲ್ಲ. ಈಗ ನಮ್ಮ ಸರ್ಕಾರ ಆದರ ಬಗ್ಗೆ ಚಿಂತನೆಯನ್ನು ಮಾಡುತ್ತಿದೆ. ಪ್ರತಿಯೊಬ್ಬರಿಗೂ ಕೂಡ ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ಏನಾದರೂ ಸರ್ಕಾರಕ್ಕೆ ಇಚ್ಛೆ ಇದ್ದರೆ we must go for an automic energy production; There is no other go way. ಎಲ್ಲಾ ಮುಗಿದು ಹೋಗಿದೆ. ಈಗ ಹಾಕಿಕೊಂಡಿರತಕ್ಕಂಥ ಯೋಜನೆಗಳಿಗೆ ಹಣ ಜಾಸ್ತಿ ಖರ್ಚಾಗುತ್ತದೆ. ಸ್ವಲ್ಪ ಸ್ವಲ್ಪ ಎಲೆಕ್ಟ್ರಿಸಿಟಿ ಮಾತ್ರ ಅದರಲ್ಲಿ ಉತ್ಪಾದನೆ ಮಾಡಬಹುದು. ಆದರೆ, ನಾವು ಮುಂದಿನ 25-50 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ನಾವು ಸೃಷ್ಟಿಸಿದರೆ ಈ ಕರ್ನಾಟಕ ರಾಜ್ಯವನ್ನು ಸಮೃದ್ಧಿಯನ್ನಾಗಿ ಮಾಡಬಹುದು. Agriculture, as well as in industry, if you really want to do something, you must go for such Kaiga project immediately. We have to finish it as early as possible without listening to some writers, Poets. ಸಾಹಿತ್ಯ ಬರೆಯತಕ್ಕಂಥವರು, ಕವನಗಳನ್ನು ಬರೆಯತಕ್ಕಂಥವರೆಲ್ಲಾ ಈ ಸೈಂಟಿಫಿಕ್ ಟೆಕ್ನಾಲಜಿ ಮೇಲೆ ಮಾತನಾಡಿ ಇದು ಬೇಡವೆಂದು ಅಡ್ಡ ಬರುತ್ತಿದ್ದಾರೆ. ಇದಕ್ಕೆ ಸರ್ಕಾರ ಮನಸ್ಸನ್ನು ಕೊಡದೆ ಆದಷ್ಟು ಬೇಗ ಈ ಕೆಲಸವನ್ನು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನನ್ನ ತಾಲ್ಲೂಕನ್ನೇ ತೆಗೆದುಕೊಂಡರೆ, ಈಗ ಯಾವ ಪಂಪುಸೆಟ್ಟುಗಳನ್ನು ಎಲೆಕ್ಟ್ರಿಸಿಟಿಯಿಂದ ಓಡಿಸುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ಲೋ ವೋಲ್ಟೇಜ್ ಇರುತ್ತದೆ. ಇದರ ಬಗ್ಗೆ ವಿದ್ಯುತ್ ಇಲಾಖೆಯಲ್ಲಿ ಚಿಂತನೆ ಮಾಡಬೇಕು. ಆದಷ್ಟು ಬೇಗ ಈಗಿರತಕ್ಕ ಡಿಸ್ಟ್ರಿಬ್ಯೂಷನ್ ಲಾಸಸ್ಸನ್ನು ಕಡಿಮೆ ಮಾಡುವುದಕ್ಕೆ ಯೋಚನೆ ಮಾಡಬೇಕು. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ವಿದ್ಯುಚ್ಛಕ್ತಿಯಿಂದ ಓಡಬೇಕಾಗಿರುವ ಬೋರ್‌ವೆಲ್‌ಗಳ ಪಂಪುಗಳನ್ನು ಓಡಿಸತಕ್ಕ ಕೆಲಸವನ್ನು ಆದಷ್ಟು ಬೇಗ ಸರ್ಕಾರ ಅಥವಾ ಇಲಾಖೆ ಮಾಡಬೇಕೆಂದು ಹೇಳಬಯಸುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಪ್ರತಿದಿನ ಸಾವಿರಾರು ಪಂಪ್‌ಸೆಟ್ಟುಗಳು ಸುಟ್ಟುಹೋಗುತ್ತಿವೆ. ರೈತರು ಇಟ್ಟಿರತಕ್ಕ ಬೆಳೆ ಒಣಗಿಹೋಗುತ್ತಿದೆ. ಕೆಲವು ಕಡೆ ಬರಗಾಲ ಪರಿಸ್ಥಿತಿ ಇದೆ. ಆದುದರಿಂದ ಇದರ ಬಗ್ಗೆ ತಾವು ಕೂಡಲೇ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಜಿಲ್ಲೆಯಲ್ಲಿ ಶ್ರವಣಬೆಳಗೊಳ, ಬೇಲೂರು, ಹಳೇಬೀಡುಗಳಿವೆ. ಇಡೀ ಪ್ರಪಂಚದಲ್ಲೇ ಹೆಸರುವಾಸಿಯಾದಂಥ ಈ ಸ್ಥಳಗಳು ನನ್ನ ಜಿಲ್ಲೆಯಲ್ಲಿರುವುದರಿಂದ ನಾನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳತಕ್ಕದ್ದು ಸೂಕ್ತವೆಂದು ಭಾವಿಸಿದ್ದೇನೆ. ನನಗೆ ತಿಳಿದಂತೆ ಪ್ರವಾಸೋದ್ಯಮ ಇಲಾಖೆಯಲ್ಲಿ ಸಾಕಷ್ಟು ಕೆಲಸಕಾರ್ಯಗಳು ನಡೆದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ there are many many Historical places. ಇಲ್ಲಿಗೆ ಪಾಶ್ಚಿಮಾತ್ಯ ದೇಶಗಳಿಂದ ಅನೇಕ ಸಾವಿರ ಪ್ರವಾಸಿಗರು ಬರುತ್ತಿರುವುದನ್ನು ನಾವು ನೋಡಿದ್ದೇವೆ. ಆದರೆ ಇವರೆಲ್ಲರಿಗೂ ನಾವು ಏನು ಅನುಕೂಲ ಮಾಡಿ ಕೊಟ್ಟಿದ್ದೇವೆಂದು ಗಮನ ಹರಿಸಿದರೆ ನಾವು ಒಂದೇ ಒಂದು ಅನುಕೂವನ್ನೂ ಕೂಡ ಮಾಡಿಕೊಟ್ಟಿಲ್ಲ ಎನಿಸುತ್ತದೆ. ನನಗೆ ಹೆಚ್ಚು ಕಾಲಾವಕಾಶ ಇಲ್ಲದಿರುವುದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ಮಾನ್ಯ ಪ್ರವಾಸೋದ್ಯಮ ಸಚಿವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಅಂಗಳದ ಹತ್ತಿರ ಗೋಪಾಲ ಸ್ವಾಮಿ ಬೆಟ್ಟ ಎಂದು ಇದೆ. ಇದು ಪಶ್ಚಿಮ ಘಟ್ಟದಲ್ಲಿರತಕ್ಕದ್ದು. ಇಲ್ಲಿ ಹಿಂದಿನ ಮಹಾರಾಜರು ಒಂದು ಫಾರೆಸ್ಟ್ ಗೆಸ್ಟ್ ಹೌಸನ್ನು ಕಟ್ಟಿಸಿದ್ದಾರೆ. ಅಲ್ಲಿ ಒಂದು ದೇವಸ್ಥಾನ ಇದೆ. ಇದನ್ನು ಬಹಳ ಚೆನ್ನಾಗಿ ಅಭಿವೃದ್ಧಿ ಮಾಡಬಹುದು. ನಂದಿಬೆಟ್ಟ, ಕೆಮ್ಮಣ್ಣು ಗುಂಡಿ ಎಂದು ನಾವು ಏನು ತಿಳಿದುಕೊಂಡಿದ್ದೇನೆ ಅದಕ್ಕಿಂತ ಹೆಚ್ಚಾಗಿ ಈ ಪಶ್ಚಿಮ ಘಟ್ಟದಲ್ಲಿರತಕ್ಕ

ಈ ಸ್ಥಳ ಬಹಳ ಸುಂದರ ತಾಣ. ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಈಗಾಗಲೇ ಅಲ್ಲಿ ಒಳ್ಳೆಯ ರಸ್ತೆ ಇದೆ, ದೇವಸ್ಥಾನ ಇದೆ, ಒಂದು ಫಾರೆಸ್ಟ್ ಗೆಸ್ಟ್ ಹೌಸ್ ಕೂಡ ಇದೆ. ಆದ್ದರಿಂದ ಇದರ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದಿನ ವರ್ಷ ನಮ್ಮ ಶ್ರವಣಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕ ಪೂಜಾ ಸಮಾರಂಭ ಪ್ರಾರಂಭವಾಗುತ್ತದೆ. ಅಲ್ಲಿ ಮಠದ ವತಿಯಿಂದ ಗೆಸ್ಟ್ ಹೌಸ್‌ಗಳಿವೆಯೇ ಹೊರತು ನಮ್ಮ ಸರ್ಕಾರದ ವತಿಯಿಂದ ಒಂದೇ ಒಂದು ಗೆಸ್ಟ್ ಹೌಸ್ ಕೂಡ ಇಲ್ಲ. ಪ್ರತಿದಿನ ಅಲ್ಲಿಗೆ ಪಾಶ್ಚಿಮಾತ್ಯ ದೇಶಗಳಿಂದ ಬರತಕ್ಕ ಪ್ರವಾಸಿಗರೆಲ್ಲರೂ ಹಾಸನದ ಹೋಟೆಲ್‌ಗಳಿಗೇ ಹೋಗಿ ತಂಗಬೇಕಾಗಿದೆ. ಇದನ್ನು ಸರ್ಕಾರ ಮನವರಿಕೆ ಮಾಡಿಕೊಂಡು ಅಲ್ಲಿ ಗೆಸ್ಟ್ ಹೌಸ್‌ಗಳನ್ನು ತಕ್ಷಣ ಕಟ್ಟಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಈ ರೀತಿ ಮಾಡಿದ್ದೇ ಆದರೆ You can make it second ooty. Some of the people are interested in it. You may kindly take up this. ಅಲ್ಲಿ ಒಂದು ಸ್ಮಾಲ್ ಏರ್‌ಪೋರ್ಟ್‌ನ್ನು ಮಾಡಿ ವಾಯುದೂತ್ ಸಂಚಾರವನ್ನು ಕಲ್ಪಿಸಿದರೆ ರಾಜ್ಯ ಸರ್ಕಾರಕ್ಕೆ ಬಹಳಷ್ಟು ಸಂಪಾದನೆ ಕೂಡ ಬರುತ್ತದೆ. ಅಲ್ಲದೆ ಸಾವಿರಾರು ಜನರು ಅಲ್ಲಿಗೆ ಬರಲು ಆಕರ್ಷಣೆ ಕೂಡ ಮಾಡಬಹುದು. You must connect Hassan, Shravanabelgola, Bellary through Vayudoot air connections. ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ತಮಗೆ ಮತ್ತು ಈ ಖಾತೆಯ ಮಂತ್ರಿಗಳಿಗೂ ವಂದನೆಗನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಡಾ. ಎ. ಬಿ. ಮಲಕರೆಡ್ಡಿ(ಯಾದಗೀರ್):- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಸದನದ ಮುಂದೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು , ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು, ಹಾಗೂ ಸಣ್ಣ ನೀರಾವರಿ ಮಂತ್ರಿಗಳು ತಮ್ಮ ತಮ್ಮ ಖಾತೆಗಳಿಗೆ ಸಂಬಂಧಪಟ್ಟಂತೆ ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳನ್ನು ಸ್ವಾಗತಿಸುತ್ತಾ, ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಸಮಯಾವಕಾಶ ಸ್ವಲ್ಪ ಕಡಿಮೆ ಇದೆ. ಆದರೂ ಕೂಡ ಎಷ್ಟು ಸಾಧ್ಯವೋ ಅಷ್ಟು ಸೂಚನೆಗಳನ್ನು ಕೊಡುವ ಮೂಲಕ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನೀರಾವರಿ ಇಲಾಖೆ ತನ್ನ ಗೊತ್ತುಗುರಿ ಮತ್ತು ನಿರ್ದೇಶನಗಳನ್ನು ಯಾವ ರೀತಿ ಬದಲು ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ನೀರಾವರಿ ವಿಷಯದಲ್ಲಿ ಸುಮಾರು 7-8 ತಿಂಗಳಿಂದ ಸಾಕಷ್ಟು ಚರ್ವಿತಚರ್ವಣ ಆಗಿ ಬಹಳಷ್ಟು ಜಿಲ್ಲೆಗಳಲ್ಲಿ ಅದರ ಬಗ್ಗೆ ಪ್ರಶ್ನೆ ಮೂಡಿದೆ. ಈ ಕಾವೇರಿ ಜಲಾನಯನ ಯೋಜನೆಯ ವಿಷಯದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೇ ಅಲ್ಲ, ಇಡೀ ದೇಶದಲ್ಲಿಯೇ ಅಲ್ಲೋಲಕಲ್ಲೋಲವಾಗಿದೆ. ಇದೇ ದಿಸೆಯಲ್ಲಿ ಕಾವೇರಿ ಯೋಜನೆಯ ಬಗ್ಗೆ, ಕಾವೇರಿ ಜಲಾನಯನದ ಬಗ್ಗೆ ಅನೇಕ ಶಾಸಕ ಮಿತ್ರರು ಮಾತನಾಡುವವರಿದ್ದಾರೆ. ಈ ಸದನದಲ್ಲಿ ಒಂದು ನಿರ್ಣಯ ಸೂಚಿಸಿದ್ದು ಕೂಡ ಆಗಿದೆ. ಮತ್ತೆ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಅಥವಾ ಕೃಷ್ಣಾ ಜಲಾನಯನ ಯೋಜನೆಯ ಬಗ್ಗೆ ನಾವು ಸ್ವಲ್ಪ ಹೆಚ್ಚು ಜಾಗ್ರತೆಯನ್ನು ವಹಿಸಬೇಕಾಗಿದೆ. ಏತಕ್ಕೆಂದರೆ ಸಮಯ8 ವರ್ಷ ಇದೆ. ಸುಮಾರು 1970ನೇ ಇಸವಿಯಿಂದ ಇಲ್ಲಿಯವರೆಗೆ ಬಚಾವತ್ ಅವಾರ್ಡ್ 1976ನೇ ಇಸವಿಯಲ್ಲಿ ಬಂದಮೇಲೆ ನಮಗೆ ಉಳಿದದ್ದು ಕೇವಲ 24 ವರ್ಷಗಳು. ಈ 24 ವರ್ಷಗಳಲ್ಲಿ ನಾವು ಸಂಪೂರ್ಣವಾಗಿ ಕೃಷ್ಣಾ ಜಲಾನಯನ ಯೋಜನೆಯನ್ನು ತಯಾರು ಮಾಡಿ ಆ ಪಿರಿಯಾಡಲ್ಲಿ ನಾನು ನೀರನ್ನು ಉಪಯೋಗ ಮಾಡದಿದ್ದರೆ ಬಹಳ ಅನಾಹುತಕ್ಕೆ ಈಡಾಗುತ್ತೇವೆ. ಏತಕ್ಕೆ ಅನಾಹುತಕ್ಕೆ ಈಡಾಗುತ್ತೇವೆಂದರೆ, ಈಗಾಗಲೇ ಆಂಧ್ರ ಪ್ರದೇಶದಲ್ಲಿ ನಾಗಾರ್ಜುನ ಸಾಗರ ಯೋಜನೆಯನ್ನು ಸಂಪೂರ್ಣ ಮಾಡಿ ಈಗ ತೆಲುಗು ಗಂಗಾ ಯೋಜನೆಯನ್ನು ತೆಗೆದುಕೊಂಡಿದ್ದಾರೆ. ಅವರ ರೆಕಾರ್ಡ್ ಟೈಂನಲ್ಲಿ ನಾಗಾರ್ಜುನ ಸಾಗರ ಯೋಜನೆಯನ್ನು ಮುಗಿಸಿ ಈಗಾಗಲೇ ಕೇಂದ್ರದ ಅನುಮತಿ ಪಡೆಯದೇ ತಮ್ಮ ರಾಜ್ಯದ ಸಂಪನ್ಮೂಲಗಳಿಂದ ತೆಲುಗು ಗಂಗಾ ಯೋಜನೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಆದರೆ ದುರ್ದೈವವಶಾತ್ ಏನಾಗಿದೆ ಎಂದರೆ ಈಗ ತೆಲುಗು ಗಂಗಾ ಯೋಜನೆಯಲ್ಲಿ ನಡೆಯುತ್ತಿರತಕ್ಕಂಥ ಕೆಲಸದಲ್ಲಿ ಯಾವ ಕಂಟ್ರಾಕ್ಟರುಗಳು

ಭಾಗವಹಿಸಿದ್ದರೋ ಅದೇ ಕಂಟ್ರಾಕ್ಟರುಗಳಿಗೆ ಸಂಬಂಧಪಟ್ಟವರು ನಮ್ಮ ಯು.ಕೆ.ಪಿ.ಯಲ್ಲಿ ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಇದನ್ನು ತಾವು ಬಹಳ ಸೂಕ್ಷ್ಮದಿಂದ ಪರಿಗಣಿಸಬೇಕಾಗಿದೆ. ಯಾವ ಕಂಟ್ರಾಕ್ಟರ್ಸ್ ಯು.ಕೆ.ಸಿ.ಯಲ್ಲಿದ್ದಾರೆ ಅವರಲ್ಲಿ ಸುಮಾರು 12 ಜನ ಕಂಟ್ರಾಕ್ಟರ್ಸ್ ಆಂಧ್ರದವರು ಇದ್ದಾರೆ. 16-17 ಕಂಟ್ರಾಕ್ಟರ್ಸ್‌ಗಳಲ್ಲಿ ಗ್ಲೋಬಲ್ ಕಂಟ್ರಾಕ್ಟರ್ಸ್ 12 ಜನ ಅವರೇ ಇದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ ತೆಲುಗುಗಂಗಾ ಪ್ರಾಜೆಕ್ಟ್ ಪ್ರಾರಂಭವಾದಾಗಿನಿಂದಲೂ ತಮ್ಮಲ್ಲಿಯ ಮೆಷಿನರಿಗಳನ್ನು ಶಿಫ್ಟ್ ಮಾಡಿತ್ತಿದ್ದಾರೆ. ಆ ಮೆಷಿನರಿಗಳನ್ನು ಕರ್ನಾಟಕ ಸರ್ಕಾರದ ಹಣದಿಂದ ಕೊಂಡುಕೊಂಡಿದ್ದು ಏತಕ್ಕೆ ನಾವು ಹಣವನ್ನು ಕೊಡುತ್ತಿದ್ದೇವೆಂದರೆ ಮೆಷಿನರಿ ಪರ್ಚೇಸ್ ಸಲುವಾಗಿ. ನಮ್ಮ ಹಣದಿಂದ ಪರ್ಚೇಸ್ ಮಾಡಿದ್ದನ್ನೆಲ್ಲಾ ಆ ಕಡೆ ತೆಲಗು ಗಂಗಾ ಯೋಜನೆಗೆ ಶಿಫ್ಟ್ ಮಾಡುತ್ತಿದ್ದಾರೆ. ಮತ್ತೆ ಯಾವುದಾದರೂ ಕುಂಟು ನೆಪ ಹೇಳಿ ಒಂದು ಕೆಲಸವನ್ನು ಮಾಡದೇ ಬಂದ್ ಮಾಡುತ್ತಿದ್ದಾರೆ. ಕೆಲಸ ಬಂದ್‌ಮಾಡಿ ಯಾವುದೋ ಒಂದು ಕ್ಲೈಮ್ ಹಾಕಿ ವರ್ಷಾನುಗಟ್ಟಲೆ ಕಳೆಯುತ್ತಿದ್ದಾರೆ. ಇದು ಕಳೆದ ಸುಮಾರು 15-16 ವರ್ಷಗಳಿಂದ ನೋಡಿದಂಥ ಹಾಗೂ ನಾವೆಲ್ಲರೂ ಮನಗಂಡ ವಿಷಯ. ಇಷ್ಟಾದರೂ ಕೂಡ ಅವರೇ ಪುನ: ಗ್ಲೋಬಲ್ ಟೆಂಡರ್ ಆಗಿರುತ್ತಾರೆ. ನಮಗೆ ಏನೂ ಮಾಡಲಿಕ್ಕೂ ಆಗುವುದಿಲ್ಲ. ಯಾರೋ ಹೆಸರಿನಲ್ಲಿ ಟೆಂಡರ್ ಇರುತ್ತದೆ. ಕ್ಲೈಮಿನ ಆಧಾರದ ರೇಟಿನ ಆಧಾರದ ಮೇಲೆ ಕೊಡಲೇಬೇಕಾಗುತ್ತದೆ. ಕೊಡುತ್ತೇವೆ. ಆದರೆ ನಮ್ಮ ಕರ್ತವ್ಯ ಅಷ್ಟಕ್ಕೆ ಮುಗಿಯಲಿಲ್ಲ. ಸರ್ಕಾರದ ಕರ್ತವ್ಯ ಮತ್ತು ಸ್ಥಳೀಯ ಇಂಜಿನಿಯರುಗಳ ಕರ್ತವ್ಯ ಮತ್ತು ಗುರುತರವಾದ ಜವಾಬ್ದಾರಿ ಇರುತ್ತದೆ. ಎಲ್ಲಿಯವರೆಗೆ ನಮ್ಮ ಸ್ಥಳದಲ್ಲಿ ಕೆಲಸ ಮಾಡತಕ್ಕಂಥ ಇಂಜಿನೀಯರ್‌ಗಳು ಮತ್ತು ಅಧಿಕಾರಿಗಳಲ್ಲಿ ಒಂದು ಸ್ವಾವಲಂಬನೆ ಬರುವುದಿಲ್ಲ, ನಮ್ಮ ರಾಜ್ಯದ ಬಗ್ಗೆ ಒಂದು ಕಳಕಳಿ ಬರುವುದಿಲ್ಲ, ಅಲ್ಲಿಯವರೆಗೆ ಈ ಯೋಜನೆಗಳು ಪೂರ್ತಿಯಾಗುವುದಿಲ್ಲ. ಅಧಿಕಾರಿಗಳು ಯಾರೇ ಇರಲಿ ತಾವು ಮಂತ್ರಿಗಳು ಇದ್ದವರು ಸಾರ್ವಜನಿಕರನ್ನು ಪ್ರತಿನಿಧಿಸಿದವರು, ಅಧಿಕಾರಿಗಳನ್ನು ಸಾಕಷ್ಟು ಪರಮಾಣದಲ್ಲಿ ಮೋಟಿವೇಟ್ ಮಾಡಬೇಕಾಗುತ್ತದೆ. ಅವರೂ ಕೂಡ ದೊಡ್ಡ ವಿದ್ಯಾವಂತರು. ಆದರೆ ನನ್ನ ದೃಷ್ಟಿಯಿಂದ ನೋಡಿದರೆ ಅವರನ್ನು ಸಮಗ್ರ ದೃಷ್ಟಿಯಿಂದ ನೋಡಿದಾಗ ಅವರಲ್ಲಿ ಕೂಡ ಒಂದು ಸ್ಪೂರ್ತಿ ಬಂದು ಒಂದು ಚಾಲೆಂಜ್ ಸ್ವೀಕಾರ ಮಾಡಿ, ಯಾವ ರೀತಿ ಲೋಪದೋಷಗಳು ಕಂಡು ಬಂದರೂ ಕೂಡ ಅವುಗಳನ್ನು ಮೀರಿ ಈ ಯೋಜನೆ ಯನ್ನು ಸಂಪೂರ್ಣಗೊಳಿಸುವಲ್ಲಿ ಅವರು ಹೆಚ್ಚಿನ ಆಸ್ತೆಯನ್ನು ವಹಿಸಬೇಕಾಗುತ್ತದೆ. ಅದಕ್ಕೆ ಅವರನ್ನು ದೋಷಣೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಯಾರಿಗೆ ಇಂಥ ದೊಡ್ಡ ಗುರುತರವಾದ ಜವಾಬ್ದಾರಿ ಕೊಟ್ಟಿರುತ್ತೇವೆಯೋ ಅಷ್ಟೇ ಗುರುತರವಾಗಿ ನಾವು ನಮ್ಮ ಕರ್ತವ್ಯವನ್ನು ಸರ್ಕಾರದ ಮಟ್ಟದಲ್ಲಿ ನಿಭಾಯಿಸಬೇಕಾಗುತ್ತದೆ. ಜೊತೆಗೆ ಅವರಿಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಸ್ಪೆಷಲ್ ಇನ್‌ಸೆಂಟೀವ್ ಕೊಡಬೇಕಾಗುತ್ತದೆ. ಯಾವ ಆಫೀಸರ್ ತನ್ನ ಕೈಯಲ್ಲಿ ಬರತಕ್ಕಂಥ ಕೆಲಸವನ್ನು ಸಮಯಕ್ಕೆ ಮುಂಚೆ ಮುಗಿಸುತ್ತಾರೆ. ಅಂತಹವರಿಗೆ ಸ್ಪೆಷಲ್ ಇನ್‌ಸೆಂಟೀವ್ ಕೊಡಬೇಕು. ನಾವು ಕೆಲವು ಕೆಲಸವನ್ನು ಕೊಟ್ಟಮೇಲೆ ಆ ಅಧಿಕಾರಿಯನ್ನು ಆ ಸ್ಥಳದಿಂದ ಇನ್ನೊಂದು ಕಡೆಗೆ ದಯವಿಟ್ಟು ವರ್ಗಾಯಿಸುವುದಕ್ಕೆ ಹೋಗಬೇಡಿ. ನೀವು ಮಾಮೂಲಾಗಿ ವರ್ಷ ಎರಡು ವರ್ಷ ಮೂರು ವರ್ಷಕ್ಕೆ ಒಮ್ಮೆ ಬದಲಿ ಮಾಡುತ್ತೀರಿ. ಆದರೆ ಯು.ಕೆ.ಪಿ. ಪ್ರಾಜೆಕ್ಟ್‌ನಲ್ಲಿ, ಕೃಷ್ಣಾ ಜಲಾನಯನ ಯೋಜನೆಯಲ್ಲಿ ಎಷ್ಟು ಎಂಜಿನೀಯರುಗಳು ಕೆಲಸ ಮಾಡುತ್ತಾರೋ ಅವರು ದೊಡ್ಡ ಹುದ್ದೆಯಲ್ಲಿರಲಿ , ಅವರು ಚೀಫ್ ಇಂರಿನೀಯರ್ ಆಗಿರಲಿ ಏನೇ ಆಗಿರಲಿ, ಅವರನ್ನು ವರ್ಗಾಯಿಸಲು ಹೋಗಬೇಡಿ. ಅವರು ಆ ಸ್ಥಳದಲ್ಲಿಯೇ ಕೆಲಸ ಮಾಡಲಿ. ಅಲ್ಲಿಗೆ ಪೋಸ್ಟ್ ಮಾಡುವಾಗಲೇ ಯಾರು ಕರ್ತವ್ಯನಿಷ್ಟರಾಗಿರುತ್ತಾರೆ, ಯಾರು ಸಾರ್ವಜನಿಕ ದೃಷ್ಟಿಯಿಂದ ಕೆಲಸ ಮಾಡಿತ್ತಾರೋ ಅಂಥವರನ್ನು ಅಲ್ಲಿಗೆ ಪೋಸ್ಟ್‌ಮಾಡಿ, ನಂತರ ಅಲ್ಲಿಂದ ದಯವಿಟ್ಟು ವರ್ಗಾಯಿಸುವುದಕ್ಕೆ ಹೋಗಬೇಡಿ. ಅಲ್ಲಿಗೆ ವರ್ಗಾಯಿಸಿದರೆ ಅಲ್ಲಿ ಚೀಫ್ ಇಂಜಿನಿಯರ್‌ಗಳು ಸಾಕಷ್ಟು ಮಂದಿ ಇರುತ್ತಾರೆ. ಈಕ್ವಲೆಂಟ್ ಪೋಸ್ಟ್

ಅಂದರೆ ಸೆಕ್ರೆಟರಿ ಇರಬಹುದು. ಸೆಕ್ರೆಟರಿಗಿಂತ ಹೆಚ್ಚು ಆಕರ್ಷಣೀಯವಾದ ಸಂಬಳ ಭತ್ಯೆ ಕೊಡುತ್ತೇವೆಂದರೆ ಕೊಡಿ. ಆದರೆ ಅಲ್ಲಿಂದ ಷಿಫ್ಟ್ ಮಾಡುವುದಕ್ಕೆ ಹೋಗಬೇಡಿ. ಇದರಿಂದ ಅವರು ಅಲ್ಲಿ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಮತ್ತು ಅಲ್ಲಿರತಕ್ಕ ತೊಂದರೆಗಳನ್ನು ಕಂಡುಹಿಡಿದು ತಮಗೆ ತಿಳಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಮೂಲಭೂತವಾಗಿ ನೆನಪಿನಲ್ಲಿಡಬೇಕು. ಈ ಒಂದು ಯೋಜನೆ ಪತಕ್ಕೆ ಇಷ್ಟು ತಡವಾಗುತ್ತಿದೆ? 24 ವರ್ಷಗಳಲ್ಲಿ 8 ವರ್ಷ ಬಾಕಿ ಉಳಿಯಿತು. ಆದರೂ ನಾವು 50 ಪರ್ಸೆಂಟ್ ಕೆಲಸ ಮಾಡಿಲ್ಲ. ತಾವು ಉತ್ತರಿಸುವ ಕಾಲದಲ್ಲಿ ಫಿಷಿಕಲ್ ಅಕಂಪ್ಲಿಷ್‌ಮೆಂಟ್ 27 ಪರ್ಸೆಂಟ್ ಆಗಿದೆ ಎಂದು ಹೇಳಿದ್ದೀರಿ, ಮತ್ತು 57 ಪರ್ಸೆಂಟ್ ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ. ಈಗ ಯು.ಕೆ.ಪಿ.ಮೂಲಕ ಒಂದು ಲಕ್ಷದ 20ಸಾವಿರ ಎಕರೆ ಪ್ರದೇಶದಲ್ಲಿ ಇರಿಗೇಟೆಡ್ ಮಾಡುತ್ತಿದ್ದಾರೆ. ಅಲ್ಲಿ ಎಷ್ಟೋ ಪೊಟೆನ್‌ಷಿಯಾಲಿಟ ಇದೆ, ಅಷ್ಟನ್ನು ರೈತರಿಗೆ ಕೊಡುತ್ತಿಲ್ಲ. 70-80 ಸಾವಿರ ಎಕರೆಗೆ ನೀರು ಉಪಯೋಗ ಮಾಡುತ್ತಿದ್ದಾರೆ. ಅಲ್ಲಿ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಆಗಿದೆ. ಜನರಿಗೆ ನೀರು ಬಿಟ್ಟರೆ ಆಹಾರ ಧಾನ್ಯ ಬೆಳೆಯುತ್ತಾರೆ, ಉತ್ಪಾದನೆ ಜಾಸ್ತಿಯಗುತ್ತದೆ. ನಿಮ್ಮ ಇಲಾಖೆಯನ್ನು ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್‌ನಿಂದ ಸರ್ವೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲೂ ಬಂತು. ಅವರು ಹೇಳಿದ್ದಾರೆ, ಇದೇ ಗತಿಯಲ್ಲಿ ಪ್ರಗತಿಯಾದರೆ, ಸುಮಾರು 1400 ಕೋಟಿ ರೂಪಾಯಿಗಳಲ್ಲಿ ಯುಕೆಪಿ ಅಥವಾ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಕಂಪ್ಲೀಟ್ ಆಗಬೇಕಾದ ಯೋಜನೆಗಳಿಗೆ ಮೂರು ಸಾವಿರ ಕೋಟಿ ರೂಪಾಯಿ ಹಣ ಬೇಕಾಗುತ್ತದೆಂದು ಹೇಳಿದ್ದಾರೆ. ಯುಕೆಪಿ ಕಂಪ್ಲೀಟ್ ಆಗಬೇಕಾದರೆ 1400 ಕೋಟಿ ರೂಪಾಯಿ ಬೇಕೆಂದು ತಾವು ಹೇಳಿದ್ದೀರಿ. ಆದರೆ ಇದುವರೆಗೆ ಫಿಸಿಕಲ್ ಅಕಾಂಪ್ಲಿಷ್‌ಮೆಂಟ್ 27 ಪರ್ಸೆಂಟ್ ಇಲ್ಲಿಯವರೆಗೆ ಅಂದರೆ 14 ವರ್ಷಗಳ ಅವಧಿಯಲ್ಲಿ ಆದಾಗ ಮುಂದಿನ 8 ವರ್ಷಗಳಲ್ಲಿ ಸಂಪೂರ್ಣ ಮಾಡುತ್ತೀರೆಂದು ಹೇಗೆ ನಮಗೆ ಭರವಸೆ ಮೂಡಬೇಕು? ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ತರುಣರಿದ್ದಾರೆ. ಕೆಲಸ ಮಾಡಬೇಕೆಂದು ಉತ್ಸಾಹ ಇದೆ. ಅವರು ಅಧಿಕಾರ ವಹಿಸಿಕೊಂಡಮೇಲೆ ಸಾಕಷ್ಟು ಪ್ರವಾಸ ಮಾಡುತ್ತಿದ್ದಾರೆ. ಅಧಿಕಾರಿಗಳ ಜೊತೆ, ಶಾಸಕರ ಜೊತೆ ಚರ್ಚೆ ಮಾಡುತ್ತಿದ್ದಾರೆ. ಆದರೆ ಈ ಒಂದು ಆಫೀಸರ್ಸ್ ಸಿಸ್ಟಂ ಏನಿದೆ ಇದರಿಂದ ಇನ್ನೂ 8 ವರ್ಷಗಳಲ್ಲಿ ಈ ಯೋಜನೆಯನ್ನು ಮುಗಿಸಲು ಸಾಧ್ಯವಿಲ್ಲ. ಇನ್ನು 8 ವರ್ಷಗಳಲ್ಲಿ 3 ಸಾವಿರ ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡುತ್ತೀರಿ ? ನಿಮ್ಮ ಅಂಕಿ ಸಂಖ್ಯೆ ಪ್ರಕಾರ, ನೀವು ಏನು ಪುಸ್ತಕ ಕೊಟ್ಟಿದ್ದೀರಿ ಇದರ ಪ್ರಕಾರ ಹೋದ ಸಾರಿ ತಾವು ಕೊಟ್ಟದ್ದು 318ಕೋಟಿ ರೂಪಾಯಿಗಳು ಮತ್ತು ಖರ್ಚು ಮಾಡಿದ್ದು 257 ಕೋಟಿ ರೂಪಾಯಿಗಳು ಮಾತ್ರ. ಹೋದ ಸಾರಿ ಕೃಷ್ಣಾಗೆ 171 ಕೋಟಿ ರೂಪಾಯಿ ಹಣ ಇಟ್ಟಿದ್ದು 150ಕೋಟಿ ರೂಪಾಯಿ ಕೂಡ ಖರ್ಚು ಮಾಡಿಲ್ಲ. ಹಣ ಕೊಡುವುದು ಕಡಿಮೆ, ಕೊಟ್ಟಷ್ಟು ಕೂಡ ಖರ್ಚು ಮಾಡುತ್ತಿಲ್ಲವೆಂದರೆ ಹೇಗೆ ಮಾಡುತ್ತೀರಿ ?ಆದರಿಂದ ಏನಾಗುತ್ತದೆಂದರೆ ಎರಡು ಸಾವಿರದ ಇಸವಿ ನಂತರ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಕ್ಲೈಂ ಅನ್ನು ನಾವು ಕಳೆದುಕೊಳ್ಳಬೇಕಾಗುತ್ತದೆ. ಅವರು ಪ್ರಾಜೆಕ್ಟ್ ಕಟ್ಟಿರುತ್ತಾರೆ. ಪ್ರಾಜೆಕ್ಟ್ ಕಂಪ್ಲೀಟ್ ಮಾಡಿಕೊಂಡರೂ ಈ ನೀರಿನ ಉಪಯೋಗ ಮಾಡದೆ ಇದ್ದಾಗ ಬಚಾವತ್ ಅವಾರ್ಡ್‌ನ ರಿವ್ಯೂ ಪ್ರಶ್ನೆ ಬಂದಾಗ ಆಟೋಮ್ಯಾಟಿಕ್ ಆಗಿ ಆಂಧ್ರ ಪ್ರದೇಶ ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತದೆ. ಈಗಾಗಲೇ ಫಿಸಿಕಲ್ ಅಕಂಪ್ಲಿಷ್‌ಮೆಂಟ್ ಅನ್ನು ನೋಡುತ್ತಿದ್ದೇವೆ. ಆದಕ್ಕೆ ಕ್ರಾಂತಿಕಾರಕವಾದ ಯೋಜನೆಯನ್ನು ಹಾಕಬೇಕು. ಆ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ನೆಹರೂ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ದಾಮೋದರ್ ವ್ಯಾಲಿ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದ್ದರು.

ರಾಜ್ಯ ಸರ್ಕಾರಗಳು ಮಾಡಲಾರದಂಥ ಕೆಲಸಕ್ಕೆ ಸೆಂಟ್ರಲ್ ಗೌರ್ನಮೆಂಟ್ ಇದರಲ್ಲಿ ಇಂಟರೆಸ್ಟ್ ತೆಗೆದುಕೊಂಡು ಸೆಂಟ್ರಲ್ ಸ್ಕೀಮ್ ಎಂದು ತಿಳಿದುಕೊಂಡು ಮಾಡಿ ದಾಮೋದರ್ ವ್ಯಾಲಿ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ಅದಕ್ಕೆ ರಿಟೈರ್ಡ್ ಆರ್ಮಿ ಸ್ಟಾಫನ್ನು ಛೇರ್ಮನ್ನರನ್ನಾಗಿ ಸುಮಾರು 15 ವರ್ಷ ಮಾಡಿದರು. ಅಂದು ಆ

ಕೆಲಸ ವಾರ್ ಫುಟಿಂಗ್‌ನಲ್ಲಿ ಮಾಡಿ ನಿಗದಿತ ವೇಳೆಯಲ್ಲಿ ಒದಗಿಸಿಕೊಟ್ಟರು. ಅದೇರೀತಿ ಕೃಷ್ಣಾ ಬೇಸಿನ್ ವ್ಯಾಲಿ ಅಥಾರಿಟಿ ಏನು ಮಾಡಬೇಕೆಂದು ಮಾಡಿದ್ದೀರಿ ಅದನ್ನು ದಯಮಾಡಿ ಮಾಡಿ. ನಮ್ಮಲ್ಲಿ ಬೇಕಾದಷ್ಟು ಮಂದಿ ರಿಟೈರ್ಡ್ ಮಿಲಿಟರಿ ಆಫೀಸರ್ಸ್ ಇದ್ದಾರೆ. ಯಾರು ದಕ್ಷರಿದ್ದಾರೆ, ಸಮರ್ಥರಿದ್ದಾರೆ, ಯುವಕರಿದ್ದಾರೆ ಅಂಥವರನ್ನು ಗುರುತಿಸಿ ಅವರನ್ನು ಛೇರ್ಮನ್ನರನ್ನಾಗಿ ಮಾಡಿ ಒಂದು ರೆವೆಲ್ಯೂಷನರಿ ಮಾಡಿ ತಾವು ಮಂತ್ರಿಯಾಗಿದ್ದಾಗ ಜವಾಬ್ದಾರಿ ವಹಿಸಿಕೊಂಡಾಗ ಮಾಡಿ. ಇಂತಹ ಕ್ರಾಂತಿಕಾರಕ ಧೋರಣೆ ತೆಗೆದುಕೊಳ್ಳದೆ ಇದ್ದರೆ ಸಕಾಲದಲ್ಲಿ ಕೆಲಸ ಮುಗಿಸಲು ಸಾಧ್ಯವಿಲ್ಲ. ಬೇಕಾದಷ್ಟು ತಾವು ಉತ್ತರ ಕೊಡಬಹುದು. ಏಕೆಂದರೆ ಸರ್ಕಾರದ ಪ್ರತಿನಿಧಿಗಳಿದ್ದೀರಿ, ನೀವು ಕೊಡ ಬೇಕಾಗುತ್ತದೆ. ನೀವು ಕೋಡುತ್ತೀರಿ. ಆದರೆ ಇದುವರೆಗೆ ನಡೆದುಕೊಂಡು ಬಂದ ದಾರಿ ಸಾಧಿಸಿದ ಸಾಧನೆಯಲ್ಲಿ ನೋಡಿದಾಗ ಮುಂದಿನ 8 ವರ್ಷಗಳು ಆಶಾದಾಯಕವಾಗಿಲ್ಲ. ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಹೋದಸಾರಿ 171 ಕೋಟಿ ಕೃಷ್ಣಾ ಬೇಸಿನ್‌ಗೆ 138 ಕೋಟಿ ಕೊಟ್ಟರಿ. ಗೋದಾವರಿ ಬೇಸಿನ್‌ಗೆ 9 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಒಟ್ಟು 318 ಕೋಟಿಗಳಲ್ಲಿ ನೀವು ಖರ್ಚು ಮಾಡಿರುವುದು 257 ಕೋಟಿ. ಹಣವೂ ಕಡಿಮೆ, ಮತ್ತು ಕೆಲಸವೂ ಕಡಿಮೆ. ನಿಮ್ಮ ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್‌ನವರು ಫಿಗರ್ ಕೊಟ್ಟಿರುವ ಪ್ರಕಾರ 8 ವರ್ಷಗಳಲ್ಲಿ ಇದನ್ನು ಕಂಪ್ಲೀಟ್ ಮಾಡಬೇಕಾದರೆ 3200 ಕೋಟಿ ರೂಪಾಯಿ ಬೇಕಾಗುತ್ತದೆ. ಅವರು ಸ್ಟಿಟಿಟಿಪ್ ಫಿಗರ್ಸ್ ಕೊಟ್ಟಿದ್ದಾರೆ. 2000ನೇ ಇಸವಿಯೊಳಗೆ ಏನು ಕೆಲಸ ಮಾಡಬೇಕು, ಎಷ್ಟು ಖರ್ಚು ಮಾಡಬೇಕು, ವರ್ಷೇ ವರ್ಷೇ ಎಷ್ಟು ಖರ್ಚು ಮಾಡಬೇಕು ಎಂಬುದರ ಬಗ್ಗೆ ಫಿಗರ್ಸ್ ಕೊಟ್ಟದ್ದಾರೆ. ಗೌರ್ನಮೆಂಟ್ ಅಥಾರಿಟಿಯವರೇ ಕೃಷ್ಣ ಬೇಸಿನ್‌ಗೆ ವರ್ಷಕ್ಕೆ 533 ಕೋಟಿ ರೂಪಾಯಿ ಕೊಡಬೇಕು ಎಂದು ಹೇಳಿ ಎಷ್ಟು ಸಾಧನೆ ಮಾಡಬೇಕು ಎಂದೂ ಹೇಳಿದ್ದಾರೆ. ಕಾವೇರಿ ಬೇಸಿನ್‌ಗೆ 741ಕೋಟಿ 8 ವರ್ಷಕ್ಕೆ ಬೇಕು ಅದನ್ನು 6 ವರ್ಷದಲ್ಲಿ ಮುಗಿಸಬೇಕು ಎಂದು ಹೇಳಿದ್ದಾರೆ. ಕೃಷ್ಣ ಬೇಸಿನ್‌ದು 8 ವರ್ಷದಲ್ಲಿ ಕಾವೇರಿ ಬೇಸಿನ್‌ದು 6 ವರ್ಷದಲ್ಲಿ ಮಾಡಬೇಕೆಂದು ಹೇಳಿದ್ದಾರೆ. 6 ವರ್ಷಕ್ಕೆ 741 ಕೋಟಿ ರೂಪಾಯಿಗಳನ್ನು ಇಟ್ಟು ವರ್ಷಕ್ಕೆ 186 ಕೋಟಿ ರೂಪಾಯಿ ನೀವು ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಅದೇರೀತಿ ಗೋದಾವರಿ ಬೇಸಿನ್‌ಗೆ 41 ಕೋಟಿ ಕೊಟ್ಟು ವರ್ಷದಲ್ಲಿ 14ಕೋಟಿ ಖರ್ಚು ಮಾಡಬೇಕು ಎಂದು ಹೇಳಿದ್ದಾರೆ. ಈ ರೀತಿ ಖರ್ಚು ಮಾಡಿದರೆ ನಮ್ಮ ಗುರಿ ಮುಟ್ಟಲಿಕ್ಕೆ ಸಾಧ್ಯವಿದೆ, 3,120 ಕೋಟಿ ರೂಪಾಯಿನಲ್ಲಿ ಮುಗಿಸಬಹುದು ಎಂದು ಹೇಳುತ್ತಾರೆ. ನಾವು 8 ವರ್ಷದಲ್ಲಿ ಮುಕ್ತಾಯ ಮಾಡದೇ ಇದ್ದರೆ ಅದರ ಡಬ್ಬಲ್ ಅಂದರೆ 5 ಸಾವಿರ ಚಿಲ್ಲರೆ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ತಿಳಿದುಕೊಂಡು ತಜ್ಞರು ಎಸ್ಟಿಮೇಟ್ ಮಾಡಿದ್ದಾರೆ. 5000 ಕೋಟಿ ರೂಪಾಯಿ ನೀವು ಖರ್ಚು ಮಾಡಿದರೂ ಕೂಡ ಅಲ್ಲಿ ನೀರು ಸಿಗುವುದಿಲ್ಲ. ಏಕೆಂದರೆ 2000 ವರ್ಷ ಆದಮೇಲೆ ನೀರೆಲ್ಲಾ ತೆಲುಗು ಗಂಗಾಕ್ಕೆ ಹೋಗುತ್ತದೆ. ಈ ಕಡೆ ರೊಕ್ಕವೂ ಉಳಿಯುವುದಿಲ್ಲ ನೀರೂ ಉಳಿಯುವುದಿಲ್ಲ. ಇಂಟರ್ ಸ್ಟೇಟ್ ವಾಟರ್ ಆಕ್ಟ್ ಇದೆ. ಅದರನ್ವಯ ಸೆಂಟ್ರಲ್ ಗೌರ್ನಮೆಂಟ್ ಕಕ್ಷೆಯಲ್ಲಿ ಬರುತ್ತದೆ. ಒಂದು ಸಾರಿ ಸೆಂಟ್ರಲ್ ಗೌರ್ನಮೆಂಟ್ ಕಕ್ಷೆಯಲ್ಲಿ ಆಗುವುದಾದರೆ ಏನು ಪರಿಸ್ಥಿತಿ ನಾವು ಎದುರಿಸಿದ್ದೇವೆ ಅದೇ ಪರಿಸ್ಥಿತಿಯನ್ನು ನೀವು ಎದುರಿಸಬೇಕಾಗುತ್ತದೆ. ಅದಕ್ಕಾಗಿ ತಾವು ತರುಣರಿದ್ದೀರಿ. ಚೇತನಮಯ ವ್ಯಕ್ತಿ ಇದ್ದೀರಿ. ದಯಮಾಡಿ ಸಚಿವ ಸಂಪುಟವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಾಂತಿಕಾರಕ ಧೋರಣೆ ಹಾಕದೇ ಇದ್ದರೆ ಇದು ಸರ್ವಥಾ ಮುಗಿಯಲು ಸಾಧ್ಯವಿಲ್ಲ. ನೀವು 533 ಕೋಟಿ ರೂಪಾಯಿ ಪ್ರತಿ ವರ್ಷ . . . ಈ ವರ್ಷವೇ ಕೊಡಲಿಕ್ಕೆ ಪ್ರಯತ್ನ ಮಾಡಬೇಕು ಮತ್ತು ಅದನ್ನು ಉಪಯೋಗ ಮಾಡತಕ್ಕ ವ್ಯವಸ್ಥೆ ಕೂಡ ತಾವು ಮಾಡಲೇ ಬೇಕು. ಆದರೆ ತಾವು ಈ ಸಾರಿ ಕೊಟ್ಟಿರುವುದು 374 ಕೋಟಿ ರೂಪಾಯಿಗಳು ಅದೂ ಕೂಡ ಕೃಷ್ಣಾ ಕಾವೇರಿ ಮತ್ತು ಗೋದಾವರಿ ಮೂರು ಬೇಸಿನ್‌ಗೆ ಸೇರಿ ಕೇವಲ ಕೃಷ್ಣಾ ಒಂದಕ್ಕೇ 8 ವರ್ಷಕೆ ಲೆಕ್ಕಮಾಡಿ ಹೇಳಿದೆ, ಕಾಸ್ಟ್ ಎಸ್ಕಲೇಷನ್ ತೆಗೆದುಕೊಳ್ಳದೆ ಲೆಕ್ಕ ಮಾಡಿದರೆ 533 ಕೋಟಿ ರೂಪಾಯಿ ಕೊಡಬೇಕು. ಈಗ ಕೃಷ್ಣ ಕಾವೇರಿ ಮತ್ತು ಗೋದಾವರಿ ಬೇಸಿನ್‌ಗೆ

ಸೇರಿ 374 ಕೋಟಿ ರೂಪಾಯಿ ಇಟ್ಟಿದ್ದೀರಿ. ಅಂದಮೇಲೆ ನೀವು ಗುರಿ ಮುಟ್ಟುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅದಕ್ಕಾಗಿ ಮೂಲಭೂತವನ್ನು ಯೋಜನೆಯನ್ನು ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಒಂದು, ಕೃಷ್ಣ ಬೇಸಿನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿ ಅದಕ್ಕೆ ಅಧಿಕಾರ ಕೊಡಿ. ಕೃಷ್ಣಾಗೆ ಅಷ್ಟು ಆರ್ಥಿಕ ಮುಗ್ಗಟ್ಟು ಸರ್ಕಾರಕ್ಕೆ ಬರಲಾರದು. ಕಾರಣ ಅದಕ್ಕೆ ಸರ್ಕಾರ ವಿಶ್ವ ಹಣಕಾಸು ಸಂಸ್ಥೆಯಿಂದ ಸಹಾಯ ಪಡೆಯುತ್ತಿದೆ. ಹೀಗಿರುವಾಗ ಎಷ್ಟು ಹಣ ಖರ್ಚುಮಾಡಿದರೂ ಅಷ್ಟು ಹಣ ವಾಪಸ್ಸು ಬರುತ್ತದೆ. ನಿಮಗೆ ಆತಂಕ ಏನು? ಕಾವೇರಿ ಬೇಸಿನ್ ಬಗ್ಗೆಯಾದರೆ ನಾನು ಏನೂ ಹೇಳುವುದಿಲ್ಲ. ಇದರಲ್ಲಿ ಸರ್ಕಾರದ ಹಣ ಖರ್ಚು ಮಾಡುತ್ತೀರಿ. ಇಲ್ಲಿ ವಿಶ್ವ ಸಂಸ್ಥೆಯ ಹಣ ಪುಷ್ಕಳವಾಗಿ ಬರುವುದು ಇದ್ದು ಖರ್ಚುಮಾಡಿದಷ್ಟು ಹಣ ವಾಪಸ್ಸು ಬರುತ್ತದೆ. ಆದರೂ ಏತಕ್ಕೆ ತಾವು ಧೈರ್ಯ ಮಾಡುತ್ತಾ ಇಲ್ಲ? ಅದನ್ನು ವಾಪಸ್ಸು ರೀಇಂಬರ್ಸ್ ಮಾಡಿಕೊಳ್ಳಬಹುದು. ಅದಕ್ಕೆ ಒಂದು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ರಿಟೈರ್ಡ್ ಪರ್ಸನ್ ಒಬ್ಬರನ್ನು ಛೇರ್ಮನ್ ಮಾಡಿ. ತಾವೂ ಕೂಡ ಅನೇಕ ವಿಚಾರಗಳನ್ನು ಹೇಳುತ್ತಿದ್ದೀರಿ. ಆದರೆ ಒಂದನ್ನೂ ಕಾರ್ಯರೂಪಕ್ಕೆ ತಂದಿಲ್ಲ. ತಾವು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇರಿಗೇಷನ್ ಬಾಂಡ್ ಜಾರಿಗೆ ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಅದು ಇನ್ನೂ ಕೂಡ ಜಾರಿ ಆಗಿಲ್ಲ. ಧೈರ್ಯದಿಂದ ಮತ್ತು ಉತ್ಸಾಹದಿಂದ ಪ್ರಯತ್ನಪಟ್ಟು ಅದಕ್ಕೆ ಸಾಕಷ್ಟು. . .

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್:- ಇರಿಗೇಷನ್ ಬಾಂಡ್ ಬಗ್ಗೆ ತಾವು ಹೇಳುತ್ತಿದ್ದೀರಿ. ಕೇಂದ್ರದವರು ಇದಕ್ಕೆ ಅನುಮತಿ ಕೊಡದೆ ಹೋದರೆ ಆಗುವುದಿಲ್ಲ. ಹಿರಿಯ ಸದಸ್ಯರಾದ ತಮಗೆ ಇದು ತಿಳಿದೇ ಇದೆ. ಕೇಂದ್ರದವರು ಒಪ್ಪಿದರೆ ಇಡೀ ದೇಶದಲ್ಲಿ ವಿಶೇಷವಾದ ಕ್ರಾಂತಿಕಾರಕವಾದ ಬದಲಾವಣೆ ಆಗುತ್ತದೆ. ಅವರು ಒಪ್ಪದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ನಾವು ಮೊದಲಿನಿಂದಲೂ ಕೇಂದ್ರಕ್ಕೆ ಒತ್ತಾಯ ಮಾಡುತ್ತಿದ್ದೇವೆ.

ಡಾ.ಎ.ಬಿ.ಮಲಕರೆಡ್ಡಿ: ಹಾಗಿದ್ದರೆ ತಾವು ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ. ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಇರುವ ಹಾಗೆ ಇನ್ನೊಂದು ಕಾರ್ಪೊರೇಷನ್ ಮಾಡಿ ಆ ಭಾಗದ ರೈತರು ಏನಿದ್ದಾರೆ ಅವರು ಬಾಂಡ್‌ಗಳನ್ನು ತೆಗೆದುಕೊಳ್ಳುವುದಕ್ಕೆ ತಯಾರು ಇದ್ದಾರೆ ಇವತ್ತು ಅಲ್ಲಿ 30 ರಿಂದ 40 ಸಾವಿರ ಎಕರೆ ನೀರಾವರಿಯಾಗುತ್ತದೆ. ಈ ಬಗ್ಗೆ ಅವರಲ್ಲಿ ಆತ್ಮ ವಿಶ್ವಾಸ ಮೂಡಿದೆ. ಸರ್ಕಾರದಲ್ಲಿ ಹಣ ಇಲ್ಲದೇ ಇದ್ದರೆ ನಾವು ಹಣ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಕೆಲಸ ಮಾಡಬೇಕೆಂದು ರೈತರು ಮುಂದೆ ಬರುತ್ತಿದ್ದಾರೆ ನೀವು ಈ ಬಗ್ಗೆ ಕಾರ್ಪೋರೇಷನ್ ಮಾಡಿ ಬಿಟ್ಟು ಬಿಡಿ. ಈ ಸದನದಲ್ಲಿ ಅದನ್ನು ಮಾಡುವುದಕ್ಕೆ ಅವಕಾಶ ಇದೆ. ಕಾನೂನು ಮಾಡಿ ಕಾರ್ಪೋರೇಷನ್ ಮಾಡುವುದಕ್ಕೆ ಅವಕಾಶ ಇದೆ ಬಾಂಡ್ ತೆಗೆದುಕೊಳ್ಳಲು ಅವರು ರೆಡಿ ಇದ್ದಾರೆ. ಅದೇ ರೀತಿ ಇವತ್ತು ತಾವು ವಾಣಿಜ್ಯ ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯಬೇಕು. ಇವತ್ತು ನೀರಾವರಿ ಬಾಂಡ್ ಎಂದರೆ ಯಾರೇ ಆಗಲಿ ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದಾರೆ. ಏಕೆಂದರೆ ಇದರಲ್ಲಿ ರಿಟರ್ನ್ಸ್ ಬಹಳ ಕ್ವಿಕ್ ಇದೆ. ನಮ್ಮ ಮೆಕ್ಯಾನಿಕಲ್ ಆರ್ಗನೈಸೇಷನ್ ನವರು ಬಹಳ ಚೆನ್ನಾಗಿ ಅಂಕಿಅಂಶ ಕೊಟ್ಟಿದ್ದಾರೆ. ಒಂದು ವೇಳೆ 8 ವರ್ಷದಲ್ಲಿ ಪೂರ್ತಿ ಕೆಲಸ ಮಾಡಿ ಮುಗಿಸದೇ ಇದ್ದರೆ ಸುಮಾರು 2,400 ಕೋಟಿ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಆಮೇಲೆ ಒಂದು ವೇಳೆ ಟೈಂಗೆ ಸರಿಯಾಗಿ ಕೆಲಸವನ್ನು ಕಂಪ್ಲೀಟ್ ಮಾಡಿದರೆ 2000ನೇ ಇಸವಿ ಒಳಗೆ ಮುಗಿಸಿದರೆ ಈ 2400 ಕೋಟಿ ರೂಗಳು ಉಳಿತಾಯವಾಗುವುದೂ ಅಲ್ಲದೇ 19,180 ಕೋಟಿ ರೂಪಾಯಿ ಬೆಲೆ ಬಾಳತಕ್ಕ ಧವಸಧಾನ್ಯವನ್ನು ಬೆಳೆಯಬಹುದು ಎಂದು ಹೇಳಿದ್ದಾರೆ, ನಮ್ಮ ಭಾಗದ ನಮ್ಮ ಮತಕ್ಷೇತ್ರಕ್ಕೆ 64 ಹಳ್ಳಿಗಳು ಯುಕೆಪಿಯಲ್ಲಿ ಬರುತ್ತವೆ. ಈಗಾಗಲೇ ಅಲ್ಲಿ 3-4ಎಕರೆ

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಇರುವವರೂ ಶ್ರೀಮಂತರಾಗಿದ್ದಾರೆ. ಇವತ್ತು ಬೇಗ ಇದು 19,180 ಕೋಟಿ ಬೆಲೆಬಾಳುವ ಧವಸಧಾನ್ಯ ಬೆಳೆಯಬಹುದೆಂದು ಲೆಕ್ಕಹಾಕಿ ಕೊಟ್ಟಿದ್ದಾರೆ. ಕಮರ್ಷಿಯಲ್ ಬ್ಯಾಂಕ್, ಹಣಕಾಸಿನ ಸಂಸ್ಥೆಗಳು ಮತ್ತು ಬೆನಿಫಿಷಿಯರಿ ಫಾರ್ಮರ್ಸ್‌ನ್ನು ಇದರಲ್ಲಿ ತಾವು ಅಳವಡಿಸದೇ ಇದ್ದರೆ ಇದು ಸಾಧ್ಯವಾಗುವುದಿಲ್ಲ. ಕೇಂದ್ರಕ್ಕೆ ಇರಿಗೇಷನ್ ಬಾಂಡ್ಸ್ ಕ್ಲಿಯರ್ ಮಾಡಿ ಎಂದು ರಿಕ್ವೆಸ್ಟ್ ಮಾಡಿದ್ದು ಆಯಿತು. ನಿಮ್ಮ ರಿಕ್ವೆಸ್ಟ್ ಹಾಗೆ ಉಳಿದು ಹೋಯಿತು. ಹೀಗೇ ಸಮಯ ಹೋದರೆ ಕೆಲಸಕಾರ್ಯಗಳಾಗದಿರುವ ಜೊತೆ ಸಂಪನ್ಮೂಲಗಳನ್ನು ಮೊಬಲೈಸ್ ಮಾಡುವುದಕ್ಕಾಗುವುದಿಲ್ಲ. ಇನ್ನು ನಾನು ಮೂಲಭೂತವಾಗಿ ಹೇಳುವುದು ಏನೆಂದರೆ, ಮಹಾರಾಷ್ಟ್ರ ಸರ್ಕಾರದವರು ಸಹ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಎಷ್ಟು ಹಣವನ್ನು ಇಟ್ಟಿದ್ದಾರೆ ಅಷ್ಟೇ ಹಣವನ್ನು ಅವರು ಮೈನರ್ ಇರಿಗೇಷನ್‌ಗೂ ಸಹ ಇಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ನಮ್ಮ ಸಣ್ಣ ನೀರಾವರಿ ಖಾತೆಯನ್ನು ನಮ್ಮ ಮಲ್ಲಿಕಾರ್ಜುನ ಪ್ರಸನ್ನ ಅವರು ವಹಿಸಿಕೊಂಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 24 ಸಾವಿರ ಸಣ್ಣಪುಟ್ಟ ಕೆರೆಗಳು ಬರುತ್ತವೆ ಎಂದು ಅಂದಾಜು ಇದೆ. ಇವುಗಳಲ್ಲಿ 9 ಲಕ್ಷ ಹೆಕ್ಟೇರ್ ನೀರಾವರಿಯಾಗುತ್ತದೆ. ಇವತ್ತು ನೂರಕ್ಕೆ 80 ಭಾಗದಷ್ಟು ಬಡವರು ನಮ್ಮ ಹಳ್ಳಿಗಾಡಿನಲ್ಲಿದ್ದಾರೆ. ಅವರಿಗೆ ಹೆಚ್ಚು ಉಪಯೋಗ ಆಗತಕ್ಕದ್ದು ಸಣ್ಣ ನೀರಾವರಿ ಯೋಜನೆಗಳು. ಈ ಸಣ್ಣ ನೀರಾವರಿ ಯೋಜನೆ ದುರವಸ್ಥೆ ಎಷ್ಟು ಆಗಿದೆ ಎಂದರೆ ಇವತ್ತು ಇದರ ಅಡಿಯಲ್ಲಿ ಏನು 9 ಲಕ್ಷ ಹೆಕ್ಟೇರ್ ನೀರಾವರಿ ಆಗುತ್ತದೆ ಎಂದು ಇದೆ ಇದನ್ನು ಲೆಕ್ಕ ಹಾಕಿದರೆ 5ಅಥವಾ 6ಲಕ್ಷ ಹೆಕ್ಟೇರ್ ಬರುತ್ತದೆ. ಇದಕ್ಕೆ ಕಾರಣ ಇವತ್ತು ಕೆರೆಗಳಲ್ಲಿ ಹೂಳು ತುಂಬಿಹೋಗಿರುತ್ತದೆ. ಇದರಿಂದ ನೀರು ಕಡಿಮೆ ಶೇಖರಣೆಯಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿರತಕ್ಕ ಟ್ಯಾಂಕ್‌ಗಳ ಪೈಕಿ 50 ಪರ್ಸೆಂಟ್ ಇರಿಗೇಷನ್ ಟ್ಯಾಂಕ್‌ಗಳು ನಮ್ಮ ಯಾದಗಿರಿ ತಾಲ್ಲೂಕಿನಲ್ಲಿವೆ. ಯಾದಗಿರಿ ತಾಲ್ಲೂಕು ಒಂದರಲ್ಲೇ ನಮ್ಮ ಜಿಲ್ಲೆಯ 50 ಪರ್ಸೆಂಟ್ ಕೆರೆಗಳಿವೆ. ನನಗೆ ಅದರ ಬಗ್ಗೆ ಅನುಭವವಿದೆ. ಉದಾಹರಣೆಗೆ ನಮ್ಮ ಊರನ್ನೇ ತೆಗೆದುಕೊಳ್ಳುವುದಾದರೆ, 200 ಎಕರ ನೀರಾವರಿಯಾಗತಕ್ಕ ಕೆರೆಯಿದೆ. ಇವತ್ತು ಆ ಕೆರೆಯ ಆಯಕಟ್ಟು 50 ಪರ್ಸೆಂಟ್ ಕಡಿಮೆಯಾಗಿದೆ. ಕಾರಣ ಆ ಕೆರೆಯಲ್ಲಿ ಹೂಳು ತುಂಬಿದೆ. ಮಹಾರಾಷ್ಟ್ರದಲ್ಲಿ ಅದನ್ನೇ ಮಾಡುತ್ತಿದ್ದಾರೆ. ಅಲ್ಲಿ ಸಾಕಷ್ಟು ಹಣವನ್ನು ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟು ಅಲ್ಲಿನ ಕೆರೆಗಳನ್ನು ಜೀರ್ಣೋದ್ಧಾರ ಇಲ್ಲವೇ ಪುನರುಜ್ಜೀವನ ಮಾಡುವುದಕ್ಕಾಗಿ ಅವರು ವಾಟರ್‌ಶೆಡ್ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ನೀರನ್ನು ಅಲ್ಲಲ್ಲೇ ತಡೆ ಹಿಡಿದು ನಿಲ್ಲಿಸುವುದು. ನಾಲೆಗಳನ್ನು ನಿರ್ಮಾಣ ಮಾಡುವುದು. ಅಲ್ಲಲ್ಲೇ ಪಾಂಡ್‌ಗಳನ್ನು ಮಾಡಿ ಬಂಡೇ ಹಾಕಿ ನೀರನ್ನು ಅಲ್ಲೇ ತಡೆಹಿಡಿಯುವುದು. ಆ ತರಹ ಯೋಜನೆ ಉಂಟು. ಇಂತಹ ಯೋಜನೆಯಿಂದ ಸಿಲ್ಟ್ ಬರುವುದು ಕಡಿಮೆ ಮಾಡಬಹುದು. ಸಣ್ಣ ಸಣ್ಣ ಕೆರೆ ಕುಂಟೆಗಳನ್ನು ಮಾಡುವುದರಿಂದ ಸಿಲ್ಟ್ ಬರುವುದನ್ನು ಸ್ವಲ್ಪ ಕಡಿಮೆ ಮಾಡಬಹುದು. ಅದೂ ಅಲ್ಲದೆ ಯುಕೆಪಿ, ಘಟಪ್ರಭ, ಮಲಪ್ರಭ ಮತ್ತು ಕಾವೇರಿ ಇಂತಹ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ಸಿಲ್ಟ್ ಬರುವುದನ್ನು ಕಡಿಮೆ ಮಾಡಬಹುದು. ಎರಡನೆಯದು ಸಾಯಿಲ್ ಕನ್ಸರ್ವೇಷನ್ ಮಾಡಿದಹಾಗೆ ಆಗುತ್ತದೆ. ಯಾವ ಭೂಮಿಯಲ್ಲಿ ಕೆರೆ ಬಾವಿ, ಕೊಳವೆ ಬಾವಿ, ಓಪನ್‌ವೆಲ್‌ಗಳಲ್ಲಿ ನೀರಿನ ಲೆವೆಲ್ ಯಾವಾಗಲೂ ಮೈಂಟೇನ್ ಆಗುತ್ತದೆ. ವರ್ಷದ 12 ತಿಂಗಳು ನೀರು ಮೈಂಟೇನ್ ಆಗುತ್ತದೆ. ನೋಡಿ ಇದರಿಂದ ಎಷ್ಟು ಉಪಯೋಗವಿದೆ. ಸಣ್ಣ ನೀರಾವರಿ ಯೋಜನೆಗಳಿಂದ they are small and diversified ಪ್ರತಿಯೊಂದು ನಮ್ಮ ಹಳ್ಳಿಗಳಲ್ಲಿ ಕೂಡ ನಮ್ಮ ಆರ್ಥಿಕಾಭಿವೃದ್ಧಿ ಯೋಜನೆಗಳನ್ನು ಮಾಡಬಹುದು. ಪ್ರತಿಯೊಂದು ಹಳ್ಳಿಯಲ್ಲೂ ಜನರ ಆರ್ಥಿಕ ಮಟ್ಟವನ್ನು ಮೇಲೆತ್ತಬಹುದು. ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿದರೆ ಏನಾಗುತ್ತದೆಂದರೆ ನಮ್ಮ ಯುಕೆಪಿ ಯಿಂದ ಕೇವಲ ನಾಲ್ಕು ತಾಲ್ಲೂಕುಗಳಿಗೆ ಉಪಯೋಗವಾಗುತ್ತಿದೆ. ನಾವು ಸಣ್ಣ ನೀರಾವರಿ ಯೋಜನೆಗೆ ಆದ್ಯತೆಯನ್ನು ಕೊಟ್ಟರೆ ಎರಡು ಸಾವಿರದ ಇಸವಿಯ ಹೊತ್ತಿಗೆ ನಮ್ಮ ಕರ್ನಾಟಕ ರಾಜ್ಯದ 24ಸಾವಿರ ಹಳ್ಳಿಗಳಿಗೆ ಬೆನಿಫಿಟ್ ಆಗುತ್ತದೆ. 24 ಸಾವಿರ ಹಳ್ಳಿಗಳ ಜನರಿಗೆ ಅದರಲ್ಲೂ 80 ಪರ್ಸೆಂಟ್ ಬಡ

ಜನರಿಗೆ ಅನುಕೂಲವಾಗುತ್ತದೆ. ಜೊತೆಗೆ ಅವರ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಮತ್ತು ಪರಿಸರ ನೈರ್ಮಲ್ಯವನ್ನು , ಪರಿಸರ ಸಮತೋಲನ ಕೂಡ ನಾವು ಮೈಂಟೇನ್ ಮಾಡಿದಂತಾಗುತ್ತದೆ. ಇವತ್ತು ಏನಾಗಿದೆ ಎಂದರೆ ವರಾಹಿ ಯೋಜನೆಯಲ್ಲಿ 39 ಸಾವಿರ ಎಕರೆ ಅರಣ್ಯ ಪ್ರದೇಶವನ್ನುನಾವು ನಾಶಮಾಡಿದ್ದೇವೆ. ನಮ್ಮ ಸರ್ಕಾರ ಕೊಟ್ಟಿರತಕ್ಕ ಒಂದು ವರದಿಯನ್ನು ನಾನು ನೋಡುತ್ತಾ ಇದ್ದೆ. ಅದನ್ನು ಸುಮಾರು ಎರಡು ತಿಂಗಳ ಹಿಂದೆ ಕಳುಹಿಸಿದ್ದಾರೆ. ಅದರ ಪ್ರಕಾರ 39 ಸಾವಿರ ಎಕರೆ ಅರಣ್ಯ ಪ್ರದೇಶ ಒಂದರಲ್ಲೇ ನಾಶವಾಗಿದೆ. ಇದು ಬರೀ ಅರಣ್ಯ ನಾಶವಲ್ಲ, ಇದರಿಂದ ಪರಿಸರ ಅಸಮತೋಲನಕ್ಕೆ ಮತ್ತು ಇನ್ನೂ ಅನೇಕ ರೀತಿಯ ಹಾನಿಗೆ ಗುರಿಯಾಗುತ್ತದೆ. ತಾವು ಅನೇಕ ಸಣ್ಣ ನೀರಾವರಿ ಮತ್ತು ಭಾರೀ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದೀರಿ. ಆದರೆ ಸಣ್ಣ ನೀರಾವರಿ ಯೋಜನೆಗಳನ್ನು ಕಂಪ್ಲೀಟ್ ಮಾಡಿದ್ದೀರಾ? ಸಣ್ಣ ನೀರಾವರಿ ಯೋಜನೆಗಳಿಗೆ ಸ್ವಲ್ಪ ಹಣವನ್ನು ಇಟ್ಟಿದ್ದೀರಿ. ಹೋದಸಲ 35 ಕೋಟಿ ರೂಪಾಯಿ ಈ ಸಲ 39 ಕೋಟಿ ಅಂದರೆ 4 ಕೋಟಿ ರೂಪಾಯಿ ಮಾತ್ರ ಹೆಚ್ಚಿಗೆ ಇಟ್ಟಿದ್ದೀರಿ. ಎಸ್ಕಲೇಷನ್, ಪಗಾರ, ನೌಕರರ ಇನ್‌ಕ್ರಿಮೆಂಟ್‌ಗೆ ಅದು ಸರಿಯಾಗುತ್ತದೆ ಅದು ಸಣ್ಣ ನೀರಾವರಿ ಯೋಜನೆಗೆ ಅದು ಸಾಕಾಗುವುದಿಲ್ಲ. ವಿಶ್ವ ಬ್ಯಾಂಕಿನಿಂದ ಏನು ಹಣ ಬರುತ್ತದೆ ಅದೇ ಹಣದಿಂದ ತಾವು ಖರ್ಚು ಮಾಡುತ್ತಾ ಇದ್ದೀರಿ ಹೊರತಾಗಿ ಸರ್ಕಾರದ ಬೊಕ್ಕಸದಿಂದ ಹೊಸದಾಗಿ ಸಣ್ಣ ನೀರಾವರಿ ಯೋಜನೆಗೆ ನೀವೇನೂ ಖರ್ಚು ಮಾಡುತ್ತಿಲ್ಲ. ಏನಾದರೂ ಮಾಡಿದ್ದೇ ಆದರೆ ಹಣಕಾಸು ಸಂಸ್ಥೆಯಿಂದ ಏನು ಬಂದಿದೆ ಅಷ್ಟಕ್ಕೆ ಮಾತ್ರ ನೀವು ಕೆಲಸ ಮಾಡುತ್ತಾ ಇದ್ದೀರಿ ಉಳಿದದ್ದು ಏನು ಮಾಡುತ್ತಿಲ್ಲ. ಸಚಿವ ಸಂಪುಟದ ಸದಸ್ಯರೆಲ್ಲರೂ ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ಮಹಾರಾಷ್ಟ್ರ ಸರ್ಕಾರದವರು ಈಗಾಗಲೇ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಮುಂದಿನ ವರ್ಷ 50% of the budget allocated for irrigation will be earmarked for minor irrigation. ಅದೇ ರೀತಿ ನಮ್ಮಲ್ಲೂ ಮಾಡಿದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕ್ರಾಂತಿಕಾರಕವಾದ ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಕೊನೆಯದಾಗಿ ಎರಡು ಮೂರು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ.

ಛೇರ್ಮನ್:-ಮಾನ್ಯ ಮಲಕರೆಡ್ಡಿಯವರೇ, ಇನ್ನು 26 ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಡಾ. ಎ. ಬಿ. ಮಲಕರೆಡ್ಡಿ:- ಕೃಷ್ಣಾ ಬೇಸಿನ್ ಮೇಲೆ ಯಾರೂ ಮಾತನಾಡುವವರು ಇಲ್ಲ. ಅದಕ್ಕಾಗಿ ನಾನು ಮಾತನಾಡಬೇಕಾಗಿದೆ. ಅಲ್ಲಿ ಧಾರುಣ ಗತಿಯಿದೆ. ಅದಕ್ಕಾಗಿ ಮಾತನಾಡುತ್ತಿದ್ದೇನೆ. ಮಾನ್ಯ ಶಿವನಂಜಪ್ಪನವರು ನಾನು ಮಾತನಾಡಲಿಕ್ಕೆ ಅನುಕೂಲ ಮಾಡಿ ಕೊಟ್ಟರು. ನನಗೆ ತಿಳಿದಮಟ್ಟಿಗೆ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಸುತ್ತೇನೆ, ತಾವು ಸ್ವಲ್ಪ ಅವಕಾಶ ಮಾಡಿಕೊಡುತ್ತೀರಿ ಎಂಬು ನಾನು ತಿಳಿದುಕೊಂಡಿದ್ದೇನೆ. ಇದವರೆಗೆ ಏನಾಗಿದೆ ಎಂದರೆ ಸರ್ಕಾರ ಹಣ ಇಡುತ್ತದೆ. ಪ್ರತಿಯೊಂದು ಬಾಬಿನಲ್ಲೂ ನೀವು ಸ್ಟಾಫ್ ಕೊಡುತ್ತೀರಿ, ಆದರೆ ಆ ಕಡೆಗೆ ಲಕ್ಷ್ಯ ಹರಿಸುವುದಿಲ್ಲ. ಆ ಕಾರಣದಿಂದ ಫಿಸಿಕಲ್ ಅಚೀವ್‌ಮೆಂಟ್ ಏನೂ ಆಗುವುದಿಲ್ಲ ಮತ್ತೆ ಒಂದು ವರ್ಷ ಮುಗಿದಮೇಲೆ ಅಧಿಕಾರಿಗಳು ಏನೋ ಒಂದು ಅಂಕಿ ಅಂಶ ಕೊಡುತ್ತಾರೆ. ಮತ್ತೆ ಅದನ್ನು ಟ್ಯಾಬುಲೇಷನ್ ಮಾಡುವುದು, ಭಾಷಣ ಮಾಡುವುದು, ಓದುವುದು ಮನೆಗೆ ಹೋಗುವುದು. ದಯಮಾಡಿ ವಿಧಾನಸೌಧದಲ್ಲಿ ಒಂದು ಮಾನಿಟರಿಂಗ್ ಸೆಲ್ ಮಾಡಿ. ಒಂದು ವರ್ಷಕ್ಕೆ ಏನು ಗುರಿ ಹಾಕಿಕೊಂಡಿರುತ್ತೀರಿ ಆ ಗುರಿ ಸಾಧನೆಗಾಗಿ ತಾವು ಕೊನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಮೊದಲು ಎರಡು ತಿಂಗಳಿಗೊಮ್ಮೆ ಮಾನಿಟರಿ ಮಾಡಿದರೆ ತಮಗೆ ಗೊತ್ತಾಗುತ್ತದೆ. ಅಧಿಕಾರಿಗಳಿಗೆ ತೊಂದರೆ ಇದ್ದರೆ ಅದೂ ಸಹ ಗೊತ್ತಾಗುತ್ತದೆ. ಇಲ್ಲ ಅವರು ನಿರ್ಲಕ್ಷ ಮಾಡುತ್ತಿದ್ದಾರೋ ಹೇಗೆ ಎಂಬುದೂ ಗೊತ್ತಾಗುತ್ತದೆ. ಅವರು ಕೆಲಸ ಮಾಡುತ್ತಿದ್ದಾರೋ ಅಥವಾ ಅದಕ್ಷತೆಯಿಂದ ಇದ್ದಾರೋ ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು ರೆಮಿಡಿಯಲ್ ಮೆಷರ್ಸ್ ತೆಗೆದುಕೊಳ್ಳುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಅದಕ್ಕಾಗಿ ಪ್ರತಿ ತಿಂಗಳು, ಅದು

ಭಾರವಾಗುತ್ತದೆ ಎಂದರೆ ಎರಡು ತಿಂಗಳಿಗೊಮ್ಮೆ ಅಲ್ಲಿ ಮಾನಿಟರಿಂಗ್ ಮಾಡಿ. ಅಂದರೆ ಪ್ರೋಗ್ರೆಸ್ ಬಗ್ಗೆ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಒಂದು ಐಡಿಯಾ ಬರುತ್ತದೆ. ಅದು ನನ್ನ ಪ್ರಥಮ ಸಲಹೆ ಎರಡನೆಯದು, ಈಗಾಗಲೇ ನಾನು ಹೇಳಿದ ಹಾಗೆ, ನುರಿತ ಇಂಜಿನಿಯರ್‌ಗಳನ್ನು ಕೃಷ್ಣಾ ಮತ್ತು ಕಾವೇರಿ ಬೇಸಿನ್‌ಗಳಲ್ಲಿ ಪೋಸ್ಟ್ ಮಾಡಿ ಕೆಲಸ ಮಾಡತಕ್ಕವರನ್ನು ಅಲ್ಲಿ ಇಡಿ. ಅವರಿಗೆ ಐದು ಸಾವಿರ ಪಗಾರ ಇದೆಯಲ್ಲಾ, ಅದನ್ನು ಹತ್ತು ಸಾವಿರ ಮಾಡಿ. ಇದರಿಂದ ನೀವು ಹತ್ತು ಕೋಟಿ ಉಳಿಸುತ್ತೀರಿ. ಬೇಕಾದರೆ ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಇನ್ನೊಬ್ಬರನ್ನು ಚೇರ್ಮನ್‌ರನ್ನಾಗಿ ಮಾಡಿ. ಈಗ ಮಾನ್ಯ ಅಂಗಡಿಯವರು ಇದ್ದಾರೆ. ಅಂತಹ ನಿವೃತ್ತರಾದವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳಿ. ಗುಲ್ಬರ್ಗಾ ಮೆಡಿಕಲ್ ಕಾಲೇಜು 1958 ರಲ್ಲಿ ಸ್ಥಾಪನೆಯಾದಾಗ ಒಬ್ಬ ರಿಟೈರ್ಡ್ ಪ್ರಿನ್ಸಿಪಲ್‌ರನ್ನು ತಂದು ಮೂರು ವರ್ಷಕಾಲ ಅಲ್ಲಿ ಇಟ್ಟಿದ್ದರು. ಅದೇ ರೀತಿ ಒಬ್ಬ ಬಹಳ ಯೋಗ್ಯನಾದ ಮನುಷ್ಯ ಇದ್ದರೆ ಏಕೆ ಇಲ್ಲಿಗೂ ನೇಮಕ ಮಾಡಬಾರದು? ನಾನು ಹೇಳುವುದು ಏನೆಂದರೆ ಹದಿನಾಲ್ಕು ವರ್ಷಗಳಿಂದ ಏನೂ ಮಾಡಲಿಕ್ಕೆ ಆಗಿಲ್ಲ. ಇನ್ನುಳಿದ ಎಂಟು ವರ್ಷಗಳಲ್ಲಿ ಎಲ್ಲಾ ಸಾಧಿಸಬೇಕಾಗಿದೆ. ಅದಕ್ಕಾಗಿ ರಿಟೈರ್ಡ್ ಇಂಜಿನಿಯರ್ಸ್ ಅಥವಾ ಅಧಿಕಾರಿಗಳು ಯಾರಾದರೂ ನಿಮ್ಮ ದೃಷ್ಟಿಯಲ್ಲಿ ಇದ್ದರೆ ಕರ್ತವ್ಯಶೀಲರು ಇದ್ದರೆ, ಜಾಗ್ರತಿಯಾಗಿ ಕೆಲಸ ಮಾಡುವವರು ಇದ್ದರೆ, ಅಂತಹವರನ್ನು ಸೇವೆಗೆ ತೆಗೆದುಕೊಳ್ಳಿ. ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಪ್ರೋಗ್ರೆಸ್ ನಿಂತುಬಿಟ್ಟಿದೆ, ಜನ ಬಂದು ಕೇಳುತ್ತಿದ್ದಾರೆ. ನಾನು ಮುಖ್ಯ ಇಂಜಿನಿಯರ್ ಅವರನ್ನು ಕೇಳಿದೆ. ಅವರು ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಮ್ ಎಂದರು. ಸುಮಾರು ಇಪ್ಪತ್ತು ವರ್ಷಗಳಿಂದ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಮ್ ಎಂದರೆ ಏನು? ಅದಕ್ಕೆ ಏನಾದರೂ ಪರಿಹಾರ ಬೇಡವೇ? ಲ್ಯಾಂಡ್ ಟ್ರಿಬ್ಯುನಲ್ ಡಿಸಿಷನ್‌ಗಳನ್ನು ಮಾನ್ಯತೆ ಮಾಡಿರಿ. ಮೊನ್ನೆ ಮೊನ್ನೆ ವರೆಗೂ ಅವರು ಮಾಡುತ್ತಿದ್ದರು. ಆದರೆ ಕಳೆದ ಹದಿನೈದು ವರ್ಷಗಳಿಂದ ಡಿಸೈಡ್ ಆದ ಕೇಸ್‌ಗಳನ್ನು ರಿಓಪನ್ ಮಾಡಬೇಕೂಂತ ಕಾನೂನು ತಂದಿರಿ. ನಾನು ಹೇಳುವುದು ಏನೆಂದರೆ ಒಂದು ಕಾನೂನು ತಂದು ಒಂದು ಕಮಿಟಿ ಮಾಡಿರಿ. ಔಟ್‌ರೇಟ್ ಪರ್ಚೇಸ್ ಮಾಡುವುದಕ್ಕೆ ಡಿವಿಜನಲ್ ಕಮೀಷನರ್ ಅವರಿಗೆ ಅಥವಾ ಡೆಪ್ಯೂಟಿ ಕಮೀಷನರ್ ಅವರಿಗೆ ಪವರ್ಸ್ ಕೊಟ್ಟು ಬಿಡಿ. He can purchase that land outright. ಪ್ರೈಸ್ ಫಿಕ್ಸ್ ಮಾಡುವುದಕ್ಕೆ ಒಂದು ಕಮಿಟಿ. ಎಕ್ಸಿಕ್ಯೂಟೀವ್ ಇಂಜಿನಿಯರ್ ಅಥವಾ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಅಥವಾ ಲೋಕಲ್ ಎಂ.ಎಲ್.ಎ ಯಾರನ್ನಾದರೂ ಮಾಡಿ. ಅದಕ್ಕಾಗಿ ಒಂದು ಶಾಸನ ಪಾಸ್ ಮಾಡಿರಿ. ಅಥವಾ ಇದನ್ನು ಲೋಕ್ ಅದಾಲತ್‌ಗೆ ರೆಫರ್‌ಮಾಡಿ. ಸುಮಾರು ಹತ್ತು ಕೋಟಿ ಖರ್ಚು ಮಾಡಿದರೂ ಕೂಡ ನಮಗೆ ಅದರ ನಾಲ್ಕು ಪಟ್ಟು ಬೆನಿಫಿಟ್ ಆಗುತ್ತದೆ. ಆದ್ದರಿಂದ ಅದರ ವ್ಯಾಪ್ತಿಗಾದರೂ ಕೊಟ್ಟು ಬಿಡಿ. ಮೂರನೆಯದು, ಈಗೇನಾಗಿದೆ ಎಂದರೆ ಕ್ಲಿಯರೆನ್ಸ್. ಇದರ ಹಾವಳಿ ಎಷ್ಟು ಆಗಿದೆ ಎಂದರೆ ನನಗೆ ಸಂಶಯ ಬರುತ್ತಿದೆ. ಯಾರಾದರೊಬ್ಬ ಕೆಟ್ಟ ಆಫೀಸರ್‌ನ ಕೆಲಸದ ಅಚಾತುರ್ಯವಾಗಿ ಅಥವಾ ಕಂಟ್ರಾಕ್ಟರ್‌ನ ತುಂಟಾಟತನದಿಂದ ನಮಗೆ ಸಾವಿರಾರು ಕೋಟಿರೂಪಾಯಿಗಳ ಲುಕ್ಸಾನು ಆಗುತ್ತದೆ. ಅದಕ್ಕೆ ತಾವು ದಯವಿಟ್ಟು ಈ ಆಫೀಸರ್ ವಿಧಾನಸೌಧದ ಕಡೆಗೆ ನೋಡದಂತೆ, ಸೆಕ್ರೆಟರಿ ಮಟ್ಟಕ್ಕೆ ನೋಡದಂತೆ ಲೋಕಲ್ ಆಗಿ ಒಂದು ಕಮಿಟಿ ಮಾಡಿ ಅದಕ್ಕೆ ಟೆಕ್ನಿಕಲ್ ಪವರ್ಸ್ ಕೊಟ್ಟು ಬಿಡಿ. ಫೈನಲ್ ಡಿಸಿಷನ್ ಅಲ್ಲೇ ಆಗಬೇಕು. ಅಂಥಾದ್ದು ಯಾವುದಾದರೂ ಕಮಿಟಿ ಮಾಡಿ. ಫೈನಾನ್ಸಿಯಲ್ ಆಗಬಹುದು ಅಥವಾ ಆಲ್ಟರೇಷನ್ ಆಫ್ ದಿ ಪ್ಲಾನ್ ಆಗಬಹುದು, ಕಂಟ್ರಾಕ್ಟಿಂಗ್ ಸ್ಟೇನೇ ಆಗಬಹುದು. ಅದನ್ನು ಅಲ್ಲೇ ಫೈನಲೈಸೇಷನ್ ಮಾಡುವುದಕ್ಕೆ ಒಂದು ಕಮಿಟಿ ಮಾಡಿ. ಈ ಬಗ್ಗೆ ಬೇಕಾದರೆ ಒಂದು ಶಾಸನ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ ನಾನು ಹೇಳಿದಹಾಗೆ ತಮ್ಮ ತುಂಟತನದಿಂದ ಎಲ್ಲಾ ಮೆಟೀರಿಯಲ್ಸ್‌ನ್ನು ಕಂಟ್ರಾಕ್ಟರ್ಸ್ ತಮಗೆ ಬೇಕಾದ ಕಡೆಗೆ ಸಾಗಿಸುತ್ತಾರೆ. ಅದಕ್ಕಾಗಿ ಲೋಕಲ್ ಕಮಿಟಿ ಮಾಡಿ ಅಲ್ಲೇ ಡಿಸಿಷನ್ ಮಾಡುವಹಾಗೆ ಒಂದು ಶಾಸನ ತೆಗೆದುಕೊಂಡು ಬನ್ನಿ. ನಮ್ಮ ಆಫೀಸರ್‌ಗಳು ಏನು ಕೆಲಸ ಮಾಡುತ್ತಾರೆ ಎಂದು ನಿಮಗೆ ಗೊತ್ತಿರ ಬೇಕು. ಆದರೆ ನಿಮ್ಮ

ಕಾರ್ಯಬಾಹುಳ್ಯದಿಂದ ಇದು ಸಾಧ್ಯವಿರಲಿಕ್ಕಿಲ್ಲ. ನಾನು ಕೆಲವು ಪಾಯಿಂಟ್ಸ್ ಬಗ್ಗೆ ವಿಚಾರ ಮಾಡಿದ್ದೇನೆ. ಅದನ್ನು ತಮ್ಮ ಲಕ್ಷ್ಯಕ್ಕೆ ತರುವುದಕ್ಕೆ ಬಯಸುತ್ತೇನೆ. 6ನೇ ತಾರೀಕು ಈ ಸದನದಲ್ಲಿ ಆಡಿಟ್ ರಿಪೋರ್ಟ್ ಇಟ್ಟರು. ಈ ನಮ್ಮ ಅಫೀಸರ್ಸ್ ಏನು ಅನಾಹುತ ಮಾಡಿದ್ದಾರೆ ಎಂದು ತಮಗೆ ಹೇಳುತ್ತೇನೆ. 1971ನೇ ಇಸವಿಯಲ್ಲಿ ಯು.ಕೆ.ಪಿ.ಯ ಯೋಜನೆ ಹಾಕಿದಾಗ 116ಕೋಟಿ ರೂಪಾಯಿಗಳು ಇತ್ತು. ಈಗ 1357 ಕೋಟಿ ರೂಪಾಯಿಗೆ ಬಂತು. ಆಮೇಲೆ ಎರಡನೇಯದು, ಆಲಮಟ್ಟಿ ಜಲಾಶಯ ಡ್ಯಾಮ್. ಈ ನಿರಾಶ್ರಿತರ ಜನರಿಗೆ ಸುಮಾರು 47 ಲಕ್ಷ ರೂಪಾಯಿ ಖರ್ಚುಮಾಡಿ ಏಂಟು ಕ್ಯಾಂಪ್‌ಗಳನ್ನು ಮಾಡಿದ್ದಾರೆ. ಈ ಎಂಟು ಕ್ಯಾಂಪ್‌ಗಳಲ್ಲಿ ಎಂಟು ಜನರೂ ವಾಸ ಮಾಡುತ್ತಿಲ್ಲ. ಅಂದಮೇಲೆ ಇವುಗಳನ್ನು ಕಟ್ಟಿದ್ದು ಏಕೆ? ಮತ್ತೆ ಆ ಜನರನ್ನು ಮೋಟಿವೇಟ್ ಏಕೆ ಮಾಡಲಿಲ್ಲ? ಅಥವಾ ಜನರನ್ನು ಅಲ್ಲಿಂದ ಕನ್‌ವೀನ್ಸ್ ಮಾಡಿ, ತಮ್ಮ ತಮ್ಮ ಹಳ್ಳಿಗಳಿಗೆ ಏಕೆ ತರಲಿಲ್ಲ? ನಾನು ಆಡಿಟ್ ರಿಪೋರ್ಟ್ ಅಬ್ಸರ್ವ್ ಮಾಡಿದೆ, 6ನೇ ತಾರೀಖಿನ ದಿವಸ ಸ್ವಲ್ಪ ತ್ರಾಸ್ ತೆಗೆದುಕೊಂಡು ಆಡಿಟ್ ರಿಪೋರ್ಟ್ ಅಬ್ಸರ್ವ್ ಮಾಡಿ, ಬರೆದುಕೊಂಡು ಬಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ಆಲಮಟ್ಟಿ ಪುನರ್ ವಸತಿ ಕೇಂದ್ರದ ಬಗ್ಗೆ ಹೇಳಿದಿರಿ, ಆಲಮಟ್ಟಿ ಡ್ಯಾಮ್‌ಗಾಗಿ ಯಾರ ಜಮೀನು ತೆಗೆದುಕೊಂಡಿದ್ದಾರೆ, ಯಾರನ್ನು ಬಿಟ್ಟಿದ್ದಾರೆ, ಅವರು ಇನ್ನೂ ಅಲ್ಲಿಯೇ ಇದ್ದಾರೆ, ಈ ವರ್ಷ ಕೆಲಸ ಪ್ರಾರಂಭ ಮಾಡಿದ್ದೇವೆ, ಈ ವರ್ಷ ಷಿಫ್ಟ್ ಆಗುತ್ತದೆ.

ಡಾ. ಎ. ಬಿ. ಮಲಕರೆಡ್ಡಿ:- ಮಾನ್ಯ ಮಂತ್ರಿಗಳಿಗೆ ವರ್ಲ್ಡ್ ಬ್ಯಾಂಕ್‌ನವರ ಟರ್ಮ್ಸ್ ಆಫ್ ಕಂಡೀಷನ್ಸ್ ನೋಡಿದರೆ ಅರ್ಥವಾಗುತ್ತದೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ಎಲ್ಲಿಯವರೆಗೆ ಮುಳುಗಡೆ ಹೊಂದಿರುವುದಿಲ್ಲ, ಅಲ್ಲಿಯವರೆಗೆ, ಆ ಜಮೀನಿನಲ್ಲಿ ಇರತಕ್ಕಂಥ ಮನೋಭಾವದಿಂದ ವಾಸ ಮಾಡುತ್ತಿದ್ದಾರೆಯೇ ಹೊರತು, ಸರ್ಕಾರ ಹೇಳುತ್ತಿದೆಯೆಂದಲ್ಲ. ಏನೋ ಸರ್ಕಾರ ದಬ್ಬಾಳಿಕೆ ಮಾಡುವುದರಿಂದ ಉಪಯೋಗವಾಗುವುದಿಲ್ಲ. ಆಲಮಟ್ಟಿ ಡ್ಯಾಮ್ ಪೂರ್ಣವಾಗದೇ ಇದ್ದಾಗ ಅವರನ್ನು ಷಿಫ್ಟ್ ಆಗಿ ಎಂದು ಹೇಳುವುದು ಕಷ್ಟವಾಗುತ್ತದೆ.

ಡಾ. ಎ. ಬಿ. ಮಲಕರೆಡ್ಡಿ:- ವರ್ಲ್ಡ್ ಬ್ಯಾಂಕ್ ಕಂಡೀಷನ್ ಏನಿದೆ ಅಂದರೆ ಸಂತ್ರಸ್ಥರ ಪುನರ್ ವಸತಿಗಾಗಿ ವ್ಯವಸ್ಥೆ ಮಾಡುವವರೆಗೆ ನಾವು ಹಣವನ್ನೇ ಕೊಡುವುದಿಲ್ಲವೆಂದು ಹೇಳಿದ್ದಾರೆ. [illegible] ಪ್ರೈಮರಿ ಕಂಡೀಷನ್. ಎರಡನೆಯದು, ನಿಮ್ಮ ಆಫೀಸರು ಮೋಟಿವೇಟ್ ಮಾಡಿಲ್ಲವೆಂದು ಏಕೆ ಹೇಳುತ್ತಿದ್ದೀರಿ ಕೆಲಸ ಮಾಡುವವರು ಯಾವ ಕ್ಷಣದಲ್ಲಿಯೂ ಮಾಡಬಹುದು. ಆಲಮಟ್ಟಿಯಲ್ಲಿ ಒಂದು ವಿದ್ಯುತ್ ಘಟಕ ಇದೆ. ಸಿವಿಲ್ ವರ್ಕ್ ಮುಗಿದಿದೆ. ನಿಮ್ಮ ಖರ್ಚಿನಿಂದ ಅಲ್ಲಿ ನೀರನ್ನು ಡೈವರ್ಟ್ ಮಾಡಹಬೇಕು. ಆ ಡೈವರ್ಟ್ ಮಾಡದೇ ಇರುವುದಕ್ಕೆ ಆ ಕಂಟ್ರಾಕ್ಟರ್‌ರವರಿಗೆ, 97 ಸಾವಿರದಲ್ಲಿ 36 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ವಿದ್ಯುತ್ ಘಟಕವೂ ತಯಾರಾಗಲಿಲ್ಲ. ಆ ಕಡೆ ನೀರನ್ನೂ ಡೈವರ್ಟ್ ಮಾಡಲಿಲ್ಲ. ಕಂಟ್ರಾಕ್ಟರಿಗೆ ಮಾತ್ರ 97 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದೀರಿ. ಸರ್ಕಾರದ ಹಣ ಯಾವರೀತಿ ಸೋರಿಕೆಯಾಗುತ್ತದೆ ಎಂಬುದನ್ನು ಹೇಳುತ್ತಿದ್ದೇನೆ. ಆಮೇಲೆ ನಿಯಮಗಳಿಗೆ ವ್ಯತಿರಿಕ್ತವಾಗಿ, ಕಂಟ್ರಾಕ್ಟನ್ನು ರದ್ದುಮಾಡಿ, ಮೊದಲು ಕೊಡುವುದು, ಆಮೇಲೆ ರದ್ದುಮಾಡುವುದು. ರದ್ದು ಮಾಡಿದುದಕ್ಕಾಗಿ, 29 ಲಕ್ಷ ರೂಪಾಯಿ ಆ ಕಂಟ್ರಾಕ್ಟರಿಗೆ ಪರಿಹಾರ ಕೊಡಬೇಕಾಯಿತು. ಆಮೇಲೆ, ವಿದ್ಯುತ್ ಅಣೆಕಟ್ಟಿನ ಸಿವಿಲ್ ಕಾಮಗಾರಿ ಮುಗಿದಮೇಲೆ ಅದರ ಅಂಡರ್‌ಸ್ಟಾಂಡಿಂಗ್ ಏನಿತ್ತು ಅಂದರೆ ಕೆ.ಇ.ಬಿ ನವರು ಈ ಹಣವನ್ನು ರೀಎಂಬಸ್ ಮಾಡಬೇಕೆಂದು ಇತ್ತು. ಇವರು ಹಣ ಖರ್ಚುಮಾಡಿ , ಸಿವಿಲ್ ವರ್ಕ್ ಕಂಪ್ಲೀಟ್ ಆಯಿತು. ಅದರೆ, ಕೆ.ಇ.ಬಿ. ನವರಿಂದ ಹಣ ರಿಕವರಿ ಮಾಡಲಿಲ್ಲ. ಕೆ.ಇ.ಬಿ ನವರು ಮಾತ್ರ ದೊಡ್ಡ ದೊಡ್ಡ ಬಿಲ್ಲನ್ನು ತಂದು ನಿಮಗೆ ಸಬ್‌ಮಿಟ್ ಮಾಡುತ್ತಾರೆ. ಕೆ.ಇ.ಬಿ. ಯಿಂದ ನೀವು ಇನ್ನೂ ರಿಕವರಿ ಮಾಡಿಲ್ಲ. ಆಮೇಲೆ, ನಾರಾಯಣಪುರ ಆಡಿಷಿನಲ್ ಕ್ರಸ್ಟ್ ಗೇಟ್ ಹೆಚ್ಚುಮಾಡುವುದರಲ್ಲಿ ತಪ್ಪು ಏಜೆನ್ಸಿ ಕೊಟ್ಟಿದ್ದಕ್ಕಾಗಿ, ರಾಂಗ್ ಏಜೆನ್ಸಿ ಫಿಕ್ಸ್ ಮಾಡಿದ್ದಕ್ಕಾಗಿ, ಸರ್ಕಾರವು 72

ಲಕ್ಷದ 82 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಯಿತು. ಅಲ್ಲಿ ಆಫೀಸರ್ಸ್ ಎಷ್ಟು ಜಾಗ್ರತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ನಾರಾಯಣಪುರ ಲೆಫ್ಟ್ ಬ್ಯಾಂಕ್ ಕೆನಾಲ್ 60ನೇ ಕಿಲೋಮೀಟರ್ ಮಟ್ಟದಲ್ಲಿ ಕಳಪೆ ಮಟ್ಟದ ಕೆಲಸವಾದ ಕಾರಣ, ಸರಿಯಾದ ಮಣ್ಣು ಉಪಯೋಗ ಮಾಡದ ಕಾರಣ, 25 ಲಕ್ಷದ 62ಸಾವಿರ ರೂಪಾಯಿ ಕೊಟ್ಟು ರಿಪೇರಿ ಮಾಡಿಸಬೇಕಾಯಿತು. ಆ ಎಡದಂಡೆ ಕಟ್ಟಿ ಸುಮಾರು 8 ವರ್ಷವಾಯಿತು. 8 ವರ್ಷದಲ್ಲೇ ಅದು ಹಾಳಾಯಿತು. 25 ಲಕ್ಷ ರೂಪಾಯಿ ಖರ್ಚು ಏಕೆ ಮಾಡಬೇಕಾಯಿತು? ಆಮೇಲೆ 1981ರಿಂದ 1988ರ ವರೆಗೆ, 1992ರವರೆಗೆ ಪೋಟೆನ್‌ಷಿಯಲ್ ಸುಮಾರು 1 ಲಕ್ಷ ಹೆಕ್ಟೇರ್ ಎಂದು ಹೇಳಿದ್ದೀರಿ. ಆದರೆ, ನಿಜವಾಗಿಯೂ ವಾಟರ್ ರೇಟ್ ಫಿಕ್ಸ್ ಮಾಡಿ ಜನರಿಗೆ ನೀರು ಬಿಟ್ಟಿದ್ದು ಕೇವಲ70 ಲಕ್ಷ ಹೆಕ್ಟೇರ್‌ಗೆ. ಇದರಿಂದ ನಾವು ಗುರಿ ಸಾಧನೆ ಮಾಡುವುದರಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆಂದು ಗೊತ್ತಾಗುತ್ತದೆ. ಕೊನೆಗೆ, ಸರ್ಕಾರ ಒಂದು ನೀತಿ ಹಾಕಿದೆ. ಯಾವುದೇ ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಜಲಾನಯನದ ವ್ಯಾಪ್ತಿಯಲ್ಲಿ ಬರತಕ್ಕಂಥ ನೀರಾವರಿ ಯೋಜನೆಗಳು, ಅದು ಏತ ನೀರಾವರಿ ಯೋಜನೆ ಆಗಿರಬಹುದು, ಸಣ್ಣ ನೀರಾವರಿ ಆಗಿರಬಹುದು ಅವುಗಳನ್ನು ಕೈಗೊಳ್ಳಬೇಡಿ ಎಂದು ಸ್ಟಾಂಡಿಂಗ್ ಇನ್‌ಸ್ಟ್ರಕ್ಷನ್ ಇದೆ. ಆದೂ ಇದ್ದರೂ ಕೂಡ ಸರ್ಕಾರದ ವತಿಯಿಂದ ಆಜ್ಞೆ ಯಾವರೀತಿ ಹೋಗುತ್ತದೆಯೋ, ನೀವು ಹಣ ಯಾವರೀತಿ ಬಿಡುಗಡೆ ಮಾಡುತ್ತೀರೋ ಗೊತ್ತಿಲ್ಲ. ಹೇಮಾವತಿ ಜಲಾನಯನದಲ್ಲಿ 23 ಏತ ನೀರಾವರಿ ತೆಗೆದುಕೊಂಡಿದ್ದೀರಿ. ಮತ್ತು ಕಬಿನಿಯಲ್ಲಿ 3 ನೀರಾವರಿ ಯೋಜನೆಗಳನ್ನು ಮಾಡಿ, 26 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಇವತ್ತು ತಾವು ವಾರ್‌ಪುಟಿಂಗ್ ಮೇಲೆ ಈ ಮೇಜರ್ ಅಂಡ್ ಮೀಡಿಯಂ ಪ್ರಾಜೆಕ್ಟ್ ಬಗ್ಗೆ ಕೆಲಸ ಮಾಡುತ್ತಿದ್ದೀರಿ. ಮತ್ತೆ ಇವೆಲ್ಲಾ ನಿರುಪಯೋಗವಾಗುತ್ತವೆ. 26ಕೋಟಿ ರೂಪಾಯಿ ಖರ್ಚು ಮಾಡಿ ನೀವು ಏನು ಮಾಡುತ್ತಿದ್ದೀರಿ, ಅದು ಕೆಲಸಕ್ಕೆ ಬರುವುದಿಲ್ಲ. ಮತ್ತೆ ಏತಕ್ಕೆ ಖರ್ಚು ಮಾಡುತ್ತೀರಿ? ನೀವು ಓವರ್‌ಆಲ್ ದೃಷ್ಟಿ ಇಟ್ಟುಕೊಂಡು ಏತಕ್ಕೆ ಕೆಲಸ ಮಾಡಲಿಲ್ಲ? ಸರಕಾರಿ ಆಫೀಸರ್ಸ್‌ಗಳಾಗಲೀ, ಯೋಜನಾಕಾರರಾಗಲೀ ಯಾವರೀತಿ ದೋಷಗಳನ್ನು ಮಾಡುತ್ತಿದ್ದಾರೆ ಎಂಬುದನ್ನು ಈ ಆಡಿಟ್ ವರದಿಯಲ್ಲಿ ಕೊಟ್ಟಿದ್ದಾರೆ. ಇದನ್ನು ತಾವು ನೋಡಬೇಕು. ಅಧ್ಯಕ್ಷರೇ ನನಗೆ ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ಈ ಸಮಯದಲ್ಲಿ ಸರಕಾರದ ಗಮನ ಸೆಳೆಯುವುದಕ್ಕೆ ನಾನು ಪ್ರಯತ್ನ ಮಾಡಿರುತ್ತೇನೆ. ಕೊನೆಯದಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಹೇಮಾವತಿ ಯೋಜನೆಯಲ್ಲಿ 23 ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಫೈನಾನ್‌ಷಿಯಲ್ ಡಿಸಿಪ್ಲೀನ್, ಆರ್ಥಿಕ ಶಿಸ್ತನ್ನು ಉಲ್ಲಂಘನೆ ಮಾಡುವುದರ ಜೊತೆಗೆ, ನಿಯಮಗಳನ್ನು ಕೂಡಾ ಉಲ್ಲಂಘನೆ ಮಾಡಿದಂತಾಗುತ್ತದೆ, ಇದನ್ನು ಹೇಗೆ ಸರಿ ಮಾಡುತ್ತೀರಿ ಎಂಬ ಸಂಶಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅಧ್ಯಕ್ಷರೇ, ಅವರಿಗೆ ಅದರ ಕಾನ್‌ಸೆಪ್ಟ್ ಸಂಪೂರ್ಣವಾಗಿ ತಿಳಿಯಲಿಲ್ಲ ಎಂದು ಕಾಣುತ್ತದೆ. ಹೇಮಾವತಿಯಿಂದ ಬರತಕ್ಕಂಥ ಈಲ್ಡ್ ನಾವು ಅದಕ್ಕೆ ಕಟ್ಟಿರತಕ್ಕ ಕಟ್ಟೆ ನೀರಿನ ಸ್ಟೋರೇಜ್ ಮತ್ತು ಅದರಿಂದ ಆಗತಕ್ಕಂಥ ಉಪಯೋಗ, ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ನದಿಯಲ್ಲಿ ಹರಿದು ಹೋಗತಕ್ಕಂಥ ನೀರನ್ನು ಸದುಪಯೋಗ ಮಾಡುವುದರ ಹಿನ್ನೆಲೆಯಲ್ಲಿ, ಲಿಫ್ಟ್ ಇರಿಗೇಷನ್ ಅನ್ನು ಪ್ರಪೋಸ್ ಮಾಡಿರುತ್ತೇವೆ. ಅದರಲ್ಲಿ ರೀಜನರೇಷನ್ ವಾಟರ್ ಮತ್ತು ಅಲ್ಲಿರತಕ್ಕಂಥ ಬರಗಾಲ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು, ಆ ಪ್ರದೇಶಗಳಿಗೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂಬ ಒಂದು ಹಿನ್ನೆಲೆಯಲ್ಲಿ ರಾಜ್ಯದ ಸಂಪನ್ಮೂಲದಿಂದಲೇ ಇದನ್ನು ಮಾಡಿರತಕ್ಕದ್ದು. ಬಹುಶ: ಆಡಿಟ್ ಅಬ್ಜೆಕ್ಷನ್ ಆಗುತ್ತದೆ ಇನ್ನೇನೋ ಆಗುತ್ತದೆ, ಎಂದು ತಾವು ಏನು ಹೇಳುತ್ತೀರಿ, ಅದಕ್ಕೆ ಸರಿಯಾದ ರಿಪ್ಲೈ ಇಲಾಖೆಯವರ ಹತ್ತಿರ ಇದೆ. ಅದನ್ನು ಕೊಟ್ಟರೆ ತಾವು ಕನ್‌ವಿನ್ಸ್ ಆಗುತ್ತೀರಿ ಎಂದು ಹೇಳಿ, ಈ ಯೋಜನೆಗಳು ಆ ಪ್ರದೇಶದಲ್ಲಿ ಅತ್ಯಗತ್ಯ ಹಾಗೂ ಅನಿವಾರ್ಯ ಹಿನ್ನೆಲೆಯಲ್ಲಿ

ಸರಕಾರ ಈ ತೀರ್ಮಾನ ತೆಗೆದುಕೊಂಡಿದೆ.

+ ಶ್ರೀಮತಿ ಸುಮಾ ವಸಂತ್(ವೀರರಾಜಪೇಟೆ):- ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿನ ಸದನದಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳಾದ, ಲೋಕೋಪಯೋಗಿ, ಕಟ್ಟಡಗಳು, ರಸ್ತೆಗಳು, ಸೇತುವೆಗಳು, ವಿದ್ಯುಚ್ಛಕ್ತಿ ಯೋಜನೆಗಳು, ಸಣ್ಣನೀರಾವರಿ ವಾರ್ತಾ ಮತ್ತು ಪ್ರವಾಸೋದ್ಯಮ ಇವುಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಈ ಸಭೆಯಲ್ಲಿ ಮಂಡಿಸಲು ಇಚ್ಛಿಸುತ್ತೇನೆ. ನಾನು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ, ದಯವಿಟ್ಟು ಬೆಲ್ ಮಾಡಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇಂದು ಮೊದಲು ನಾನು ಕೆ.ಇ.ಬಿ. ಬಗ್ಗೆ ಒಂದೆರಡು ವಿಚಾರ ಹೇಳುವುದಕ್ಕೆ ಇಚ್ಛಿಸುತ್ತೇನೆ. ವಿದ್ಯುತ್ ಇಲಾಖೆ ಅಂದರೆ ಕೆ.ಇ.ಬಿ.ಯ ಕಾರ್ಯನೀತಿ ಹಾಗೂ ಇದರಿಂದ ಜನರಿಗೆ ಆಗುತ್ತಿರುವ ತೊಂದರೆ ಬಗ್ಗ ನಾವು ಚಿಂತನೆ ಮಾಡಬೇಕಾಗಿದೆ. 1957ನೇ ಇಸವಿಯಲ್ಲಿ ರಾಜ್ಯದ ವಿದ್ಯುತ್ ಪೂರೈಕೆ ಕೆಲವೆಡೆ ಖಾಸಗಿಯವರ ಕೈಯಲ್ಲಿ, ಕೆಲವೆಡೆ ಸರಕಾರದಿಂದ ನಡೆಯುತ್ತಿದ್ದ ಕಾಲದಲ್ಲಿ ಕಲ್ಯಾಣ ರಾಜ್ಯದ ಕಲ್ಪನೆ ಅಡಿ ಸ್ಥಾಪಿತವಾದ ಕೆ.ಇ.ಬಿ. ಇಂದು ಸಾರ್ವಜನಿಕರಿಗೆ ಯಾವರೀತಿ ಸಹಾಯ ಮಾಡಲು ಸಾಧ್ಯವಾಗಿದೆ. ಎಂದು ನಾವು ಚಿಂತನೆ ಮಾಡಬೇಕಾಗಿದೆ. ಕಾಲಕಾಲಕ್ಕೆ ವಿದ್ಯುತ್‌ದರ ಹೆಚ್ಚಿಸುತ್ತಿದ್ದಾರೆ. ಜೊತೆಗೆ ವಿದ್ಯುತ್ ಪೂರೈಕೆಯಲ್ಲಿ ಸಾಕಷ್ಟು ಖೋತಾ ಕೂಡಾ ಆಗುತ್ತಿದೆ. ಆದರೂ ಕೂಡಾ ಇಂದು ಕೆ.ಇ.ಬಿ. ನಷ್ಟವನ್ನು ಅನುಭವಿಸುತ್ತಿದೆ. ಇದರ ಬಗ್ಗೆ ಕೂಡಾ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ನಾವು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯಲ್ಲಿ ಇದ್ದಾಗ ಸಾಕಷ್ಟು ಅಧಿಕಾರಿಗಳ ಜೊತೆ ಇವರ ಬಗ್ಗೆ ಚರ್ಚೆ ಕೂಡಾ ಮಾಡಿದ್ದೆವು. ಈ ಕೆ.ಇ.ಬಿ. 1985-86 ರಲ್ಲಿ 26.37 ಕೋಟಿ ನಷ್ಟ ಅನುಭವಿಸಿದರೆ, 1986-87 ರಲ್ಲಿ 74.83 ಕೋಟಿ ನಷ್ಟ ಅನುಭವಿಸಿದೆ 1987-88ರಲ್ಲಿ 98.03 ಕೋಟಿ ನಷ್ಟ ಅನುಭವಿಸಿದೆ. ಅದರೆ ಈ ವರ್ಷ ಏನಾಗಿದೆ ಎಂದರೆ ಅಂದಾಜು 135 ಕೋಟಿ ನಷ್ಟ ಅನುಭವಿಸುತ್ತಿದೆ. ಇದನ್ನು ಯಾವರೀತಿ ಸರಿಪಡಿಸಬೇಕೆಂದು ಹೇಳಿ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಅದೇ ರೀತಿ ವಿದ್ಯುತ್ ಸಾಗಾಣಿಕೆ ನಷ್ಟ, ಶೇಕಡಾ 19 ರಷ್ಟಿದೆ. ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದು ಹೇಳಿದರೆ ಈಗ ನಮ್ಮಲ್ಲಿ ದಿನಕ್ಕೆ ಒಟ್ಟು ವಿದ್ಯುತ್ ಬೇಡಿಕೆ 53 ಮಿಲಿಯನ್ ಯೂನಿಟ್ ಇದೆ. ನನ್ನ ಸಲಹೆ ಎಂದರೆ ಈ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಏನು ವಿದ್ಯುತ್ ಕೊಡುತ್ತಿದ್ದೀರಿ ಅದರಲ್ಲಿ ಸ್ವಲ್ಪ ವಿದ್ಯುತ್ ಕಟ್ ಮಾಡಿ ರೈತರಿಗೆ ಮತ್ತು ಸಣ್ಣ ಕಾರ್ಖಾನೆಯವರಿಗೆ ಹಾಗೂ ಜನರಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಏತಕ್ಕೆಂದರೆ ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್ ಬಂಡವಾಳಶಾಹಿಗಳು ಏನಿದ್ದಾರೆ ಅವರು ಥರ್ಮಲ್ ಪ್ರಾಜೆಕ್ಟ್ ಅಥವಾ ಜನರೇಟರ್ಸ್ ಹಾಕಿಕೊಂಡು ವಿದ್ಯುತ್ ಪೂರೈಸಿಕೊಳ್ಳುವ ಶಕ್ತಿ ಅವರಲ್ಲಿರುತ್ತದೆ. ವಿದ್ಯುತ್ ಸಾಗಾಣಿಕೆ ನಷ್ಟವನ್ನು ಸಹ ಕಡಿಮೆ ಮಾಡಬಹುದು. ಈಗ ನಮ್ಮಲ್ಲಿ ಒಟ್ಟು ವಿದ್ಯುತ್ ಉತ್ಪಾದನೆ ಕೇಂದ್ರದ್ದು ಮತ್ತು ನಮ್ಮದು ಸೇರಿ 40 ಪ್ಲಸ್ 10 ಹೀಗೆ ಒಟ್ಟು 50 ಮಿಲಿಯನ್ ಯೂನಿಟ್ಸ್ ಪರ್ ಡೇ ಇದೆ. ಅದರಲ್ಲಿ ಶಾರ್ಟೇಜ್ 3 ಮಿಲಿಯನ್ ಯೂನಿಟ್ಸ್ ಪರ್ ಡೇ ಇದೆ. ಇದರಲ್ಲಿ ಇಂಡಸ್ಟ್ರೀಸ್‌ಗೆ 45 ಪರ್ಸೆಂಟ್ ಕೊಟ್ಟರೆ ಅಗ್ರಿಕಲ್ಚರ್‌ಗೆ 35 ಪರ್ಸೆಂಟ್, ಅದೇ ರೀತಿ ಡೊಮ್ಯಾಸ್ಟಿಕ್‌ಗೆ 20 ಪರ್ಸೆಂಟ್ ಮಾತ್ರ ಕೊಡಲು ಸಾಧ್ಯವಾಗಿದೆ. ಆದ್ದರಿಂದ, ಇಂಡಸ್ಟ್ರೀಸ್‌ಗೆ ಏನು ಕೊಡುತ್ತೀರಿ, ಅದನ್ನು 10 ಪರ್ಸೆಂಟ್ ಕಡಿಮೆ ಮಾಡಿದರೆ ಈ ಲಾಸಸ್ ಏನಿದೆ ಅದನ್ನು ತುಂಬಬಹುದು ಎಂಬುದು ನನ್ನ ಅಭಿಪ್ರಾಯ. ಈ ಬಗ್ಗೆ ನನ್ನ ಎರಡು ಸಲಹೆಗಳೆಂದರೆ ಕೆ.ಇ.ಬಿ.ಯ ಕಾರ್ಯನಿರ್ವಹಣೆಯನ್ನು ಉತ್ತಮ ಪಡಿಸಲಿಕ್ಕೆ ಅದರ ಆಡಳಿತ ಮಂಡಳಿಯಲ್ಲಿ ಶಾಸಕರಿಗೆ ಮತ್ತು ಗ್ರಾಹಕರಿಗೆ ಪ್ರಾತಿನಿಧ್ಯ ದೊರಕುವಂತಹ ತಿದ್ದುಪಡಿ ತರಬೇಕು, ಮತ್ತು ಕೆ.ಇ.ಬಿ. ಕಾರ್ಯಾಚರಣೆ ಬಗ್ಗೆ ತನಿಖೆ ನಡೆಸಲು ಸದನದ ಸಮಿತಿಯನ್ನು ನೇಮಿಸಬೇಕು. ಹಾಗೆಯೇ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರಿಗೆ ವಿದ್ಯುತ್ ಪೂರೈಕೆ ಉತ್ತಮ ಪಡಿಸಲು ಆದ್ಯತೆ ನೀಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ. ಇದರ ಜೊತೆಗೆ ಇನ್ನೂ ಕೆಲವು ವಿಚಾರಗಳನ್ನು ನಾನು

ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ವಿರಾಜಪೇಟೆ ತಾಲ್ಲೂಕಿನಲ್ಲಿ ಮಾಕೂಟ ಅಂತ ಒಂದು ಪ್ರದೇಶ ಇದೆ. ಅದು ಕೇರಳ ಬಾರ್ಡರ್‌ನಲ್ಲಿ ಬರುತ್ತದೆ. ಇದು ವಿರಾಜಪೇಟೆಗೆ ಸುಮಾರು 24 ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಗೆ ವಿದ್ಯುತ್ ಪೂರೈಕೆ ಮಾಡಿಕೊಡಬೇಕೆಂದು ಸಾಕಷ್ಟು ಒತ್ತಾಯ ಮಾಡಿದ್ದೇವೆ, ಮತ್ತು ಸರ್ಕಾರದ ಗಮನಕ್ಕೆ ಕೂಡ ತಂದಿದ್ದೇವೆ. ಈ ಹಿಂದೆ ಕೂಡ ನಾವು ವಿರಾಜಪೇಟೆಯಿಂದ ಅಲ್ಲಿಗೆ ಕಂಬ ಎಳೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದರು. ಆದರೆ ಅದರ ಬಗ್ಗೆ ಕೇರಳ ಸರ್ಕಾರದ ಜೊತೆ ಮಾತುಕತೆ ಮಾಡಿದರೆ ಸ್ವಲ್ಪ ಹತ್ತಿರವಾಗುತ್ತದೆ ಮತ್ತು ಅಲ್ಲಿಂದ ವಿದ್ಯುತ್ ತರಲಿಕ್ಕೆ ಸಾಧ್ಯವಾಗುತ್ತದೆ ಅಂತ ಅಧಿಕಾರಿಗಳು ಹೇಳಿದರು. ಈಗ ಮಡಿಕೇರಿಯ ಕೆಲವು ಗ್ರಾಮಗಳಿಗೆ ವಿದ್ಯುತ್ ಪೂರೈಸಿದ್ದೀರಿ. ಆದ್ದರಿಂದ, ಆದಷ್ಟು ಬೇಗ ನಮ್ಮ ಮಾಕೂಟಕ್ಕೆ ವಿದ್ಯುತ್ ಪೂರೈಸಲು ನಮ್ಮ ಸರ್ಕಾರ ಕೇರಳ ಸರ್ಕಾರದ ಜೊತೆ ಮಾತನಾಡಿ ವಿದ್ಯುತ್ ಅನ್ನು ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದೇ ರೀತಿ ನಮ್ಮಲ್ಲಿ ಈ ಸಲ ಕೇವಲ ಐ.ಪಿ. ಸೆಟ್‌ಗಳಿಗೆ ಮಾತ್ರ ಟಾರ್ಗೆಟ್ ಫಿಕ್ಸ್ ಮಾಡಿದ್ದೀರಿ. ನಮಗೆ ಮೂರೂವರೆ ಸಾವಿರದಿಂದ ನಾಲ್ಕು ಸಾವಿರ ಪೋಲ್ಸ್ ಬೇಕಾಗುತ್ತದೆ. ಆದಷ್ಟು ಬೇಗ ಅದನ್ನು ಪೂರೈಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ ನಮ್ಮ ಭಾಗದ ಇಂಡಿವಿಜುಯಲ್ಸ್‌ಗೆ ಕರೆಂಟ್ ಕೊಡಲು ಇನ್ನೂ ಸಾಧ್ಯವಾಗಿಲ್ಲ. ಜೊತೆಗೆ ಕಳೆದ ಮಳೆಗಾಲದಲ್ಲಿ ನಮ್ಮ ಕೊಡಗು ಜಿಲ್ಲೆಯಲ್ಲಿ ಸಾಕಷ್ಟು ಕಂಬಗಳು ಬಿದ್ದು ಹೋಗಿದ್ದವು. ಅದನ್ನು ಇದುವರೆವಿಗೂ ರಿಪೇರಿ ಮಾಡಿಲ್ಲ. ಅದನ್ನು ಆದಷ್ಟು ಶೀಘ್ರವಾಗಿ ಸರಿ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ಕೊಡಗು ಜಿಲ್ಲೆಗೆ ಮೈಸೂರು ಕಡೆಯ ಒಂದೇ ಭಾಗದಿಂದ ಪವರ್ ಸಪ್ಲೈ ಆಗುತ್ತಿರುವುದರಿಂದ ಅಲ್ಲಿ ಏನಾದರೂ ತೊಂದರೆ ಬಂದರೆ ನಮ್ಮ ಕೊಡಗು ಜಿಲ್ಲೆ ಪೂರ್ತಿ ಕತ್ತಲೆಯಿಂದ ಕೂಡಿರಬೇಕಾದ ಪರಿಸ್ಥಿತಿ ಇದೆ. ಅದಕ್ಕಾಗಿ ಹಾಸನ ಅಥವಾ ಮಂಗಳೂರು ಕಡೆಯಿಂದ ಬದಲಿ ವ್ಯವಸ್ಥೆ ಮಾಡುವ ಮೂಲಕ ಕರೆಂಟ್ ಸಪ್ಲೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಶಾಂತಳ್ಳಿ ಹೋಬಳಿ, ಗರ್ವಾಳೆ ಮುಂತಾದ ಕೆಲವು ಕಡೆಗಳಲ್ಲಿ ಕೂಡ ಮಳೆಯಿಂದ ಕಂಬಗಳು ಬಿದ್ದಿವೆ. ಇದರಿಂದಾಗಿ ಜನಗಳು ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆದರೂ ಇದುವರೆವಗೂ ರಿಪೇರಿ ಕೆಲಸ ಮಾಡಿಲ್ಲ. ಇನ್ನು ಸಾಧಾರಣವಾಗಿ ನಮ್ಮ ಸದಸ್ಯರ ಹಾಗೂ ಜನಗಳ ಕೂಗು ಅಂದರೆ, ನಮಗೆ ವೋಲ್ಟೇಜ್ ಬಹಳ ಕಡಿಮೆ ಹಾಗು ಪವರ್ ಸಪ್ಲೈ ಸರಿಯಾಗಿ ಆಗುತ್ತಿಲ್ಲ ಅಂತ. ಈಗ ನಮ್ಮ ಕೊಡಗು ಜಿಲ್ಲೆಗೆ 24 ಗಂಟೆ ವಿದ್ಯುತ್ ಕೊಟ್ಟಿದ್ದಾರೆ. ನಮಗೆ ಇದರಿಂದ ಪ್ರಯೋಜನವಿಲ್ಲ. ಏಕೆಂದರೆ, ನಮ್ಮಲ್ಲಿ ಹೆಚ್ಚಿನ ಫ್ಯಾಕ್ಟರಿಗಳು ಇಲ್ಲ. ಈ ಬೇಸಿಗೆ ಕಾಲದಲ್ಲಿ ನಾವು ಸ್ಪ್ರಿಂಕ್‌ಲರ್‌ಗೆ ಮಾತ್ರ ಕರೆಂಟ್ ಉಪಯೋಗಿಸುತ್ತೇವೆ. ಹಾಗೂ ಮನೆಗಳಿಗೆ ಮತ್ತು ವಿದ್ಯುತ್ ಅನ್ನು ನಾವು ಉಪಯೋಗಿಸುತ್ತಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ಹೆಚ್ಚಿನ ಗ್ರಾಮಗಳಿಗೆ ಇನ್ನೂ ವಿದ್ಯುತ್ ಪೂರೈಸಲಿಕ್ಕೆ ಕೆ.ಇ.ಬಿ.ಗೆ ಆಗಲಿಲ್ಲ. ನಾವು ಅಲ್ಲಿಯ ಜನಗಳ ಹತ್ತಿರ ಹೋದಾಗ ನಾವು ಸಾಯುವ ಮುಂಚಿತವಾಗಿ ಆದರೂ ನಾವು ಕರೆಂಟ್ ನೋಡಿ ಸಾಯುತ್ತೇವೆ, ಯಾವಾಗ ಕೊಡಿಸುತ್ತೀರಿ? ಅಂತ ನಮ್ಮನ್ನೇ ಪ್ರಶ್ನೆ ಕೇಳುತ್ತಾರೆ. ಈ ವರ್ಷ ಬರುತ್ತದೆ, ಮುಂದಿನ ವರ್ಷ ಬರುತ್ತದೆ ಅಂತ ಅವರಿಗೆ ನಾವು ಉತ್ತರ ಹೇಳಿ ಹೇಳಿ ಸಾಕಾಗಿದೆ, ಈಗ ಭಾಗ್ಯಜ್ಯೋತಿ ಇನ್ನಿತರ ಯಾವ ಯಾವ ಕಾರ್ಯಕ್ರಮಗಳಿವೆ, ಹಾಗೂ ಹರಿಜನ ವಾಡಗಳಿಗೆ ಕರೆಂಟ್ ಒದಗಿಸುವ ಕೆಲಸ ಯಾವುದಿದೆ, ಇದು ಯಾವುದೂ ಸಹ ಇನ್ನೂ ಪೂರ್ಣಗೊಂಡಿಲ್ಲ. ಆದ್ದರಿಂದ ಇಲ್ಲಿ ಏನು ಮಾಡುತ್ತಾರೆಂದು ಹೇಳಿದರೆ, ಎಸ್ಟಿಮೇಟ್ ಮಾಡುವಾಗ ಮಲೆನಾಡು ಪ್ರದೇಶ, ಬಯಲು ಸೀಮೆಯನ್ನು ಒಂದೇ ರೀತಿಯಿಂದ ನೋಡಿ ಮಾಡುತ್ತಿದ್ದಾರೆ. ಅದಕ್ಕೆ ಮಲೆನಾಡು ಪ್ರದೇಶ ಮತ್ತು ಬಯಲು ಸೀಮೆ ವಾತಾವರಣ ಯಾವ ರೀತಿಯಿದೆಯೆಂದು ನೋಡಿಕೊಂಡು ಟಾರ್ಗೆಟ್ ಫಿಕ್ಸ್ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಬೇರೆ ಕಡೆಗಳಲ್ಲಿ ಗ್ರೂಪ್ ಹೌಸಸ್ ಇರುತ್ತವೆ. ನಮ್ಮಲ್ಲಿ ಮನೆಗಳು ದೂರ ದೂರ ಇರುತ್ತವೆ. ಈ ಕಡೆ ಒಂದು ಗ್ರಾಮದಲ್ಲಿ ಒಂದು ಸಾವಿರ ಮನೆ ಎಂದು ಹೇಳಿದರೆ ನಮ್ಮ ಕಡೆಯ ಗ್ರಾಮದಲ್ಲಿ

ಒಂದು ಸಾವಿರ ಮನೆ ಸಿಗುವುದೇ ಇಲ್ಲ. ಅದಕ್ಕೆ ಮಲೆನಾಡು ಪ್ರದೇಶಕ್ಕೆ ಬೇರೆ ರೀತಿಯ. ಒಂದು ಸ್ಕೀಮ್ ಹಾಕಿಕೊಂಡು ಕೆಲಸ ಮಾಡಿದರೆ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಜೊತೆಗೆ ಮೆಟೀರಿಯಲ್ ಜಾಸ್ತಿ ಸಪ್ಲೈ ಮಾಡಿ ಆದಷ್ಟು ಬೇಗ ವಿದ್ಯುತ್ ಪೂರೈಕೆ ಕೆಲಸವನ್ನು ಮುಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಅದೇ ರೀತಿಯಲ್ಲಿ ಕೆಲವು ಕಡೆ ಈ ಲೈನ್ ಮ್ಯಾನ್‌ಗಳು ಜನರ ಬಗ್ಗೆ ಸಾಕಷ್ಟು ಕೋ- ಆಪರೇಷನ್ ಮಾಡುವುದಿಲ್ಲ. ಅವರು ಕರೆದರೆ ಹೋಗುವುದಿಲ್ಲ. ಪ್ರತಿ ತಿಂಗಳು ತಾಲ್ಲೂಕು ಸಮಿತಿ ಮೀಟಿಂಗ್‌ನಲ್ಲಿ ಶಾಸಕರಾದ ನಾವು 20 ಅಂಶದ ಕಾರ್ಯಕ್ರಮವನ್ನು ರಿವ್ಯೂ ಮಾಡುತ್ತೇವೆ. ಅಲ್ಲಿ ನಾನಂತೂ ನಮ್ಮ ತಾಲ್ಲೂಕಿನಲ್ಲಿ ನೋಡುತ್ತಿದ್ದೇನೆ. ಸುಮಾರು ಒಂದು ವರ್ಷದಿಂದೀಚೆಗೆ ಸರಿಯಾಗಿ ಏನು ಅಲ್ಲಿ ವಿದ್ಯುತ್ ಅಧಿಕಾರಿಗಳು ಇರುತ್ತಾರೋ ಅವರು ಮೀಟಿಂಗ್‌ನಲ್ಲಿ ಭಾಗವಹಿಸುವುದಿಲ್ಲ. ಅವರು ಏನಾದರೂ ಬಂದರೆ ಅವರ ಗಮನಕ್ಕೆ ಈ ತೊಂದರೆಗಳನ್ನು ತಂದು ಕೆಲಸ ಕಾರ್ಯಗಳನ್ನು ಮಾಡುವಲ್ಲಿ ಸಾಧ್ಯತೆ ಇದೆಯೆಂದು ನಾನು ಹೇಳುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಕೆಲವು ವಿಚಾರವನ್ನು ನನ್ನ ಜಿಲ್ಲೆಗೆ ಸೀಮಿತಪಟ್ಟಂತೆ ಹೇಳುತ್ತೇನೆ. ಹಿಂದೆ ಮಡಿಕೇರಿ ತಾಲ್ಲೂಕಿನಲ್ಲಿ ಮಾಲ್‌ಧಾರೆಯಲ್ಲಿ ಲಿಫ್ಟ್ ಇರಿಗೇಷನ್ ಆಗಬೇಕೆಂದು ನಾನು ಸರ್ಕಾರಕ್ಕೆ ಬರೆದೆ. ಅದರೆ ಅಧಿಕಾರಿಗಳು ಫೀಸಿಬಲಿಟಿ ಇಲ್ಲವೆಂದು ಹೇಳಿ ಅದನ್ನು ತಳ್ಳಿಹಾಕಿದರು. ನಾನು ಏನು ಹೇಳುತ್ತಿದ್ದೇನೆಂದರೆ, ಅಧಿಕಾರಿಗಲು, ಕುಡಿಯುವನೀರಿಗೆ, ರೈತರಿಗೆ ನೀರು ಕೊಡಲಿಕ್ಕೆ ಫೀಸಿಬಿಲಿಟಿ ಇಲ್ಲವೆಂದು ಹೇಳಬಾರದು, ರೈತರ ಜಮೀನಿಗೆ ಉಣಿಸಲಿಕ್ಕೆ ಹೇಗೆ ಸಾಧ್ಯವೋ ಹಾಗೆ ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಮಳೆ ಜಾಸ್ತಿ ಇರಬಹುದು. ಆದರೆ ಏನಾಗಿದೆ ಎಂದರೆ ಅಲ್ಲಿ ಬೆಟ್ಟ ಗುಡ್ಡ ಪ್ರದೇಶವಾಗಿರುವುದರಿಂದ ನೀರೆಲ್ಲಾ ಹರಿದು ಹೋಗಿ ಅಲ್ಲಿ ರೈತರು ಯಾವಾಗಲೂ ಮಳೆಯ ನೀರನ್ನು ನೆಚ್ಚಿಕೊಂಡು ಇರಬೇಕಾಗುತ್ತದೆ. ಅಲ್ಲಿ ನೀರಿನ ಸೌಲಭ್ಯ ಇಲ್ಲದೆ ಮಳೆ ಬರದಿದ್ದರೆ ರೈತರು ಕಂಗಾಲಾಗುವ ಪರಿಸ್ಥಿತಿ ಇದೆ. ಆದುದರಿಂದ ಕೊಡಗಿನಲ್ಲೇ ಅಲ್ಲ, ಮಲೆನಾಡು ಪ್ರದೇಶದಲ್ಲಿ ಎಲ್ಲೆಲ್ಲಿ ನೀರಿನ ಸೌಕರ್ಯ ಸಿಗುತ್ತದೋ ಎಂಥ ಕಡೆ ಏತ ನೀರಾವರಿ ಮಾಡಿ ರೈತರಿಗೆ ನೀರು ಕೊಡುವ ಸೌಕರ್ಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಹಾಗೆ ಸೋಮವಾರಪೇಟೆಯಲ್ಲಿ 45 ಸಾವಿರ ಎಕರೆಗಳಷ್ಟು ಬಂಜರು ಭೂಮಿ ಇದೆ. ಅಲ್ಲೂ ಕೂಡಾ ನೀರಿನ ಸೌಕರ್ಯ ಇಲ್ಲ. ಹಾಲೂರು ಸಿದ್ದಾಪುರದಲ್ಲಿ ಪಿಕ್ ಅಪ್ ವ್ಯವಸ್ಥೆ ಮಾಡಬೇಕೆಂದು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇದರಿಂದ30 ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಕಡತ್ತೂರು ಏತ ನೀರಾವರಿ ಯೋಜನೆಯನ್ನು ಈ ಸಲ ಸರ್ಕಾರದವರು ಕೈಗೆ ಎತ್ತಿಕೊಳ್ಳಬೇಕಂದು ಒತ್ತಾಯಿಸುತ್ತಿದ್ದೇನೆ. ಮತ್ತು ಕೆರೆಗಳಲ್ಲಿನ ಹೂಳು ಎತ್ತುವ ಕೆಲಸ ಆಗಲೇಬೇಕು. ಕಳೆದ ಮಳೆಗಾಲದಲ್ಲಿ ಎಷ್ಟೋ ಕೆರೆಕಟ್ಟೆಗಳು ಒಡೆದುಹೋಗಿ, ನಾವು ಹಲವಾರು ಬಾರಿ ಅಧಿಕಾರಿಗಳ ಮೂಲಕ ಸರ್ಕಾರದ ಗಮನಕ್ಕೆ ತಂದರೂ ಇನ್ನೂ ರಿಪೇರಿ ಕೆಲಸ ಮಾಡಲೇ ಇಲ್ಲ. ಇನ್ನು ಒಂದು ತಿಂಗಳಾದರೆ ಮಳೆ ಸ್ಟಾರ್ಟ್ ಆಗುತ್ತದೆ. ರೈತರು ತಮ್ಮ ಗದ್ದೆಗಳಲ್ಲಿ ಯಾವ ರೀತಿ ಕೆಲಸ ಮಾಡಬೇಕೆಂದು ತಾವೇ ಯೋಚನೆ ಮಾಡಬೇಕಾಗುತ್ತದೆ. ನಾನು ಮಂತ್ರಿಗಳಲ್ಲಿ ಏನು ಕೇಳುತ್ತೇನೆಂದರೆ, ಆದಷ್ಟು ಬೇಗ ನಾವು ಫ್ಲಡ್ ರಿಲೀಫ್ ನಲ್ಲಿ ಹಣ ಮಂಜೂರು ಮಾಡಿ ರೈತರ ಗದ್ದೆಗಳನ್ನು ಸರಿ ಮಾಡಿಸಿಕೊಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ. ಹಾಗೆಯೇ ಪಿ.ಡಬ್ಲ್ಯೂ.ಡಿ. ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಲೆನಾಡು ಪ್ರದೇಶ ವೆಸ್ಟರ್ನ್ ಘಾಟ್ಸ್ ಏನಿದೆ ಅದನ್ನು ಮತ್ತು ಬಯಲು ಪ್ರದೇಶವನ್ನು ಯಾವಾಗಲೂ ಒಂದೇ ರೀತಿಯಲ್ಲಿ ನೋಡಬಾರದು. ಏಕೆಂದರೆ, ನಮ್ಮ ಭಾಗದ ಪ್ರದೇಶ ಗುಡ್ಡಗಾಡು ಮತ್ತು ಬೆಟ್ಟ ಪ್ರದೇಶದಿಂದ ಕೂಡಿರುತ್ತದೆ. ಕಲ್ಲು ಒಡ್ಡುಗಳು ಜಾಸ್ತಿ ಇರುತ್ತದೆ. ಬಯಲು ಸೀಮೆಗೆ ಕೊಟ್ಟಷ್ಟೇ ಹಣವನ್ನು ನಮ್ಮ ಮಲೆನಾಡು ಪ್ರದೇಶಕ್ಕೆ ಸರ್ಕಾರದವರು ಕೊಟ್ಟರೆ ಅದರಲ್ಲಿ ಕನ್‌ವರ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ. ರಸ್ತೆ ರಿಪೇರಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ನಮ್ಮಲ್ಲಿ ಎಷ್ಟೋ ರಸ್ತೆಗಳನ್ನು ಇನ್ನೂ ಅಭಿವೃದ್ಧಿ ಮಾಡದೆ

ಅವು ತುಂಬಾ ಹೀನಾಯ ಸ್ಥಿತಿಯಲ್ಲಿ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಪ್ರತಿ ವರ್ಷವೂ ಮಲೆನಾಡು ಪ್ರದೇಶಕ್ಕೆ ರಸ್ತೆಗೆ ಸಾಕಷ್ಟು ಹಣ ಖರ್ಚು ಮಾಡುವ ಬದಲಿಗೆ ಸ್ವಲ್ಪ ಸ್ವಲ್ಪ ಭಾಗದ ರಸ್ತೆಯನ್ನು ಸಿಮೆಂಟ್ ಹಾಕಿ ಕೆಲಸ ಮಾಡಿದರೆ 10-15 ವರ್ಷ ರಿಪೇರಿ ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಮತ್ತೆ ಮಲೆನಾಡು ಪ್ರದೇಶದಲ್ಲಿ ರಸ್ತೆ ಬದಿಯಲ್ಲಿ ಸಾಕಷ್ಟು ಮರಗಳು ಇರುತ್ತವೆ. ಮಳೆ ಬಂದಾಗ ಮರಗಳಿಂದ ನೀರು ತೊಟ್ಟಿಕ್ಕಿ ತೊಟ್ಟಿಕ್ಕಿ ರಸ್ತೆ ಹಾಳಾಗುವ ಪರಿಸ್ಥಿತಿ ಜಾಸ್ತಿ . ಆದುದರಿಂದ ರಸ್ತೆ ಬದಿಯಲ್ಲಿ ಏನು ಮರಗಳು ಇರುತ್ತವೆ ಆ ಮರಗಳ ರೆಂಬೆ ತೆಗೆಯುವಂಥ ಒಂದು ವ್ಯವಸ್ಥೆಯನ್ನು ಕೂಡಾ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಅರಣ್ಯ ಇಲಾಖೆಯವರಿಗೂ ಲೋಕೋಪಯೋಗಿ ಇಲಾಖೆಯವರಿಗೂ ಹೊಂದಾಣಿಕೆ ಇಲ್ಲದಿರುವುದರಿಂದ ಇವರು ಅವರು ಮಾಡಲಿ ಎಂದು ಅವರು ಇವರು ಮಾಡಲಿ ಎಂದು ಸುಮ್ಮನಿರುತ್ತಾರೆ. ಒಟ್ಟಿನಲ್ಲಿ ಈ ರಸ್ತೆಗಳು ಮಾತ್ರ ಹೀನಾಯಸ್ಥಿತಿಯಲ್ಲಿ ಉಳಿದುಕೊಂಡಿವೆ. ಮೊದಲು ರಸ್ತೆಗಳ ಬದಿಯಲ್ಲಿ ಚರಂಡಿಯನ್ನು ಮಾಡುತ್ತಿದ್ದರು. ಆದರೆ ಆ ಒಂದು ವ್ಯವಸ್ಥೆಯನ್ನು ಈಗ ಮಾಡುತ್ತಿಲ್ಲ. ಹೀಗಾಗಿ ರಸ್ತೆಗೆ ನೇರವಾಗಿ ನೀರು ನುಗ್ಗಿ ರಸ್ತೆಗಳು ಪೂರ್ಣ ಕೆಟ್ಟು ಹೋಗಿವೆ. ಇದಕ್ಕೆ ಕಾರಣ ಏನೆಂದರೆ ಹಿಂದೆ ಗ್ಯಾಂಗ್‌ಕೂಲಿಗಳು ಎಂದು ಕೆಲಸಕ್ಕಾಗಿ ತೆಗೆದುಕೊಳ್ಳುತ್ತಾ ಇದ್ದರು. ಈಗ ಸರ್ಕಾರದ ಒಂದು ನೀತಿಯ ಪ್ರಕಾರ ಅಂಥವರನ್ನು ನೇಮಕ ಮಾಡಿಕೊಳ್ಳುತ್ತಾ ಇಲ್ಲ. ನಮ್ಮ ಏರಿಯಾದಲ್ಲಿ ಪ್ಲಾಂಟೇಷನ್‌ಗೆ ಹೋಗುವ ಜನರಿಂದಾಗಿ ಬೇರೆ ಕೂಲಿಗಳು ಸಿಗುತ್ತಾ ಇಲ್ಲ. ಹೀಗಾಗಿ ಗ್ಯಾಂಗ್ ಕೂಲಿಗಳನ್ನು ನೇಮಿಸಿಕೊಳ್ಳಲು ಸರ್ಕಾರದವರು ಇನ್ನಾದರೂ ಪರ್ಮಿಷನ್ ಕೊಡಬೇಕು. ನಮ್ಮ ಕೊಡಗು ಜಿಲ್ಲೆಯಲ್ಲಿ ಸಾಕಷ್ಟು ವೀಕ್ ಆದ ನ್ಯಾರೋ ಸೇತುವೆಗಳಿವೆ. ಇವುಗಳನ್ನು 60-70ವರ್ಷಗಳ ಹಿಂದೆ ಬ್ರಿಟಿಷರು ಕಟ್ಟಿದಂಥ ಬ್ರಿಡ್ಜಸ್‌ಗಳು. ಆದರೆ ಈಗ ಅವುಗಳು ಹಳೆಯದಾಗಿ ಕ್ರಾಕ್ಸ್ ಬಂದಿದ್ದು ಅದನ್ನು ರಿಪೇರಿ ಮಾಡುವ ಕೆಲಸವನ್ನು ಸಹ ಮಾಡುತ್ತಾ ಇಲ್ಲ. ಆದ್ದರಿಂದ ಈ ಬ್ರಿಡ್ಜ್‌ಗಳನ್ನು ಕನ್‌ವರ್ಟ್ ಮಾಡುವುದಕ್ಕೆ 60 ಲಕ್ಷ ರೂಪಾಯಿಗಳ ಸ್ಪೆಷಲ್ ಗ್ರ್ಯಾಂಟ್ ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಂಗಡ ಪತ್ರದಲ್ಲಿ ವಸತಿಗಾಗಿ ಇಷ್ಟು ಲಕ್ಷಗಳು ಎಂದು ಕೊಟ್ಟಿದ್ದೀರಿ. ಹಾಗೆಯೇ ಆಸ್ಪತ್ರೆ ಕಟ್ಟಡಗಳಿಗಾಗಿ 172.29 ಎಂದು ಕೊಟ್ಟಿದ್ದೀರಿ. ಇದು ನಮ್ಮ ಜಿಲ್ಲೆಯ ಕಟ್ಟಡಗಳಿಗೆ ಸಾಕಾಗುವುದಿಲ್ಲ. ಈಗ ಇರುವ ಆಸ್ಪತ್ರೆಯ ಕಟ್ಟಡಗಳು ಮಳೆಯಿಂದಾಗಿ ಬಿದ್ದು ಹೋಗುವ ಪರಿಸ್ಥಿತಿಯಲ್ಲಿವೆ. ಈ ಕಟ್ಟಡಗಳು ಸುಮಾರು60-70 ವರ್ಷಗಳ ಹಿಂದೆ ಕಟ್ಟಿರತಕ್ಕಂಥವುಗಳಾಗಿವೆ. ನಮ್ಮಲ್ಲಿ ಹೊಸ ಕಟ್ಟಡಗಳು ಯಾವೂ ಇಲ್ಲ. ತಾವುಗಳು ಅವುಗಳಿಗೆ ಮೈಂಟೆನೆನ್ಸ್ ಗ್ರ್ಯಾಂಟ್ ಕೊಡುತ್ತಾ ಇದ್ದೀರಿ. 200-300ರೂಗಳ ಗ್ರ್ಯಾಂಟ್ ಕೊಟ್ಟರೆ ಸಾಕಾಗುವುದಿಲ್ಲ. ಅದು ಸುಣ್ಣ ಬಣ್ಣ ಬಳಿಯುವುದಕ್ಕೂ ಸಾಕಾಗುವುದಿಲ್ಲ. ಆದ್ದರಿಂದ ಆಸ್ಪತ್ರೆಗಳು ಮತ್ತು ಶಾಲಾ ಕಟ್ಟಡಗಳಿಗೆ ಜಾಸ್ತಿ ಹಣವನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಶು ಸಂಗೋಪನಾ ಇಲಾಖೆಗೆ ತುಂಬಾ ಕಡಿಮೆ ಹಣವನ್ನು ಇಟ್ಟಿದ್ದೀರಿ. ಅದಕ್ಕೆ ಸೂಕ್ತ ರೀತಿಯಲ್ಲಿ ಕಟ್ಟಡಗಳೂ ಮತ್ತು ಸಿಬ್ಬಂದಿವರ್ಗಗಳೂ ಇಲ್ಲ. ಮತ್ತು ಅವರಿಗೆ ವಸತಿ ಸೌಕರ್ಯವನ್ನು ಕೂಡ ಒದಗಿಸಿಲ್ಲ. ಆದ್ದರಿಂದ ಅದಕ್ಕೂ ಜಾಸ್ತಿ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಬೆಂಗಳೂರು ಮೈಸೂರು, ಮಂಗಳೂರು ರಸ್ತೆ, ಮತ್ತು ಬೆಂಗಳೂರು ಮೈಸೂರು ಕಣ್ಣಾನೂರು ರಸ್ತೆ ಇದನ್ನು ಹೈವೇ ಮಾಡಲು ಸರಕಾರದವರು ಶಿಫಾರಸ್ಸು ಮಾಡಬೇಕೆಂದು ಕೋಳಿಕೊಳ್ಳುತ್ತೇನೆ. ನಮ್ಮಲ್ಲಿ ಹೆಚ್ಚಿನ ಮಳೆ ಬೀಳುವ ಕಾರಣದಿಂದಾಗಿ ವಿರಾಜಪೇಟೆಯಿಂದ ಮಾರ್ಕೊಳಿಗೆ ಹೋಗುವ ರಸ್ತೆ 28 ಕಿ.ಮೀ. ಉದ್ದ ರಸ್ತೆಯು ಇದೆ. ಇದರ ಬಗ್ಗೆ ನಾನು ಸದನದಲ್ಲಿ 2-3 ಭಾರಿ ಪ್ರಸ್ತಾಪ ಮಾಡಿದ್ದೇನೆ. ಈ ಸಾರಿಯಾದರೂ ಅದನ್ನು ಬಾರ್ಡರ್ ಡೆವಲಪ್‌ಮೆಂಟ್‌ನ ಹಣದಿಂದ ರಿಪೇರಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ರಸ್ತೆಗಾಗಿ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 15 ವರ್ಷಗಳಿಂದ ಆ ರಸ್ತೆಗಳು ಯಾವುದೇ ರಿಪೇರಿ ಕೆಲಸವನ್ನು ಕಂಡಿಲ್ಲ. ಆದ್ದರಿಂದ ಈ ವರ್ಷದಲ್ಲಿ ಕನಿಷ್ಟ 15 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಸರ್ಕಾರದವರು ಒಂದು ಆದೇಶವನ್ನು ಹೊರಡಿಸಿದ್ದು ಅದು ಲೋಕೋಪಯೋಗಿ ಇಲಾಖೆಗೆ ಅನ್ವಯವಾಗುತ್ತದೆ.

ಇರಿಗೇಷನ್ ಇಲಾಖೆಗೆ ಅನ್ವಯವಾಗುತ್ತಿಲ್ಲ. ಇದರ ಪ್ರಕಾರ ಯಾವುದೇ ಕಂಟ್ರಾಕ್ಟರ್ ಕೆಲಸಕ್ಕೆ ಮುಂದೆ ಬಂದರೆ, ಸ್ಟೀಲ್ ಸಿಮೆಂಟ್ ಮುಂತಾದ ಮೆಟೀರಿಯಲ್ಸ್‌ನ್ನು ಅವರೇ ಪರ್‌ಚೇಸ್ ಮಾಡಬೇಕೆಂದು ಇದೆ. ಮೊದಲು ಡಿಪಾರ್ಟ್‌ಮೆಂಟ್‌ನವರು ಪರ್‌ಚೇಸ್ ಮಾಡಿಕೊಡುತ್ತಿದ್ದರು. ಇದರಿಂದ ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್‌ಗಳಿಗೆ ಮಾತ್ರ ಅನುಕೂಲವಾಗುತ್ತದೆ. ಸಣ್ಣ ಕಂಟ್ರಾಕ್ಟರ್ಸ್ ಇನ್ನು ಮುಂದೆ ಇಂಥ ಕೆಲವನ್ನು ಮಾಡಲು ಬರುವುದಿಲ್ಲ. ಆದ್ದರಿಂದ ಅನಾನುಕೂಲಗಳಿಂದ ಇರುವ ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ ಮಾನ್ಯ ಶಿವಮೂರ್ತಿಯವರು ಇಲಾಖೆಯಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂಬ ಉದ್ದೇಶವುಳ್ಳವರಾಗಿದ್ದಾರೆ. ಆದರೆ ಅವರ ಇಲಾಖೆಗೆ ಕೊಟ್ಟಿರುವ ಹಣ ಏನೇನೂ ಸಾಲದು. ಇಷ್ಟು ಹಣದಿಂದ ಕೇವಲ ನಮ್ಮ ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬಹುದು. ನಮ್ಮ ಜಿಲ್ಲೆಯನ್ನು ಟೂರಿಸ್ಟ್ ಸೆಂಟರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ತಮ್ಮ ಇಲಾಖೆಯ ವತಿಯಿಂದ ಏನು ಪ್ರವಾಸಿ ಧಾಮಗಳಲ್ಲಿ ಹೋಟೆಲ್‌ಗಳನ್ನು ಪ್ರಾರಂಭ ಮಾಡುತ್ತಿದ್ದೀರಿ, ಅದರ ಪ್ರಾಪರ್ ಮೈಂಟೆನೆನ್ಸ್ ಬಗ್ಗೆ ಗಮನ ಕೊಡಬೇಕು. ಜೊತೆಗೆ ಅಲ್ಲಿ ಒಳ್ಳೆಯ ಆಹಾರವಸ್ತುಗಳನ್ನು ಸೂಕ್ತ ಬೆಲೆಯಲ್ಲಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವೆಂದರೆ ಕಟ್ಟಡ ಮತ್ತು ಸೇತುವೆಗಳು ಕಟ್ಟಿದ ಕೆಲವೇ ವರ್ಷಗಳಲ್ಲಿ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಮಳೆಗೆ ಮುಂಚೆ ಕಟ್ಟಿದರೆ ಇನ್ನಾರು ತಿಂಗಳಲ್ಲಿ ಮಳೆ ಬಂದು ಬಿದ್ದು ಹೋಗುವ ಪರಿಸ್ಥಿತಿ ಇರುತ್ತದೆ. ಇದಕ್ಕೆ ಕಾರಣವೆಂದರೆ ತುಂಬ ಕಳಪೆ ದರ್ಜೆ ಸಾಮಾನುಗಳನ್ನು ಬಳಸಿರುತ್ತಾರೆ. ಅದಕ್ಕಾಗಿ ಯಾರು ಅದನ್ನು ಕಟ್ಟಿರುತ್ತಾರೆ ಅವರಿಗೆ ಅದರ ಗ್ಯಾರಂಟಿಯನ್ನು ಫಿಕ್ಸ್ ಮಾಡಬೇಕು. ಅವೇನಾದರೂ ಬಿದ್ದುಹೋದರೆ ಇಂಜಿನಿಯರ್‌ಗಳು ಮತ್ತು ಯಾರು ಕೆಲಸ ಮಾಡಿಸಿರುತ್ತಾರೆ. ಅವರೇ ಅದರ ಖರ್ಚನ್ನು ತುಂಬಬೇಕೆನ್ನುವ ಕಾನೂನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಡಾ. ಡಿ. ಬಿ. ಗಂಗಪ್ಪ(ಹೊನ್ನಾಳಿ):- ಮಾನ್ಯ ಅಧ್ಯಕ್ಷಿಣಿಯವರೇ, ಈ ವರ್ಷದ ನೀರಾವರಿ, ಲೋಕೋಪಯೋಗಿ ಪ್ರವಾಸೋದ್ಯಮ ಇಲಾಖೆಗಳ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡಲು ಇಷ್ಟಪಡುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ನನ್ನ ಜಿಲ್ಲೆ ಮತ್ತು ನನ್ನ ತಾಲ್ಲೂಕಿನ ಜನತೆಯ ಪರವಾಗಿ ನಮ್ಮ ನಾಯಕರಾದ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ನೀರಾವರಿ ಸಚಿವರನ್ನು ಅಭಿನಂದಿಸಬೇಕಾಗುತ್ತದೆ. ಕಾರಣ ಇಷ್ಟೇ, ನಮ್ಮ ತಾಲ್ಲೂಕು ಬಯಲು ಸೀಮೆಯಾಗಿರುತ್ತದೆ. ಅಲ್ಲಿ ಪ್ರತಿವರ್ಷ ಬರಗಾಲ ಬರುತ್ತಿತ್ತು. ಈ ಕಾರಣದಿಂದ ನಮ್ಮ ಬಹುದಿನಗಳ ಬೇಡಿಕೆಯಾದ ಅಪ್ಪರ್ ತುಂಗಾ ಯೋಜನೆಗೆ ನಮ್ಮ ನಾಯಕರು ಅನುಮೋದನೆ ಕೊಟ್ಟು, ಈ ವರ್ಷದ ಬಡ್‌ಜೆಟ್‌ನಲ್ಲಿ 50ಕೋಟಿ ಕೊಟ್ಟಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದ ವತಿಯಿಂದ ಆ ಯೋಜನೆಯ ಸರ್ವೆ ಕಾರ್ಯ ಭರದಿಂದ ನಡೆಯುತ್ತಿದೆ. ಈ ಕೆಲಸವನ್ನು ಇನ್ನೂ ತೀವ್ರಗತಿಯಲ್ಲಿ ನಡೆಸಬೇಕು. ಜೊತೆಗೆ ಬೇಕಾದರೆ ಇನ್ನೊಂದು ಚೀಫ್ ಇಂಜಿನಿಯರ್ ಕಛೇರಿಯನ್ನು ಹಾಗೂ ಇತರೇ ಇಲಾಖೆಗಳನ್ನು ಅಲ್ಲಿ ಸ್ಥಾಪಿಸಿ ಆದಷ್ಟು ತೀವ್ರವಾಗಿ ಆ ಕೆಲಸವನ್ನು ಮುಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇರೀತಿ ನಮ್ಮ ಭಾಗದ ರೈತರ ಇನ್ನೊಂದು ಬೇಡಿಕೆಯಾದ ಭದ್ರಾ ಯೋಜನೆಯಲ್ಲಿ ಬರುವ ಬಲದಂಡೆ ಕಾಲುವೆ ಏನು ಬ್ರೀಜ್ ಆಗಿದೆ, ಇದು ಹಲವಾರು ಸಲ ಈ ಸದನದಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಇದರಿಂದ ನಮ್ಮ ಜಿಲ್ಲೆಯ ಹಾಗೂ ಚಿತ್ರದುರ್ಗ ಜಿಲ್ಲೆಯ ನಾಲ್ಕಾರು ತಾಲ್ಲೂಕಿನ ರೈತರಿಗೆ ಬಹಳ ತೊಂದರೆಯಾಗಿದೆ. ಅದಕ್ಕಾಗಿ ನಮ್ಮ ಸರ್ಕಾರ ಅದಕ್ಕೆ ಪರ್ಯಾಯ ಬೈಪಾಸ್ ಕೆನಾಲನ್ನು ಮಾಡಿ ತೊಂದರೆ ನಿವಾರಿಸಬೇಕು. ರೈತರ ಬೇಡಿಕೆಯಾದ ಬ್ರೀಜ್ ಆಗಿರುವ ಕೆನಾಲ್‌ನ ರಿಪೇರಿ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾರಣ ಇಷ್ಟೇ, ರೈತರು ಅಡಿಕೆ ತೆಂಗಿನ ತೋಟದ ಜೊತೆಗೆ ಕಬ್ಬು,

ಭತ್ತ ಬೆಳೆಯುತ್ತಿದ್ದಾರೆ. ಈ ಒಂದು ಕೆನಾಲನ್ನು ಸರಿಪಡಿಸದಿದ್ದರೆ ಈಗ ಅಲ್ಲಿರುವ ನಾಲ್ಕೂ ಶುಗರ್ ಫ್ಯಾಕ್ಟರಿಗಳೂ ಹಾಗೂ ಸಾವಿರಾರು ರೈಸ್‌ಮಿಲ್‌ಗಳ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ. ಒಂದು ಬೆಳೆ ತಪ್ಪಿಹೋದರೆ ರೈತರಿಗೆ ನೂರಾರು ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಜೊತೆಗೆ ದನಕರುಗಳಿಗೆ ಮೇವಿನ ತೊಂದರೆ ಉಂಟಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಬಲದಂಡೆ ನಾಲೆಯ ರಿಪೇರಿ ಕಾರ್ಯವನ್ನು ನಮ್ಮ ಸರ್ಕಾರದವರು ಆದಷ್ಟು ಜಾಗ್ರತೆ ಕೈಗೆತ್ತಿಕೊಂಡು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮಲ್ಲಿ ಭದ್ರಾ ಡ್ಯಾಂ ಬಂದು 30 ವರ್ಷಗಳಾಯಿತು, ಅದರಿಂದ ರೈತರು ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹಿಂದೆ ಸರಿಯಾಗಿ ಮಳೆ ಬೆಳೆ ಬರುತ್ತಿತ್ತು, ಯಾರೂ ಅಷ್ಟಾಗಿ ಸರಿಯಾಗಿ ನಿಗಾ ವಹಿಸಿರಲಿಲ್ಲ. ಆ ಭಾಗದಲ್ಲಿ ಬರತಕ್ಕ ರೈತರ ಹತ್ತಿರ ಹೋದಾಗ ಅವರು ನಮ್ಮ ಹತ್ತಿರ ಹೆಚ್ಚು ಡಿಸ್ಟ್ರಿಬ್ಯೂಟರ್‌ಗಳನ್ನಿಡಬೇಕು, ಕೆನಾಲನ್ನು ಇನ್ನೂ ಮುಂದುವರಿಸಬೇಕು ಜೊತೆಗೆ ಕೆಲವು ಪಿಕ್ ಅಪ್‌ಗಳನ್ನು ಕಟ್ಟಬೇಕೆಂದು ಕೇಳುತ್ತಿರುತ್ತಾರೆ. ಈ ಪಿಕ್‌ಅಪ್‌ಗಳನ್ನು ಕಟ್ಟಿಸಿ ಕೆನಾಲ್‌ನ್ನು ಮುಂದುವರಿಸುವುದರಿಂದ ಇನ್ನೂ ಹೆಚ್ಚಿನ ಭೂಮಿಯನ್ನು ನೀರಾವರಿಗೆ ಒಳಪಡಿಸಬಹುದು. ಅದೇರೀತಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ 10 ಟಿಎಂಸಿ ನೀರನ್ನು 2000ಇಸವಿಯೊಳಗೆ ಉಪಯೋಗಿಸಬೇಕಾಗಿದೆ. ಆ ಕಾರಣದಿಂದ ನಮ್ಮ ತಾಲ್ಲೂಕಿನಲ್ಲಿ ಸುಮಾರು ಜಾಗಗಳಲ್ಲಿ ಪಿಕ್‌ಅಪ್‌ಗಳನ್ನು ಮಾಡಬಹುದು ಡಿಸ್ಟ್ರಿಬ್ಯೂಟರ್ಸ್‌ಗಳನ್ನು ಮಾಡಬಹುದು. ಜೊತೆಗೆ ಈಗಿನ ಕೆನಾಲನ್ನು ಮುಂದುವರಿಸಬಹುದು ನಮ್ಮಲ್ಲಿ ಎರಹಳ್ಳಿ ಹತ್ತಿರ ಒಂದು ಪಿಕ್‌ಅಪ್ ಮಾಡಿದರೆ ಸುಮಾರು ನೂರಾರು ಎಕರೆ ಭಾಮಿಗೆ ನೀರಾವರಿಯಾಗುತ್ತದೆ. ಆದರೆ ಸಂಬಂಧಪಟ್ಟ ಇಲಾಖೆಯವರು ಯಾವುದೇ ಕ್ರಮ ತೆಗೆದುಕೊಳ್ಳದೆ ಆ ರೈತರ ಬಹು ಭಾಗದ ಭೂಮಿ ಹಾಗೆಯೇ ಉಳಿದಿದೆ. ಆದ್ದರಿಂದ ಎಲ್ಲೇ ಆಗಲಿ, ರೈತರು ಕೇಳುವ ಅಡಿಷಿನಲ್ ಡಿಸ್ಟ್ರಿಬ್ಯೂಟರ್‌ಗಳನ್ನಿಟ್ಟು ಈಗಿನ ಕೆನಾಲನ್ನು ಮುಂದುವರಿಸುವುದರಿಂದ ಮತ್ತು ಪಿಕ್‌ಅಪ್‌ಗಳನ್ನು ಮಾಡುವುದರಿಂದ ಪ್ರತಿ ತಾಲ್ಲೂಕಿನಲ್ಲಿ ಸಾವಿರಾರು ಎಕರೆಯನ್ನು ನೀರಾವರಿಗೆ ಒಳಪಡಿಸಬಹುದು. ಹಾಗೆಯೇ ಭದ್ರಾ ದಂಡೆಗೆ ಸಂಬಂಧಿಸಿದಂತೆ ಕೆನಾಲ್‌ಗಳನ್ನು ಎನ್‌ಡಬ್ಲ್ಯೂಪಿ ಸ್ಕೀಮ್‌ನಲ್ಲಿ ಆಧುನಿಕಗೊಳಿಸಿ ಹೆಚ್ಚು ನೀರಾವರಿ ಮಾಡುತ್ತಿದ್ದಾರೆ. ಹಾಗೆಯೇ ಗಾಜನೂರು ಜಲಾಶಯ ಇದೆ. ಅದು ತುಂಗಾ ನೀರಾವರಿ ಸ್ಕೀಮ್‌ನಲ್ಲಿ ಬರುತ್ತದೆ. ಅದನ್ನೂ ಸಹಾ ಎನ್.ಡಬ್ಲ್ಯೂ.ಪಿ. ಸ್ಕೀಮ್‌ನಲ್ಲಿ ಅಳವಡಿಸಿ ರೈತರಿಗೆ ಇನ್ನೂ ಹೆಚ್ಚಿನ ಒಂದು ಅನುಕೂಲವನ್ನು ಮಾಡಿಕೊಡಬೇಕು. ಆ ಎನ್.ಡಬ್ಲ್ಯೂ.ಪಿ. ಸ್ಕೀಮನ್ನು ಅಳವಡಿಸುವುದರಿಂದ ಇನ್ನೂ ಹೆಚ್ಚಿನ ನೀರನ್ನು ನಾವು ಉಳಿಸಬಹುದು. ಈಗ ಬಹಳಷ್ಟು ನೀರು ವೇಸ್ಟ್ ಆಗಿ ಹರಿದು ಹೋಗುತ್ತಿದೆ. ಅದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಆ ಒಂದು ತುಂಗಾ ಯೋಜನೆಯನ್ನು ಸಹಾ ಎನ್.ಡಬ್ಲ್ಯೂ.ಪಿ.ಸ್ಕೀಮ್‌ನಲ್ಲಿ ಅಳವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ಮೈನರ್ ಇರಿಗೇಷನ್ ಬಗ್ಗೆ ಹೇಳಬೇಕೆಂದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ಆರೇಳು ಲಿಫ್ಟ್ ಇರಿಗೇಷನ್ ಯೋಜನೆಗಳಿವೆ. ಹಿಂದೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ವೀರೇಂದ್ರ ಪಾಟೀಲರ ಮಿನಿಸ್ಟ್ರಿಯಲ್ಲಿ ಪರಮೇಶ್ವರಪ್ಪ ಎಂಬುವರು ಪಿ.ಡಬ್ಲ್ಯೂ.ಡಿ ಮಿನಿಸ್ಟರ್ ಆಗಿದ್ದರು. ಆ ಟೈಮ್‌ನಲ್ಲಿ ತುಂಗಭದ್ರಾ ನದಿ ನೀರು ನಮ್ಮ ತಾಲ್ಲೂಕಿನಲ್ಲಿ 40 ಕಿಲೋಮೀಟರ್‌ವರೆಗೆ ಹರಿದು ಹೋಗುವುದು. ಆ ನಲವತ್ತು ಕಿಲೋ ಮೀಟರ್ ಹರಿದು ಹೋಗುವ ಕಡೆ 8-10 ಲಿಫ್ಟ್ ಇರಿಗೇಷನನ್ನು ಮಾಡಿದ್ದಾರೆ. ಅವುಗಳು ಸುಮಾರು 20-25ವರ್ಷಗಳ ಹಿಂದೆ ಆದವು. ಒಂದೊಂದು ಲಿಫ್ಟ್ ಇರಗೇಷನ್‌ನಲ್ಲಿ ಐದುನೂರು ಎಕರೆ ಸಾವಿರ ಎಕರೆ ಒಂದೂವರೆ ಸಾವಿರ ಎಕರೆಗೆ ನೀರಾವರಿ ಆಗುತ್ತಿತ್ತು. ಆದರೆ ಈಗ ಏನಾಗಿದೆ ಎಂದರೆ ಆ ಒಂದು ಲಿಫ್ಟ್ ಇರಿಗೇಷನ್‌ನಲ್ಲಿ ಅಳವಡಿಸಿರತಕ್ಕಂಥ ಪಂಪ್‌ಸೆಟ್ ಮೆಷಿನ್ಸ್ ಏನು ಇವೆಯೆಲ್ಲಾ ಅವೆಲ್ಲಾ ಸುಮಾರಾಗಿ ಹಳೆಯವಾಗಿವೆ. ಅವು ಯಾವುವೂ ಸರಿಯಾಗಿ ನಡೆಯುತ್ತಿಲ್ಲ. ಈ ಒಂದು ಲಿಫ್ಟ್ ಇರಿಗೇಷನ್‌ನಲ್ಲಿ ಸುಮಾರು ಐನೂರು ಎಕರೆ ನೀರಾವರಿಯಾಗಬೇಕು ಎಂದು ಹೇಳಿದರೆ ಈಗ ಅಲ್ಲಿ ಕೇವಲ ಒಂದು ನೂರು ಎಕರೆಗೆ ಅಥವಾ ಐವತ್ತು ಎಕರೆಗೆ ನೀರಾವರಿಯಾಗುತ್ತಿದೆ. ಈ

8 ಅಥವಾ 10 ಲಿಫ್ಟ್ ಇರಿಗೇಷನ್ ಸರಿಯಾಗಿ ಕೆಲಸ ಮಾಡಿದರೆ ನಮ್ಮ ತಾಲ್ಲೂಕಿನಲ್ಲಿ ಐದರಿಂದ ಆರು ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಈಗ ಸುಮಾರು ಒಂದು ಸಾವಿರ ಎಕರೆಗೆ ಮಾತ್ರ ನೀರಾವರಿಯಾಗುವುದರಿಂದ ಹಿಂದೆ ಅಳವಡಿಸಿದಂಥ ಹಳೆಯ ಮೆಷಿನ್‌ಗಳನ್ನು ಬದಲಾವಣೆಮಾಡಬೇಕು ಇಲ್ಲವೇ ಹಳೆಯ ಮೆಷಿನ್‌ಗಳನ್ನು ಸರಿಪಡಿಸಬೇಕು. ಅದೇ ರೀತಿ ಕೆಲವೊಂದು ಸಾರಿ ಈ ಯಾವುದಾದರೂ ಪಂಪ್‌ಸೆಟ್ ಕೆಟ್ಟಾಗ ರೈತರು ಬೆಳೆಯನ್ನು ಹಾಕಿರುತ್ತಾರೆ. ಬೆಳೆಯನ್ನು ಬೇಸಿಗೆಯಲ್ಲಿ ಹಾಕಿರುತ್ತಾರೆ. ಆಗ ಪಂಪ್‌ಸೆಟ್ ಕೆಡುತ್ತದೆ. ಅದನ್ನು ರಿಪೇರಿ ಮಾಡಿಸಬೇಕು ಎಂದು ಹೇಳಿ ಸುಮಾರು 15ದಿವಸಗಟ್ಟಲೆ ತೆಗೆದುಕೊಂಡು ಹೋಗಿಬಿಡುತ್ತಾರೆ. ಆಗ ಅಡಿಷಿನಲ್ ಒಂದು ಪಂಪ್‌ಸೆಟ್ ಅಲ್ಲಿ ಇಟ್ಟರೆ ಆ ರೈತರುಗಳಿಗೆ ಅನುಕೂಲವಾಗುತ್ತದೆ. ರೈತರ ಬೆಳೆಗೆ ನೀರು ಕೊಡಬೇಕಾಗುತ್ತದೆ. ಪಂಪ್‌ಸೆಟ್ ಕೆಟ್ಟಿದೆ ಎಂದು ಹದಿನೈದು ದಿವಸವಾದರೂ ರಿಪೇರಿಗೆ ತೆಗೆದುಕೊಂಡು ಹೋಗುತ್ತಾರೆ. ಕೊಡಲೇ ರಿಪೇರಿ ಮಾಡಿಸಿ ಅದನ್ನು ತರುವುದಿಲ್ಲ. ರೈತರು ಬಂದು ಗಲಾಟೆ ಮಾಡುತ್ತಾರೆ. ಆದ್ದರಿಂದ ಪ್ರತಿಯೊಂದು ಲಿಫ್ಟ್ ಇರಿಗೇಷನ್‌ನಲ್ಲೂ ಸಹಾ ಅದಕ್ಕೆ ಅಡಿಷನಲ್ಲಾಗಿ ಒಂದು ಪಂಪ್‌ಸೆಟ್ಟನ್ನು ಅಲ್ಲಿ ಇಟ್ಟರೆ ರೈತರುಗಳಿಗೆ ಅನುಕೂಲವಾಗುತ್ತದೆ. ಜೊತೆಗೆ ಅಲ್ಲಿ ಸಂಬಂಧಪಟ್ಟ ಇಂಜಿನಿಯರುಗಳು ಸರಿಯಾಗಿ ಹೋಗುತ್ತಿಲ್ಲ. ಆ ಕೆನಾಲ್‌ಗಳ ಸಿಲ್ಟ್ ತೆಗೆಸುತ್ತಿಲ್ಲ. ಆದ್ದರಿಂದ ಹೆಚ್ಚಿನ ನೀರು ಕೆನಾಲ್‌ಗಳಲ್ಲಿ ಹರಿಯುವುದಕ್ಕಾಗದೆ ತೊಂದರೆಯಾಗಿದೆ. ಉದಾಹರಣೆಗೆ ಒಂದನ್ನು ಹೇಳುತ್ತೇನೆ. ಕೋಟೆಮಲ್ಲೂರು ಲಿಫ್ಟ್ ಇರಿಗೇಷನ್ ಇದೆ. ಅಲ್ಲಿ ಎರಡು ಸಾವಿರ ಎಕರೆ ನೀರಾವರಿಯಾಗುತ್ತದೆ. ಆದರೆ ಅಲ್ಲಿ ಸುಮಾರು ಐನೂರು ಎಕರೆಯಷ್ಟು ಮಾತ್ರ ನೀರಾವರಿಯಾಗುತ್ತದೆ. ಅಲ್ಲಿ ಸ್ವಲ್ಪ ಬಯಲು ಸೀಮೆ ಇದೆ. ಅಲ್ಲಿ ಬರಗಾಲ ಬರುವುದರಿಂದ ಅವರು ಅದರ ಮೇಲೆ ಡಿಪೆಂಡ್ ಆಗಿರುವುದರಿಂದ ಈ ಒಂದು ತೊಂದರೆಗೆ ಅವಕಾಶವನ್ನು ಕೊಡಬಾರದೆಂದು ನಾನು ನಮ್ಮ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮಲ್ಲಿ ಸುಮಾರು ಲಿಫ್ಟ್ ಇರಿಗೇಷನನ್ನು ಮಾಡಬಹುದು. ಈಗ ನನಗೆ ಗೊತ್ತಿರುವ ಹಾಗೆ ದೇವರ ಹೊನ್ನಾಳಿ ಮತ್ತು ಬಳ್ಳೇಶ್ವರದ ಹತ್ತಿರ.. ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರ್ವೆ ಕಾರ್ಯ ಪ್ರಾರಂಭವಾಗಿದೆ. ಈ ಕೆಲಸವನ್ನು ಸಹಾ ತೀವ್ರ ರೀತಿಯಲ್ಲಿ ಕೈಕಗೊಂಡು ಲಿಫ್ಟ್ ಇರಿಗೇಷನನ್ನು ಅಳವಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಪಿಕಪ್ ಇದೆ. ಅಲ್ಲಿ 365 ದಿವಸವೂ ನೀರಿರುತ್ತದೆ. ಸಂಬಂಧಪಟ್ಟ ಇಂಜಿನಿಯುರು ಯಾರು ಸಹಾ ಆ ಪಿಕಪ್ ಹತ್ತಿರ ಹೋಗುವುದಿಲ್ಲ. ಆ ಹಳ್ಳದ 365 ದಿವಸ ನೀರು ಇರುತ್ತದೆ. ಸ್ವಲ್ಪ ಮಲೆನಾಡು ಭಾಗವಾಗುವುದರಿಂದ ಅಲ್ಲಿ ಒಂದು ಕೆರೆಯನ್ನು ಕಟ್ಟಿರುವುದರಿಂದ ಸೀಪೇಜ್ ವಾಟರ್ ಬಂದು ಸುಮಾರು ನೀರು ಹರಿದು ಹೋಗುತ್ತಿದೆ. ನಾನು ಮೊನ್ನೆ ತಾನೆ ಅಲ್ಲಿಗೆ ಹೋಗಿದ್ದೆ. ಏನೋ ಇಲಾಖೆಯವರಿಗೆ ಕೇಳಿಕೊಂಡು ಏನೋ ಸ್ವಲ್ಪ ಹಣವನ್ನು ಕೊಟ್ಟಾಗ ನೀರು ಬಿಟ್ಟರು. ಈಗ ಬೇಸಿಗೆಯಲ್ಲೂ ಸಹಾ ಈ ಪಿಕಪ್‌ನಿಂದ ಸುಮಾರು ಮೂರು ನೂರು ಎಕರೆ ನೀರಾವರಿಯಾಗುತ್ತದೆ. ನಿಮ್ಮ ಇಲಾಖೆಯವರಿಗೆ ನಾನು ಕೇಳಿದೆ, ಈ ಕೊರಚನಹಳ್ಳಿ ಪಿಕಪ್ ನಿಮಗೆ ಸೇರುತ್ತದೋ ಅಥವಾ ಇನ್ಯಾರಿಗೆ ಸೇರುತ್ತದೆ ಎಂದು ಕೇಳಿದರೆ ಅವರಿಗೆ ಅದು ಗೊತ್ತೇ ಇಲ್ಲ. ಆಮೇಲೆ ಪುನ: ರೆಕಾರ್ಡ್ ತೆಗೆದುನೋಡಿದಾಗ ಅದು ಮೈನರ್ ಇರಿಗೇಷನ್‌ಗೆ ಸೇರುತ್ತದೆ ಎಂದು ಗೊತ್ತಾಗಿ ಅದನ್ನು ರಿಪೇರಿ ಮಾಡಿಸಿದ್ದಕ್ಕೆ ಈಗ ರೈತರು ಮೂರು ನೂರು ಎಕರೆವರೆಗೆ ನೀರಾವರಿ ಮಾಡಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಪಿಕಪ್‌ನಲ್ಲಿನ ಸಿಲ್ಟ್ ತೆಗೆಯುವುದರಿಂದ ಕೆನಾಲ್‌ಗಳನ್ನು ರಿಪೇರಿ ಮಾಡುವುದರಿಂದ ಹೆಚ್ಚಿನ ನೀರನ್ನು ರೈತರಿಗೆ ಒದಗಿಸಬಹುದು. ಅದೇ ರೀತಿ ನಮ್ಮಲ್ಲಿ ಒಂದು ಟ್ಯಾಂಕ್ ಇದೆ. ಇದು 20 ವರ್ಷದ ಹಿಂದೆ ಕಟ್ಟಿದ್ದು. ಅದು ಈ ವರ್ಷ ಮಳೆಗಾಲದಲ್ಲಿ ಸ್ವಲ್ಪ ಬ್ರೀಚಾಗಿಬಿಟ್ಟು ಬಹಳ ರೈತರಿಗೆ ಅನಾಹುತವಾಗಿದೆ. ಆದಷ್ಟು ಜಾಗ್ರತೆ ರಿಪೇರಿ ಕಾರ್ಯ ಕೈಗೊಂಡು ಅದನ್ನು ರಿಪೇರಿ ಮಾಡಿಸಿದರೆ ಸುಮಾರು 600 ರಿಂದ 700 ಎಕರೆಗೆ ನೀರಾವರಿಯಾಗುತ್ತದೆ. ಅದರ ಹೆಸರು ಕತ್ತಗೆ ಟ್ಯಾಂಕ್ ಎಂದು . ಅದನ್ನು ಆದಷ್ಟು ಜಾಗ್ರತೆ ರಿಪೇರಿ ಮಾಡಬೇಕು. ಏಕೆಂದರೆ ಮಳೆಗಾಲ ಬಂದರೆ ಪೂರಾ ಹೊಡೆದು ಹೋದರೆ ಬಹಳ ಕಷ್ಟವಾಗುತ್ತದೆ. ರೈತರಿಗೂ ಕೂಡ ತೊಂದರೆಯಾಗುತ್ತದೆ. ಇನ್ನು ನಮ್ಮ

ಪಿಡಬ್ಲ್ಯೂಡಿ ಇಲಾಖೆಯ ಬಗ್ಗೆ ಮಾತನಾಡಬೇಕು ಎಂದರೆ ತಾವು ಸಹ ಮಲೆನಾಡಿನಿಂದ ಬಂದಿದ್ದೀರಿ. ನಾವು ಸಹಾ ಮಲೆನಾಡಿನಲ್ಲಿದ್ದೇವೆ. ಈ ನಮ್ಮ ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟ್‌ನಲ್ಲಿ ಏನಾಗಿದೆ ಎಂದರೆ ರೋಡು ರಿಪೇರಿ ಕೆಲಸಗಳಿಗೆ ಬಯಲು ಸೀಮೆ ಅಥವಾ ಬೇರೆ ಕಡೆಗೆ ಎಷ್ಟು ದುಡ್ಡನ್ನು ಕೊಡುತ್ತಾರೋ ಅಷ್ಟೇ ನಮ್ಮ ಮಲೆನಾಡಿಗೂ ಕೋಡುತ್ತಾರೆ. ಆದರೆ ಮಲೆನಾಡಿನಲ್ಲಿ ಹೆಚ್ಚಿನ ಮಳೆಯಾಗುವುದರಿಂದ ರೋಡುಗಳು ತುಂಬಾ ಹಾಳಾಗುತ್ತಿವೆ. ಮಳೆಗಾಲದಲ್ಲಿ ಹೆಚ್ಚಿನ ಮಳೆ ಬಂದಾಗ ಸುಮಾರು ಈ ಹಿಂದೆ ಏನು ಒಂದು ಟ್ರಾನ್ಸ್‌ಪೋರ್ಟೇಶನ್ ಬಹಳ ಕಡಿಮೆ ಇತ್ತು. ಈಗ ಸುಮಾರು ಹತ್ತು ಹನ್ನೆರಡು, ಹದಿಮೂರು ಅಥವಾ ಹದಿನಾಲ್ಕು ಟನ್‌ಗಟ್ಟಲೆ ಲಾರಿಗಳಲ್ಲಿ ಲೋಡ್ ಮಾಡಿಕೊಂಡು ಹೋಗುತ್ತಿರುತ್ತಾರೆ. ಕೆಲವೊಂದು ಕಡೆ ಕಪ್ಪು ಭೂಮಿ ಬರುತ್ತದೆ. ಕೆಲವೊಂದು ಕಡೆ ಇರಿಗೇಷನ್ ಬರುತ್ತದೆ. ಆ ಇರಿಗೇಷನ್ ಜಮೀನು, ಮತ್ತು ಕಪ್ಪು ಭೂಮಿ ಹತ್ತಿರ ಹತ್ತು ಹನ್ನೆರಡು ಟನ್ ಲೋಡನ್ನು ಹಾಕಿಕೊಂಡು ಲಾರಿಗಳು ಹೋದಾಗ ಪೂರಾ ರೋಡುಗಳು ಸಿಂಕ್ ಆಗಿಬಿಡುತ್ತವೆ.

ಛೇರ್ಮನ್:- ಮಾನ್ಯ ಗಂಗಣ್ಣನವರೇ ನೀವು ಬಯಲುಸೀಮೆಯವರೋ ಅಥವಾ ಮಲೆನಾಡಿನವರೋ ಎಂದು ಗೊತ್ತಾಗಲಿಲ್ಲ. ತುಂಗಭದ್ರಾ ಬಗ್ಗೆ ಮಾತನಾಡುತ್ತಾ ನಮಗೆ ಬಹಳ ಉಪಕಾರವಾಯಿತು ಎಂದು ಹೇಳುತ್ತೀರಿ. ಈಗ ಮಾತನಾಡುತ್ತಾ ನಾವು ಮಲೆನಾಡಿನವರು ಎಂದು ಹೇಳುತ್ತೀರಿ.

Dr. D. B. GANGAPPA:- The Engineers are knowing and even the Minister is knowing that it is semimalanad. About 50 villages come from Malnad, and nearly 100 villages come to Bayalu seeme; Channagiri, Bhadravathi, and Honnali they are considered as semi Malnadu taluks, even Malanadu also in Bayalu seeme, Towards Hosanagar, it is a malnad; towards Harihara, it is Bayalu seeme. ಹರಿಹರ ಮತ್ತು ಶಿವಮೊಗ್ಗ ರೋಡ್‌ಗಳು ಇರಿಗೇಷನ್ ಏರಿಯಾದಲ್ಲಿ ಬರುತ್ತವೆ. ಮಳೆಗಾಲ ಸಮಯದಲ್ಲಿ ಸುಮಾರು ಮಳೆಯಾಗುವುದರಿಂದ ಮತ್ತು ಕೆನಾಲ್ ರೋಡ್‌ಮೇಲೆ ನೀರು ಬರುವುದರಿಂದ ಹಾಗೂ ಈಗಿನ ಲಾರಿಗಳಲ್ಲಿ ಸುಮಾರು 14 ಟನ್‌ಗಳಷ್ಟು ಲೋಡ್ ಹಾಕುವುದರಿಂದ ರೋಡ್ ಸಿಂಕ್ ಆಗುತ್ತದೆ. ತಮಗೆ ಗೊತ್ತಿರುವ ಹಾಗೆ ಸುಮಾರು ಸಾರಿ ಅಲ್ಲಿ ಟ್ರಾಫಿಕ್ ಜಾಮ್ ಆಗಿ ಬಹಳ ತೊಂದರೆಯಾಗಿದೆ. ರೈತರೂ ಸಹ ಕೆಲವೊಂದು ಸಾರಿ ಈ ರೋಡಿನಲ್ಲಿ ರಸ್ತೆ ರೊಖೋ ಮಾಡಿ ಬಹಳ ತೊಂದರೆ ಕೊಡುತ್ತಾರೆ. ಆದ್ದರಿಂದ ತಾವು ಈ ಇರಿಗೇಟೆಡ್ ಏರಿಯಾದಲ್ಲಿ ಬರತಕ್ಕಂಥ ರೋಡುಗಳಿಗೆ ಮತ್ತು ಮಲ್ನಾಡ್ ಸೀಮೆಯಲ್ಲಿ ಬರತಕ್ಕಂಥ ರೋಡುಗಳ ರಿಪೇರಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಂಜಿನಿಯರ್‌ಗಳು ಏ.ಆರ್.ರೇಟು ಅಂತ ಹೇಳುತ್ತಾರೆ. ಎಸ್.ಆರ್.ರೇಟ್ ಅಂತ ಹೇಳುತ್ತಾರೆ. ನಮಗೆ ಏನೂ ಗೊತ್ತಾಗುವುದಿಲ್ಲ. ಅವರು ಯಾವ ರೋಡು ರಿಪೇರಿ ಮಾಡುತ್ತಾರೆಂಬುದು ಗೊತ್ತಾಗುವುದಿಲ್ಲ. ಅವರು ಏ ಆರ್, ಎಸ್ ಆರ್ ಹಾಕುವುದು, ಯಾವ ರೋಡು ಚೆನಾಗಿರುತ್ತದೋ ಆ ರೋಡಿಗೇ ಹಾಕುತ್ತಾರೆ. ಏ ಅರ್ ಗೆ ಎಷ್ಟು ಅಮೌಂಟ್ ಕೊಡುತ್ತೀರಿ, ಎಸ್ ಆರ್‌ಗೆ ಎಷ್ಟು ಅಮೌಂಟ್ ಕೊಡುತ್ತೀರೆಂಬುದನ್ನು ನಮಗೆ ತಿಳಿಸಿ. ಈಗ ಇಂಜಿನೀಯರ್‌ಗಳು ಏನು ಮಾಡುತ್ತಾರೆಂದರೆ ಯಾವ ರಸ್ತೆ ಚೆನ್ನಾಗಿರುತ್ತದೋ ಅದಕ್ಕೆ ಎಸ್ ಅರ್ ಮತ್ತು ಏ ಆರ್ ನಲ್ಲಿ ಮತ್ತೆ ರಿಪೇರಿ ಅಂತ ಮಾಡುತ್ತಾರೆ. ಏ ಆರ್ ಮತ್ತು ಎಸ್ ಆರ್ ಅಂದರೆ ಮಾರ್ಚಿ ಕೊನೆಯಲ್ಲಿ ಆ ರೋಡಿಗೆ ಕೆಂಪುಬಣ್ಣ ಹಾಕಿ ಎಸ್ ಆರ್ ಅಂತ ತೋರಿಸುತ್ತಾರೆ. ಆದರಿಂದ ನಾನು ಕೇಳಿಕೊಳ್ಳುವುದಿಷ್ಟೆ, ಎ ಆರ್ ಗೆ ಎಷ್ಟು ಹಣ ಕೊಡುತ್ತೀರಿ ಮತ್ತು ಎಸ್ ಆರ್ ಗೆ ಎಷ್ಟು ಹಣ ಕೊಡುತ್ತೀರಿ ಎಂಬ ವಿವರಗಳನ್ನು ನಮಗೆ ತಿಳಿಸಿದರೆ ಕೆಲವು ರಸ್ತೆಗಳ ರಿಪೇರಿ ಕೆಲಸವನ್ನು ಈ ವರ್ಷ ಎ ಆರ್ ನಲ್ಲಿ ತೆಗೆದುಕೊಳ್ಳಿ ಅಥವಾ ಎಸ್ ಆರ್ ನಲ್ಲೇ ತೆಗೆದುಕೊಳ್ಳಿ ಅಂತ ನಾವು ಅವರಿಗೆ ತಿಳುವಳಿಕೆಯನ್ನು ಕೊಡಬಹುದು. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಎ ಆರ್

ಮತ್ತು ಎಸ್ ಆರ್ ನಲ್ಲಿ ಈ ವರ್ಷ ಹಣ ಎಷ್ಟಿರುತ್ತದೆನ್ನುವುದನ್ನು ತಾವು ನಮ್ಮ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಅದೇರೀತಿ ಕಟ್ಟಡಗಳು ನಮ್ಮಲ್ಲಿ ಸುಮಾರು 22ಲಕ್ಷ ಖರ್ಚು ಮಾಡಿ ಒಂದು ಬಿಲ್ಡಿಂಗ್ ಅನ್ನು ಕಟ್ಟಿದ್ದಾರೆ. ಈಗ ಆ ಕಟ್ಟಡದ ಪ್ರತಿಯೊಂದು ಕೊಠಡಿಯೂ ಸಹ ಸೋರುತ್ತಿದೆ. ಇದು ಕಟ್ಟಿ 8 ವರ್ಷವಾಗಿದೆ. ಈ ಕಟ್ಟಡವನ್ನು ಯಾರು ಸೂಪರ್‌ವೈಸ್ ಮಾಡಿದರು ಎಂಬುದು ಗೊತ್ತಾಗಲಿಲ್ಲ. ಈಗ ಈ ಕಟ್ಟಡ ಕಟ್ಟುವುದಕ್ಕೆ ಎಷ್ಟು ಖರ್ಚಾಗಿದೆಯೋ ಅಷ್ಟೇ ಹಣ ರಿಪೇರಿಗೆ ಬೇಕು ಎಂದು ಹೇಳುತ್ತಾರೆ. ಈ ಬಗ್ಗೆ ನೀವು ಸ್ವಲ್ಪ ನಿಗಾ ಇಡಬೇಕು. ಇನ್ನು ಕೆ.ಇ.ಬಿ.ಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಪಂಪ್‌ಸೆಟ್‌ಗಳು ಹೆಚ್ಚಿಗೆ ಇವೆ. ಈ ಪಂಪ್‌ಸೆಟ್‌ಗಳು ಹೆಚ್ಚಿಗೆ ಇರುವುದರಿಂದ ಎಲೆಕ್ಟ್ರಿಕಲ್ ಡಿಸ್ಟರ್‌ಬೆನ್ಸ್ ಹೆಚ್ಚಾಗುತ್ತದೆ. ಇದರ ಜೊತೆಗೆ ಈ ಇಲಾಖೆಯಲ್ಲಿರತಕ್ಕ ಇಂಜಿನಿಯರ್‌ಗಳಲ್ಲಿ ಎಫಿಷಿಯನ್ಸಿ ಕಡಿಮೆ ಇದೆ ಎಂದು ನಾನು ಹೇಳುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ ಮೊನ್ನೆ ಮಾನ್ಯ ಮಂತ್ರಿಗಳು ದಾವಣಗೆರೆಗೆ 100ಕೆ.ವಿ. ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದಾರೆ. 100ಕೆ.ವಿ.ಟ್ರಾನ್ಸ್‌ಫಾರ್ಮರ್ ಕೊಟ್ಟಮೇಲೆ ವಿದ್ಯುತ್ತಿನ ಸಂಪರ್ಕ ಸರಿಯಾಯಿತು. ಆದರೆ ಬಾರ್ಡರ್ ವಿಲೇಜ್‌ನಲ್ಲಿ ಈ ವೋಲ್ಟೇಜ್ ಕಡಿಮೆಯಾಗಿದೆ . ಜೊತೆಗೆ ಅಲ್ಲಿನ ಪಂಪ್‌ಸೆಟ್‌ಗಳು ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆ ವೋಲ್ಟೇಜ್ ಕಡಿಮೆಯಾಗಿರುವುದೇ ಕಾರಣ. ವೋಲ್ಟೇಜ್ ಕಡಿಮೆ ಏತಕ್ಕೆ ಆಯಿತು ಎಂಬುದರ ಬಗ್ಗೆ ಯಾರೂ ಸಹ ಹೋಗಿ ನೋಡುವುದಿಲ್ಲ. ಆ ರೈತರು ಬಂದು ಗಲಾಟೆ ಮಾಡುವವರೆಗೂ ಅವರು ಸುಮ್ಮನೆ ಇರುತ್ತಾರೆ. ನನ್ನ ಹಳ್ಳಿಯಿಂದ 5 ಕಿ.ಮೀ. ದೂರದಲ್ಲಿ ಒಂದು ಹಳ್ಳಿ ಇದೆ. ಅಲ್ಲಿ ಸಹ ವೋಲ್ಟೇಜ್ ಕಡಿಮೆಯಾಗಿದೆ ಎಂದು ರೈತರು ಬಂದು ಗಲಾಟೆ ಮಾಡಿದರೆ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು, ಟ್ರಾನ್ಸ್‌ಫಾರ್ಮರ್ ಬದಲಾವಣೆ ಮಾಡಬೇಕೆಂದು ನಮಗೆ ಸಲಹೆ ಕೊಡುತ್ತಾರೆ. ಹಾಗಿದ್ದರೆ ನೀವು ಡಿಪಾರ್ಟ್‌ಮೆಂಟ್‌ನಲ್ಲಿ ಇರುವುದು ಏತಕ್ಕೆ? ಇದನ್ನು ಏತಕ್ಕೆ ನೀವು ನೋಡಿಕೊಳ್ಳುವುದಿಲ್ಲ. ಸುಮ್ಮನೆ ಏತಕ್ಕೆ ಜನರಿಗೆ ನೀವು ದಾಂಧಲೆ ಮಾಡುವುದಕ್ಕೆ ಬರುತ್ತೀರಾ ಅಂತ ನಾನು ಕೇಳಿದಾಗ ಅವರು ಈ ರೀತಿ ಸಲಹೆ ಕೊಡುತ್ತಾರೆ. ಆದ್ದರಿಂದ ಈ ಇಂಜಿನಿಯರ್‌ಗಳು ಹೇಳುವುದು ಸರಿಯೇ ಹೇಗೆ ಎಂದು ಮೇಲಿನ ಅಧಿಕಾರಿಗಳು ಸೂಪರ್‌ವಿಷನ್ ಮಾಡಬೇಕು. ಜೊತೆಗೆ ಈ ಟ್ರಾನ್ಸ್ ಫಾರ್ಮರ್‌ಗಳು ಸಿಕ್ಕಾಪಟ್ಟೆ ಸುಟ್ಟು ಹೋಗುತ್ತಿವೆ. ಅದಕ್ಕೆ ಕಾರಣ ಇಷ್ಟೆ. 25 ಕೆ.ವಿ. ಟ್ರಾನ್ಸ್‌ಫಾರಮರ್ ಇದೆ. 63 ಕೆ.ವಿ. ಟ್ರಾನ್ಸ್‌ಫಾರ್ಮರ್ ಇದೆ. 100 ಕೆ.ವಿ. ಟ್ರಾನ್ಸ್‌ಫಾರ್ಮರ್ ಇದೆ. 25 ಕೆ.ವಿ. ಟ್ರಾನ್ಸ್ ಫಾರ್ಮರ್‌ಗೆ ಅದರ ಸಾಮರ್ಥ್ಯಕ್ಕಿಂತ ಹೆಚ್ಚಿಗೆ ಕನೆಕ್ಷನ್ ಕೊಟ್ಟಿರುತ್ತಾರೆ. ಅದರ ಒನ್ ಅಂಡ್ ಆಫ್ ಕನೆಕ್ಷನ್ ಕೊಡಬೇಕೆಂದು ತಾವು ಇಂಟಿಮೇಷನ್ ಕೊಟ್ಟಿದ್ದೀರಿ. ಈ ರೀತಿ ಕನೆಕ್ಷನ್ ಕೊಟ್ಟಾಗ 25 ಕೆ.ವಿ.ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿಬಿಡುತ್ತವೆ. ಒಂದು ಸ್ಟಾರ್ಟರ್‌ನಲ್ಲಿ ಎರಡು ಅಥವಾ ಮೂರು ಪಂಪ್‌ಸೆಟ್ಟುಗಳನ್ನು ಶುರುಮಾಡುತ್ತಾರೆ. ರೈತರು ತಮ್ಮ ಹೊಲದಲ್ಲಿ ಕಂಬ ಹೋಗಿದೆ ಎಂಬುದನ್ನು ನೋಡಿಬಿಟ್ಟು ಬೋರ್ ಹೊಡಿಸಿ ಕನೆಕ್ಷನ್ ತೆಗೆದುಕೊಳ್ಳುತ್ತಿದ್ದಾರೆ. 5 ಕಂಬದಿಂದ ಒಳಗೆ ಇರುವುದಕ್ಕೆ ನಾವು ಸೀನಿಯಾರಿಟಿ ಫಿಕ್ಸ್ ಮಾಡಿಲ್ಲ. ಆದ್ದರಿಂದ 25 ಕೆವಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದನ್ನು ಬಿಟ್ಟು ಬರೀ 63 ಕೆ.ವಿ ಮತ್ತು 100 ಕೆ. ವಿ ಟ್ರಾಸ್‌ಫಾರ್ಮರ್‌ಗಳನ್ನು ಮಾತ್ರ ಹಾಕಬೇಕಾಗುತ್ತದೆ. ಟ್ರಾನ್ಸ್‌ಫಾರ್ಮರ್‌ಗಳು ಎನ್‌ಜಿಇಎಫ್ ಮತ್ತು ಕವಿಕಾ ದಿಂದ ಬರುತ್ತಿದೆ. ಕವಿಕಾ ದಿಂದ ಬರತಕ್ಕಂಥ25 ಕೆ.ವಿ ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಿಗೆ ಸುಟ್ಟು ಹೋಗುತ್ತಿವೆ. ಎನ್‌ಜಿಇಎಫ್ ನಿಂದ ಬಂದಂತಹ ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಿಗೆ ಸುಟ್ಟು ಹೋಗುತ್ತಿಲ್ಲ. ಜೊತೆಗೆ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡುವುದಕ್ಕೆ ಅವರು ಕವಿಕಾಗೆ ಕಳುಹಿಸಬೇಕು. ಅವರು ಇಲ್ಲೇ ಸ್ವಲ್ಪ ಅಡ್ಜೆಸ್ಟ್ ಮಾಡಿಕೊಂಡು ಬಿಟ್ಟು ಲೋಕಲ್‌ನವರಿಗೆ ಕೊಡುತ್ತಾರೆ. ರಿಪೇರಿಗೆ ಅವರು ಕವಿಕಾಗೆ ಕಳುಹಿಸಿದರೆ ಇನ್ನೂ ಹೆಚ್ಚಿನ ದಿವಸಗಳು ಬಳಕೆ ಬರುತ್ತದೆ. ಲೋಕಲ್‌ನವರಿಗೆ ಕೊಡುವುದರಿಂದ ಸರಿಯಾಗಿ ಅವರು ರಿಪೇರಿ ಮಾಡುವುದಿಲ್ಲ. ರಿಪೇರಿ ಮಾಡಿದ ಒಂದುವಾರದಲ್ಲಿಯೇ ಮತ್ತೆ ಸುಟ್ಟು ಹೋಗುತ್ತವೆ. ಅದನ್ನು ತಪ್ಪಿಸಬೇಕಾದರೆ

ಇಲ್ಲಿಗೇ ಕಳುಹಿಸಿಕೊಡಿ. ಜೊತೆಗೆ 25 ಕೆ.ವಿ. ಟ್ರಾನ್ಸ್‌ಫಾರ್ಮರ್ ಅನ್ನು ಬಿಟ್ಟು 63 ಕೆ.ವಿ. ಟ್ರಾನ್ಸ್‌ಫಾರ್ಮರ್ ಹಾಕಿ ಕವಿಕಾ ಮತ್ತು ಎನ್‌ಜಿಇಎಫ್‌ಗಳ ಪೈಕಿ ಯಾವ ಕಂಪನಿಗಳದ್ದು ಎಷ್ಟು ಸುಟ್ಟು ಹೋಗಿವೆ ಎಂಬುದನ್ನು ತಾವು ನೋಡಿ ಆದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದಿಸುತ್ತಾ, ಇವೊತ್ತು ಸರ್ಕಾರದವರು ಮಂಡಿಸಿಗತಕ್ಕಂಥ ವಿವಿಧ ಇಲಾಖೆಗಳ ಬೇಡಿಕೆಗಳನ್ನು ಬೆಂಬಲಿಸುತ್ತಾ ಮತ್ತು ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ನನ್ನ ಕೆಲವು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಲೋಕೋಪಯೋಗಿ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಇವೊತ್ತು ಲೋಕೋಪಯೋಗಿ ಇಲಾಖೆ ಎಂದರೆ ನಮಗೆ ಜ್ಞಾಪಕಕ್ಕೆ ಬರತಕ್ಕಂಥವರು ಸರ್. ಎಂ. ವಿಶ್ವೇಶ್ವರಯ್ಯನವರು. ಎಲ್ಲಿ ನೋಡಿದರೂ ಕೂಡ ನಾವು ಅವರ ಭಾವಚಿತ್ರವನ್ನು ನೋಡತಕ್ಕಂಥಾದ್ದು ಉಂಟು. ಅವರನ್ನು ನೋಡಿದಾಗ ಈ ಇಲಾಖೆಗೆ ಬಹಳ ಗೌರವವಿರುವಂಥ ಮಟ್ಟಕ್ಕೆ ನಾವು ನಡೆದುಕೊಳ್ಳಬೇಕಾಗುತ್ತದೆ. ಸರ್. ಎಂ. ವಿಶ್ವೇಶ್ವರಯ್ಯನವರು ಕರ್ನಾಟಕದಲ್ಲಿ ಮುಖ್ಯ ಇಂಜಿನಿಯರ್ ಆಗಿ ಕೆಲಸ ಮಾಡಿದರು. ಅಲ್ಲದೆ, ಅನೇಕ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ಭಾರತ ರತ್ನ ಪ್ರಶಸ್ತಿಯನ್ನು ಕೂಡ ಪಡೆದರು. ನಾವು ಎಲ್ಲಾದರೂ ಹೊರಗಡೆ ಹೋದಾಗ ಸರ್. ಎಂ. ವಿಶ್ವೇಶ್ವಯ್ಯನವರು ನಮ್ಮ ನಾಡಿನಲ್ಲಿ ಹುಟ್ಟಿದರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಅಂತಹವರ ಹೆಸರನ್ನು ಹೇಳಿದರೆ. ಲೋಕೋಪಯೋಗಿ ಇಲಾಖೆಯಲ್ಲಿರತಕ್ಕಂಥ ಇಂಜಿನಿಯರುಗಳಿಗೆ ಬಹಳಷ್ಟು ಗೌರವ ಇದೆ. ಆದರೆ ಇವೊತ್ತು, ವಸ್ತುಸ್ಥಿತಿಯನ್ನು ನೋಡಿದರೆ ಆ ಹೆಸರು ಎಲ್ಲಿ ಹೋಗಿದೆ ಎನ್ನತಕ್ಕಂಥಾದ್ದು ಹುಡುಕಬೇಕಾಗುತ್ತದೆ., ಏತಕ್ಕೆ ಇಷ್ಟೊಂದು ಕೆಟ್ಟು ಹೋಗಿದೆ ಎನ್ನುವುದನ್ನು ವಿವರಿಸಿ ಹೇಳುವುದಕ್ಕೆ ಇವೊತ್ತು ಸಮಯ ಇಲ್ಲ. ಇವೊತ್ತು ಭ್ರಸ್ಟಾಚಾರದ ಬಗ್ಗೆ ಸಾಕಷ್ಟು ಜನರು ಮಾತನಾಡುತ್ತಾರೆ. ಭ್ರಷ್ಟಾಚಾರ ಇದೆ ಎನ್ನತಕ್ಕಂಥಾದ್ದು ಗೊತ್ತು. ಆದರೆ, ಅದು ಎಷ್ಟು ಪ್ರಮಾಣದಲ್ಲಿದೆ ಎನ್ನತಕ್ಕಂಥಾದ್ದನ್ನು ನಾವು ಅರಿಯಬೇಕಾಗುತ್ತದೆ. ಇವೊತ್ತು ಈ ಇಲಾಖೆಯಲ್ಲಿ ಭ್ರಷ್ಟಾಚಾರ ಎಷ್ಟು ಪ್ರಮಾಣದಲ್ಲಿದೆಯೆಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲದಂಥ ಮಟ್ಟಕ್ಕೆ ಅದು ಹೋಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ , ಯಾವುದೇ ಒಂದು ಕೆಲಸವನ್ನು ಮಾಡಿ ಪೂರೈಸಬೇಕಾದರೆ 25 ರಿಂದ 30ಪರ್ಸೆಂಟ್ ಭರಷ್ಟಾಚಾರಕ್ಕೆ ಹೋಗುತ್ತದೆ. ಎಸ್ಟಿಮೇಟ್ ಮಾಡಬೇಕಾದರೆ ಜೂನಿಯರ್ ಇಂಜಿನಿಯರುಗಳಿಗೆ 10ಪರ್ಸೆಂಟ್, ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಇಂತಿಷ್ಟು ಪರ್ಸೆಂಟ್ ಎಂದು ಪರ್ಸೆಂಟೇಜ್ ಫಿಕ್ಸ್ ಆಗಿರತಕ್ಕಂಥಾದ್ದು ನಾವು ನೋಡುತ್ತಿದ್ದೇವೆ. ಇದನ್ನು ನೋಡಿದಾಗ ಏನಾಗುತ್ತದೆಂದರೆ, ಲೋಕೋಪಯೋಗಿ ಇಲಾಖೆ ಮೂಲಕ ಕಟ್ಟಿದಂಥ ಕಟ್ಟಡಗಳು 2-3 ವರ್ಷದೊಳಗೆ ಬಿದ್ದು ಹೋಗುತ್ತವೆಂದು ಮತ್ತು ಅದರ ಕಾರ್ಯನಿರ್ವಹಣೆಯ ಬಗ್ಗೆ ಹಾಗೂ ಗುಣಮಟ್ಟದ ಬಗ್ಗೆ ಅನೇಕ ಸದಸ್ಯರು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಇವೊತ್ತು ಏತಕ್ಕೋಸ್ಕರ ಕಟ್ಟಡಗಳು ಬಿದ್ದು ಹೋಗುತ್ತಿವೆ ಎಂದರೆ ಈ ತುಂಬಿ ತುಳುಕಾಡುವ ಭ್ರಷ್ಟಾಚಾರದಿಂದ, ಪರ್ಸೆಂಟೇಜ್‌ನಿಂದ ಮತ್ತು ಅವ್ಯವಹಾರಗಳಿಂದ. ಇದರ ಬಗ್ಗೆ ಸರ್ಕಾರಕ್ಕೆ ಸ್ವಲ್ಪ ಗಮನವಿರಲಿ. ಇವೊತ್ತು ಇಲಾಖೆಯವರು ಕಟ್ಟಿದಂಥ ಕಟ್ಟಡಗಳು ಶಾಸ್ವತವಾಗಿರಬೇಕು. ನೂರು ವರ್ಷವಲ್ಲದೆ 100-120 ವರ್ಷಗಳ ಹಿಂದೆ ಕಟ್ಟಿದಂಥ ಕಟ್ಟಡಗಳು ಯಾವ ರೀತಿಯ ದುರಸ್ತಿಯೂ ಇಲ್ಲದೆ ಇವೊತ್ತು ಚೆನ್ನಾಗಿದೆ. ಹೀಗೆ 100 ವರ್ಷಗಳ ಇತಿಹಾಸವಿರತಕ್ಕಂಥ ಕಟ್ಟಡಗಳು ಉಳಿಯಬೇಕಾದರೆ ನಾನು ಹೋದ ಟರ್ಮ್‌ನಲ್ಲಿ ಎಂ.ಎಲ್.ಎ ಆಗಿದ್ದಾಗ ಕಟ್ಟಿದಂಥ ಕಟ್ಟಡಗಳು ಇವೊತ್ತು ಇಲ್ಲ. ಇದಕ್ಕೆ ಯಾವುದಾದರೊಂದು ಬಿಗಿಯಾದಂಥ ನಿಯಂತ್ರಣ ಇಡಬೇಕಾಗುತ್ತದೆಂದು ನಾನು ಈ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಭ್ರಷ್ಟಾಚಾರದ ಹಣ ಎಲ್ಲಿ ಸೇರಿದೆಯೆಂದರೆ ನನಗೆ ಗೊತ್ತಿಲ್ಲ. ದೊಡ್ಡ ದೊಡ್ಡ

ಬಿಲ್ಡಿಂಗ್‌ಗಳಿರುವ ಬೆಂಗಳೂರಿನಲ್ಲಿ ಕೇಳಲಿ ಅಥವಾ ಯಾವುದೋ ಹೋಟೆಲುಗಳ ಬಗ್ಗೆ ಕೇಳಿದರೆ ಅದರ ಹಿನ್ನೆಲೆಯಲ್ಲಿ ಯಾರಾದರೊಬ್ಬ ಪಿಡಬ್ಲ್ಯೂಡಿ ಇಂಜಿನಿಯರ್ ಇದ್ದೇ ಇರುತ್ತಾರೆ. ಇವೊತ್ತು ನಿಮ್ಮ ಹಣ ಎಲ್ಲಿ ಹೋಗುತ್ತದೆಂದರೆ , ಒಂದು ಬೆಂಗಳೂರನ್ನು ಸೇರುತ್ತಿದೆ, ಒಂದು ದೊಡ್ಡ ದೊಡ್ಡ ಕಟ್ಟಡಗಳಿಗೆ ಸೇರುತ್ತಿದೆ. ಇದರ ಬಗ್ಗೆ ನೀವು ಕಡಿವಾಣ ಹಾಕುವುದಲ್ಲದೆ ಅವರು ಇಟ್ಟಿರುವ ಆಸ್ತಿ ಪಾಸ್ತಿಗಳ ಬಗ್ಗೆ ವಿಶೇಷವಾದ ಗಮನ ಇಡಬೇಕಾಗುತ್ತದೆಂಬ ಮಾತನ್ನು ನಾನು ಹೇಳುತ್ತೇನೆ. ಇವೊತ್ತು ಅವರು ಕೊಟ್ಟಿರತಕ್ಕಂಥ ಸಂಪನ್ಮೂಲಗಳು ಏನಿವೆ. ಅವರ ಮೂಲಧನ ಎಷ್ಟು ಬರುತ್ತಿದೆ. ಅವರ ಹತ್ತಿರ ಇರತಕ್ಕಂಥ ಆಸ್ತಿ ಎಷ್ಟು ಬೇನಾಮಿಯಲ್ಲಿರತಕ್ಕಂಥ ಆಸ್ತಿ ಎಷ್ಟು ಎನ್ನತಕ್ಕಂಥಾದ್ದರ ಬಗ್ಗೆ ಸ್ವಲ್ಪ ವಿಚಾರ ಮಾಡಿದರೆ ಬಹುಶ: ಇದಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯ ಎನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಇನ್ನು ಸಂಪರ್ಕದ ವಿಚಾರವಾಗಿ ಹೇಳಬೇಕಾದರೆ, ಇವೊತ್ತು ಸಂಪರ್ಕಗಳ ಅವಶ್ಯಕತೆ ಬೇಕಾಗಿದೆ. ನಮಗೆ ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ ಹಳ್ಳಿಗಳಿಗೆ ಇವತ್ತಿನ ದಿವಸ ಸರಿಯಾದ ಸಂಪರ್ಕವಿಲ್ಲ. ಸಂಪರ್ಕ ಎಷ್ಟು ಕೆಟ್ಟು ಹೋಗಿದೆ ಎಂದರೆ ಹೇಳುವುದಕ್ಕೆ ಸಾಧ್ಯವಿಲ್ಲದಿರುವ ಮಟ್ಟಕ್ಕೆ ಹೋಗಿದೆ. ಅದರಲ್ಲೂ ನೀವು ಅನೇಕ ಯೋಜನೆಗಳ ಹೆಸರಡಿಯಲ್ಲಿ ಇವೊತ್ತು ಹಳ್ಳಿಗಳಿಗೆ ಸಂಪರ್ಕವನ್ನು ಕಲ್ಪಿಸತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡಿದ್ದೀರಿ. ಆದರೆ, ನೀವು ಸಂಪರ್ಕ ಒದಗಿಸುವುದಕ್ಕೆ ಕೊಡತಕ್ಕಂಥ ಹಣ ಏನೇನೂ ಸಾಲದಾಗಿದೆ, ಇನ್ನು ಹೆಚ್ಚು ಹಣ ಒದಗಿಸತಕ್ಕಂಥ ಕೆಲಸ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಮತ್ತೆ ಈ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರತಕ್ಕ ಎಲ್ಲಾ ರಸ್ತೆಗಳನ್ನು ಕೂಡ ನಿಮ್ಮ ಇಲಾಖೆಯಲ್ಲಿ ಇಟ್ಟುಕೊಳ್ಳಬೇಕೆಂಬುದು ನನ್ನ ವೈಯಕ್ತಿಕವಾದ ಸಲಹೆ. ಸಣ್ಣ ರಸ್ತೆಯಾಗಿರಲಿ, ಹಳ್ಳಿಯ ರಸ್ತೆಯಾಗಿರಲಿ, ಜಿಲ್ಲಾ ರಸ್ತೆಯಾಗಿರಲಿ, ರಾಷ್ಟ್ರೀಯ ಹೆದ್ದಾರಿಯಾಗಿರಲಿ, ಎಲ್ಲವನ್ನೂ ಕೂಡ ನಿಮ್ಮ ಕಂಟ್ರೋಲ್‌ನಲ್ಲಿಟ್ಟುಕೊಂಡು ಅದಕ್ಕೆ ಒಂದು ರೀತಿಯ Minister for Roads ಅಂತ ಹೇಳಿ ಒಂದು ಖಾತೆಯನ್ನು ಕ್ರಿಯೇಟ್ ಮಾಡಿದರೂ ಚಿಂತೆಯಿಲ್ಲ, ರಾಜ್ಯದ ಎಲ್ಲಾ ರಸ್ತೆಗಳನ್ನು ಸರ್ಕಾರವೇ ಮೇಲ್ವಿಚಾರಣೆ ಮಾಡತಕ್ಕದ್ದು ಸೂಕ್ತವೆನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು ನಮ್ಮ ಗ್ರಾಮಗಳಲ್ಲಿ ಎಲ್ಲೆಲ್ಲಿ ಬಸ್ಸುಗಳು ಓಡಾಡುತ್ತಿದ್ದವೋ ಅವೆಲ್ಲವೂ ಕೂಡ ಈಗ ನಿಂತು ಹೋಗಿವೆ. ಕಾರಣವೇನೆಂದರೆ, ಆ ಬಸ್ಸುಗಳ ಮಾಲೀಕರು ನಮಗೆ ನೀವು ಮೊದಲು ರಸ್ತೆಗಳನ್ನು ರಿಪೇರಿ ಮಾಡಿಸಿ , ಆಗ ಮಾತ್ರ ನಾವು ಬಸ್ಸುಗಳನ್ನು ಓಡಿಸುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ಅಲ್ಲಿ ಇಷ್ಟೊಂದು ಹದಗೆಟ್ಟಿರತಕ್ಕ ಪರಿಸ್ಥಿತಿ ಇದೆ. ತಾವು ಕೂಡ ನನ್ನ ಕ್ಷೇತ್ರಕ್ಕೆ ಅನೇಕ ಸಾರಿ ಬಂದಾಗ ಅಲ್ಲಿನ ರಸ್ತೆಗಳು ಯಾವ ಮಟ್ಟದಲ್ಲಿದೆ ಎನ್ನತಕ್ಕದ್ದನ್ನು ನೋಡಿದ್ದೀರಿ. ನಮ್ಮ ರಾಜ್ಯದ ಹೆದ್ದಾರಿಗಳ ಹಣೆಬರಹವೂ ಸಹ ಇದೇರೀತಿಯಾಗಿದೆ. ಇನ್ನು ಹಳ್ಳಿಯ ರಸ್ತೆಗಳನ್ನು ವಿಚಾರಿಸುವಂತೆಯೇ ಇಲ್ಲವೆನ್ನತಕ್ಕ ಪರಿಸ್ಥಿತಿಯಾಗಿದೆ ಎಂಬುದನ್ನು ತಾವು ಅರಿಯಬೇಕು. ಮತ್ತೆ ನೀವು ಸೇತುವೆಗಳ ಕೆಲಸವನ್ನು ಸಾಕಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿಲ್ಲ. ನಾವು ಶಾಸಕರಾಗಿ 2-3 ವರ್ಷಗಳಾದರೂ ಇಲ್ಲಿಯವರೆಗೆ ಒಂದೇ ಒಂದು ಹೊಸ ಸೇತುವೆಯ ಕೆಲಸವನ್ನು ಹೊಸದಾಗಿ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಲಿಕ್ಕೆ ನಮಗೆ ಆಗಲಿಲ್ಲ. ಆದುದರಿಂದ, ಇವತ್ತು ನೀವು ಇದಕ್ಕೆ ಬಜೆಟ್‌ನಲ್ಲಿ ಹೊಸದಾಗಿ ಪ್ರತಿ ಕ್ಷೇತ್ರಕ್ಕೂ ಪ್ರಾವಿಷನ್ ಮಾಡಿ ಹೆಚ್ಚು ಹಣವನ್ನು ಕೊಡಿಸಬೇಕು. ಇವತ್ತು ಕೊನೆಯ ಪಕ್ಷ ಒಬ್ಬ ಶಾಸಕನ ಕ್ಷೇತ್ರಕ್ಕೆ ಒಂದು ಸೇತುವೆಯನ್ನಾದರೂ ಕಟ್ಟಿಸಿಕೊಡಬೇಕೆನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ಕಟ್ಟಡದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈಗಿನ ಕಟ್ಟಡಗಳ ಗುಣಮಟ್ಟದ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಈಗ ನನ್ನ ಕ್ಷೇತ್ರದಲ್ಲಿ ಸರ್ಕಾರಿ ಹೈಸ್ಕೂಲ್ ಮತ್ತು ಸರ್ಕಾರಿ ಕಿರಿಯ ಕಾಲೇಜು ಇದೆ. ಈ ಕಿರಿಯ ಕಾಲೇಜಿನ ವ್ಯಾಪ್ತಿ ಯಾರಿಗೆ ಬರುತ್ತದೆ ಎನ್ನತಕ್ಕದ್ದರ ಬಗ್ಗೆ ತಿಳಿಸಬೇಕೆಂದು ನಾನು ಹಿಂದೆ ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಜಿಲ್ಲಾ ಪರಿಷತ್ತು ಪ್ರಾರಂಭವಾಗಿ 5 ವರ್ಷಗಳಾಯಿತು. ಕಳೆದ 5 ವರ್ಷಗಳಿಂದ ಆ ಫೈಲು ಕರೆಸ್ಪಾಂಡೆನ್ಸ್‌ನಲ್ಲಿದೆ. ಒಬ್ಬರು ಪಿ.ಡಬ್ಲ್ಯೂ.ಡಿ.ಗೆ ಬರುತ್ತದೆಂದು ಹೇಳುತ್ತಾರೆ. ಇನ್ನೊಬ್ಬರು ಜಿಲ್ಲಾ ಪರಿಷತ್ತಿಗೆ ಬರುತ್ತದೆಂದು

ಹೇಳುತ್ತಿದ್ದಾರೆ. ಆದರೆ, ಅಂತಿಮವಾಗಿ ಇನ್ನೂ ಕೂಡ ತೀರ್ಮಾನವಾಗಿಲ್ಲ. ಇದರಿಂದಾಗಿ ಇವತ್ತು ಸರ್ಕಾರದ ಎಲ್ಲಾ ಕಟ್ಟಡಗಳೂ ಸೋರುತ್ತಿದ್ದು, ಅವು ಕುಸಿದು ಹೋಗುವ ಮಟ್ಟಕ್ಕೆ ಬಂದಿವೆ. ಆದ್ದರಿಂದ, ದಯಮಾಡಿ ಇವತ್ತು ಸರ್ಕಾರದ ವಶದಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳಾಗಲೀ, ಹೈಸ್ಕೂಲುಗಳಾಗಲಿ ಈ ಎಲ್ಲಾ ಕಟ್ಟಡಗಳನ್ನು ಮತ್ತು ಹಿಂದೆ ಯಾರಾದರೂ ದಾನವಾಗಿ ಕೊಟ್ಟಿರತಕ್ಕ ಕಟ್ಟಡಗಳನ್ನೂ ಕೂಡ ಮೇಂಟೆನೆನ್ಸ್ ಮಾಡತಕ್ಕ ಕೆಲಸವನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈ ಎಲ್ಲಾ ಕಟ್ಟಡಗಳ ಮೆಂಟೆನೆನ್ಸ್ ಇದುವರೆಗೆ ಆಗಿಲ್ಲ. ಇನ್ನು ನಾನು ಬಹಳ ಸಂತೋಷದಿಂದ ಲೋಕೋಪಯೋಗಿ ಇಲಾಖೆಯ ಸಚಿವರನ್ನು ಅಭಿನಂದಿಸುತ್ತೇನೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಒಂದು ಐ.ಬಿ. ಬೇಕಾಗಿತ್ತು ಎಂದು ಕೇಳಿದಾಗ ಅದನ್ನು ಈ ಸಾಲಿನ ಬಜೆಟ್‌ನಲ್ಲಿ ಸೇರಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳಿಗೆ ಮತ್ತು ನಿಮ್ಮ ಇಲಾಖೆಯ ಮುಖ್ಯ ಇಂಜಿನಿಯರ್‌ರವರಿಗೆ ಹಾಗೂ ಅಲ್ಲಿರುವ ಎಲ್ಲಾ ನೌಕರವರ್ಗದವರಿಗೆ ನಾನು ಅಭಿನಂದಿಸಬೇಕಾಗಿದೆ. ಇನ್ನೊಂದು ಪ್ರಾಮುಖ್ಯವಾಗಿರತಕ್ಕ ಇಲಾಖೆ ಎಂದರೆ ನೀರಾವರಿ ಇಲಾಖೆ. ಇವತ್ತು ನೀರಾವರಿ ಇಲಾಖೆಯ ಬಗ್ಗೆ ಒಂದು ಸಲಹೆಯನ್ನು ಕೊಡಲು ಇಚ್ಛೆಪಡುತ್ತೇನೆ. ಈ ಭಾಗದ ಮಾನ್ಯ ಸದಸ್ಯರೆಲ್ಲರೂ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ನಮ್ಮ ನೀರನ್ನು ಸಂಪೂರ್ಣವಾಗಿ ಉಪಯೋಗಿಸತಕ್ಕ ಯೋಜನೆಗಳನ್ನು ನಾವು ನಿರೂಪಿಸಬೇಕೆಂಬುದು ಎಲ್ಲರಿಗೂ ಗೊತ್ತಿರತಕ್ಕದೇ ಆಗಿದೆ. ನಮ್ಮ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ನಾವು ಯಾವುದೇ ಕಾರಣದಿಂದಲೂ ಕೂಡ ಒಂದು ಹನಿ ನೀರನ್ನು ಉಪಯೋಗಿಸಿಕೊಳ್ಳದೆ ಹೊರಗಡೆ ಬಿಡಬಾರದು, ಹಾಗೆ ಮಾಡಿದರೆ ನಾವು ಕರ್ನಾಟಕಕ್ಕೆ ದ್ರೋಹವನ್ನು ಬಗೆದಂತಾಗುತ್ತದೆ ನಾವು ಭಾವಿಸಬೇಕು. ನಾವು ಈಗಾಗಲೇ ಅದರ ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಕಾವೇರಿ ಬೇಸಿನ್ ಸಮಸ್ಯೆ ಇವತ್ತು ನಮ್ಮ ರಾಜ್ಯದ ಮುಂದೆ ನಿಂತಿದ್ದು, ಇದರಿಂದ ನಾವು ನಾನಾ ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಅದಕ್ಕೆ ಕಾರಣ, 100 ವರ್ಷದ ಇತಿಹಾಸವಿರಲಿ ಬೇರೆ ಯಾವುದೇ ಕಾರಣವಿರಲಿ. ಅದು ಬೇರೆ ಪ್ರಶ್ನೆ. ಇವತ್ತು ನೂರು ವರ್ಷಗಳ ಹಿಂದಿನ ಕಥೆ ಇದೆ ಎಂದು ಬೆಟ್ಟು ಮಾಡಿ ತೋರಿಸುವುದಾದರೆ ನಾಳೆ ದಿನ ಇನ್ನೊಂದು ಕಡೆ ಬೆಟ್ಟು ಮಾಡಿ ತೋರಿಸಬೇಕಾಗುತ್ತದೆ. ಬಚಾವತ್ ಅವಾರ್ಡ್ ಪ್ರಕಾರ ನಾವು ಕೃಷ್ಣಾ ಬೇಸಿನ್ ನೀರನ್ನು ಯಾವ ರೀತಿ ಉಪಯೋಗಿಸಿಕೊಂಡೆವು ಎನ್ನತಕ್ಕ ಪ್ರಶ್ನೆ ಬರುತ್ತದೆ. ಇವತ್ತು ನಾವು ಕಾವೇರಿಯನ್ನು ಹಿಂದಕ್ಕೆ ತೋರಿಸಿತಕ್ಕ ಪ್ರಶ್ನೆಯಲ್ಲ, ಮುಂದೆ ನಮಗೆ ಕೃಷ್ಣಾ ಬೇಸಿನ್ ಇದೆ. ಇದಕ್ಕೆ ಬಹಳ ಮುಖ್ಯವಾಗಿ ಆಗಬೇಕಾಗಿರತಕ್ಕದೆಂದರೆ, ನಾವು ಎಷ್ಟೇ ಮಾತನಾಡಿದರೂ ಅದರಿಂದ ಪ್ರಯೋಜನವಿಲ್ಲ. ನಾವು ಇದಕ್ಕೆ ಹಣವನ್ನು ರೂಢಿಸಬೇಕು, ಹಣವನ್ನು ಎಲ್ಲಿಂದ ತರಬೇಕು ಎಂಬ ಬಗ್ಗೆ ಯೋಚಿಸಬೇಕು. ಈಗ ನೀರಾವರಿ ಬಾಂಡುಗಳನ್ನು ಬಿಡುಗಡೆ ಮಾಡಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕು. ಆದರೆ, ಅದು ಕಷ್ಟವಾಗುತ್ತದೆ. ಈಗ ನಾನು ಒಂದು ಸಲಹೆಯನ್ನು ಮಾಡುತ್ತೇನೆ. ಏನೆಂದರೆ,. ನಾವು ಇವತ್ತು ಕಾವೇರಿ ಬೇಸಿನ್‌ಗೆ ಒಂದು ಪ್ರಾಧಿಕಾರಿ ಮತ್ತು ಕೃಷ್ಣಾ ಬೇಸಿನ್‌ಗೆ ಒಂದು ಪ್ರಾಧಿಕಾರ ಎಂದುಮಾಡಿ ಜನರಿಂದ ಹಣವನ್ನು ತರಲು ಸಾಧ್ಯವಿದೆ, ಹಣಕಾಸಿನ ಏಜೆನ್ಸಿಗಳಿಂದ ಹಣವನ್ನು ತರಲು ಸಾಧ್ಯವಿದೆ. ನಾವು ಮೊದಲು ಈ ಕೆಲಸವನ್ನು ಮಾಡಿ ಮುಗಿಸಿದರೆ ನಂತರ ಜನರ ಸಾಲವನ್ನು ವಾಪಸ್ಸು ಕೊಡುವುದರ ಬಗ್ಗೆ ಚಿಂತನೆ ಮಾಡಬಹುದು. ಇವತ್ತು ಕಾವೇರಿ ನೀರಿನ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಇವತ್ತು ಕಾವೇರಿ ನದಿ ನೀರಿನ ವಿವಾದ ಟ್ರಿಬ್ಯೂನಲ್ ಮುಂದೆ ಇದೆ. ಇವತ್ತು ಅವರು ಅವರದೇ ಆದಂಥ ನಿರ್ದೇಶನವನ್ನು ಕೊಟ್ಟಿದ್ದಾರೆ. ಅದರ ಮುಂದೆ ನಮ್ಮ ಕೇಸನ್ನು ಮಂಡನೆ ಮಾಡಿದ್ದೇವೆ. ಇವತ್ತು ನಮ್ಮ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕ, ಉತ್ಪಾದನೆಯಾಗತಕ್ಕ, ಹರಿಯತಕ್ಕ ನೀರು ಏನಿದೆ, ಎಷ್ಟು ಟಿ.ಎಂ.ಸಿ. ನೀರು ಹರಿಯುತ್ತದೆ. ಆ ನೀರಿನ ಒಂದೊಂದು ಹನಿಯನ್ನೂ ಕೂಡ ಉಪಯೋಗಿಸಿಕೊಳ್ಳತಕ್ಕ ಹಕ್ಕು ನಮಗೆ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಲು ಎಲ್ಲಾ ರೀತಿಯಲ್ಲೂ ಕೂಡ ಅವಕಾಶವನ್ನು ಸರ್ಕಾರ ಕಲ್ಪಿಸಬೇಕು. ಅದಕ್ಕಾಗಿ

ರೈತರ ಮುಂದೆಯಾಗಲಿ, ಪ್ರಧಾನಮಂತ್ರಿಗಳ ಮುಂದೆಯಾಗಲಿ , ಕೇಂದ್ರ ಸರ್ಕಾರದ ಮುಂದೆಯಾಗಲಿ, ಎಲ್ಲೇ ಆದರೂ ಕೂಡ ನಾವು ನಮ್ಮ ಹಕ್ಕಿಗೆ ಹೋರಾಟ ಮಾಡಬೇಕಾಗುತ್ತದೆ. ಒಂದು ಹನಿ ನೀರನ್ನೂ ಸಹ ಹೊರಗಡೆ ಬಿಡದ ರೀತಿಯಲ್ಲಿ ನಮ್ಮ ಜಲಾನಯನ ಪ್ರದೇಶದಲ್ಲಿ ಬರತಕ್ಕ ನೀರನ್ನು ಸಂಪೂರ್ಣವಾಗಿ ನಿಯೋಜಿಸತಕ್ಕ, ಉಪಯೋಗಿಸತಕ್ಕ ಮಟ್ಟಕ್ಕೆ ನಾವು ಹೋಗಬೇಕೆನ್ನತಕ್ಕ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಹೇಮಾವತಿ ಬಗ್ಗೆ ಸರ್ಕಾರವನ್ನು ಅದರಲ್ಲೂ ಕೂಡ ಮಾನ್ಯ ಬಂಗಾರಪ್ಪನವರ ನೇತೃತ್ವದ ಸರ್ಕಾರವನ್ನು ಬಹಳವಾಗಿ ಅಭಿನಂದಿಸಬೇಕಾಗುತ್ತದೆ. ಹೇಮಾವತಿ ಬರತಕ್ಕಂಥಾದ್ದು ಕಾವೇರಿ ಜಲಾನಯನ ಪ್ರದೇಶದಲ್ಲಿ. ಅದಕ್ಕಾಗಿ ಈಗಾಗಲೇ ಕಳೆದ 2-3 ವರ್ಷಗಳಿಂದ 80 ರಿಂದ 100 ಕೋಟಿ ರೂಪಾಯಿಳವರೆಗೆ ಹಣವನ್ನು ಖರ್ಚು ಮಾಡಿದ್ದಾರೆ. ಆ ಹಣವನ್ನು ಖರ್ಚು ಮಾಡಿ ಕೆಲಸ ಯಶಸ್ವಿಯಾಗದೇ ಇದ್ದರೆ ಆಗ ಅಲ್ಲಿ ಅವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ತಾವು ದಯವಿಟ್ಟು ಮರೆಯಬಾರದು. ಇವತ್ತು ಏನಾಗಿದೆಯೆಂದರೆ 1 ಕಿ.ಮೀ. ನಿಂದ 2ಕಿ.ಮೀ.ವರೆಗೆ ಕೆಲಸವನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟು ಬಿಡುತ್ತಾರೆ. ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವರ್ಕ್‌ನ್ನು ಎನ್‌ಟ್ರಸ್ಟ್ ಮಾಡಬೇಕಾದರೆ ನೀವು ಜನರಲ್ಲಾಗಿ ಆರ್ಡರ್ ಮಾಡಿಕೊಂಡಿದ್ದೀರಿ. Budget work should be entrusted to the Construction Corporation ಅಂತ ಹೇಳಿ ಅದರಲ್ಲಿ 20 ಪರ್ಸೆಂಟ್ ಎಕ್ಸಸ್ ಕೋಟ್ ಮಾಡುತ್ತಾರೆ, ಎಕ್ಸಸ್ ಕೋಟ್ ಮಾಡಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರು ಕೆಲಸ ಮಾಡುತ್ತಿದ್ದಾರೆಯೇ ಅಂದರೆ ಅವರು ಕೆಲಸ ಮಾಡುತ್ತಿಲ್ಲ. ಅವರು ಬೇರೆ ಬೇರೆ ಕಂಟ್ರಾಕ್ಟರ್‌ಗಳಿಗೆ ಕೆಲಸ ಕೊಡುತ್ತಾರೆ. ಅವರು ಯಾರು ಎಂದರೆ ನಮ್ಮಂತಹವರಲ್ಲ, ಹೊರ ರಾಜ್ಯದ ಕಂಟ್ರಾಕ್ಟರ್‌ಗಳು ಕರ್ನಾಟಕದ ಕಂಟ್ರಾಕ್ಟರ್‌ಗಳನ್ನು ಅಡ್‌ಜೆಸ್ಟ್ ಮಾಡಿ ಕೊಂಡು ನೀವು ಹೆಚ್ಚು ಕೂಗಬೇಡಿ ಎಂದು ಹೇಳಿ ಕಾಂಪ್ರಮೈಸ್ ಕಂಟ್ರಾಕ್ಟ್ ಆಗಿ ಮಾಡಿಕೊಂಡಿದ್ದಾರೆ. ಇದರಿಂದಾಗಿ 35 ಪರ್ಸೆಂಟ್‌ನಿಂದ 40 ಪರ್ಸೆಂಟ್ ಎಕ್ಸೆಸ್ ಪೇಮೆಂಟ್ ಕೊಡತಕ್ಕಂತಹ ಮಟ್ಟಕ್ಕೆ ನಾವು ಇಂದು ಹೋಗಿದ್ದೇವೆಂದು ಹೇಳುತ್ತೇನೆ. ನಿಜವಾಗಲೂ ಕೂಡ ಮಲ್ಲಾರಿಗೌಡರ ಬಗ್ಗೆ ನನಗೆ ಅಭಿಮಾನವಿದೆ. ಎಫೆಕ್ಟೀವ್ ಆದ ಮಂತ್ರಿಗಳೆಂದು ನಾನು ನಿಜವಾಗಿ ಅವರನ್ನು ಒಪ್ಪಿಕೊಂಡಿದ್ದೇನೆ. ಆದರೆ, ಇವತ್ತು ನೀವು ಬರೀ ಮಾತನಾಡುವುದಕ್ಕಿಂತ ಹೆಚ್ಚಾಗಿ ಕೃತಿಗಳಲ್ಲಿ ತೋರಿಸಬೇಕಾಗಿದೆ. ನೀವು ಜವಾಬ್ದಾರಿಕೆ ತೆಗೆದುಕೊಂಡು ಕೆಲಸ ಮಾಡಿ. ಇವತ್ತು ನೀವು ಒಳ್ಳೆಯ ಆಡಳಿತಾಧಿಕಾರಿಗಳನ್ನು ಇಟ್ಟುಕೊಂಡು ಮುಖ್ಯ ಇಂಜಿನಿಯರ್‌ಗಳನ್ನು ಇಟ್ಟುಕೊಂಡು ಕೆಲಸ ಮಾಡಿದ್ದೇ ಆದರೆ 100 ಕೋಟಿ ರೂಪಾಯಿಗಳಲ್ಲಿ 25 ಕೋಟಿ ರೂಪಾಯಿಗಳನ್ನು ಸೇವ್ ಮಾಡುವುದಕ್ಕೆ ಸಾಧ್ಯವಿದೆ. ಈಗ ಏನಾಗುತ್ತಿದೆಯೆಂದರೆ , ಮಣ್ಣಿನ ಕೆಲಸಮಾಡಲು ಆರ್ಡರ್ ಪಡೆಯುತ್ತಾರೆ. ನಂತರ ಸಾಫ್ಟ್ ರಾಕ್ ಅಂತ ಹೇಳುತ್ತಾರೆ. ಇದರ ಆಧಾರ ಇಟ್ಟುಕೊಂಡು ಇವತ್ತು 25 ಪರ್ಸೆಂಟ್, 30 ಪರ್ಸೆಂಟ್ ಹೆಚ್ಚುವರಿ ಬಿಲ್ ತಯಾರು ಮಾಡುತ್ತಾರೆ. ಇದರಿಂದಾಗಿ 35 ಪರ್ಸೆಂಟ್ ದುಡ್ಡು ಕಣ್ಣಿಗೆ ಕಂಡಂತೆ ಇವತ್ತು ಹಾಳಾಗುತ್ತಿದೆ. ಈ ಕೆಲಸ ಯಾರು ಮಾಡುತ್ತಿದ್ದಾರೆಂದರೆ, ಆಂಧ್ರದಿಂದ, ಕೇರಳದಿಂದ ಬಂದ ಕಂಟ್ರಾಕ್ಟ್‌ದಾರರು ಮಾಡುತ್ತಿದ್ದಾರೆ. ಅವರುಇಲ್ಲಿಗೆ ಬಂದ ಎರಡು ವರ್ಷಕ್ಕೆ ಮೂರು ವರ್ಷಕ್ಕೆಲ್ಲಾ ಹೋಟೆಲ್‌ಗಳನ್ನು ಕೂಡ ಕಟ್ಟುತ್ತಿದ್ದಾರೆ. ತುಮಕೂರಿನಲ್ಲಿ ಇರತಕ್ಕಂಥ ದೊಡ್ಡ ದೊಡ್ಡ ಹೋಟೆಲ್‌ಗಳನ್ನು ತಾವು ನೋಡಬೇಕು. ನೀವು ನನ್ನ ಜೊತೆ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಆ ಹೋಟೆಲ್‌ಗಳನ್ನು ಹೊರಗಡೆಯಿಂದ ಬದಿರತಕ್ಕಂಥ ಕಂಟ್ರಾಕ್ಟದಾರರು ಕಟ್ಟಿಸಿದ್ದಾರೆ. ಈ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ, ನಿಮ್ಮ ಇಲಾಖೆ ಬಹಳ ಪ್ರಾಮುಖ್ಯವಾಗಿರತಕ್ಕಂಥಾದ್ದು, ನಿಮ್ಮ ಆಡಳಿತವನ್ನು ನೀವು ಇಂಪ್ರೂವ್ ಮಾಡಬೇಕಾದರೆ ನಿಮ್ಮ ಇಲಾಖೆಯಲ್ಲಿ ಒಳ್ಳೆಯ, ದಕ್ಷ ಅಧಿಕಾರಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ. ನಿಮ್ಮ ಇಲಾಖೆಯಲ್ಲಿ ಒಬ್ಬ ಕಾರ್ಯದರ್ಶಿಯವರು ಇದ್ದಾರೆ. ಅವರ ಬಗ್ಗೆ ನಾನು ಹೆಚ್ಚಿನ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನೀವು ನನಗೆ ಇದೇ ವಿಚಾರದಲ್ಲಿ ನನ್ನ ಗಮನ ಸೆಳೆಯುವ ಸೂಚನೆಗೆ ಏನು ಉತ್ತರವನ್ನು

ಕೊಟ್ಟಿದ್ದೀರಿ, ಆ ಉತ್ತರವನ್ನು ಬಹುಶ: ಈಗ ಹೇಳತಕ್ಕಂಥ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತದೆ. ಇದನ್ನು ಅಷ್ಟಕ್ಕೆ ನಾನು ಬಿಡುತ್ತೇನೆ. ಆದರೆ , ಇದನ್ನು ನಿರ್ವಹಿಸಲು ಸಮರ್ಥರಾದಂತಹ ಅಧಿಕಾರಿಗಳನ್ನು ಇಟ್ಟುಕೊಂಡು ನೀವು ಕೆಲಸ ಮಾಡಬೇಕಾಗುತ್ತದೆ. 40-50 ಜನ ಚೀಫ್ ಇಂಜಿನಿಯರ್‌ಗಳನ್ನು ನೀವು ಏತಕ್ಕೋಸ್ಕರ ಇಟ್ಟುಕೊಂಡಿದ್ದೀರಿ. ಹೇಮಾವತಿ ಬಲ ದಂಡೆ ನಾಲೆಗೆ ಒಬ್ಬ ಚೀಫ್ ಇಂಜಿನಿಯರ್, ಎಡ ನಾಲೆಗೆ ಒಬ್ಬ ಚೀಫ್ ಇಂಜಿನಿಯರ್, ಡ್ಯಾಮ್ ನೋಡಿಕೊಳ್ಳುವುದಕ್ಕೆ ಒಬ್ಬ ಚೀಫ್ ಇಂಜಿನಿಯರ್. ಸ್ವಾಮಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ಒಬ್ಬರು ಮಾತ್ರ ಚೀಫ್ ಇಂಜಿನಿಯರ್ ಇರುತ್ತಿದ್ದರು. ಮೊನ್ನೆ ಮೊನ್ನೆ ಮುಗ್ದುಂರವರ ಕಾಲದಲ್ಲಿ ಸಹ ಒಬ್ಬರು ಚೀಫ್ ಇಂಜಿನಿಯರ್ ಇದ್ದರು. ಇವತ್ತು ಸುಮಾರು 38 ಜನ ಅಥವಾ 45 ಜನ ಚೀಫ್ ಇಂಜಿನಿಯರ್‌ಗಳು ಆಗಿದ್ದಾರೆ. ಇವತ್ತು ಈ ಪೋಸ್ಟ್‌ಗಳಿಗೆ ಪ್ರೊಮೋಷನ್ ಕೊಡುವುದರಿಂದ ಹೀಗೆ ಆಗುತ್ತಿದೆ. ಇನ್ನು 8 ದಿವಸಕ್ಕೆ ಯಾರಾದರೂ ರಿಟೈರ್ ಆಗುತ್ತಾರೆಂದರೆ ಅಂತಹವರಿಗೂ ಸಹ ಚೀಫ್ ಇಂಜಿನಿಯರ್ ಆಗಿ ಪ್ರೊಮೋಷನ್ ಕೊಟ್ಟು ಮನೆಗೆ ಕಳುಹಿಸುತ್ತೇವೆನ್ನುವ ಮಾತನ್ನು ನಮ್ಮ ಹತ್ತಿರ ಹೇಳುತ್ತೀರಿ. ಇವತ್ತು ಬರೀ ಪ್ರೊಮೋಷನ್ ಕೊಟ್ಟು ಅವರಿಗೆ ಸಮಾಧಾನ ಮಾಡತಕ್ಕಂಥಾದ್ದು ಮುಖ್ಯವಲ್ಲ. ಅವರಿಗೆ ನಾವು ಸಂಬಳ ಕೊಡುತ್ತೇವೆ, ಅವರು ಕೆಲಸ ಮಾಡಬೇಕು ಅಷ್ಟೆ. ಅವರ ಹಿತದೃಷ್ಟಿಯಿಂದ ಅವರ ಇಚ್ಛೆಗೋಸ್ಕರ ನಾವು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡುವಂತಾದ್ದು ಒಳ್ಳೆಯದಲ್ಲ. ನೀವು ಸ್ವಲ್ಪ ಮಟ್ಟಿಗೆ ಧೈರ್ಯ ಮಾಡಿ ಅವರ ಮೇಲೆ ಕಂಟ್ರೋಲ್ ಇಡತಕ್ಕ ಕೆಲಸವನ್ನು ಮಾಡಬೇಕು. ನೀವು ಯಾವುದೇ ತೀರ್ಮಾನ ತೆಗೆದುಕೊಂಡರೂ ನಿಮಗೆ ಮಾನ್ಯ ಮುಖ್ಯಮಂತ್ರಿಗಳ ಬೆಂಬಲವಿದೆ. ಅದನ್ನು ತಾವು ಅರ್ಥಮಾಡಿಕೊಂಡು ರಾಜ್ಯದ ಹಿತದೃಷ್ಟಿಯಿಂದ ನೀವು ಸಮರ್ಥ ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡಬೇಕೆನ್ನುವ ಒಂದು ಸಲಹೆಯನ್ನು ಕೊಡುತ್ತೇನೆ. ಇನ್ನು ಕಾವೇರಿ ಮತ್ತು ಕೃಷ್ಣಾ ಬೇಸಿನ್‌ಗಳಿಗೆ ಸಂಬಂಧಪಟ್ಟಂತೆ ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳನ್ನು ಮಾಡಿದ್ದೀರಿ. ನೀವು ಯಾರಿಗೋಸ್ಕರ ಮಾಡಿದ್ದೀರಿ? ಅದನ್ನು ಮಾಡಿದವರು ಬೇರೆ ಯಾರೇ ಇರಬಹುದು, ಇವತ್ತು ಈ ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಿಗೆ 8-10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅದರಲ್ಲಿ ಕೆಲಸ ತೆಗೆದುಕೊಂಡಿರುವುದು ಬರೀ 3-4 ಕೋಟಿ ರೂಪಾಯಿಗಳಷ್ಟು ಮಾತ್ರ. ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಿಗೆ ನೀವು ಯಾವ ತರಹ ಹಣ ಹಾಕುತ್ತೀರೆಂಬುದನ್ನು ಹೇಳುತ್ತೇನೆ. 10 ಪರ್ಸೆಂಟನ್ನು ಸರ್ಕಾರ ಹಾಕತಕ್ಕಂಥಾದ್ದು, 15 ಪರ್ಸೆಂಟನ್ನು ರೈತರು ಹಾಕತಕ್ಕಂಥಾದ್ದು, 75 ಪರ್ಸೆಂಟ್ ಹಣವನ್ನು ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದು ಇದೆ. ಈ ರೀತಿಯಿಂದ ನೀವು ಹಣ ಕೊಡಿಸಿ ಕೆಲಸ ಮಾಡುವುದಾದರೆ ಖಂಡಿತವಾಗಿಯೂ ಒಂದು ಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಾನು ಹೇಳುತ್ತೇನೆ, ನಿಮ್ಮ ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಲ್ಲಿ ಏನಾಗಿದೆಯೆಂದರೆ, ಹಿಂದೆ ಯಾರೋ ಒಬ್ಬರು ಮಂತ್ರಿಗಳಾಗಿದ್ದರು ಈ ಕಾರ್ಪೊರೇಷನ್‌ಗಳನ್ನು ಮಾಡಿ ಅವರಿಗೆ ಬೇಕು ಬೇಕಾದವರಿಗೆಲ್ಲಾ ಕೆಲಸ ಕೊಡುವುದಕ್ಕೆ ಈ ಒಂದು ಮಾರ್ಗ ಹುಡುಕಿದರು. ಅಷ್ಟು ಬಿಟ್ಟರೆ ಅಲ್ಲಿ ಪ್ರಗತಿ ಏನೇನೂ ಆಗಿಲ್ಲ. ಕರ್ತವ್ಯ ದೃಷ್ಟಿಯಿಂದ ಹೇಳುವುದಾದರೆ ಈ ಎರಡು ಕಾರ್ಪೊರೇಷನ್‌ಗಳನ್ನು ನಿಮ್ಮ ಇಲಾಖೆಗೆ ಮರ್ಜ್‌ಮಾಡಿ ಕೆಲಸ ಮಾಡುವಂತಾದ್ದು ಇವತ್ತು ಆಗಬೇಕು. ಅದು ಬಹಳ ಮುಖ್ಯ. ನಾನು ಬಂದಿರತಕ್ಕಂಥಾದ್ದು ತುಮಕೂರು ಜಿಲ್ಲೆ ಪ್ರದೇಶದಿಂದ, ನಮ್ಮ ಭಾಗದ 3-4 ತಾಲ್ಲೂಕುಗಳಿಗೆ ಹೇಮಾವತಿ ನೀರನ್ನು ಕೊಡುತ್ತೀರೆಂದು ನಾನು ನಂಬಿರುತ್ತೇನೆ. ಇನ್ನು ತುಮಕೂರು ಜಿಲ್ಲೆಯ ಕೆಲವೊಂದು ಭಾಗಗಳು ಮತ್ತು ಚಿತ್ರದುರ್ಗ ಜಿಲ್ಲೆ ಇವತ್ತು ಶಾಶ್ವತವಾದ ಕ್ಷಾಮಪೀಡಿತ ಪ್ರದೇಶ ಎಂದು ಹೇಳಿ ಕೇಂದ್ರ ಸರ್ಕಾರದವರು ಡಿಕ್ಲೇರ್ ಮಾಡಿದ್ದಾರೆ. ಇದೇ ಕಾರಣದಿಂದ ಕಳೆದ ಸುಮಾರು 25 ವರ್ಷಗಳಿಂದಲೂ ಕೂಡ ಅಲ್ಲಿ ಅಪ್ಪರ್ ಭದ್ರಾ ಯೋಜನೆ ಜಾರಿಗೆ ತರುತ್ತೇವೆಂದು ತಾವು ಹೇಳುತ್ತಿದ್ದೀರಿ. ಇವತ್ತು ಅಪ್ಪರ್ ಭದ್ರಾ ಬಗ್ಗೆ ಏನಾಗಿದೆ?ಹೇಳಿದ್ದೇ ಹೇಳೋ ಕಿಸಬಾಯಿದಾಸ ಎನ್ನುವಂತೆ ಎಲ್ಲಾ ಸಂದರ್ಭದಲ್ಲೂ ನಾವು ಹೇಳಿದ್ದು, ಹೇಳಿದ್ದೇ. ಇದು ನನಗೆ

ಬೇಸರವಾಗಿರುವುದರಿಂದ ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಪ್ಪರ್ ಭದ್ರಾ ಬಗ್ಗೆ ನಿಮ್ಮದು ಯಾವ ನಿರ್ದಿಷ್ಟ ನೀತಿ ಮತ್ತು ನಿಲುವು ಇದೆ? ಇದು ಕೇವಲ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆಯೋ ಅಥವಾ ಅಂತಿಮವಾಗಿ ಏನಾದರೂ ಮಾಡುತ್ತೀರೋ, ಎಂಬುದನ್ನು ಹೇಳಬೇಕು. ಏಕೆಂದರೆ, ನಾವು ಯಾರನ್ನಾದರೂ ಹೋಗಿ ಕೇಳಿದರೆ, ಈ ಅಪ್ಪರ್ ಭದ್ರಾ, ಅಪ್ಪರ್ ತುಂಗಾ ಆದಮೇಲೆ ಇದು ಬರುವುಕ್ಕೆ ಸಾಧ್ಯವೇ ಇಲ್ಲವೆಂದು ಟೆಕ್ನಿಕಲ್ ಆಗಿ ಹೇಳುತ್ತಾರೆ. ನಮಗೂ ಕೂಡ ಟೆಕ್ನಿಕಲ್ ಆಗಿ ಏನೆಂಬುದು ಗೊತ್ತಿಲ್ಲ. ಈ ರಾಜ್ಯದ ಎಲ್ಲ ಭಾಗಗಳಿಗೂ ನೀವು ನೀರನ್ನು ಕೊಡಬಹುದು. ಆದರೆ ತುಮಕೂರಿನ ಕೆಲವು ಭಾಗ, ಚಿತ್ರದುರ್ಗ, ಕೋಲಾರಕ್ಕೆ ನೀವು ನೀರನ್ನು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ನೀವು ಒಂದು ಯೋಜನೆಯನ್ನು ತಯಾರಿಸಿ ಅದನ್ನು ಕೇಂದ್ರಕ್ಕೆ ಕಳುಹಿಸಿ ಅದರ ಒಪ್ಪಿಗೆಯನ್ನು ಪಡೆದುಕೊಳ್ಳಿ. ನೀವು ನಮಗೆ ಏನು ಹೇಳುತ್ತೀರಿ ಅದನ್ನು ನಾವು ಜನರಿಗೆ ಹೇಳಬೇಕಾಗುತ್ತದೆ. ಇವತ್ತಲ್ಲದಿದ್ದರೆ ಕೊನೇಪಕ್ಷ ಇನ್ನು 10 ವರ್ಷಕ್ಕೋ 20 ವರ್ಷಕ್ಕೋ ಈ ಯೋಜನೆ ಖಚಿತವಾಗಿ ಬರುತ್ತದೆಂದಾದರೂ ನೀವು ಹೇಳಬೇಕಲ್ಲಾ. ಕೇಂದ್ರ ಸರ್ಕಾರದ ಅನುಮತಿ ಇದಕ್ಕೆ ಇದೆ ಎನ್ನತಕ್ಕ ಮಾತನ್ನು ಆದರೂ ತಾವು ಹೇಳಿ, ಹಣಕಾಸಿನ ಪರಿಸ್ಥಿತಿ ನಮಗೆ ಅರ್ಥವಾಗಿದೆ. 10 ವರ್ಷವಲ್ಲದಿದ್ದರೆ 20 ವರ್ಷ ಬಿಟ್ಟಾದರೂ ನೀವು ಪ್ರಯತ್ನ ಮಾಡಿ. ಆದರೆ ನಮಗೆ ಖಚಿತವಾದ ಉತ್ತರವನ್ನು ದಯವಿಟ್ಟು ಕೊಡಬೇಕು. ಮತ್ತೊಂದು ವಿಚಾರ ಎಂದರೆ, ನೇತ್ರಾವತಿ ನದಿ ತುಂಬಿ ಹರಿಯುತ್ತಿದೆ. ನೇತ್ರಾವತಿಯಲ್ಲಿ ಎಷ್ಟು ನೀರು ಹರಿದು ಹೋಗುತ್ತಿದೆ ಎಂಬುದು ಗೊತ್ತಿಲ್ಲ. ಆ ನೀರನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನು ವಿದ್ಯುಚ್ಛಕ್ತಿ ಬಗ್ಗೆ ನಾನು ಒಂದು ಸಲಹೆಯನ್ನು ಕೊಡಬೇಕಾಗುತ್ತದೆ. ಈ ಇಲಾಖೆಯ ಬಗ್ಗೆ ಈ ಸದನದಲ್ಲಿ ಅನೇಕರೀತಿಯ ಟೀಕೆ ಟಿಪ್ಪಣಿಗಳನ್ನು ಮಾಡುತ್ತಲೇ ಇರುತ್ತೇನೆ. ರೈತರು ನಮ್ಮ ಮೇಲೆ ಬೀಳುತ್ತಲೇ ಇರುತ್ತಾರೆ. ಇದನ್ನು ಸರ್ವೇ ಸಾಧಾರಣವಾಗಿ ಎಲ್ಲರೂ ಪ್ರತಿದಿನ ನೋಡುತ್ತಿದ್ದೇವೆ, ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಸ್ವತ: ಅನುಭವಿಸುತ್ತಿದ್ದೇವೆ. ಕೆ.ಇ.ಬಿ ಬಗ್ಗೆ ನಾವು ಮಾತನಾಡುವುದು ಸರಿಯಲ್ಲ. ಕೆ.ಇ.ಬಿ.ಯವರ ಕೆಲಸ ಕೇವಲ ಡಿಸ್ಟ್ರಿಬ್ಯೂಷನ್ ಮಾತ್ರ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವವರು ಬೇರೆಯವರು. ಇದರಲ್ಲಿ ಟ್ರಾನ್ಸ್‌ಮಿಷನ್ ಲಾಸ್ 19 ಪರ್ಸೆಂಟ್ ಇದೆ. ಇವತ್ತು ನ್ಯಾಷನಲ್ ಲೆವೆಲ್‌ನಲ್ಲಿ 22 ಪರ್ಸೆಂಟ್ ಇದೆ. ನಾನು ಕೆ.ಇ.ಬಿ. ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ಇವತ್ತು ಪವರ್ ಕಾರ್ಪೊರೇಷನ್ ಏನಾಗಿದೆ? ಇದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕು. ಇವತ್ತು ಪವರ್ ಜನರೇಷನ್ ಮಾಡುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದಕ್ಕೂ ಕೂಡ ನಮಗೆ ಹಣ ಬೇಕಾಗಿದೆ. ಇದಕ್ಕೆ ನಾವು ಯಾವರೀತಿಯಲ್ಲಿ ಹಣವನ್ನು ತೊಡಗಿಸಬಹುದೆಂಬ ಬಗ್ಗೆ ಕೂಡ ಯೋಚನೆ ಮಾಡಬೇಕು. ಮಾನ್ಯ ರಾಮಪ್ಪನವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಬೇಕಾದವರು. ಅವರು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಕೂತು, ಹಠಮಾಡಿ ವಿದ್ಯುಚ್ಛಕ್ತಿ ಉತ್ಪಾದನೆ ಹೆಚ್ಚಾಗುವ ರೀತಿಯಲ್ಲಿ ಹೊಸ ಹೊಸಯೋಜನೆಗಳನ್ನು ಕೈಗೊಳ್ಳಬೇಕು. ಒಂದು ವಿಚಾರ ನನಗೂ ಗೊತ್ತಿದೆ. ಇದು ಕೇವಲ ಒಂದೆರಡು ದಿವಸದಲ್ಲಿ ಆಗುವಂಥಾದ್ದಲ್ಲ. ಹತ್ತಾರುವರ್ಷಕಾಲ ಬೇಕಾಗುತ್ತದೆ. ಇದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಇವತ್ತು ಸುಮಾರು 40-50 ಲಕ್ಷ ಜನರು ಎಂಪ್ಲಾಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿರತಕ್ಕದ್ದನ್ನು ನೋಡಿದ್ದೇವೆ. ಇವತ್ತು ಅವರೆಲ್ಲರಿಗೂ ಉದ್ಯೋಗ ಬೇಕಾಗಿದೆ. ಅವರಿಗೆಲ್ಲಾ ನೀವು ಯಾವ ರೀತಿ ಉದ್ಯೋಗವನ್ನು ಕೊಡುತ್ತೀರಿ? ಇವತ್ತು 5 ಕೋಟಿ ಜನಸಂಖ್ಯೆ ಇರತಕ್ಕ ಈ ರಾಜ್ಯದಲ್ಲಿ 5 ಲಕ್ಷ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೇವೆ. ಇದಕ್ಕಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಇವತ್ತು ರೈತನ ವಿದ್ಯಾವಂತ ಮಕ್ಕಳಿಗೆ ಕೆಲಸ ಕೊಡಬೇಕಾದರೆ, ನಿಮಗೆ ಭೂಮಿ ಇದೆ, ವಿದ್ಯುಚ್ಛಕ್ತಿ ಇದೆ, ಇದನ್ನು ಉಪಯೋಗ ಮಾಡಿಕೊಂಡು ಹೆಚ್ಚಿನ ಬೆಳೆಯನ್ನು ಬೆಳೆಯಿರಿ ಎಂದು ಹೇಳಬೇಕಾದರೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವ ಬಗ್ಗೆ ತಾವು ಹೆಚ್ಚು ಒತ್ತು ಕೊಡಬೇಕು. ಇನ್ನು ಇವತ್ತು ನಾನು ಕೆ.ಇ.ಬಿ. ಛೇರ್ಮನ್ ಬಗ್ಗೆ ಒಂದು ಒಳ್ಳೆಯ ಮಾತನಾಡಬೇಕಾಗಿದೆ. ಅವರ ಬಗ್ಗೆ

ಟೀಕೆಟಿಪ್ಪಣಿಗಳನ್ನು ಮಾಡುತ್ತಾರೆ. ನನಗೆ ಸ್ವಲ್ಪ ಬೇಸರವಾಗಿದೆ. ನಾನು ಇತ್ತೀಚೆಗೆ ಒಂದೆರಡು ಸಾರಿ ಹಳ್ಳಿಗೆ ಹೋದಾಗ ಜನರರು ಬಂದು ನಮಗೆ ಪವರ್ ಇಲ್ಲ, ವೋಲ್ಟೇಜ್ ಇಲ್ಲ ಎಂದು ಹೇಳಿದಾಗ ನಾವೇ ಅವರ ಮೇಲೆ ರೇಗುತ್ತೇವೆ. ಅಂದಮೇಲೆ ಇನ್ನು ಈ ಮಂಡಲಿಯ ಅಧ್ಯಕ್ಷರ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಾನು ನಿಮ್ಮ ಛೇಂಬರ್‌ಗೆ ಅಥವಾ ಅಧ್ಯಕ್ಷರ ಛೇಂಬರ್‌ಗೆ ಹೋದಾಗ ನೋಡುತ್ತೇನೆ. ಜನರು ಬಂದು ಏನು ಮಾತನಾಡುತ್ತಾರೆ ಎಂಬುದನ್ನು ನೋಡಿದ್ದೇನೆ. ಏಕೆಂದರೆ ಅವರಿಗೂ ಕಷ್ಟ ಇದೆ. ಇವತ್ತು ಮಂಡಳಿಯ ಅಧ್ಯಕ್ಷರು ಮಾಡತಕ್ಕ ಕೆಲಸದ ಬಗ್ಗೆ ನನ್ನ ಮೆಚ್ಚುಗೆ ಇದೆ. ಅವರ ದಕ್ಷತೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಈಗ ಅವರು ಡಿಸ್ಟ್ರಿಬ್ಯೂಷನ್‌ನಲ್ಲಿ ಸೂಧಾರಣೆ ಮಾಡುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರಿಗೂ ರೈತರ ಬಗ್ಗೆ ಬಹಳ ಅಭಿಮಾನ ಇದೆ. ಅವರು 70 ಸಾವಿರ ಪಂಪ್‌ಸೆಟ್ಟುಗಳಿಗೆ ಬದಲು 80 ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡುವುದಾಗಿ ಹೇಳಿಕೆ ಕೊಟ್ಟರು. ಆದರೆ ಪವರ್ ಜವರೇಷನ್ ಒಗ್ಗೆ ಹೆಚ್ಚಿನ ಗಮನಕೊಡಲಿಲ್ಲ. ಇದನ್ನು ತಾವು ಯೋಚನೆ ಮಾಡಿ ಅವರು ಕೊಟ್ಟಿರತಕ್ಕ ಆಶ್ವಾಸನೆ ಉಳಿಯಬೇಕಾದರೆ, ವೋಲ್ಟೇಜ್ ಉಳಿಯಬೇಕಾದರೆ ಪವರ್ ಜನರೇಷನ್ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ನಾನು ರೈತನ ಮಗನಾಗಿ ನಿಮ್ಮನ್ನು ಪ್ರಶಂಸೆ ಮಾಡಬೇಕಾಗಿದೆ.. ಏಕೆಂದರೆ, 10 ಹೆಚ್.ಪಿ.ವರೆಗೂ ಯಾವುದೇ ರೀತಿಯ ಶುಲ್ಕವನ್ನೂ ನಿಮಗೆ ರೈತರು ಕಟ್ಟಬೇಕಾಗಿಲ್ಲ. ಆದರೆ ಸರಿಯಾದ ವೋಲ್ಟೇಜ್ ಕೊಟ್ಟರೆ ಸಾಕು. ನಾನು ನಿಮ್ಮನ್ನು ಕೆಲಸ ಕೇಳುವುದಕ್ಕೆ ಬರುವುದಿಲ್ಲ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇದರ ಜೊತೆಗೆ ಪವರ್ ಕನೆಕ್ಷನ್ ಕೊಡತಕ್ಕದ್ದನ್ನು ಕಡಿಮೆಮಾಡಬೇಕು, ಮತ್ತು ವೋಲ್ಟೇಜ್ ಸುಧಾರಣೆ ಮಾಡುವ ಬಗ್ಗೆ ಡಿಸ್ಟ್ರಿಬ್ಯೂಷನ್ ಸುಧಾರಣೆ ಮಾಡುವ ಬಗ್ಗೆ, ಸಬ್ ಸ್ಟೇಷನ್ ಸುಧಾರಣೆ ಮಾಡುವ ಬಗ್ಗೆ ಕೂಡ ಯೋಚನೆ ಮಾಡಬೇಕು. ಮೊನ್ನೆ ನಾನು ಊರಿಗೆ ಹೋದಾಗ ನನ್ನನ್ನು ಘೇರಾವ್ ಮಾಡಿದರು. ನಿಮ್ಮ ಇಲಾಖೆಯ ಎಲ್ಲ ಇಂಜಿನಿಯರ್‌ಗಳೂ ಬಂದಾಗ ನಾವು ಆಶ್ವಾಸನೆ ಕೊಟ್ಟು ಬಂದೆವು. ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಒಂದು ಸಬ್‌ಸ್ಟೇಷನ್ ಮಾಡಿ ಕೊಡುತ್ತೇವೆಂದು ಹೇಳಿ ಬಂದಿದ್ದೇವೆ. ಇವತ್ತು ಅಲ್ಲಿರತಕ್ಕ ಐ.ಪಿ.ಸೆಟ್ಟುಗಳು ಅಂಕಿಅಂಶಗಳ ಆಧಾರದ ಮೇಲೆ ಹೊಸಕೆರೆಯಲ್ಲಿ ಒಂದು ಸಬ್ ಸ್ಟೇಷನ್ ಆಗಬೇಕು. ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಒಂದು ಸಬ್ ಸ್ಟೇಷನ್ ಆಗಬೇಕಾಗುತ್ತದೆ. ಕಳ್ಳಂಬೆಳ್ಳದ್ದು ಈ 31 ನೇ ತಾರೀಖಿನೊಳಗೆ ಮುಗಿಯುತ್ತದೆಂದು ಹೇಳಿದ್ದೀರಿ. ಬಹುಶ: 8-10ದಿನ ತಡವಾಗಿಯಾದರೂ ಇದನ್ನು ಮಾಡಿಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕಾಗಿ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈಸಾರಿ ಹುಳಿಯಾರಿನಲ್ಲಿ ಒಂದು ಸ್ಟೇಷನ್ ಪ್ರಾರಂಭ ಮಾಡಬೇಕಾಗಿದೆ. ಇದನ್ನು ಆದಷ್ಟು ಬೇಗ ಅಂದರೆ 3 ತಿಂಗಳಲ್ಲಿ ಮುಗಿಸುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಸಣ್ಣ ನೀರಾವರಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈಗ ಏನಾಗಿದೆ ಎಂದರೆ ದಯವಿಟ್ಟು ಈ ಇಲಾಖೆಯನ್ನು ಡಿಸಾಲ್ವ್ ಮಾಡುವುದು ಬಹಳ ಒಳ್ಳೆಯದೆಂದು ಕಾಣುತ್ತದೆ. ನಿಮ್ಮ ವ್ಯಾಪ್ತಿಯಲ್ಲಿ ಬರತಕ್ಕಂಥಾ ಎಲ್ಲಾ ಕೆರೆಗಳನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಕೊಡಿ. ನೀವು ಏತಕ್ಕೆ ಇಟ್ಟುಕೊಂಡಿದ್ದೀರಿ. ನಿಮ್ಮಲ್ಲಿ ಹಣವಿಲ್ಲದಿದ್ದರೂ ಕೆರೆಗಳು 250-350 ಇದೆ ಎಂದು ಹೇಳುತ್ತೀರಿ. ನನ್ನ ಕ್ಷೇತ್ರದಲ್ಲಿರತಕ್ಕಂಥ ಮೂರು ಕೆರೆಗಳನ್ನುನೋಡಿಕೊಳ್ಳಲು ಒಬ್ಬ ಇಂಜಿನೀಯರ್, ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಇರಬೇಕೇ? ಇವತ್ತಿನಿಂದ ಮಿತವ್ಯಯ ಆಚರಣೆ ಮಾಡಬೇಕು. ಅಡ್ಮಿನಿಸ್ಟ್ರೇಷನ್ ಬದಲಾವಣೆ ಮಾಡಬೇಕೆನ್ನುವ ಸಂದರ್ಭದಲ್ಲಿ ಮೈನರ್ ಇರಿಗೇಷನ್ ಟ್ಯಾಂಕ್‌ಗಳನ್ನು ಜಿಲ್ಲಾ ಪರಿಷತ್ತಿಗೆ ಟ್ರಾನ್ಸ್‌ಫರ್‌ಮಾಡಿ. ಇಲ್ಲವೆಂದರೆ ಜಿಲ್ಲಾ ಪರಿಷತ್ತಿನಲ್ಲಿರತಕ್ಕ ಎಲ್ಲವನ್ನು ನೀವು ತೆಗೆದುಕೊಳ್ಳಿ. ನೀವು ಅವರಿಗೆ ಸ್ವಲ್ಪ ಕೆರೆ, ಇವರಿಗೆ ಸ್ವಲ್ಪ ಕೆರೆಗಳನ್ನು ವಹಿಸುವ ವ್ಯಾಪಾರ ಬೇಡ. ಯಾರಾದರೂಬ್ಬರು ಇಟ್ಟುಕೊಂಡು ಮ್ಯಾನೇಜ್ ಮಾಡತಕ್ಕಂಥ ಮಟ್ಟಕ್ಕೆ ಹೋಗಿ. ಇವತ್ತು ನಿಮ್ಮ ಸಣ್ಣ ನೀರಾವರಿ ಇಲಾಖೆಯಲ್ಲಿ ಒಬ್ಬರು ಮುಖ್ಯ ಇಂಜಿನೀಯರ್, ಅದಕ್ಕೆ ಒಂದು ಇಲಾಖೆ, ಖಂಡಿತವಾಗಿಯೂ ಬೇಡವೆನ್ನತಕ್ಕಂಥ ಒಂದು ಸಲಹೆಯನ್ನು

ಕೊಡುತ್ತಿದ್ದೇನೆ. ತಮಗೂ ಗೊತ್ತಿರುವಂತೆ ಡಿ.ಪಿ.ಎಫ್.ಇ ಆಗಿರತಕ್ಕಂಥ ಕೆಲವು ಕೆರೆಗಳು ಸಾಕಷ್ಟು ಇವೆ. ಕೆಲಸ ಅರ್ಧಂಬರ್ಧವಾಗಿ ನಿಂತುಹೋಗಿವೆ. ಇದಕ್ಕೆ ಡಿ.ಪಿ.ಎಫ್.ಇ ಯಿಂದ ಹಣವನ್ನು ಕೊಡುತ್ತಿಲ್ಲ. ಆ ಕಡೆ ಜಿಲ್ಲಾ ಪರಿಷತ್ತು ತೆಗೆದುಕೊಳ್ಳುತ್ತಿಲ್ಲ. ನನ್ನ ಒಂದು ಕ್ಷೇತ್ರ ಮಟ್ಟಕ್ಕೆ ಹೇಳುವುದಾದರೆ, ಸುಮಾರು 40ರಿಂದ50 ಲಕ್ಷ ರೂಪಾಯಿ ಹಾಕಿರತಕ್ಕಂಥ ಹಣ ವ್ಯಯವಾಗಿದೆ. ಇದು ಏನಾಯಿತೋ ಗೊತ್ತಿಲ್ಲ. ಹಣ ಖರ್ಚಾಗಿದ್ದರೂ ಇವತ್ತು ಯಾವ ಕೆರೆಯ ಕೆಲಸವೂ ಮುಗಿದಿಲ್ಲ. ದಯವಿಟ್ಟು ಇದು ಎಲ್ಲವನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗಾದರೂ ತರುವುದಕ್ಕೆ ತೀರ್ಮಾನ ಮಾಡಿ ಈ ಕೆಲಸವನ್ನು ಜಾಗ್ರತೆ ಮುಗಿಸಬೇಕೆನ್ನತಕ್ಕಂಥ ಮಾತನ್ನು ಹೇಳುತ್ತಾ ಕೊಸಯದಾಗಿ ಒಂದು ಮಾತನ್ನು ಹೇಳುತ್ತೇನೆ. ಬಳ್ಳಾರಿಯ ಗೊಲ್ಲರ ಹಟ್ಟಿಯ ಒಂದು ಕೆರೆ ಅಲ್ಲಿಯ ಒಂದು ಎಕರೆ ಮುಳುಗಡೆ ಯಾಗಿರುವುದಕ್ಕೆ 12 ಲಕ್ಷ ರೂಪಾಯಿ ಕಾಂಪನ್‌ಸೇಷನ್ ತೆಗೆದುಕೊಂಡಿರುತ್ತಾರೆ. ಈ ರೀತಿ ಆದರೆ ಇಲಾಖೆ ಉಳಿಯುತ್ತದೆಯೇ ಸರ್ಕಾರಕ್ಕೆ ದುಡ್ಡು ಉಳಿಯುತ್ತದೆಯೇ, ಸರ್ಕಾರದಲ್ಲಿ ನಂಬಿಕೆ ಇರುತ್ತದೆಯೇ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಮತ್ತೊಂದು ಮಾತು ಮಾನ್ಯ ಶಿವಮೂರ್ತಿಯವರ ಬಗ್ಗೆ ಹೇಳಬೇಕಾಗಿದೆ. ನಾವು ಅವರನ್ನು ನೋಡಿದಾಕ್ಷಣ, ಅವರು ಒಳ್ಳೆಯ ಯುವಕರು, ಬಹಳ ಚನ್ನಾಗಿ ಕಾಣುತ್ತಾರೆ, ಅವರ ಇಲಾಖೆಯು ಸಹ ಅಷ್ಟೇ ಚೆನ್ನಾಗಿದೆ. ಆದರೆ ಮಾತನಾಡಲಿಕ್ಕೆ ವೇಳೆ ಇಲ್ಲ. ದಯವಿಟ್ಟು ತಾವು ಒಳ್ಳೆಯ ಕೆಲಸ ಮಾಡಿ. ಇವತ್ತು ಇಂಡಿಯಾ ಬಿಟ್ಟು ಹೊರಗಡೆ ದೇಶಕ್ಕೆ ಹೋಗಿಬನ್ನಿ. ಸೌತ್ ಈಸ್ಟ್ ಕಂಟ್ರೀಸ್‌ಗೆಲ್ಲಾ ಹೋಗಿ ಬನ್ನಿ. ಅಲ್ಲಿಯ ಮೇಜರ್ ಇನ್‌ಕಮ್ ಟ್ಯೂರಿಸಮ್‌ಸಿಂದ ಬರುತ್ತದೆ. 80 ಪರ್ಸೆಂಟ್ ಇನ್‌ಕಮ್ ಈ ಟ್ಯೂರಿಸಮ್‌ನಿಂದ ಬರುತ್ತದೆ. ಇವತ್ತು ಕರ್ನಾಟಕವಕನ್ನು ಯಾವರೀತಿ ಅಲ್ಲಗಳೆಯುವುದಕ್ಕಾಗುತ್ತದೆ. ಇವತ್ತು ಜಪಾನ್, ಸ್ವಿಟ್ಜರ್‌ಲ್ಯಾಂಡ್‌ನ್ನು ಮೀರಿಸುವಂಥ ನಮ್ಮ ಕಾರವಾರ, ಮಂಗಳೂರು, ಶಿವಮೊಗ್ಗ ಏನಾಗಿದೆ? ಇವತ್ತು ಶಿವಮೊಗ್ಗದವರೇ ಮಾನ್ಯ ಮುಖ್ಯಮಂತ್ರಿಗಳಾಗಿರುತ್ತಾರೆ. ಕೊನೆಪಕ್ಷ ಅಲ್ಲಿಯಾದರೂ ಇಂಪ್ರೂವ್ ಮೆಂಟ್ ಮಾಡತಕ್ಕಂಥದ್ದನ್ನು ಮಾಡಿದರೆ ಟೂರಿಸ್ಟ್‌ನಿಂದ ನಮಗೆ ಸಾಕಷ್ಟು ಹಣ ಬರುತ್ತದೆನ್ನುತಕ್ಕಂಥದ್ದನ್ನು ತಾವು ತಿಳಿಯಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ ವಿಧಾನಸೌಧವನ್ನು ಬಿಟ್ಟರೆ ಎಂಟರ್‌ಟೈನ್‌ಮೆಂಟ್ ಪ್ಲೇಸ್ ಬೇರೆ ಇನ್ನೊಂದಿಲ್ಲ. ಹಿಂದೆ ನಾನು ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಚೇರ್‌ಮನ್ ಆಗಿ ಇದ್ದಂಥ ಸಂದರ್ಭದಲ್ಲಿ ಡಿಸ್ನಿ ಲ್ಯಾಂಡ್ ಮಾಡಬೇಕೆಂದು ಹೇಳಿ ಒಂದು ಯೋಜನೆಯನ್ನು ತಯಾರು ಮಾಡಿ 300 ಎಕರೆ ಜಮೀನನ್ನು ಕೂಡ ತೆಗೆದುಕೊಂಡಿದ್ದೆವು. ಆ ಜಾಗ ಇವತ್ತು ಏನಾಯಿತೋ ಗೊತ್ತಿಲ್ಲ. ಒಂದು ಡಿಸ್ನಿ ಲ್ಯಾಂಡ್ ಮಾಡುವುದಕ್ಕೆ ನಿಮಗೆ ಗೊತ್ತಿಲ್ಲವೆಂದರೆ ಬನ್ನಿ ನಾನು ಜಪಾನ್‌ಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರುತ್ತೇನೆ. ನಾನು ಈಗಾಗಲೇ ಒಂದುಸಾರಿ ನೋಡಿಬಂದಿದ್ದೇನೆ. ಡಿಸ್ನಿಲ್ಯಾಂಡ್‌ಗೆ ನೀವು ದುಡ್ಡನ್ನು ಖರ್ಚುಮಾಡಿದರೆ ನಿಮಗೆ ಎಷ್ಟು ಕೋಟಿ ಬೇಕಾದರೂ ದುಡ್ಡು ವಾಪಸ್ ಬರುತ್ತದೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ನಿಮ್ಮ ಕೆ.ಎಸ್.ಟಿ.ಡಿ.ಸಿ. ಹೋಟೆಲ್ಸ್ ಅಂತೂ ದೇವರೇಗತಿ. ಅಲ್ಲಿ ಯಾರೂ ತಿಂಡಿಯನ್ನು ತಿನ್ನುವಂತಿಲ್ಲ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್ (ನಂಜನಗೂಡು):- ಮಾನ್ಯ ಅಧ್ಯಕ್ಷರೇ . . . .

ಚೇರ್‌ಮನ್:- ದಯವಿಟ್ಟು ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಈಗ 4-5 ಇಲಾಖೆಗಳ ಬಗ್ಗೆ ಮಾತನಾಡಬೇಕಾದರೆ ಒಂದು ಗಂಟೆಯೇ ಬೇಕಾಗುತ್ತದೆ. ಅದಕ್ಕೆ ಯಾವುದಾದರೂ ಒಂದು ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬೇಕು. ಎಲ್ಲಾ ಇಲಾಖೆಯ ಬಗ್ಗೆ ಮಾತನಾಡ ಬೇಕಾದರೆ ಪಾಯಿಂಟ್‌ಬೈ ಪಾಯಿಂಟ್ ಮಾತನಾಡಿ ಹತ್ತು ನಿಮಿಷದಲ್ಲಿ ಮುಗಿಸಬೇಕು. ಇಲ್ಲವಾದರೆ ಯಾರಿಗೂ ಅವಕಾಶ ಸಿಗುವುದಿಲ್ಲ. ಏತಕ್ಕೆಂದರೆ ಇನ್ನು 10-15 ಜನರು ಇದ್ದಾರೆ.

ಶ್ರೀ ಎಂ. ಮಹದೇವ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಏತಕ್ಕೆ ನಮ್ಮ ಮೇಲೆ ಕೋಪ ನಿಮಗೆ? ನನಗಂತೂ ಅನಿರೀಕ್ಷಿತ. ನನ್ನ ಹೆಸರು ಕರೆದದ್ದು, ಈಗ ಸದನದಮುಂದೆ ಮಂಡಿಸಿರತಕ್ಕಂಥ ಎಲ್ಲಾ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ, ಮೊದಲಿಗೆ ನೀರಾವರಿ ಬಗ್ಗೆ ನನ್ನ ವಿಚಾರವನ್ನು ಸದನಕ್ಕೆ ಹೇಳಬಯಸುತ್ತೇನೆ. ಈ ನೀರಾವರಿ ಇಲಾಖೆ ಬಹಳ ಮಹತ್ವದಿಂದ ಕೂಡಿರತಕ್ಕ ಇಲಾಖೆ. ಇದರಲ್ಲಿ ರಾಜ್ಯದ ಪ್ರಗತಿ ಬಹಳ ಅಡಕವಾಗಿದೆ. ಮುಖ್ಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಮತ್ತು ನೀರಾವರಿ ಇಲಾಖೆಯ ಸಚಿವರಾದ ಶ್ರೀ ಮಲ್ಲಾರಿಗೌಡರು, ಮಲ್ಲಿಕಾರ್ಜುನ ಪ್ರಸನ್ನ ಅವರು ಈ ಇಲಾಖೆಯ ಪ್ರಗತಿಗೆ ಹೆಚ್ಚಿನ ಆಸಕ್ತಿ ವಹಿಸಿ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಹಣವನ್ನು ಈ ಇಲಾಖೆಗೆ ಕೊಟ್ಟಿದ್ದಾರೆ. ಸುಮಾರು 500 ಕೋಟಿ ರೂಪಾಯಿಗಳನ್ನು ಕೊಟ್ಟಿರಬೇಕು. ಈ ನೀರಾವರಿ ಇಲಾಖೆಗೆ ಏನು ನೀವು ಹಣವನ್ನು ಕೊಟ್ಟಿದ್ದೀರಿ ಅದು ಸರಿಯಾಗಿ ಖರ್ಚಾಗುತ್ತಾ ಹೋಗಬೇಕು. ಕಾರಣ, ನಮ್ಮ ರಾಜ್ಯದ ಮಣ್ಣಿನ ಮಕ್ಕಳ ಪ್ರಗತಿಯಾದರೆ ಗ್ರಾಮಾಂತರ ಪ್ರಗದೇಶದ ಪ್ರಗತಿ ಆಗುವುದಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ನೀರಾವರಿ ಸೌಲಭ್ಯ ಇದೆಯೋ ಅಲ್ಲಲ್ಲಿ ನಾವು ಪ್ರತಿಯೊಂದು ಹನಿ ನೀರನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಈಗ ನಾವು ನೀರಾವರಿ ಇಲಾಖೆಗೆ ಕೊಟ್ಟಿರತಕ್ಕ ಹಣವನ್ನು ಸಕಾಲದಲ್ಲಿ ವೆಚ್ಚ ಮಾಡಬೇಕು. ಅನೇಕ ಅಣೆಕಟ್ಟುಗಳು ಇವೆ.

(ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

ಹೊಸ ಅಣೆಕಟ್ಟುಗಳನ್ನು ಡ್ಯಾಮುಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಅಲ್ಲಿ ಕೊಡತಕ್ಕ ಹಣ ಬಹಳ ಕಡಿಮೆ ಮತ್ತು ಕೆಲಸ ಸಹ ಸರಿಯಾಗಿ ಸಕಾಲದಲ್ಲಿ ಆಗುವುದಿಲ್ಲ. ನೀವು ಒಂದು ವರ್ಷದಲ್ಲಿ ಏನು ಹಣ ಕೊಡುತ್ತೀರಿ ಅದು ಅದೇ ವರ್ಷ ಖರ್ಚಾಗಿ ಸದುಪಯೋಗವಾಗಬೇಕು. ಉದಾಹರಣೆಗೆ ಹೇಳುವುದಾದರೆ, ಕಬಿನಿ ಮೊದಲನೇ ಹಂತ ಶುರುವಾಗಿ ಬಹಳ ವರ್ಷವಾಗಿದೆ, ಕೆಲಸ ಇನ್ನೂ ಪೂರ್ತಿ ಆಗಿಲ್ಲ. ಆ ವರ್ಷದಲ್ಲಿ ಆ ಹಣ ವೆಚ್ಚ ಮಾಡದೆ ಒಂದೆರೆಡು ವರ್ಷ ಹೋಯಿತು ಅಂದರೆ ಏನಿದೆ ಅದು ಅದಕ್ಕಿಂತ ದ್ವಿಗುಣವಾಗುತ್ತದೆ. ಅಂದಾಜು ವೆಚ್ಚದಲ್ಲಿ ಎಷ್ಟಿದೆಯೋ ಅಷ್ಟೇ ಹಣವಾಗುತ್ತದೆ. ಈ ಪರಿಸ್ಥಿತಿಯಿಂದ ತ್ವರಿತ ಗತಿಯಲ್ಲಿ ನಾವು ಕಾಮಗಾರಿಗಳನ್ನು ಮಾಡಲಿಕ್ಕೆ ಆಗುವುದಿಲ್ಲ. ಕಾವೇರಿ ವಿವಾದದ ಸಂದರ್ಭದಲ್ಲಿ ಕೂಡ ಹೀಗೆ. ನಾವು ತ್ವರಿತ ಗತಿಯಲ್ಲಿ ಹಣ ಒದಗಿಸಿ ವೆಚ್ಚ ಮಾಡಿ ನಾವು ಅದರ ಅನುಕೂಲವನ್ನು ಸರಿಯಾಗಿ ಪಡೆದಿದ್ದೇ ಆಗಿದ್ದರೆ ಕಾವೇರಿ ಬೇಸಿನ್‌ನಲ್ಲಿ ದೊರೆಯತಕ್ಕ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು. ತಮಿಳ್ನಾಡು ಮತ್ತು ಕೇರಳ ಇವೆರಡರಲ್ಲಿ ಅವರು ಬಹುಶ: ನನಗೆ ತಿಳಿದ ಹಾಗೆ 40 ಲಕ್ಷ ಹೆಕ್ಟೇರ್‌ಗೂ ಮೇಲ್ಪಟ್ಟು ಇರಿಗೇಷನ್‌ಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ರಾಜ್ಯದ ಹಣವನ್ನು ಉಪಯೋಗಿಸಿಕೊಂಡಿದ್ದಾರೆ ಮತ್ತು ಕೇಂದ್ರದ ಹಣವನ್ನು ಉಪಯೋಗಿಸಿಕೊಂಡಿದ್ದಾರೆ. ಅವರು ಸಕಾಲದಲ್ಲಿ ಕಾಮಗಾರಿ ಕೆಲಸಗಳನ್ನು ಮಾಡಿ ಮುಗಿಸಿಕೊಂಡಿದ್ದಾರೆ. ಆದರೆ ನಮ್ಮ ಪರಿಸ್ಥಿತಿ ಏನಾಗಿದೆ? ನಮ್ಮ ರಾಜ್ಯದಲ್ಲಿ ಸಕಾಲದಲ್ಲಿ ನಾವು ಹಣ ಉಪಯೋಗಿಸಿಕೊಂಡಿಲ್ಲ ಮತ್ತು ಸಾಕಷ್ಟು ವೆಚ್ಚವನ್ನು ಸಹ ಮಾಡಲಿಲ್ಲ. ಬಹಳ ವರ್ಷಗಳಿಂದ ನಾವು ಹೆಚ್ಚಿನ ಹಣ ವೆಚ್ಚ ಮಾಡಿಲ್ಲ. ಹತ್ತು ವರ್ಷದ ಐದು ಪ್ರಶ್ನೆ ನಾನು ಹೇಳುತ್ತಿಲ್ಲ. 40-50 ವರ್ಷಗಳ ಹಿಂದಿನಿಂದಲೂ ಸಹ ನೀರಾವರಿ ಬಗ್ಗೆ ನಾವು ಹೆಚ್ಚಿಗೆ ಮಹತ್ವ ಕೊಟ್ಟಿದ್ದರೂ ಸಹ ಸಕಾಲದಲ್ಲಿ ಕಾಮಗಾರಿ ಕೆಲಸಗಳನ್ನು ನಾವು ಮಾಡದೆ ನಮ್ಮ ಅಚ್ಚುಕಟ್ಟು ಪ್ರದೇಶಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳದೆ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಎಲ್ಲವೂ ಅರ್ಧಂಬರ್ಧ ಆಗಿದೆ. ಇಲ್ಲಿ ತನಕವೂ ನಾವು ಮಂದಗತಿಯಲ್ಲಿ ನೀರಾವರಿ ಕೆಲಸಗಳನ್ನು ಮಾಡುತ್ತಿದ್ದೇವೆ. ಕಬಿನಿ ಎರಡನೇ ಹಂತದ ವಿಚಾರದಲ್ಲಿ ನಾನು ಪ್ರಸ್ತಾಪ ಮಾಡಬೇಕಾಗಿದೆ. ಕಬಿನಿ ಎರಡನೇ ಹಂತದ ಬಗ್ಗೆ ಬಹಳ ದಿವಸದಿಂದ ಬೇಡಿಕೆ ಇದೆ. ಮೊದಲನೇ ಹಂತಕ್ಕೆ ಹಣವನ್ನು ಸಾಕಾದಷ್ಟು ಕೊಟ್ಟಿದ್ದೀರಿ.- ಇನ್ನು ಸ್ವಲ್ಪ 5 ಕೋಟೀನೋ 10 ಕೋಟೀನೋ ಅದರಲ್ಲಿ ವೆಚ್ಚ ಮಾಡಿದರೆ ಇನ್ನು ಒಂದು ವರ್ಷದಲ್ಲೋ ಎರಡು

ವರ್ಷದಲ್ಲೋ ಅದು ಪೂರ್ತಿ ಆಗಬಹುದು. ಎರಡನೇ ಹಂತದ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಕಬಿನಿ ಎರಡನೇ ಹಂತವನ್ನು ನಾವು ಕೈಗೆತ್ತಿಕೊಳ್ಳದೇ ಇದ್ದರೆ ನಮ್ಮ ಭಾಗ ಏನಿದೆ ಅದು ಬಹಳ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತದೆ. ಕಬಿನಿ ಎರಡನೇ ಹಂತವನ್ನು ಕೈಗೆತ್ತಿಕೊಂಡರೆ ನಮ್ಮ ಭಾಗದ 1 ಲಕ್ಷ 25 ಸಾವಿರ ಎಕರೆ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಅಲ್ಲಿ ಸುಮಾರು ತಾಲ್ಲೂಕುಗಳು ನೀರಾವರಿಗೆ ಬರುತ್ತದೆ. ನಂಜನಗೂಡು, ಹೆಗ್ಗಡದೇವನಕೋಟೆ, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಇವು ಕ್ಷಾಮಪೀಡಿತ ಪ್ರದೇಶಗಳು. ಬಹುಶಃ ನಂಜನಗೂಡು ಅರ್ಧಭಾಗ ಬಿಟ್ಟರೆ ಮಿಕ್ಕ ಪ್ರದೇಶಗಳು ಮಳೆ ಆಶ್ರಯದಿಂದ ಬೆಳೆಯನ್ನು ತೆಗೆಯತಕ್ಕ ತಾಲ್ಲೂಕುಗಳು. ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಈ ಪ್ರದೇಶಗಳಲ್ಲಿ ಕೇವಲ ಮಳೆ ಆಶ್ರಯದಿಂದ ವ್ಯವಸಾಯವನ್ನು ನಂಬಿಕೊಂಡಿರುವ ಜನರಿದ್ದಾರೆ. ಅದರಲ್ಲೂ ಹಿಂದುಳಿದ ಜನ, ಮಧ್ಯಮವರ್ಗದವರು ಮತ್ತು ಕಡುಬಡವರು ಇರತಕ್ಕ ಪ್ರದೇಶ ಅದು. ಈ ಪ್ರದೇಶದ ಜನರಿಗೆ ಕಬಿನಿ ಎರಡನೇ ಹಂತ ವರದಾನವಾಗುತ್ತದೆ. ಅದನ್ನು ನೀವು ತೀವ್ರಗತಿಯಲ್ಲಿ ತೆಗೆದುಕೊಳ್ಳಬೇಕು. ಯಾವುದೇ ತಾಂತ್ರಿಕ ಲೋಪ ಇರಲಿ ಆಡಳಿತಾತ್ಮಕ ಅನುಮೋದನೆಯನ್ನು ತಕ್ಷಣದಲ್ಲಿ ಕೊಡಬೇಕು. ಉದ್ದೇಶಪೂರ್ವಕವಾಗಿ ಕಬಿನಿ ಎರಡನೇ ಹಂತದ ಯೋಜನೆಯನ್ನು ಯಾವುದೋ ನೆಪದಿಂದ ವಿಳಂಬ ಮಾಡುತ್ತಿದ್ದಾರೆ ಎಂದು ಎಷ್ಟೋ ಸಾರಿ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇನೆ. ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಏನೋ ಕಾರಣದಿಂದ ಒಂದಲ್ಲ ಒಂದು ನೆಪದಿಂದ ಕಬಿನಿ ಎರಡನೇ ಹಂತದ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುತ್ತಿದೆ. 1 ಲಕ್ಷ 25 ಸಾವಿರ ಎಕರೆ ಪ್ರದೇಶಕ್ಕೆ ಬಹಳ ಕಡುಬಡವರಿಗೆ, ಮಳೆ ಆಶ್ರಯ ಇಲ್ಲದಿರುವ ಪ್ರದೇಶಕ್ಕೆ ಕಬಿನಿ ಎರಡನೇ ಹಂತದ ಯೋಜನೆ ಉಪಯೋಗವಾಗುವ ಒಂದು ಸಂದರ್ಭದಲ್ಲಿ ಸರ್ಕಾರ ಏತಕ್ಕೆ ಆಸಕ್ತಿ ವಹಿಸುತ್ತಿಲ್ಲ? ಅಲ್ಲಿ ಪ್ರಿಲಿಮಿನರಿ ಸರ್ವೆ ನಡೆಯುತ್ತಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದು ಬಹಳ ಗುಪ್ತವಾಗಿದೆ. ನಮ್ಮ ಜನ, ನಮ್ಮ ರೈತರು ಇದರ ಬಗ್ಗೆ ಬಹಳ ಸಮಾಧಾನದಿಂದ ಇದ್ದಾರೆ. ಸರ್ಕಾರ ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಂಡು ಸಹಾಯ ಮಾಡುತ್ತದೇನೋ ಎಂದು ಸಮಾಧಾನಚಿತ್ತದಿಂದ ರೈತರು ನಿರೀಕ್ಷಣೆ ಮಾಡುತ್ತಿದ್ದಾರೆ. ಆದರೆ ನನಗೆ ತಿಳಿದಹಾಗೆ ಸರ್ವೆ ಮಾಡಲಿಕ್ಕೆ ಪ್ರಯತ್ನ ಮಾಡಿಲ್ಲ. ಮತ್ತು ಸರ್ವೆ ಮಾಡಲಿಕ್ಕೆ ಹೋದರೆ ಟೈಗರ್ ಪ್ರಾಜೆಕ್ಟ್, ಸೆಂಟ್ರಲ್ ಫಾರೆಸ್ಟ್‌ನವರು ಅಡ್ಡಿ ಅಡಚಣೆಗಳನ್ನು ಮಾಡುತ್ತಿದ್ದಾರೆ. ನಮ್ಮ ಟೈಗರ್ ಪ್ರಾಜೆಕ್ಟ್ ಇದರ ಒಳಗಡೆ ಬರುತ್ತದೆ, ಸೆಂಟ್ರಲ್ ಫಾರೆಸ್ಟ್ ಇದರ ಒಳಗಡೆ ಬರುತ್ತದೆ. ಈ ಕಾರಣದಿಂದ ಸರ್ವೆಗೆ ಅಡಚಣೆಯಾಗಿದೆ ಎಂಬ ವಿಚಾರ ಬರುತ್ತಿದೆ. ಲಕ್ಷಾಂತರ ಜನರಿಗೆ ಅನ್ನ ಸಿಕ್ಕುವಂಥ ಸಂದರ್ಭದಲ್ಲಿ ಹಾಗೂ ಸಹಾಯವಾಗುವಂಥ ಸಂದರ್ಭದಲ್ಲಿ ಈ ತಾಂತ್ರಿಕ ಲೋಪದೋಷವನ್ನು ಮುಖ್ಯವಾಗಿಟ್ಟುಕೊಂಡು ಇದನ್ನು ಅಡಚಣೆ ಮಾಡುವ ವಿಚಾರ ಏನಿದೆ ಎಂಬುದನ್ನು ನಾನು ಇವತ್ತು ಪ್ರಸ್ತಾಪ ಮಾಡಬೇಕಾಗಿದೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಗಮನ ಕೊಡಬೇಕು ಎಂದು ತಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಒಬ್ಬ ರೈತನಾಗಿ, ರೈತ ಪ್ರತಿನಿಧಿಯಾಗಿ, ಶಾಸಕನಾಗಿ ನಾನು ಈ ಸದನದಲ್ಲಿ ಬಹಳ ಕಳಕಳಿಯ ಮನವಿ ಮಾಡಿಕೊಂಡು ಕಬಿನಿ ಎರಡನೇ ಹಂತದ ಯೋಜನೆಯನ್ನು ತೆಗೆದುಕೊಳ್ಳದೇ ಇದ್ದರೆ ನಾನು ಸಹ ರೈತರ ಜೊತೆಯಲ್ಲಿ ಸೇರಿ ಸರ್ಕಾರದ ಗಮನ ಸೆಳೆಯುವುದಕ್ಕೆ ಏನು ಮಾಡಬೇಕೋ ಅದನ್ನು ನಾನು ಮಾಡಬೇಕಾಗುತ್ತದೆ. ಬಹಳ ಕಳಕಳಿಯಿಂದ ಮನಸ್ಸು ನೊಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಬಹಳ ವರ್ಷಗಳಿಂದ ಕೆಲಸ ಸ್ಥಗಿತ ಮಾಡುತ್ತಿದ್ದೀರಿ. ಏನು ಕಾರಣವೋ ಗೊತ್ತಿಲ್ಲ. ನೀರಾವರಿಗೆ ಆದ್ಯತೆ ಎಂದು ಹೇಳುತ್ತಿದ್ದೀರಿ, ಅನುಕೂಲ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ, ನೀರನ್ನು ಸರಿಯಾಗಿ ಬಳಕೆ ಮಾಡುತ್ತೇವೆ ಮತ್ತು ಒಂದು ಹನಿ ನೀರನ್ನೂ ದುರುಪಯೋಗ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳುತ್ತಿದ್ದೀರಿ. ಎಲ್ಲಾ ನೀರನ್ನೂ ಉಪಯೋಗಿಸುತ್ತೇನೆ ಎಂದು ಹೇಳುತ್ತಿದ್ದೀರಿ. ಆದರೆ ಕಾರ್ಯತಃ ನಡೆಯುತ್ತಿರುವುದು ಏನು? ಉದ್ದೇಶಪೂರ್ವಕವಾಗಿಯೋ, ನಿರ್ಲಕ್ಷತನದಿಂದಲೋ, ಇನ್ನು ಯಾವ ಕಾರಣದಿಂದ

ತಡ ಮಾಡುತ್ತಿದ್ದೀರೋ ಗೊತ್ತಿಲ್ಲ. ಆದರೆ ಇದು ಸರಿಯಲ್ಲವೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಈಗಾಗಲೇ ನಮಗೆ ಸಾಕಷ್ಟು ಅನ್ಯಾಯವಾಗಿದೆ. ನಾವು ತಾಳ್ಮೆಯನ್ನು ಕಳೆದುಕೊಂಡಿದ್ದೇವೆ. ಇನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಇನ್ನೂ ವಿಳಂಬ ಮಾಡುತ್ತಾ ಹೋದರೆ ಅಥವಾ ಇನ್ಯಾವುದಾದರೂ ಲೋಪದೋಷವನ್ನು, ಆಡಳಿತಾತ್ಮಕ ವಿಚಾರವನ್ನು ನಮ್ಮ ಮುಂದೆ ಇಟ್ಟದ್ದೇ ಆದರೆ ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಹೋರಾಟಕ್ಕೆ ನಾವು ಹೋಗಬೇಕಾಗುತ್ತದೆ. ನಮ್ಮ ಸರ್ಕಾರ ಇರುವಾಗಲೇ, ನಮ್ಮ ಮುಖ್ಯಮಂತ್ರಿಯವರಿಗೆ ಈ ಕಾಳಜಿ ಇರುವಾಗಲೇ ತಾವು ನೀರಾವರಿ ಬಗ್ಗೆ ಆಸಕ್ತಿ ವಹಿಸಿರತಕ್ಕ ಉತ್ತಮ ಎನ್‌ವಿರಾನ್‌ಮೆಂಟ್‌ನಲ್ಲಿ ಕಬಿನಿ 2ನೇ ಹಂತದ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಈ ಸದನದ ಗಮನ ಸೆಳೆಯುತ್ತೇನೆ. ಮತ್ತೆ ನಮ್ಮ ನಂಜನಗೂಡು ತಾಲ್ಲೂಕಿನಲ್ಲಿ ನುಗು ಡ್ಯಾಮ್ ಎಂದು ಹೇಳಿ ಒಂದು ನತದೃಷ್ಟ ಡ್ಯಾಮ್ ಇದೆ. ಆ ಡ್ಯಾಮ್ ಕಟ್ಟಿದಾಗಿನಿಂದ ಸುಮಾರು 24 ಸಾವಿರ ಅಥವಾ 25 ಸಾವಿರ ಎಕರೆ ನೀರಾವರಿ ಪ್ರದೇಶ ಆಗಬೇಕಾಗಿತ್ತು. ಆದರೆ ಕಬಿನಿ ಡ್ಯಾಂ ಬಂದನಂತರ ಕೇವಲ 12-13 ಸಾವಿರ ಎಕರೆ ನೀರಾವರಿ ಆಗಿದೆ. ಎಂದರೆ ಕೇವಲ 50 ಪರ್ಸೆಂಟ್ ನೀರಾವರಿ ಆಗಿದೆ. ಇನ್ನು ಬಹುಶಃ 14 ಸಾವಿರ ಎಕರೆ ಪ್ರದೇಶ ನೀರಾವರಿ ಆಗದೇ ಕಬಿನಿ ಡ್ಯಾಮ್ ನೀರಿನ ಆಶ್ರಯದಲ್ಲಿ ತಡೆದುಕೊಂಡಿದೆ. ನಾನು ಸರ್ಕಾರಕ್ಕೆ ಒಂದು ತೀವ್ರವಾದ ಒತ್ತಾಯ ಮಾಡುತ್ತಿದ್ದೇನೆ. ಏನೆಂದರೆ ಈ ನುಗು ಡ್ಯಾಮ್‌ಗೆ ಕಬಿನಿ ಜಲಾಶಯದಿಂದ ನೀರನ್ನು ಲಿಫ್ಟ್ ಇರಿಗೇಷನ್ ಮುಖಾಂತರ ಒದಗಿಸಿ ಇನ್ನು ಉಳಿದಿರತಕ್ಕ 13 ಸಾವಿರ ಎಕರೆಗೆ ನೀರಾವರಿ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕಾರಣ ಏನೆಂದರೆ , ಈ ಡ್ಯಾಮ್‌ನ 13 ಸಾವಿರ ಎಕರೆ ಸಪರೇಟ್ ಅಚ್ಚುಕಟ್ಟು ಏನಿದೆ ಅದಕ್ಕೆ ರೆಗ್ಯುಲರ್ ವಾಟರ್ ಸಿಗುತ್ತಿಲ್ಲ. ಇದಕ್ಕೆ ಮಳೆ ಆಶ್ರಯದಲ್ಲಿ ಸಹಾಯವಾಗುವುದಿಲ್ಲ. ಬೇರೆ ಯಾವುದೇ ಲಿಫ್ಟ್ ಇರಿಗೇಷನ್ ಇರುವುದಿಲ್ಲ. ಇದರಿಂದ ಬೇರೆ ಯಾವುದೇ ಕ್ರಾಪ್ ಬೆಳೆಯುವುದಕ್ಕೆ ಅನುಕೂಲ ಇಲ್ಲದೇ ನನ್ನ ಕ್ಷೇತ್ರದಲ್ಲಿ ಅದು ಒಂದು ಶಾಪಗ್ರಸ್ಥ ಡ್ಯಾಮ್ ಪ್ರದೇಶವಾಗಿದೆ, ಇದರಿಂದ ನಮ್ಮ ರೈತರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಮಾನ್ಯ ನೀರಾವರಿ ಸಚಿವರು ನಂಜನಗೂಡಿಗೆ ಬಂದಿದ್ದಾಗ ಅವರ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಒಂದು ತಿಂಗಳ ಹಿಂದೆ ಒಂದು ದೊಡ್ಡ ಬಹಿರಂಗ ಸಭೆ ನಡೆಸಿದಾಗ ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದು ಆಗ ನಮ್ಮ ಭಾಗದ ರೈತರಿಗೆ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ನಾವು ಸಾಕಷ್ಟು ಈ ಪ್ರದೇಶಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಈ ಒಂದು ಉತ್ತಮ ವಾತಾವರಣದಲ್ಲಿ ಕಬಿನಿ ಡ್ಯಾಮ್ ನುಗು ಪ್ರದೇಶಕ್ಕೆ ಲಿಫ್ಟ್ ಇರಿಗೇಷನ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮಲ್ಲಿ ಉಳ್ಳಳ್ಳಿ ರಾಮಾಪುರ ಛಾನಲ್ ಇದೆ. ಇದು ಬಹಳ ಹಳೆಯ ಛಾನಲ್ ಎಂದರೆ ಸುಮಾರು 70-80 ವರ್ಷಗಳಷ್ಟು ಹಳೆಯ ಛಾನಲ್ ಆಗಿದ್ದು ಈ ಛಾನಲ್‌ನಲ್ಲಿ ಎಲ್ಲಾ ಸಿಲ್ಟ್ ತುಂಬಿ ಲೈನಿಂಗ್ ಎಲ್ಲಾ ಹೋಗಿಬಿಟ್ಟಿದೆ. ನೀರನ್ನು ಬಿಡುತ್ತಾರೆ ಆದರೆ ಅದು ಟೇಲ್ ಎಂಡ್‌ಗೆ ಹೋಗುವುದಿಲ್ಲ. ಕಾರಣ ಏನೆಂದರೆ 70-80 ವರ್ಷಗಳಿಂದ ಸಿಲ್ಟ್ ತುಂಬಿಬಿಟ್ಟು ಲೈನಿಂಗೇ ಹೋಗಿಬಿಟ್ಟಿದೆ. ಆ ಲೈನಿಂಗೇ ರಿಪೇರಿಯಾಗಬೇಕು. ಅದಕ್ಕೆ ಸುಮಾರು 20 ಕೋಟಿ ಆಗಬಹುದು. ಹೆಚ್ಚಿಗೆ ಏನೂ ಆಗುವುದಿಲ್ಲ. ಇಷ್ಟು ಹಣವನ್ನು ಒದಗಿಸಿ ಲೈನಿಂಗ್‌ಮಾಡಿಸಿ. ಸಿಲ್ಟ್ ತೆಗೆದು ರಿಪೇರಿ ಮಾಡಿಸಿ. ಇದು ಒಳ್ಳೆಯ ಕೆನಾಲ್, ಇಂತಹ ಶಾಶ್ವತವಾದ ಕೆನಾಲ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ಮಾನ್ಯ ಸಚಿವರು ಆದ್ಯತೆಯನ್ನು ಕೊಡಬೇಕೆಂದು ತಮ್ಮ ಮುಖೇನ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಅಶ್ವತ್ಥರೆಡ್ಡಿಯವರು ಈ ಕಡೆ ಗಮನವನ್ನು ಕೊಡಬೇಕು. ನೀವು ಹಣವನ್ನು ಕೊಡುತ್ತೀರಿ ವರ್ಷವೆಲ್ಲಾ ಸುಮ್ಮನೆ ಇರುತ್ತೀರಿ, ಮಾರ್ಚಿ 31 ಆದಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ ವರ್ಕ್ ಬಹಳ ಸ್ಪೀಡಾಗಿ ಶುರುವಾಗುತ್ತದೆ. ಈಗ ನಾವು

ಮಾರ್ಚ್ ಎಂಡ್ ನಲ್ಲಿದ್ದೇವೆ. ಟೇಲ್ ಎಂಡ್‌ನಲ್ಲಿ ಇದ್ದಹಾಗೆ ಆಗಿದೆ. ಈಗ ತಕ್ಷಣ 25 ಲಕ್ಷ 30 ಲಕ್ಷ ರೂಪಾಯಿ ಕೆಲಸಗಳನ್ನು ತೆಗೆದುಕೊಂಡು ರಸ್ತೆ ಮಾಡಿಸುವುದು, ಡಾಮರು ಹಾಕಿಸುವುದು ಮಾಡಿ ಮುಗಿಸುತ್ತಾರೆ. ಈ ರೀತಿಯಾದರೆ ಕ್ವಾಲಿಟಿಯನ್ನು ಹೇಗೆ ಕಾಪಾಡುವುದಕ್ಕೆ ಆಗುತ್ತದೆ? ವರ್ಷದ ಪ್ರಾರಂಭದಲ್ಲಿ ಹಣವನ್ನು ಕೊಟ್ಟು ಆಗಲೇ ಕೆಲಸವನ್ನು ಶುರು ಮಾಡಿದರೆ ಒಳ್ಳೆಯ ಕ್ವಾಲಿಟಿ ಕೆಲಸ ಆಗಬಹುದು. 31 ನೇ ಮಾರ್ಚಿಯೊಳಗೆ ಅದನ್ನು ಹೇಗಾದರೂ ಮಾಡಿ ಖರ್ಚು ಮಾಡಬೇಕು. ಹೇಗಾದರೂ ಕೆಲಸ ಮುಗಿಸೋಣವೆಂದು ತೆಗೆದುಕೊಂಡರೆ ಕ್ವಾಲಿಟಿ ವರ್ಕ್ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಕೆಲಸವನ್ನು ಮೂರು ತಿಂಗಳು ಮೊದಲೇ ಪ್ರಾರಂಭ ಮಾಡುವುದಕ್ಕೆ ನಿಮ್ಮ ಇಲಾಖೆಗೆ ಸೂಚನೆ ಕೊಡಿ. ನಂಜನಗೂಡಿನ ರಸ್ತೆಯ ಬಗ್ಗೆ ನಾನು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ನಂಜನಗೂಡು ಹತ್ತಿರ ಕಬಿನಿ ಡ್ಯಾಮ್ ಇದೆ. ನಂಜನಗೂಡು ಪಕ್ಕದಲ್ಲಿ ಕಬಿನಿ ನದಿ ಹರಿಯುತ್ತಿದೆ. ಪಕ್ಕದಲ್ಲಿ ಕಾನ್ವೆಂಟ್ ಸ್ಕೂಲ್ ಇದೆ. ಪಟ್ಟಣಕ್ಕೂ ಕಾನ್ವೆಂಟ್ ಸ್ಕೂಲ್‌ಗೂ ಎರಡು ಕಿಲೋಮೀಟರ್ ಆಗುತ್ತದೆ. ಅಲ್ಲೇ ಇಂಡಸ್ಟ್ರಿಯಲ್ ಏರಿಯಾ ಇದೆ. ಸ್ಟೇಟ್ ಹೈವೇ ಇದೆ. ರೈಲ್ವೆ ಸ್ಟೇಷನ್ ಇದೆ. ಅಕ್ಕಪಕ್ಕದಲ್ಲಿ ಆಸ್ಪತ್ರೆಗಳು ಇವೆ. ಹಾಸ್ಟಲ್‌ಗಳು ಇವೆ. ಸ್ಕೂಲ್‌ಗಳು ಇವೆ. ಅಲ್ಲಿ ದೊಡ್ಡ ಓಡಾಟದ ಸಂಚಾರವಿದೆ. ಅದು ಬಹಳ ಇಕ್ಕಟ್ಟಾದ ಪ್ರದೇಶವಾದ ಕಾರಣ ಎಷ್ಟೋ ಅಪಘಾತಗಳಾಗಿವೆ. ಎಷ್ಟೋ ಅನಾಹುತಗಳಾಗಿವೆ. ಅದನ್ನು ಡಬ್ಬಲ್ ರೋಡ್ ಮಾಡಿಕೊಡಿ ಎಂದು ನಾನು ಬಹುಶಃ 1983ನೇ ಇಸವಿಯಿಂದ ಈ ಸದನದಲ್ಲಿ ಕೇಳುತ್ತಾ ಇದ್ದೇನೆ. ಎಲ್ಲ ಲೋಕೋಪಯೋಗಿ ಮಂತ್ರಿಗಳು ಸಹ ಆಶ್ವಾಸನೆಯನ್ನು ಕೊಡುತ್ತಾರೆ. ತನಿಖೆ ಮಾಡಿಸುತ್ತಾರೆ, ಎಸ್ಟಿಮೇಟ್ ಮಾಡಿಸುತ್ತಾರೆ, ಎಲ್ಲಾ ಅಲ್ಲಿಗೆ ಮುಗಿಯುತ್ತದೆ. ಈಗ ನಿಮ್ಮ ಬಗ್ಗೆ ನನಗೆ ತುಂಬಾ ಭರವಸೆಯಿದೆ. ನೀವು ಏನಾದರೂ ಮಾಡಿ ಮುಂದಿನ ಅಧಿವೇಶನ ಸೇರುವುದರೊಳಗೆ ಕೆಲಸ ಶುರು ಮಾಡಿಸುವುದಕ್ಕೆ ಮಂಜೂರಾತಿಯನ್ನು ಕೊಡುತ್ತೀರಾ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ:- ಅದು ಎಷ್ಟು ಕಿಲೋಮೀಟರ್ ರಸ್ತೆ?

ಶ್ರೀ ಎಂ. ಮಹದೇವ್:- ಬಹುಶಃ ಎರಡು ಕಿಲೋಮೀಟರ್ ಆಗಬಹುದು. ಅದು ನಂಜನಗೂಡು ಪಟ್ಟಣದ ಒಳಗಡೆ ಹೋಗುತ್ತದೆ. ಬಹಳ ವರ್ಷಗಳಿಂದ ನಾವು ಕೇಳುತ್ತಾ ಇದ್ದೇವೆ. ಅಲ್ಲಿ ಬಹಳ ಆಕ್ಸಿಡೆಂಟ್ಸ್ ಆಗಿವೆ. ಅಲ್ಲಿನ ಇಂಡಸ್ಟ್ರಿಗಳಲ್ಲಿ ಕೆಲಸಮಾಡುವವರು ಹಗಲು ರಾತ್ರಿ ಓಡಾಡುತ್ತಿರುತ್ತಾರೆ. ಅಲ್ಲಿ ಸ್ಟೇಟ್ ಹೈವೇ ಇದೆ, ಎರಡು ಎರಡೂವರೆ ಕಿಲೋಮೀಟರ್ ಉದ್ದದ ರಸ್ತೆಯನ್ನು ಮಾಡಿಕೊಡಿ ಎಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಚಾಮರಾಜನಗರಕ್ಕೆ ಹೋಗತಕ್ಕ ರಸ್ತೆಯಲ್ಲಿ ಒಂದು ಬ್ರಿಡ್ಜ್ ಇದೆ ನಂಜನಗೂಡು ಸತ್ಯಮಂಗಲ ರಸ್ತೆ ಅಲ್ಲೊಂದು ಬ್ರಿಡ್ಜ್ ಸುಮಾರು 100 ವರ್ಷದ್ದು ಇರಬಹುದು. ಆಗಿನ ಕಾಲದಲ್ಲಿ ಇಂಜಿನಿಯರ್‌ಗಳು ಅವರ ಬುದ್ಧಿವಂತಿಕೆಯಿಂದ ಕಟ್ಟಿರತಕ್ಕದ್ದು ಮಹಾರಾಜರ ಕಾಲದ್ದೋ ಅವರ ಅಪ್ಪನ ಕಾಲದ್ದೋ ನನಗೆ ಗೊತ್ತಿಲ್ಲ. ಆ ಸೇತುವೆಗೆ ನೂರು ವರ್ಷ ಆಗಿರಬಹುದೆಂದು ನನಗನ್ನಿಸುತ್ತದೆ. ಕಲ್ಲಿನ ಮೇಲೆ ಆ ಸೇತುವೆ ಇದೆ. ಆದು ಸ್ಟೇಟ್ ಹೈವೇಗೆ ಸೇರಿದ್ದು. ಅದು ಸತ್ಯಮಂಗಲಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ. ಅಲ್ಲಿ ವಾಹನಗಳು ಸಿಕ್ಕಾಪಟ್ಟೆ ಓಡಾಡುತ್ತವೆ. ಈ ನೂರು ವರ್ಷದ ಸೇತುವೆ ಅಷ್ಟು ವಾಹನಗಳ ಓಡಾಟದ ಕೆಪ್ಯಾಸಿಟಿಯನ್ನು ತಡೆಯಲಾರದೆ ಅದು ಯಾವತ್ತು ಕುಸಿದು ಬಿದ್ದುಹೋಗುತ್ತದೋ ಗೊತ್ತಿಲ್ಲ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಆ ಸೇತುವೆಯ ಮೇಲೆ ಹೋಗುವುದು ಬಹಳ ಕಷ್ಟ. ಒಂದು ಬಸ್ಸು ಬಂತೆಂದರೆ ಎದುರಿಗೆ ಬರುವ ವಾಹನಗಳು ಅಲ್ಲೇ ನಿಂತುಕೊಳ್ಳಬೇಕಾಗುತ್ತದೆ. ಅಲ್ಲಿ ಎಷ್ಟೋ ಆಕ್ಸಿಡೆಂಟೂ ಆಗಿವೆ ಜನ ಸತ್ತು ಹೋಗಿದ್ದಾರೆ. ಎಷ್ಟೋ ಗಾಡಿಗಳು ಸೇತುವೆಯ ಕೆಳಗೆ ಬಿದ್ದುಹೋಗಿವೆ. ಆದ್ದರಿಂದ ಅಲ್ಲಿಗೆ ಹೊಸ ಸೇತುವೆಯನ್ನು ತಕ್ಷಣ ಮಂಜೂರು ಮಾಡಿ ಬಜೆಟ್‌ನಲ್ಲಿ ಸೇರಿಸಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಹುಲ್ಲುಹಳ್ಳಿ ಕಡೆಗೆ ಹೋಗುವಂಥ ಒಂದು ರೋಡ್ ಇದೆ. ಇದು ಪಿ.ಡಬ್ಲ್ಯೂ.ಡಿ ಇಲಾಖೆಗೆ ಸೇರಿದೆ. ಈ ಒಂದು ರೋಡನ್ನು ರಿಪೇರಿ ಮಾಡಿಸಿಕೊಡಬೇಕೆಂದು ಹೇಳಿ ತಮ್ಮಲ್ಲಿ ಮನವಿಮಾಡಿಕೊಂಡು ,

ತಮಗೆ ಸೇರಿರತಕ್ಕಂಥ ಕಟ್ಟಡಗಳೂ ಇವೆ. ಅವುಗಳನ್ನು ಕೂಡ ಸೇರಿಸಿಕೊಂಡು ನಂಜನಗೂಡು ತಾಲ್ಲೂಕಿಗೆ ಯಾವ್ಯಾವುದು ಬರುತ್ತದೆ ಅದನ್ನು ಮಾಡಿಸಿಕೊಡಬೇಕೆಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಂಡು ಈ ಗ್ರಾಮಾಂತರ ಪ್ರದೇಶಗಳ ರಸ್ತೆಗಳು ಏನಿವೆ, ಅವುಗಳನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಿದ್ದಾರೆ.

ಉಪಾಧ್ಯಕ್ಷಿಣಿಯವರು:- ಮಹದೇವ್‌ರವರೇ, ಬೇಗ ಮುಗಿಸಿ.

ಶ್ರೀ ಎಂ. ಮಹದೇವ್:- ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಉತ್ತಮವಾದ ರೋಡ್‌ಗಳನ್ನು ಜಿಲ್ಲಾ ಪರಿಷತ್ತುಗಳ ಜವಾಬ್ದಾರಿಗೆ ಕೊಟ್ಟಿದ್ದಾರೆ. ಅವರಿಗೆ ಕೊಟ್ಟ ನಂತರ ರೋಡ್‌ಗಳೆಲ್ಲಾ ಕೆಟ್ಟು ಹೋಗಿವೆ. ಬಹುಶಃ ತಮಗೆ ಗೊತ್ತಿರಬಹುದು. ತಮ್ಮಲ್ಲಿ ಹೇಗೆ ರೋಡುಗಳು ಆಗಿವೆಯೋ ಹಾಗೆ ನಮ್ಮಲ್ಲೂ ಕೂಡ ಆಗಿವೆ. ಜನರು ಹೇಳುತ್ತಿದ್ದಾರೆ ಮೊದಲು ಚನ್ನಾಗಿ ಇದ್ದವು, ಈಗ ಜಿಲ್ಲಾ ಪರಿಷತ್ತುಗಳಿಗೆ ಉತ್ತಮವಾದ ರೋಡುಗಳನ್ನು ಕೊಟ್ಟಿದ್ದೀರಿ, ಸರಿಯಾದ ಕ್ವಾಲಿಟಿ ಇಲ್ಲ, ಅವರು ಮನಸ್ಸಿಗೆ ಬಂದ ಹಾಗೆ ರಿಪೇರಿ ಮಾಡಿದ್ದಾರೆ ಎಂದು ಜನರು ತಿರುಗಾಡುವುದಕ್ಕೆ ಆಗುವುದಿಲ್ಲ ಎಂದು ದೊಡ್ಡ ಕೂಗು ಇದೆ. ಇದು ನೈಜ ಸಂಗತಿ. ನಮ್ಮ ಕ್ಷೇತ್ರಕ್ಕೆ ಟೂರ್ ಹೋದರೆ ಕಾರಿನಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಯಾವ್ಯಾವ ಗ್ರಾಮಾಂತರ ಪ್ರದೇಶಗಳ ರೋಡುಗಳನ್ನು ಕೊಟ್ಟಿದ್ದೀರಿ, ಅವುಗಳನ್ನು ತಮ್ಮ ಇಲಾಖೆಗೆ ವಾಪಸ್ಸು ತೆಗೆದುಕೊಂಡು, ತಮ್ಮ ಪಿ.ಡಬ್ಲ್ಯೂ.ಡಿ ಪತಿಯಿಂದಲೇ ಆ ರೋಡುಗಳನ್ನು ರಿಪೇರಿ ಮಾಡಿಸಿಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಿ. ಯಾವುದೇ ಕಾರಣದಿಂದ ಆ ರೋಡುಗಳನ್ನು ಜಿಲ್ಲಾ ಪರಿಷತ್ತುಗಳಿಗೆ ತಾವು ಕೊಡುವುದಕ್ಕೆ ಹೋಗಬೇಡಿ. ಇಲ್ಲದಿದ್ದರೆ ನಮ್ಮ ಹಣ ವೆಚ್ಚವಾಗುತ್ತದೆ. ಮತ್ತು ರೋಡುಗಳು ಕುಲಗೆಟ್ಟು ಹೋಗುತ್ತವೆ. ನಾವು ಜನಗಳಿಂದ ನಿಂದನೆಯ ಮಾತುಗಳನ್ನು ಕೇಳಬೇಕಾಗುತ್ತದೆ. ಆದ್ದರಿಂದ ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ್ಯಾವ ರೋಡುಗಳನ್ನು ಅವರಿಗೆ ಕೊಟ್ಟಿದ್ದೀರಿ ಅವುಗಳನ್ನು ವಾಪಸ್ಸು ತೆಗೆದುಕೊಂಡು ಚೆನ್ನಾಗಿ ದುರಸ್ತಿ ಮಾಡಿದರೆ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಈ ಟೂರಿಸಮ್‌ನವರು ಏನು ಮಾಡುತ್ತಾರೆ ಎಂದು ನಮಗಂತೂ ಅನುಮಾನ ಬಂದಿದೆ. ಮಾನ್ಯ ಶಿವಮೂರ್ತಿಯವರಿಗೆ ಟೂರಿಸಂ ಕೊಟ್ಟು ಇವರು ಇನ್ ಆಕ್ಟೀವ್ ಆಗಿ ಬಿಟ್ಟಿದ್ದಾರೆ.

ಉಪಾಧ್ಯಕ್ಷಣಿಯವರು:- ಎಕ್ಸೈಸ್‌ನಲ್ಲಿದ್ದಾಗ ಸರಿ ಇದ್ದರು.

ಶ್ರೀ ಎಂ. ಮಹದೇವ್:- ಇದು ಏನಾಗಿದೆ ಎಂದರೆ ಶಾಕ್ ಒಂದುಕಡೆ ಸೇರಿಕೊಂಡು ಬಿಟ್ಟಿದೆ, ಕಿಕ್ ಒಂದು ಕಡೆ ಸೇರಿಕೊಂಡು ಬಿಟ್ಟಿದೆ. ಇವೆರಡನ್ನೂ ಇಟ್ಟುಕೊಂಡು ಟೂರಿಸಮ್ ಬಂದುಬಿಟ್ಟಿದೆ. ಇದು ಒಂದು ಪ್ರಾಬ್ಲಮ್ ಆಗಿದೆ. ತಾಲ್ಲೂಕುಮಟ್ಟದಲ್ಲಿ, ಯಾವ್ಯಾವ ಸಿಟಿಗಳಲ್ಲಿ, ಯಾವ್ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಸಿಟಿಗಳಲ್ಲಿ ಮಾಡುವುದಕ್ಕಿಂತ ಬಹುಶಃ ರಾಜ್ಯದ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಯಾವ್ಯಾವುದಿದೆ, ಅಲ್ಲಿ ಮಾಡಬೇಕು. ರಾಜ್ಯ, ಜಿಲ್ಲಾ ಕೇಂದ್ರಗಳಿಗಿಂತ ಹೆಚ್ಚಿಗೆ ಟೂರಿಸಮ್ ನಡೆಯಬೇಕಾದರೆ, ತಾಲ್ಲೂಕು ಹೆಡ್‌ಕ್ವಾರ್ಟ್‌ಸ್‌ನಲ್ಲಿ ಟೂರಿಸ್ಟ್ ಸೆಂಟರ್‌ಗಳನ್ನು ಸ್ಥಾಪನೆ ಮಾಡಿ. ನಮ್ಮ ನಂಜನಗೂಡಿಗೆ ದಕ್ಷಿಣ ಕಾಶಿ ಎಂದು ಹೆಸರು ಬಂದಿದೆ. ರಾಜ್ಯದ ಎಲ್ಲಾ ಮೂಲೆಗಳಿಂದ ಜನರು ಅಲ್ಲಿಗೆ ಬರುತ್ತಾರೆ. ಅಲ್ಲಿ ಒಂದು ಟೂರಿಸ್ಟ್ ಸೆಂಟರ್‌ಮಾಡಿಲ್ಲ. ನಮ್ಮ ಮೇಲೆ ಏಕೆ ಕೋಪ ನಿಮಗೆ? ಅಲ್ಲಿ ಮಾಡಿ. ದೇವರು ನಮಗೂ ಒಳ್ಳೆಯದು ಮಾಡುತ್ತಾನೆ, ನಿಮಗೂ ಒಳ್ಳೆಯದು ಮಾಡುತ್ತಾನೆ. ಇದು ನಂಜನಗೂಡಿಗೆ ಒಂದು ಕೊಟ್ಟರೆ ಸಾಲದು. ಎಲ್ಲ ಕಡೆಗೂ ಕೊಡಿ. ಅದರೆ ಎಲ್ಲಾ ಕಡೆಗೆ ಕೊಟ್ಟು ನಂಜನಗೂಡಿಗೆ ಕೊಡದಿದ್ದರೆ ಹೇಗೆ? ದಯವಿಟ್ಟು ಅಲ್ಲಿಗೂ ಕೊಡಿ ಮತ್ತೆ ತಾಲ್ಲೂಕು ಹೆಡ್ ಕ್ವಾರ್ಟ್‌ಸ್‌ನಲ್ಲಿ ಟೂರಿಸಮ್ ಡೆವಲಪ್‌ಮೆಂಟ್ ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದಕ್ಕೆ ಪ್ರಯತ್ನ ಮಾಡಿ. ಬರೀ ಸಿಟಿಗಳೊಳಗೆ, ಮೈಸೂರು ಸಿಟಿ, ಬೆಂಗಳೂರು ಸಿಟಿ, ಮಂಗಳೂರು ಸಿಟಿ ಈ ಕಡೆಗಳಲ್ಲಿ ಮಾಡುವುದಕ್ಕಿಂತ, ತಾಲ್ಲೂಕು ಮಟ್ಟದಲ್ಲೂ ಈ ಕಾರ್ಯಕ್ರಮಗಳನ್ನು ಪ್ರಚಾರ

ಮಾಡಬೇಕು. ನೀವು ಇಲ್ಲಿ ಎಷ್ಟು ಹಣವನ್ನು ಕೇಳಿದ್ದೀರಿ, ಅಷ್ಟು ಹಣಕ್ಕೆ ನಮ್ಮ ಒಪ್ಪಿಗೆಯನ್ನು ಕೊಡುತ್ತೇವೆ. ಆದರೆ, ನೀವು ತಾಲ್ಲೂಕುವೈಸ್ ಮಾಡುತ್ತೇವೆಂದು ಹೇಳಿದರೆ, ಇದರ ಪರಿಣಾಮ ಒಳ್ಳೆಯದಾಗುತ್ತದೆ ಮತ್ತು ಐತಿಹಾಸಿಕ ಹೆಸರುಗಳು ಎಲ್ಲೆಲ್ಲಿವೆ, ಅಲ್ಲಿ ತಾವು ಇಂಪ್ರೂಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಎಷ್ಟೋ ಗ್ರಾಮಾಂತರ ಪ್ರದೇಶಗಳಲ್ಲಿ ಒಳ್ಳೊಳ್ಳೆ ಐತಿಹಾಸಿಕ ದೇವಸ್ಥಾನಗಳು ಇವೆ. ನೂರಾರು ಜನಗಳು ಹೋಗುತ್ತಾರೆ, ಹೊರದೇಶದವರೂ ಹೋಗುತ್ತಾರೆ. ಆದ್ದರಿಂದ, ನೀವು ಪ್ರಚಾರಕ್ಕೆ ಬರಬೇಕಾಗಿದ್ದರೆ, ನಮ್ಮ ನಂಜನಗೂಡು ಇಂತಹ ಸ್ಥಳಗಳನ್ನು ಹುಡುಕಿ, ಹುಡುಕಿ. ಸೆಂಟರುಗಳನ್ನು ಕೊಡಿ. ಆಗ, ನೀವು ಪ್ರಚಾರಕ್ಕೆ ಬರುತ್ತೀರಿ.

ಉಪಾಧ್ಯಕ್ಷಿಣಿಯವರು:- ಈಗಾಗಲೇ ತಾವು 25 ನಿಮಿಷ ತೆಗೆದುಕೊಂಡಿದ್ದೀರಿ, ಬೇಗ ಮುಗಿಸಿ.

ಶ್ರೀ ಎಂ. ಮಹದೇವ್:- ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಎಂದು ಇದೆ. ಇದು ಮಾನ್ಯ ಮಲ್ಲಿಕಾರ್ಜುನ ಪ್ರಸನ್ನ ಅವರ ಖಾತೆ. ಅಲ್ಲಿ ಏನಾಗಿದೆ ಎಂದರೆ, ನಾವು ಲಿಫ್ಟ್ ಇರಿಗೇಷನ್‌ನವರ ಹತ್ತಿರ ಹೋಗಿ ನಮಗೆ ಲಿಫ್ಟ್ ಇರಿಗೇಷನ್ ಸೌಲಭ್ಯ ಕೊಡಿ ಎಂದು ಹೇಳಿದರೆ, ನಮಗೆ ಹಣದ ಸಮಸ್ಯೆ ಇದೆ, ಹಣದ ಅವಶ್ಯಕತೆ ಬಹಳ ಇದೆ ಎಂದು ಹೇಳುತ್ತಾರೆ. ಇನ್ನು ಇವರ ಹತ್ತಿರ ಹೋದರೆ ಏನೋ ನಮಗೆ ಸಣ್ಣ ನೀರಾವರಿ ಮಂತ್ರಿಗಳು ಇದ್ದಾರೆ, ಬಹಳ ಸಹಾಯವಾಗುತ್ತದೆ ಎಂದು ಹೇಳಿದರೆ, ಕೊಡುತ್ತೇವೆ, ಆದರೆ, ದುಡ್ಡು ಕೊಡಿಸಿ ಕೊಡಿ ಎಂದು ಹೇಳುತ್ತಾರೆ ನಾವು ದುಡ್ಡು ಎಲ್ಲಿಂದ ಕೊಡಿಸೋಣ? ವರ್ಲ್ಡ್ ಬ್ಯಾಂಕ್‌ನವರನ್ನು ಕೇಳುತ್ತಾರೆ, ಅಲ್ಲಿ ಇಲ್ಲಿ ಕೇಳುತ್ತಾರೆ. ರಾಜ್ಯದಲ್ಲಿ ಹಣ ಇಲ್ಲ, ಅದಕ್ಕೋಸ್ಕರ ಏನಾದರೊಂದು ವ್ಯವಸ್ಥೆ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ನೀವೆಲ್ಲರೂ ಸೇರಿ ಏನಾದರೂ ಮಾಡಿ, ಲಿಫ್ಟ್ ಇರಿಗೇಷನ್‌ಗೆ ಹಣ ಕೊಡಿಸಿ ಎಂದು ಹೇಳುತ್ತಾರೆ. ನಾವು ನಮ್ಮ ಸಮಸ್ಯೆ ಹೇಳುವುದಕ್ಕೆ ಹೋಗಿ, ಲಿಫ್ಟ್ ಇರಿಗೇಷನ್ ಬೇಕಾದರೆ, ನೀವು ಸಹಾಯ ಮಾಡಿ ಎಂದು ಹೇಳಿದರೆ, ಹಣದ ಸಮಸ್ಯೆ ಹೇಳಿದರೆ, ಹೇಗೆ ಸಮಸ್ಯೆ ಬಗೆಹರಿಯುತ್ತದೆ. ಆದ್ದರಿಂದ ಲಿಫ್ಟ್ ಇರಿಗೇಷನ್ ಸಚಿವರಿಗೂ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ಎಲ್ಲೆಲ್ಲಿ ನದಿಗಳಿವೆ, ರಾಜ್ಯದಲ್ಲಿ ನದಿಯ ದಡದಲ್ಲಿ, ಡ್ರೈಲ್ಯಾಂಡ್ ಇದೆ. ಅಂತಹ ಕಡೆ ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಲಿಫ್ಟ್ ಇರಿಗೇಷನ್ ಮಾಡುತ್ತೇವೆಂದು ಹೇಳಿದರೆ, ಬಹುಶಃ ಅನುಕೂಲವಾಗುತ್ತದೆ ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ದುಡ್ಡಿನ ವಿಚಾರದಲ್ಲಿ, ಅದೂ, ಇದೂ, ಎಂದು ಹೇಳುವುದಕ್ಕೆ ಹೋಗಬೇಡಿ. ನಂಜನಗೂಡಿನಲ್ಲಿ ಅನೇಕ ಲಿಫ್ಟ್ ಇರಿಗೇಷನ್‌ಗಳನ್ನು ಕೇಳಿದ್ದೇವೆ. ಸಂಗಮದ ಹತ್ತಿರ 5 ಸಾವಿರ ಎಕರೆಗೆ ನೀರಾವರಿ ಅನುಕೂಲವಾಗುತ್ತದೆ. ಅಲ್ಲಿರತಕ್ಕಂಥ ಜನ ಹಿಂದುಳಿದಿರತಕ್ಕ ಜನ, ಅಲ್ಲಿ ನುಗು ಡ್ಯಾಮ್‌ನಿಂದ ಆಗುವುದಿಲ್ಲ, ಕಬಿನಿ ಡ್ಯಾಮ್‌ನಿಂದ ಆಗುವುದಿಲ್ಲ. ಅಲ್ಲಿ ರಿವರ್ ಹತ್ತಿರ ಇದೆ, 2-3 ಕಿಲೋಮೀಟರ್ ರಿವರ್ ಇದೆ. 5 ಸಾವಿರ ಎಕರೆಯಲ್ಲಿ ನೀರಾವರಿಯಾಗುತ್ತದೆ. ಈ ನದಿಯಿಂದ ಲಿಫ್ಟ್ ಇರಿಗೇಷನ್ ಮಾಡಿಸಿಕೊಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ. ನಂಜನಗೂಡು ತಾಲ್ಲೂಕು, ಸಂಗಮದ ಹತ್ತಿರ ಇದನ್ನು ಕೈಗೆತ್ತಿಕೊಳ್ಳಿ. ಇನ್ನು ಕಬಿನಿ ರಿವರ್‌ನಿಂದ ಲಿಫ್ಟ್ ಇರಿಗೇಷನ್ ಸ್ಕೀಮ್ ತೆಗೆದುಕೊಳ್ಳಬೇಕೆಂದೂ, ನಂಜನಗೂಡು ತಾಲ್ಲೂಕು ಕವಲಂದೆ ಹೋಬಳಿ, ಅರೆಪುರ ಕೆರೆಯ ಬಳಿ ಐದುನೂರು ಎಕರೆ ಪ್ರದೇಶ ಇದೆ. ಅಲ್ಲಿ ಹೂಳೆತ್ತಬೇಕಾಗಿದೆ, ಇದನ್ನು ಮಂಜೂರ್ಮಾಡಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಹೂಳೆತ್ತುವ ಕೆಲಸವನ್ನು ತಕ್ಷಣವೇ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ವಿಚಾರವನ್ನು ತಿಳಿಸುತ್ತೇನೆ. ಇದರಿಂದ, ಅಲ್ಲಿಯ ಜನ ಕೆರೆಯ ಆಶ್ರಯದಲ್ಲಿ ನೀರಾವರಿ ಸೌಲಭ್ಯವನ್ನು ಪಡೆಯುವುದಕ್ಕೆ ಬಹಳ ಆಸಕ್ತಿಯಿಂದ ಇದ್ದಾರೆ.

ಉಪಾಧ್ಯಕ್ಷಿಣಿಯವರು: ಈಗ ನಾನು ಮುಂದಿನವರನ್ನು ಕರೆಯುತ್ತೇನೆ, ನೀವು 25 ನಿಮಿಷ ತೆಗೆದುಕೊಂಡಿದ್ದೀರಿ, ಬೇರೆ ಯಾರೂ ಮಾತನಾಡುವುದು ಬೇಡ ಎಂದರೆ, ನೀವು 8 ಗಂಟೆಯವರೆಗೂ ಮಾತನಾಡಿ, ನಂತರ ಮಂತ್ರಿಗಳು ಉತ್ತರ ಕೊಡುತ್ತಾರೆ. If you want to take so much of time, I don't object. But we have to finish this Discussion on Demands and the reply

today itself. ಆದ್ದರಿಂದ ತಾವು ಬೇರೆಯವರಿಗೂ ಅವಕಾಶ ಮಾಡಿಕೊಡಿ.

ಶ್ರೀ ಎಂ. ಮಹದೇವ್:- ಇದು ಬಹಳ ಮುಖ್ಯವಾದ ವಿಚಾರವಾದ್ದರಿಂದ ಮಾತನಾಡಿದೆ. ತಾವು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ, ತಮಗೆ ಧನ್ಯವಾದಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಈರಪ್ಪಮಾರಪ್ಪ ಷೆಡ್‌ಶ್ಯಾಲ (ಅಥಣಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, 1992-93 ನೇ ಸಾಲಿನ ನೀರಾವರಿ, ಲೋಕೋಪಯೋಗಿ ಮುಂತಾದ ಇಲಾಖೆಗಳ ಬೇಡಿಕೆಗಳಿಗೆ ಅನುಮೋದನೆಯನ್ನು ಸೂಚಿಸಿ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದೆರಡು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಅಥಣಿ ತಾಲ್ಲೂಕು, ಜಮಖಂಡಿ ತಾಲ್ಲೂಕಿಗೆ ವರದಾನವಾಗಿರತಕ್ಕಂಥ, ಅಖಂಡವಾಗಿ ಹದಿನೇಳು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂಥ ಹಿಪ್ಪರಗಿ ಬ್ಯಾರೇಜ್‌ಗೆ ಈ ವರ್ಷದ ಆಯವ್ಯಯದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಾದ ಶ್ರೀಮಾನ್ ಮಲ್ಲಾರಿಗೌಡ ಪಾಟೀಲರು 5 ಕೋಟಿ ರೂಪಾಯಿಗಳನ್ನು ಒದಗಿಸಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಸರಕಾರದಲ್ಲಿ ನನ್ನ ವಿನಂತಿ ಎಂದರೆ ಈ ಯೋಜನೆ ಬರೀ ಆಯವ್ಯಯದಲ್ಲಿ ಅಷ್ಟೇ ಉಳಿಯಬಾರದು, ಪ್ರತ್ಯಕ್ಷವಾಗಿ ಹಣವನ್ನು ಬಿಡುಗಡೆ ಮಾಡಿ ಆದಷ್ಟು ಬೇಗನೆ ಈ ಕಾರ್ಯ ಪ್ರಾರಂಭವಾಗಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಸುತ್ತಿದ್ದೇನೆ. ಈಗ ಹಣ ಮಂಜೂರಾಗಿ ಸುಮಾರು 8-10 ತಿಂಗಳಾಗಿದ್ದರೂ ಸಹ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಅನೇಕ ತಾಂತ್ರಿಕ ಕಾರಣಗಳ ಸಲುವಾಗಿ ಫೈಲ್ ಮೇಲಿನಿಂದ ಕೆಳಕ್ಕೆ. ಕೆಳಗಿನಿಂದ ಮೇಲಕ್ಕೆ ಹೋಗುತ್ತಿದೆ. ಅದಕ್ಕೆ ಸರಕಾರದವರು ತೀವ್ರ ಗಮನಹರಿಸಬೇಕೆಂದು, ಆದಷ್ಟು ಬೇಗ ಕಾರ್ಯ ಪ್ರಾರಂಭ ಮಾಡಬೇಕೆಂದು ವಿನಂತಿಸುತ್ತೇನೆ. ಅದರಂತೆ ನಾನು ಸುಮಾರು ಎರಡು ವರ್ಷಗಳಿಂದ ನಮ್ಮ ಅಥಣಿ ತಾಲ್ಲೂಕಿಗೆ ವರದಾನವಾದ, ಮಹಾರಾಷ್ಟ್ರದ ಸರ್ಕಾರದವರು ಕೃಷ್ಣಾ ನದಿಗೆ ಮಾಶಾಳ್ ಗ್ರಾಮದ ಹತ್ತಿರ ನಿರ್ಮಿಸುತ್ತಿರತಕ್ಕಂಥ ಲಿಫ್ಟ್ ಇರಿಗೇಷನ್ ಸ್ಕೀಮ್ ಬಗ್ಗೆ ನಾನು ಸರ್ಕಾರವನ್ನು ಎರಡು ವರ್ಷಗಳಿಂದ ವಿನಂತಿಸುತ್ತಿದ್ದೇನೆ. ಮಹಾರಾಷ್ಟ್ರ ಸರ್ಕಾರದವರು 250 ಕೋಟಿ ರೂಪಾಯಿ ಖರ್ಚು ಮಾಡಿ ತಮ್ಮ ಮೂರು ನಾಲ್ಕು ತಾಲ್ಲೂಕುಗಳಿಗೆ ನೀರಾವರಿ ಯೋಜನೆಯನ್ನು ಕೈಗೊಂಡಿದ್ದಾರೆ. ಅದರಲ್ಲಿ ನಾನು ನಮ್ಮ ಸರ್ಕಾರವನ್ನು ವಿನಂತಿಮಾಡಿಕೊಂಡೆ, ಸದರಿ ಯೋಜನೆಯಲ್ಲಿ ಸಹಕಾರ ಯೋಜನೆಯಲ್ಲಿ ನಮ್ಮ ಸರ್ಕಾರದವರು ಭಾಗವಹಿಸಿ ತಮ್ಮ ಪಾಲಿನ ಹಣವನ್ನು ಕೊಟ್ಟು ಒಂದು ಕೆನಾಲ್ ತೆಗೆದುಕೊಂಡರೆ ಅದರಿಂದ ನಮ್ಮ ಕಡೆಗೆ ಹೊಂದಿಕೊಂಡಿರುವ ಅಥಣಿ ತಾಲ್ಲೂಕಿನ 25 ಗ್ರಾಮಗಳಿಗೆ ನೀರಾವರಿಯಾಗುತ್ತದೆ, ಸುಮಾರು 50-60 ಸಾವಿರ ಎಕರೆ ನೀರಾವರಿಯಾಗುತ್ತದೆ. ಅದರ ಸಲುವಾಗಿ ಪ್ರಯತ್ನ ಮಾಡಬೇಕು. ಅಥಣಿ ತಾಲ್ಲೂಕು ಬರಗಾಲ ಪ್ರದೇಶ, ಅದಕ್ಕಾಗಿ ಸರಕಾರವನ್ನು ಒತ್ತಾಯಪೂರ್ವಕವಾಗಿ ಕೇಳುವುದು ಏನೆಂದರೆ ಮಹಾರಾಷ್ಟ್ರ ಸರ್ಕಾರದ ಸಹಕಾರ ಯೋಜನೆಯಲ್ಲಿ ನಮ್ಮ ಸರ್ಕಾರದವರು ಸಹ ಭಾಗವಹಿಸಿ ನಮ್ಮ ಅಥಣಿ ತಾಲ್ಲೂಕಿಗೆ ನೀರನ್ನು ಒದಗಿಸಿಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿ ಕೊಳ್ಳುತ್ತೇನೆ. ನಾನು ಎರಡು ವರ್ಷಗಳಿಂದ ಇದರ ಬಗ್ಗೆ ಕೇಳುತ್ತಿದ್ದರೂ ಸಹಿತ ನಮ್ಮ ಸರ್ಕಾರದವರು ಈ ಯೋಜನೆ ಸಲುವಾಗಿ ಮಾಹಿತಿ ತರಿಸಿಕೊಳ್ಳುವ ಕೆಲಸವನ್ನೂ ಸಹಿತ ಮಾಡಿಲ್ಲ. ನಾನು 10-12 ಸಾರಿ ಅರ್ಜಿಗಳನ್ನು ಕೊಟ್ಟಿರುತ್ತೇನೆ. ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದು ಈ ಯೋಜನೆಯ ಬಗ್ಗೆ ಮಾಹಿತಿ ಮತ್ತು ರೂಪು ರೇಷುಗಳನ್ನು ತರಿಸಿಕೊಳ್ಳುವುದಕ್ಕೆ ಇನ್ನೂ ಆಗಲಿಲ್ಲ. ಅದಕ್ಕಾಗಿ ಮತ್ತೊಮ್ಮೆ ಸರ್ಕಾರವನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಸದರಿ ಯೋಜನೆಯ ರೂಪುರೇಷೆಗಳನ್ನು ತರಿಸಿ ನಮ್ಮ ಕರ್ನಾಟಕ ಸರ್ಕಾರದವರೂ ಕೂಡಾ ಇದಕ್ಕೆ ಬೇಕಾದಂಥ ಹಣವನ್ನು ಪೂರೈಸಿ, ಆ ಯೋಜನೆಯ ಲಾಭವನ್ನು ನಮ್ಮ ತಾಲ್ಲೂಕಿಗೆ ಒದಗಿಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಕೆರೆಗಳು ಮಂಜೂರಾಗಿದ್ದರೂ ಸಹ ಇದಕ್ಕೆ ಸರ್ಕಾರದವರು ಗ್ರ್ಯಾಂಟ್ ಕೊಡದ ಕಾರಣ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಅದಕ್ಕೆ ನಾನು ಸಣ್ಣ ನೀರಾವರಿ ಮಂತ್ರಿಗಳನ್ನು ವಿನಂತಿ

ಮಾಡಿಕೊಳ್ಳುವುದು ಎಂದರೆ, ಆದಷ್ಟು ಬೇಗನೆ ಅವುಗಳಿಗೆ ಗ್ರ್ಯಾಂಟ್ ರಿಲೀಸ್ ಮಾಡಿ ಕೆರೆಗಳು ಪ್ರಾರಂಭ ಆಗುವ ಸಲುವಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳುತ್ತೇನೆ. ಇದರಂತೆ ನಮ್ಮಲ್ಲಿ ಕೆರೆಗಳು ಏನು ಇವೆ, ಅವುಗಳ ಕೆನಾಲ್ ದುರಸ್ತಿ ಆಗಲಾರದ ಕಾರಣ ಆ ಕೆರೆಗಳ ಉಪಯೋಗ ಜನಗಳಿಗೆ ಆಗುತ್ತಿಲ್ಲ. ಸ್ವಲ್ಪ ಹಣದಲ್ಲಿ ಆ ಕೆರೆಗಳ ಕೆನಾಲ್ ದುರಸ್ತಿಯಾಗುತ್ತದೆ. ಇದಕ್ಕೆ ಸಣ್ಣ ನೀರಾವರಿ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಆ ಕಾಲುವೆಗಳನ್ನು ದುರಸ್ತಿ ಮಾಡಿಸಿ, ಆ ಕೆರೆಗಳ ಸದುಪಯೋಗ ಜನಗಳಿಗೆ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳಬೇಕಾದರೆ ಅಥಣಿ ಕ್ಷೇತ್ರವು ನಮ್ಮ ಮಹಾರಾಷ್ಟ್ರ ಗಡಿ ಪ್ರದೇಶಕ್ಕೆ ಹೊಂದಿಕೊಂಡಿದೆ. ಮಹಾರಾಷ್ಟ್ರ ಸರ್ಕಾರದವರು ನಮ್ಮ ಗಡಿತನಕ ಟಾರ್ ರೋಡ್ ಮಾಡಿದ್ದಾರೆ. ನಮ್ಮ ಗಡಿ ಒಳಗೆ ಬಂದ ಕೂಡಲೇ ಮನುಷ್ಯರು ಅಥವಾ ಯಾರಿಗೂ ನಡೆಯುವಂತಹ ಪರಿಸ್ಥಿತಿಯಲ್ಲಿ ನಮ್ಮ ರೋಡ್ ಇಲ್ಲ. ಅದು ಬೆಂಗಳೂರಿನ ಕಡೆಯ ಮತಕ್ಷೇತ್ರ ಆಗಿದೆ. ಅದಕ್ಕೆ ಅಲಕ್ಷ್ಯ ಮಾಡಿದ್ದಾರೆ. ಅದಕ್ಕೆ ಲೋಕೋಪಯೋಗಿ ಇಲಾಖೆಯವರು ಸಾಕಷ್ಟು ಹೆಚ್ಚು ಹಣವನ್ನು ಒದಗಿಸಿ ರೋಡ್‌ಗಳನ್ನು ದುರಸ್ಥಿ ಮಾಡಿಸಿಕೊಡಬೇಕು ಅಂತ ನಾನು ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದರಂತೆ ಇನ್ನು ಇನ್‌ಫರ್ಮೇಷನ್ ಮತ್ತು ಟೂರಿಸ್ಟ್ ಡಿಪಾರ್ಟ್‌ಮೆಂಟ್ ಸಲುವಾಗಿ ನಾನು ಹೇಳುವುದಾದರೆ ನಮ್ಮ ಮತಕ್ಷೇತ್ರಕ್ಕೆ ಅನೇಕ ಪ್ರೇಕ್ಷಣೀಯವಾದಂತಹ ಸ್ಥಳಗಳು ಇದ್ದರೂ ಸಹ ಒಂದು ಟೂರಿಸ್ಟ್ ಸೆಂಟರ್ ನಮ್ಮಲ್ಲಿ ಆಗಿಲ್ಲ. ಅದಕ್ಕೆ ಟೂರಿಸ್ಟ್ ಮಿನಿಸ್ಟರ್‌ನ್ನು ಕೇಳಿಕೊಳ್ಳುವುದೇನೆಂದರೆ, ನಮ್ಮಲ್ಲಿ ಒಂದೆರಡು ಟೂರಿಸ್ಟ್ ಸೆಂಟರ್ಸ್ ತೆರೆಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಅನೇಕ ಪ್ರೇಕ್ಷಣೀಯವಾದಂಥ ಮತಕ್ಷೇತ್ರದಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿ ಇದುವರೆಗೂ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ):- ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಸಭೆಯ ಮುಂದೆ ಮಂಡಿಸಿದಂತಹ ಬೇಡಿಕೆಗಳಿಗೆ ಅನುಮೋದಿಸುತ್ತಾ ಇರಿಗೇಷನ್ ಮತ್ತು ಲೋಕೋಪಯೋಗಿ ಮೇಲೆ ನಾನು ಎರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದಲ್ಲಿ ಇರಿಗೇಷನ್ ಸಂಬಂಧಪಟ್ಟಂತೆ ಬಹಳಷ್ಟು ಟ್ಯಾಂಕ್‌ಗಳನ್ನು ತೆಗೆದುಕೊಂಡಿದ್ದರೂ ಸಹ ಅದರಲ್ಲಿ ನಾಲ್ಕು ಟ್ಯಾಂಕ್‌ಗಳು ಇವೆ. ಒಂದು ಮೊಳಸಾಪುರ ಟ್ಯಾಂಕ್, ಬಾಚನಾಳ ಟ್ಯಾಂಕ್, ದಿನಸಿ ಟ್ಯಾಂಕ್ ಮತ್ತು ನವನಿಹಾಳ ಟ್ಯಾಂಕ್ ಅಂತ ಹೇಳಿ ಸುಮಾರು ನಾಲ್ಕು ಟ್ಯಾಂಕ್‌ಗಳು ಇವೆ. ಇದರ ಎಸ್ಟಿಮೇಟೆಡ್ ಕಾಸ್ಟ್ 8.34 ಲಕ್ಷ ರೂಪಾಯಿಗಳು. ಆಮೇಲೆ 43.120 ಲಕ್ಷ ರೂಪಾಯಿಗಳು. ಈ ರೀತಿಯಾಗಿ ಖರ್ಚು ಮಾಡಿ ಕಟ್ಟಲಾದಂತಹ ಈ ಟ್ಯಾಂಕ್‌ಗಳು ಟೋಟಲ್ ಇಲ್ಲಿಯವರೆಗೆ ಎಷ್ಟು ಹೆಕ್ಟೇರ್ ನೀರು ಉಣಬೇಕಾಗಿತ್ತು ಅಂದ್ರೆ 964 ಹೆಕ್ಟೇರ್ ಉಣಬೇಕು, ಆಕ್ಚುಯಲ್ ಆಗಿ ಇದನ್ನು ಕಟ್ಟಿದ ಮೇಲೆ 270 ಹೆಕ್ಟೇರ್ ಉಣಬೇಕು ಅಂತ ಹೇಳಿ ಮೊಳಸಾಪುರ ಟ್ಯಾಂಕ್ ಕಟ್ಟಿದರೆ ಕೇವಲ ಅದರಲ್ಲಿ ಉಣ್ಣುವುದು 30 ಹೆಕ್ಟೇರ್ ಮಾತ್ರ, ಬಾಚನಾಳ ಟ್ಯಾಂಕ್ 134 ಹೆಕ್ಟೇರ್ ಉಣಬೇಕಾಗಿತ್ತು, ಆದರೆ, ಅದು ಕೇವಲ 25 ಹೆಕ್ಟೇರ್ ಮಾತ್ರ ಉಣುತ್ತಿದೆ. ದಿನಸಿ ಟ್ಯಾಂಕ್ 210 ಹೆಕ್ಟೇರ್ ಉಣಬೇಕಾಗಿದ್ದರೆ ಅದು ಕೇವಲ ಈಗ 50 ಹೆಕ್ಟೇರ್ ಮಾತ್ರ ಉಣುತ್ತಿದೆ. ಅದಕ್ಕೆ ನನಗನ್ನಿಸುತ್ತದೆ, ಮಾನ್ಯ ಅಧ್ಯಕ್ಷರೇ, ಇವರು ಟ್ಯಾಂಕ್‌ಗಳನ್ನು ಕಟ್ಟಿದರೂ ಸಹ ಅಲ್ಲಿ ಇರುವಂತಹ ರೈತರಿಗೆ ಇದರ ಎಳ್ಳಷ್ಟೂ ಉಪಯೋಗ ಇಲ್ಲ. ಏಕೆಂದರೆ, ರೈಟ್ ಬ್ಯಾಂಕ್ ಕೆನಾಲ್ ಕಂಪ್ಲೀಟ್ ಮಾಡಿದರೆ ಲಿಫ್ಟ್ ಬ್ಯಾಂಕ್ ಕೆನಾಲ್ ಕೆಲಸ ಕಂಪ್ಲೀಟ್ ಮಾಡುವುದಿಲ್ಲ. ಒಂದೊಂದು ಕಡೆ ಲಿಫ್ಟ್‌ಬ್ಯಾಂಕ್ ಕೆನಾಲ್ ಇಲ್ಲ. ಒಂದೊಂದು ಕಡೆ ರೈಟ್ ಬ್ಯಾಂಕ್ ಕೆನಾಲ್ ಇಲ್ಲ. ಇನ್ನು ಕೆಲವೊಂದು ಕೆರೆಗಳಿಗೆ ಗೇಟ್‌ಗಳೇ ಇಲ್ಲ. ಅದಕ್ಕೆ ಅಲ್ಲಿರತಕ್ಕಂಥ ಜನಗಳಿಗೆ ಬಹಳ ತೊಂದರೆಯಾಗಿದೆ. ನಾನು ಪ್ರತಿ ಸಲ ಅಲ್ಲಿಗೆ ಹೋದಾಗ ಬಹಳಷ್ಟು ಜನರು ಅಲ್ಲಿನ ಕೆರೆಗಳಿಂದ ರೈತರಿಗೆ ಅನುಕೂಲವಾಗಬೇಕೆಂದು

ಕೇಳುತ್ತಾರೆ. ಆದರೆ, ಇದುವರೆವಿಗೂ ಅಲ್ಲಿನ ಯಾವ ರೈತರಿಗೂ ಎಳ್ಳಷ್ಟೂ ಅನುಕೂಲವಾಗಿಲ್ಲ, ಮತ್ತು ಯಾವುದೇ ಸವಲತ್ತು ಏತಕ್ಕೆ ಸಿಕ್ಕಿಲ್ಲ ಎನ್ನುವ ಮಾತನ್ನು ನನಗೆ ಪದೇ ಪದೇ ನನ್ನ ಮತಕ್ಷೇತ್ರದ ಜನಗಳು ಕೇಳುತ್ತಾರೆ. ಅದಕ್ಕೆ ಈವತ್ತು ಸಂಬಂಧಪಟ್ಟಂತಹ ಮಂತ್ರಿಗಳಿಗೆ ನಾನು ಕೇಳಿಕೊಳ್ಳುತ್ತೇನೆ. ಅಲ್ಲಿಗೆ ತಾವು ತಮ್ಮ ಡಿಪಾರ್ಟ್‌ಮೆಂಟಿನವರನ್ನು ಕಳುಹಿಸಿ ತನಿಖೆ ಮಾಡಿಸಿ ಎಷ್ಟು ದುಡ್ಡು ಬೇಕು ಅಷ್ಟು ದುಡ್ಡು ಕೊಟ್ಟು ತಕ್ಷಣ ಅದನ್ನು ಸರಿಪಡಿಸಿದರೆ ಅಲ್ಲಿರತಕ್ಕಂಥ ರೈತರಿಗೆ ಅನುಕೂಲವಾಗುತ್ತದೆಂದು ನಾನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮಟಗಿ ಟ್ಯಾಂಕ್ ಬಗ್ಗೆ ನಾನು ಮೊನ್ನೆ ಪ್ರಶ್ನೆ ಮಾಡಿದಾಗ ಮಾನ್ಯ ಮಂತ್ರಿಗಳು ಇದನ್ನು ತಕ್ಷಣ ರಿಪೇರಿ ಮಾಡಿಸುತ್ತೇವೆಂದು ಹೇಳಿದರು. ಆ ಟ್ಯಾಂಕ್ ಒಡೆದು ಹೋಗಿ ಸುಮಾರು ಜನ ರೈತರಿಗೆ ಹಾನಿ ಆಗಿದೆ. ಆದರೂ ಇಲ್ಲಿಯತನಕ ಸರ್ಕಾರದವರು ಅದನ್ನು ರಿಪೇರಿ ಮಾಡಬೇಕೆನ್ನ ತಕ್ಕದ್ದರ ಬಗ್ಗೆ ಯೋಚನೆ ಮಾಡಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ಈ ಟ್ಯಾಂಕ್ ಒಡೆದು ಹೋಗಿ ಬಹಳ ಹಾನಿಯಾಗಿದೆ. ಆ ಹಾನಿಯನ್ನು ಎಂದೆಂದೂ ಭರ್ತಿ ಮಾಡಲು ಸಾಧ್ಯವಿಲ್ಲ. ತಕ್ಷಣ ಅದನ್ನು ರಿಪೇರಿ ಮಾಡಿಸಿ ಮುಂದೆ ಹೆಚ್ಚಿನ ಹಾನಿಗೀಡಾಗದಂತೆ ನೋಡಿಕೊಂಡು ಹೋಗಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ ನನ್ನ ಮತಕ್ಷೇತ್ರದಲ್ಲಿ ಒಂದು ಗಂಡೂರಿ ನಾಲಾ ಪ್ರಾಜೆಕ್ಟ್ ಅಂತ ಹೇಳಿ ಹೊಸದಾಗಿ ತೆಗೆದುಕೊಂಡಿದ್ದಾರೆ. ಆ ಗಂಡೂರಿ ನಾಲಾಕ್ಕೆ ಈ ವರ್ಷ ಕೇವಲ 40 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ನಾನು ಮಾನ್ಯ ಇರಿಗೇಷನ್ ಮಂತ್ರಿಗಳಿಗೆ ಬಹಳಷ್ಟು ಸಾರಿ ಕೇಳಿಕೊಂಡಿದ್ದೆ. ಏನೆಂದರೆ, ತಾವು ದೊಡ್ಡ ಒಂದು ಪ್ರಾಜೆಕ್ಟ್ ಕೆಲಸವನ್ನು ಮೊದಲನೇ ಸಲ ನನ್ನ ಮತಕ್ಷೇತ್ರದಲ್ಲಿ ತೆಗೆದುಕೊಳ್ಳುತ್ತಿದ್ದೀರಿ, ದಯವಿಟ್ಟು ಸುಮಾರು 5-6 ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಈ ಮಣ್ಣಿನ ಕೆಲಸವನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಕೇಳಿಕೊಂಡಿದ್ದೆ. ಆದರೂ ಬರೀ 40 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಅಧ್ಯಕ್ಷಿಣಿಯವರೇ, ತಮ್ಮ ಮುಖಾಂತರ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ, ಕನಿಷ್ಟ ಮೂರ್‍ನಾಲ್ಕು ಕೋಟಿ ರೂಪಾಯಿಗಳನ್ನು ಈ ಸಲ ಕೊಟ್ಟಿದ್ದಾದರೆ ಆ ನಾಲಾ ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಒಂದು ವೇಳೆ ಸರ್ಕಾರ ಸಮಯಕ್ಕೆ ಸರಿಯಾಗಿ ದುಡ್ಡು ಕೊಡಲಿಲ್ಲವೆಂದರೆ 100 ಕೋಟಿ ರೂಪಾಯಿಗಳಿಗೆ ಆಗತಕ್ಕಂಥ ಕೆಲಸಕ್ಕೆ ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಆಗುತ್ತದೆ. ಪ್ರತಿ ವರ್ಷ ಇದು ಇನ್‌ಕ್ರೀಸ್ ಆಗುತ್ತಲೇ ಇದೆ. ಹೊಸದಾಗಿ ತೆಗೆದುಕೊಳ್ಳತಕ್ಕಂಥ ಕೆರೆಗಳಿಗೆ ಸಾಧಾರಣವಾಗಿ ಅದಕ್ಕೆಷ್ಟು ದುಡ್ಡು ಬೇಕು ಅನ್ನತಕ್ಕಂಥ ದೃಷ್ಟಿಕೋನ ಇಟ್ಟುಕೊಂಡು ಅದಕ್ಕೆ ಸರಿಸಮನಾಗಿ ಹಣ ಬಿಡುಗಡೆ ಮಾಡಿದರೆ ಮಾತ್ರ ಅಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ತಮ್ಮ ಮುಖೇನ ಕೇಳಿಕೊಳ್ಳುವುದೇನೆಂದರೆ, ನನ್ನ ಮತ ಕ್ಷೇತ್ರದಲ್ಲಿ ಬರತಕ್ಕಂಥ ಈ ಹೊಸ ಕೆರೆಗೆ ನಾಲ್ಕೈದು ಕೋಟಿ ರೂಪಾಯಿ ಕೊಟ್ಟರೆ ಮಾತ್ರ ಅನುಕೂಲವಾಗುತ್ತದೆಂದು ಹೇಳಿ ಮತ್ತೊಮ್ಮೆ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ನಾವು ಗುಲ್ಬರ್ಗಾ ಭಾಗದಲ್ಲಿರತಕ್ಕಂಥವರು, ಹೈದರಾಬಾದ್ ಅಭಿವೃದ್ಧಿ ಕೆಳಗಡೆ ಏನು ಕೆಲಸವಾಗುತ್ತದೆಂದು ನೋಡಬೇಕಾಗುತ್ತದೆ. ಬೀದರ್, ಗುಲ್ಬರ್ಗಾ, ರಾಯಚೂರಿಗೆ ಸಂಬಂಧಪಟ್ಟವರು ನಾವು ಪೂರ್ತಿ ಯಾವುದರ ಮೇಲೆ ಡಿಪೆಂಡ್ ಆಗಿದ್ದೇವೆಂದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನ ಮೇಲೆ. ನಾವು ಈಗ ಬಜೆಟ್ ಭಾಗದಲ್ಲಿ ನೋಡುತ್ತೇವೆ. ರೆಗ್ಯುಲರ್ ವರ್ಕ್ ಏನು ನಡೆಯುತ್ತದೆ ವರ್ಷೇ ವರ್ಷೇ ಅವುಗಳಲ್ಲಿ ಬಹಳಷ್ಟು ಕೆಲಸಗಳನ್ನು ತೆಗೆದುಹಾಕಿ ಈ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್‌ನಲ್ಲಿರತಕ್ಕಂಥ ಕೆಲಸಗಳನ್ನು ಅಳವಡಿಸಿದ್ದಾರೆ. ಇದರಲ್ಲಿ ವಿಶೇಷವಾಗಿ ಸಿಗತಕ್ಕಂಥಾದ್ದು ಏನು ಇಲ್ಲ ಅನ್ನತಕ್ಕಂಥಾದ್ದು ಎದ್ದು ಕಾಣುತ್ತದೆ. ನಾನು ಹೇಳುವುದಿಷ್ಟೆ, ರೆಗ್ಯುಲರ್ ವರ್ಕ್ಸ್ ಇಲ್ಲಿಯವರೆಗೆ ಏನು ತೆಗೆದುಕೊಳ್ಳುತ್ತಿದ್ದರು, ಅದರ ಮೇಲೆ ಏನು ಖರ್ಚು ಮಾಡುತ್ತಿದ್ದರು? ಅವನ್ನು ಅದೇ ರೀತಿ ತೆಗೆದುಕೊಂಡು ವಿಶೇಷವಾದ ಕೆಲಸವನ್ನು ಈ ಹೈದರಾಬಾದ್ ಕರ್ನಾಟಕದಲ್ಲಿರುವ ಫಂಡ್‌ನಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷ 91-92ನೇ ಸಾಲಿಗೆ ರಸ್ತೆ ಮತ್ತು ಸೇತುವೆ

ಅಭಿವೃದ್ಧಿಗಾಗಿ 1125 ಲಕ್ಷ ರೂಪಾಯಿಗಳನ್ನು ವಿಶೇಷ ಅನುದಾನವಾಗಿ ನೀಡಲಾಗಿದೆಯೆಂದು ಹೇಳಿದ್ದಾರೆ. ಆಮೇಲೆ ಇನ್ನೊಂದು ವಿಷಯ ಏನೆಂದರೆ 90-91 ರಲ್ಲಿ ಆ ಭಾಗದಲ್ಲಿ ಬರತಕ್ಕಂಥ ಎಲ್ಲಾ ಶಾಸಕರಿಗೆ 12 ಲಕ್ಷ ರೂಪಾಯಿಗಳನ್ನು ಯಾವುದಕ್ಕೆ ತೆಗೆದುಕೊಳ್ಳಬೇಕು? ಯಾವುದಕ್ಕೆ ಮಹತ್ವ ಕೊಡಬೇಕು ಅನ್ನತಕ್ಕಂಥ ದೃಷ್ಟಿಯಲ್ಲಿ ಕೆಲಸ ತೆಗೆದುಕೊಂಡೆವು. ಕೆಲಸ ತೆಗೆದುಕೊಂಡ ಮೇಲೆ ಆ ಕೆಲಸಕ್ಕೆ ಟೆಂಡರ್ ಕರೆದು ಕಂಟ್ರಾಕ್ಟ್ ಕೊಟ್ಟಿದ್ದೂ ಆಗಿದೆ. ಕೆಲಸದ ಮೇಲೆ ಕಂಟ್ರಾಕ್ಟರ್ ಮೆಟೀರಿಯಲ್ಸ್ ಕಲೆಕ್ಟ್ ಮಾಡಿದ್ದೂ ಆಗಿದೆ. ಆದರೆ ಇಲ್ಲಿಯವರೆಗೂ ದುಡ್ಡು ಕೊಟ್ಟಿಲ್ಲ. ನಾವು ಕೇಳಿದರೆ ಅವರು ಹೇಳುತ್ತಾರೆ, ನಮ್ಮ ಶಾಸಕರಿಗೆ ಏನು ಅಲಾಟ್‌ಮೆಂಟ್ ಮಾಡಿದ್ದರು ಸುಮಾರು12 ಲಕ್ಷ ರೂಪಾಯಿ, ಅದರಲ್ಲಿ ಕೆಲಸ ತೆಗೆದುಕೊಂಡೆವು, ಆದರೆ ದುಡ್ಡು ಇಲ್ಲ ಸ್ವಾಮಿ, ಮುಂದೆ ಮಾಡುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಮತ್ತೆ ಹೈದರಾಬಾದ್ ಕರ್ನಾಟಕ ಫಂಡ್‌ನಲ್ಲಿ ಕೆಳಗಡೆ ಬೇರೆ ಕೆಲಸ ತೆಗೆದುಕೊಳ್ಳುತ್ತಿದ್ದೇವೆಂದು, ನಮ್ಮ ಭಾಗದಲ್ಲಿ ವಿಶೇಷವಾಗಿ ನನ್ನ ಮತ ಕ್ಷೇತ್ರದಲ್ಲಿ ಬಹಳಷ್ಟು ಕೆಲಸಕ್ಕೆ ಟೆಂಡರ್ ಕರೆದರೂ ಸಹಿತ, ಅಲ್ಲಿ ಬರೀ ಟೆಂಡರ್ ಕರೆದು ಪೇಪರ್‌ನಲ್ಲಿ ಇದೆಯೇ ವಿನಃ ಸಮರ್ಪಕವಾಗಿ ಮತ್ತು ನಮ್ಮ ಮನಸ್ಸಿಗೆ ಹಿಡಿಸುವ ರೀತಿಯಲ್ಲಿ ಎಷ್ಟು ಕೆಲಸ ನಡೆಯಬೇಕೊ ಅಷ್ಟು ಕೆಲಸ ನಡೆದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಕೇಳುವುದೇನೆಂದರೆ, ನಮ್ಮ ಭಾಗ ಬಹಳ ಹಿಂದುಳಿದ ಭಾಗ, ಅಲ್ಲಿರತಕ್ಕಂಥ ಜನಗಳಿಗೆ ಅನುಕೂಲವಾಗಲಿ ಅನ್ನುವ ದೃಷ್ಟಿಯಿಂದ ವಿಶೇಷವಾಗಿ ಏನು ದುಡ್ಡು ಬಿಡುಗಡೆಯಾಗುತ್ತಿದೆ, ಆ ವಿಶೇಷವಾದ ದುಡ್ಡು ಬಿಡುಗಡೆಯಾಗತಕ್ಕಂಥ ಸಂದರ್ಭದಲ್ಲಿ ಅಲ್ಲಿ ಅಷ್ಟೇ ವಿಶೇಷವಾಗಿ ಸಮರ್ಪಕವಾದಂಥ ಕೆಲಸ ತೆಗೆದುಕೊಳ್ಳುವುದರಲ್ಲಿ ಸರ್ಕಾರ ಹಿಂದೆ ಬೀಳಬಾರದು ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ದಯಮಾಡಿ ನನ್ನ ಭಾಗದಲ್ಲಿ ಬರತಕ್ಕಂಥ ಕೆಲಸಕ್ಕೆ ಮತ್ತೆ ಸುಮಾರು 12 ಲಕ್ಷ ಏನು ಪ್ರತಿ ಶಾಸಕರಿಗೆ ಕೊಟ್ಟಿದ್ದೀರಿ, ಅದು ಯಾವ ಕಾರಣಕ್ಕೆ ತಡೆಹಿಡಿದಿದ್ದಾರೆಂಬುದು ಗೊತ್ತಾಗುವುದಿಲ್ಲ. ಇಂಜಿನೀಯರ್‌ಗಳಿಗೆ ಕೇಳಿದರೆ 12 ಲಕ್ಷ ರೂಪಾಯಿಗಳ ಪೈಕಿ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ದಯಮಾಡಿ ಏನಾದರೂ ತೊಂದರೆ ಇದ್ದರೆ ಅದನ್ನು ಸರಿಪಡಿಸಿ ತಕ್ಷಣ ಹಣ ಬಿಡುಗಡೆ ಮಾಡಿದರೆ ಮಾತ್ರ ಅಲ್ಲಿ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿಶೇಷವಾಗಿ ಇನ್ನೂ ಒಂದು ವಿಷಯ ಹೇಳತಕ್ಕಂಥಾದ್ದು ಏನೆಂದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಬರತಕ್ಕಂಥ ಪಿ.ಡಬ್ಲ್ಯೂ.ಡಿ. ಡಿವಿಷನ್ ಆಫೀಸ್‌ಗೆ ಚೌಧರಿ ಅನ್ನತಕ್ಕಂಥವರು ಎಕ್ಸಿಕ್ಯುಟಿವ್ ಇಂಜಿನೀಯರ್ ಆಗಿ ಬಂದಿದ್ದಾರೆ. ಬಹಳ ಸಂತೋಷ. ಅವರು ಬಂದ ಮೇಲೆ ಅವರಲ್ಲಿಗೆ ಹೋದ ಪ್ರತಿಯೊಬ್ಬರಿಗೂ ಇಬ್ಬರು ಸಚಿವರ ಹೆಸರು ತೆಗೆದುಕೊಂಡು ಅವರು ನಮಗೆ ಬಹಳ ಕೇವಲ ನಮ್ಮ ಸಂಬಂಧಿಕರು ಎಂದು ಹೇಳುತ್ತಾರೆ. ಅವರು ಬಂದ ಮೇಲೆ ಸುಮಾರು 2 ಕೋಟಿ ರೂಪಾಯಿ ಬೆಲೆಯ ಮೆಟೀರಿಯಲ್ಸ್ ಪರ್ಚೇಸ್ ಮಾಡಿದರು, ಯಾವ ಮೆಟೀರಿಯಲ್ ಬೇಕಾಗಿಲ್ಲ, ಯಾವುವು ನೆಸಿಸಿಟಿ ಇಲ್ಲವೋ ಅಂತಹ ಮೆಟೀರಿಯಲ್ಸ್‌ಗಳನ್ನು ಪರ್ಚೇಸ್ ಮಾಡಿದ್ದಾರೆ. ಮತ್ತು ಎಂತಹ ಮೆಟೀರಿಯಲ್ಸ್ ಪರ್ಚೇಸ್ ಮಾಡಿದ್ದಾರೆ, ಅವೆಲ್ಲಾ ಯೂಸ್‌ಲೆಸ್, ಅದಕ್ಕೆ ಎಷ್ಟು ರೇಟ್ ಕೋಟ್ ಮಾಡಿದ್ದಾರೆಂದರೆ ಮಾರ್ಕೆಟ್ ರೇಟ್‌ಗಿಂತ ಸುಮಾರು 250ರಿಂದ 300 ಪರ್ಸೆಂಟ್ ಜಾಸ್ತಿ ಕೋಟ್ ಮಾಡಿದ್ದಾರೆ. ಈ ಪರ್ಚೇಸ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಖರ್ಚನ್ನೆಲ್ಲಾ ಲೆಕ್ಕ ಹಾಕಿದರೆ ಸುಮಾರು 2 ಕೋಟಿ ರೂಪಾಯಿಗಳ ಮೇಲಾಗುತ್ತದೆ. ಸರಕಾರ ಬಿಡುಗಡೆ ಮಾಡಿದ್ದ ದುಡ್ಡನ್ನು ಈ ರೀತಿ ತಮಗೆ ಯಾವ ರೀತಿ ಬೇಕೋ ಆ ರೀತಿ ಖರ್ಚು ಮಾಡಿದ್ದೇ ಆದರೆ ಅಲ್ಲಿರುವ ಜನರ ಕೆಲಸ ಆಗಲಿಕ್ಕೆ ಸಾಧ್ಯವಿಲ್ಲ. ವಾಟರ್ ಸಪ್ಲೈ ಮೆಟೀರಿಯಲ್ಸ್ ಬೇಕಾಗಿರಲಿಲ್ಲ , ಎಮರ್ಜೆನ್ಸಿ ಲೈಟ್ಸ್ ಬೇಕಾಗಿರಲಿಲ್ಲ, ಸ್ಪೇರ್ ಪಾರ್ಟ್ಸ್ ಬೇಕಾಗಿರಲಿಲ್ಲ, ಆದರೂ ಖರೀದಿ ಮಾಡಿದ್ದಾರೆ. ಜೊತೆಗೆ ಮತ್ತು ಇವೆಲ್ಲವನ್ನೂ ಮಾರ್ಕೆಟ್ ರೇಟ್‌ಗಿಂತ 200 ರಿಂದ 300 ಪರ್ಸೆಂಟ್ ಎಕ್ಸೆಸ್ ಕೊಟ್ಟು ಪರ್ಚೇಸ್ ಮಾಡಿದ್ದಾರೆ. ಯಾವ ವರ್ಕಿನ ಸಲುವಾಗಿ ದುಡ್ಡು ಬಿಡುಗಡೆ ಆಗಿದೆಯೋ, ಆ ವರ್ಕಿಗೆ ದುಡ್ಡು

ಖರ್ಚು ಮಾಡಿಲ್ಲ. ಬರೀ ಅನಗತ್ಯ ಸಾಮಾನುಗಳ ಪರ್ಚೇಸ್‌ಗೆ ಖರ್ಚು ಮಾಡಿದ್ದಾರೆ. ಇವರಿಂದ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಹಲವಷ್ಟು ಕೆಲಸಗಳು ಹದಗೆಡುತ್ತಾ ಇವೆ. ಆಮೇಲೆ, ಬಹಳಷ್ಟು ಅಸಿಸ್ಟೆಂಟ್ ಇಂಜಿನಿಯರ್‌ಗಳು ಅವರಲ್ಲಿಗೆ ಹೋಗಿ ಎಲ್.ಓ.ಸಿ. ತೆಗೆದುಕೊಳ್ಳಲು ಒಲ್ಲೆ ಎಂದು ಹೇಳುತ್ತಾರೆ. ಯಾಕಪ್ಪಾ ನೀವು ಎಲ್.ಓ.ಸಿ, ತೆಗೆದುಕೊಂಡು ಕೆಲಸ ಮಾಡುತ್ತಿಲ್ಲವೆಂದರೆ, ಸಾಹೇಬರೇ ಇಂತಹ ಪರಿಸ್ಥಿತಿಯಲ್ಲಿ ನಾವು ಹೋಗಿ ಎಲ್.ಓ.ಸಿ. ತೆಗೆದುಕೊಂಡರೆ ನಮಗೆ ತೊಂದರೆಯಾಗುತ್ತದೆ, ನಾವು ಮನೆಗೆ ಹೋಗಬೇಕಾಗುತ್ತದೆ. ಎಂದು ಕೆಲವರು ಹೇಳುತ್ತಾರೆ. ಈಗಾಗಲೇ ನನ್ನ ಕೆಲವು ಸ್ನೇಹಿತರು ಪರ್ಸಂಟೇಜ್ ಅಂತ ಹೇಳಿದರು. ಅದು ಎಷ್ಟು ಎಂದು ಅವರಿಗೆ ಹೇಳಲು ಬರುತ್ತಿಲ್ಲ. ನಾವೂ ಸಹ ಹೇಳಲಿಕ್ಕೆ ಆಗುತ್ತಿಲ್ಲ. ಎಲ್.ಓ.ಸಿ. ಕೊಡುವ ಸಂದರ್ಭದಲ್ಲಿ ಸುಮಾರು 40 ರಿಂದ 50 ಪರ್ಸೆಂಟ್ ಕಟ್ ಮಾಡಿ ತೆಗೆದುಕೊಳ್ಳುತ್ತಾರೆ, ಅದಕ್ಕೆ ದಯಮಾಡಿ ಸರ್ಕಾರ ತಕ್ಷಣ ಎನ್‌ಕ್ವೇರಿ ಮಾಡಿಸಿ, ಏನು ಪರಿಸ್ಥಿತಿ ಇದೆ, ಅದು ಖಚಿತ ಅಂತ ಕಂಡುಬಂದಾಗ ತಕ್ಷಣ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅವರಿಗೆ ಸಚಿವರ ಹೆಸರನ್ನು ತೆಗೆದುಕೊಂಡು ಉಳಿಯುತ್ತೇನೆಂಬ ಭಾವನೆ ಇರಬೇಕೆಂದು ನನಗನ್ನಿಸುತ್ತದೆ. ಅದಕ್ಕಾಗಿ ನಾನು ಸಂಬಂಧಪಟ್ಟ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಂತಹ ವ್ಯಕ್ತಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಂಡರೆ ಮಾತ್ರ ಆ ಭಾಗ ಏನು ಹಿಂದುಳಿದಿದೆ, ಆ ಭಾಗದ ಜನ ಈ ಸರ್ಕಾರದ ಮೇಲೆ ಏನು ವಿಶ್ವಾಸ ಇಟ್ಟಿದ್ದಾರೆ, ಆ ಸರ್ಕಾರದಿಂದ ಕೆಲಸ ಆಗುತ್ತದೆಂದು ಏನು ಭಾವನೆ ಇಟ್ಟುಕೊಂಡಿದ್ದಾರೆ, ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಅದಕ್ಕಾಗಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆ ಮತ್ತು ಆ ಭಾಗದಲ್ಲಿರುವ ಕೆಲಸಗಳನ್ನು ಮುಗಿಸಲು ಬಹಳಷ್ಟು ಹಣವನ್ನು ಕೊಡುತ್ತಾರೆಂಬ ವಿಶ್ವಾಸ ನಮಗಿದೆ. ಇನ್ನೊಂದು ವಿಚಾರವನ್ನು ವಿಶೇಷವಾಗಿ ಹೇಳುವುದೇನೆಂದರೆ, ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗೆಂದು 90-91ರಲ್ಲಿ 260 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ. ಮತ್ತೆ 91 ಡಿಸೆಂಬರ್‌ವರೆಗೆ 567.68 ಲಕ್ಷ ಕೊಟ್ಟಿರಿ ಆಮೇಲೆ 92ರಲ್ಲಿ 89.1 ಲಕ್ಷ ಕೊಟ್ಟಿರಿ. ಹೀಗೆ ಒಟ್ಟು 1,700 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಮೇಲ್ನೋಟಕ್ಕೆ ಏನು ಕಾಣಿಸುತ್ತದೆಂದರೆ ಎಲ್ಲಿಯೂ ಕೆಲಸಾನೇ ನಡೆದಿಲ್ಲ ಅಂತ ಸ್ಪಷ್ಟವಾಗಿ ಕಾಣುತ್ತದೆ. ಆದರಿಂದ, ದಯಮಾಡಿ ಸಚಿವರು ನಮ್ಮ ಜಿಲ್ಲೆಗೆ ಬಂದು ಅಲ್ಲಿನ ಶಾಸಕರ ಮೀಟಿಂಗ್ ಕರೆದು ಅಲ್ಲಿ ಏನೇನು ಕೆಲಸಗಳು ನಡೆದಿವೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕು, ಹಾಗೂ ಸಂಬಂಧಪಟ್ಟವರಿಗೆಲ್ಲಾ ಕರೆಕ್ಟಾಗಿ ಡೈರೆಕ್ಷನ್ ಕೊಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಉಮೇಶ್ ಭಟ್ (ಅಂಕೋಲ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ಲೋಕೋಪಯೋಗಿ, ನೀರಾವರಿ, ಪ್ರವಾಸೋದ್ಯಮ ಮತ್ತು ವಿದ್ಯುತ್ ಇಲಾಖೆಗಳ ಮೇಲಿನ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮೊದಲನೆಯದಾಗಿ ಈಗಾಗಲೇ ನನ್ನ ಕ್ಷೇತ್ರದಲ್ಲಿ 50 ಕಿಲೋಮೀಟರ್‌ನಷ್ಟು ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿದೆ ಎಂದು ಸರ್ಕಾರ ಹೇಳಿದೆ. ಅದು ನಿಜವಾಗಿದ್ದರೆ ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದಲ್ಲದೆ, ನನ್ನ ಕ್ಷೇತ್ರದ ಹಲವಾರು ಸಮಸ್ಯೆಗಳ ಬಗ್ಗೆ ಲೋಕೋಪಯೋಗಿ ಸಚಿವರಿಗೆ ಪತ್ರಗಳನ್ನು ಬರೆದಿದ್ದೇನೆ. ನನಗೆ ಏನನ್ನಿಸುತ್ತದೆಂದರೆ, ನಮ್ಮ ಸಚಿವರು ಬಹಳ ಕೈಂಡ್ ಹಾರ್ಟೆಡ್ ಇರುವುದರಿಂದ ನನ್ನ ಜಿಲ್ಲೆಯ ಎಲ್ಲಾ ಕೆಲಸಗಳನ್ನು ಅವರು ಮಾಡಿಸಬಹುದು ಅಥವಾ ಮಾಡುತ್ತಾರೆಂಬ ವಿಚಾರ ನನ್ನದು. ಇದರ ಬಗ್ಗೆ ಮಾನ್ಯ ಸಚಿವರು ನನಗೆ ಸಮರ್ಪಕವಾದ ಉತ್ತರ ಕೊಡಬೇಕು. ಇದಲ್ಲದೆ, ಅಂಕೋಲಾ ನನ್ನ ಮತ ಕ್ಷೇತ್ರ, ಅಲ್ಲಿ ಸತ್ಯಾಗ್ರಹ ಸ್ಮಾರಕ ಎಂದು ಬೃಹತ್ ಕಟ್ಟಡವನ್ನು ಕಟ್ಟಿಸುತ್ತಾ ಇದ್ದೇವೆ. ನಮ್ಮ ದೇಶ ಸ್ವಾತಂತ್ರ್ಯವನ್ನು ಗಳಿಸಬೇಕೆಂದು ಜನರು ಸತ್ಯಾಗ್ರಹ ಮಾಡಿದರು ಮತ್ತು ಸಾಕಷ್ಟು ತ್ಯಾಗ ಮಾಡಿದ್ದರು. ಅವರ ಸಲುವಾಗಿ ಆ ಒಂದು ಸತ್ಯಾಗ್ರಹ ಸ್ಮಾರಕವನ್ನು ಕಟ್ಟಿಸುತ್ತಿದ್ದೇವೆ. ಸರ್ಕಾರ ಕೂಡಲೇ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಆ

ಕಾರ್ಯವನ್ನು ಕೂಡಲೇ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಕೂಡ ಈಗಾಗಲೇ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ತಮ್ಮ ಉದಾರವಾದ ಮನಸ್ಸನ್ನು ಇನ್ನೂ ಹೆಚ್ಚು ಮಾಡಿ ನಮ್ಮ ಬೇಡಿಕೆಯನ್ನು ಕೂಡಲೇ ಈಡೇರಿಸಿಕೊಡಬೇಕು. ನನ್ನ ಕ್ಷೇತ್ರ ಮೂರು ತಾಲ್ಲೂಕುಗಳನ್ನು ಹೊಂದಿರುತ್ತದೆ. ಅದರಲ್ಲಿ ಸಿರಸಿ ಮತ್ತು ಯಲ್ಲಾಪುರ ಸಹ ಸೇರುತ್ತದೆ. ಸಿರಸಿಯಲ್ಲಿ ಕುದುರುಗೋಡ್ ಎಂಬ ಹಳ್ಳಿ ಬರುತ್ತದೆ. ಅಲ್ಲಿ ಸಾಧಾರಣ 600 ಮನೆಗಳಿವೆ. ಅಲ್ಲಿರುವವರೆಲ್ಲಾ ಕರಿವಕ್ಕಲು ಎಂಬ ಜನಾಂಗದವರು. ನಮ್ಮಲ್ಲಿ ಬಹಳ ಹಿಂದುಳಿದಿರುವ ಸಮಾಜ ಅದು. ಅವರು ಎಷ್ಟು ದೂರ ನಮ್ಮಿಂದ ಇದ್ದಾರೆಂದರೆ, ಸಾಧಾರಣ ನಮ್ಮಲ್ಲಿ ಒಂದು ದೊಡ್ಡ ಹೊಳೆ ಇದೆ. ಅದಕ್ಕೆ ಸೇತುವೆ ಒಂದನ್ನು ನಮ್ಮ ಘನ ಸರ್ಕಾರ ಕಟ್ಟಿಸಿಕೊಟ್ಟರೆ ಅವರ ಹಲವಾರು ಸಮಸ್ಯೆಗಳು ದೂರವಾಗುತ್ತವೆಂಬ ವಿಚಾರವನ್ನು ಇಟ್ಟು ಸಚಿವರ ಹತ್ತಿರ ನಾನು ಈಗಾಗಲೇ ಮನವಿ ಪತ್ರ ಕೊಟ್ಟಿದ್ದೇನೆ. ಸಚಿವರು ಅದನ್ನು ಕೂಡಲೇ ಕಟ್ಟಿಸಿಕೊಡುತ್ತಾರೆಂಬ ಭಾವನೆಯನ್ನೂ ಕೂಡ ಇಟ್ಟುಕೊಂಡಿದ್ದೇನೆ. ಮತ್ತೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 12 ಲಕ್ಷ ರೂಪಾಯಿಗಳಿಗೆ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಬೇಕೆಂಬ ವಿಚಾರವನ್ನು ಏನು ಸರ್ಕಾರ ಇಟ್ಟುಕೊಂಡಿತ್ತು ಅದನ್ನೀಗ 40 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆನ್ನುವ ಸುದ್ದಿಯನ್ನು ಕೇಳಿದ್ದೇನೆ. ದಯಾಳುಗಳಾದ ಸಚಿವರು ನಮಗೆ ಅಂದರೆ, ನಮ್ಮ ಕ್ಷೇತ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಕೊಟ್ಟು ನಮ್ಮ ಕ್ಷೇತ್ರದ ಕೆಲಸಗಳನ್ನು ಬೇಗನೆ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಆಶಾದಾಯಕವಾದ ಉತ್ತರವನ್ನು ಕೊಡುತ್ತಾರೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಇನ್ನು ಭಾರೀ ನೀರಾವರಿ ಯೋಜನೆಗಳ ಪ್ರಶ್ನೆ ನಮ್ಮ ಕ್ಷೇತ್ರದಲ್ಲಿ ಇಲ್ಲವೇ ಇಲ್ಲ. ಅದಕ್ಕಾಗಿ ಒಂದೆರಡು ಲಿಫ್ಟ್ ಇರಿಗೇಷನ್ ಸ್ಕೀಮುಗಳು ನನ್ನ ಮತಕ್ಷೇತ್ರದಲ್ಲಿ ಆಗಬೇಕೆಂದು ಕೇಳಿದ್ದೇನೆ. ಆದರೆ ಅದಕ್ಕೆ ಸರ್ಕಾರದಿಂದ ಉತ್ತರ ಇಲ್ಲ. ಅಧಿಕಾರಿಗಳಿಂದಲೂ ಯಾವ ತರಹದ ಸಮರ್ಪಕವಾದ ಉತ್ತರ ಇಲ್ಲ. ಆದ್ದರಿಂದ ದಯಾಳುಗಳಾದ ಮಂತ್ರಿಗಳು ಕೂಡಲೇ ಈ ಬಗ್ಗೆ ಕ್ರಮವನ್ನು ತೆಗೆದುಕೊಂಡು ಇದಕ್ಕೆ ಉತ್ತರವನ್ನು ತಾವು ಕೊಡಬೇಕೆಂದು ನಾನು ಕೇಳುತ್ತೇನೆ. ಅದೇ ರೀತಿ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ ಹೇಳಬೇಕೆಂದರೆ ಉತ್ತರ ಕನ್ನಡ ಜಿಲ್ಲೆ ಒಂದು ಸುಂದರವಾದಂಥ ಹಾಗೂ ನೈಸರ್ಗಿಕವಾದಂಥ ಸ್ಥಳವೆಂದು ಹೇಳುತ್ತಾರೆ. ಈ ಜಿಲ್ಲೆ ಪಕ್ಕದಲ್ಲಿಯೇ ಗೋವಾ ಸ್ಟೇಟ್ ಇದೆ. ಅದು ನಮ್ಮ ಅಂಕೋಲಾ ತಾಲ್ಲೂಕು ಎಷ್ಟಿದೆಯೋ, ನನ್ನ ಕ್ಷೇತ್ರ ಎಷ್ಟು ದೊಡ್ಡದಿದೆಯೋ ಅಷ್ಟು ದೊಡ್ಡದಿದೆ. ಆ ಗೋವಾದಲ್ಲಿ ಟೂರಿಸಂನಿಂದ ಬರುವಂಥ ಹಣದಿಂದ ಇವತ್ತು ಅವರು ಸರ್ಕಾರವನ್ನು ನಡೆಸುತ್ತಾರೆ ಎನ್ನತಕ್ಕಂಥದ್ದನ್ನು ಜನರು ಹೇಳುತ್ತಾರೆ. ಆದರೆ ನಮ್ಮ ಉತ್ತರ ಕನ್ನಡ ಜಿಲ್ಲೆಗೇ ಏತಕ್ಕೆ ಈ ಪ್ರವಾಸೋದ್ಯಮದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ನಮ್ಮ ಮಂತ್ರಿಗಳು ತೆಗೆದುಕೊಳ್ಳಲಿಲ್ಲ ಎಂದು ನನಗೆ ಅನ್ನಿಸುತ್ತದೆ. ಆದರೆ ಹಲವಾರು ನನ್ನ ಗೆಳೆಯರು ಹೇಳಿದಂತೆ ಮಾನ್ಯ ಮಂತ್ರಿಗಳು ಯುವಕರಿದ್ದಾರೆ, ಅವರು ಸಾಹಿತಿಗಳಿರಬಹುದು, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮದ ಮೇಲೆ ಅವರಿಗೆ ಹೆಚ್ಚಿನ ಇಂಟರೆಸ್ಟ್ ಕೂಡ ಇರಬಹುದು. ಆದ್ದರಿಂದ ದಯಾಳುಗಳಾದಂಥ ನಮ್ಮ ಶಿವಮೂರ್ತಿಯವರು ಈ ಭಾಗಕ್ಕೆ ಹೆಚ್ಚಿನ ಗಮನವನ್ನು ಹರಿಸಬೇಕು. ಉದಾಹರಣೆಗೆ ನಮ್ಮಲ್ಲಿ ಬನವಾಸಿ ಇದೆ. ಗೋಕರ್ಣ ಇದೆ. ಅದೇ ಗೋವಾದಲ್ಲಿ ಯಾವ ತರಹದ ಸೀಬೀಚ್ ಎಂದು ನಾವು ಏನು ಕರೆಯುತ್ತೇವೆ. ಆ ಸೀಬೀಚ್ ಕೂಡ ನಮ್ಮ ಕ್ಷೇತ್ರದಲ್ಲಿ ತುಂಬಾ ಇವೆ. ಅಲ್ಲಿ ಒಳ್ಳೆಯ ಒಂದು ಪ್ರವಾಸೋದ್ಯಮದ ಸೆಂಟರನ್ನು ಪ್ರಾರಂಭ ಮಾಡಿದರೆ ನಮ್ಮ ಸರ್ಕಾರದ ಹಣಕಾಸಿನ ಮೊತ್ತವೂ ಕೂಡಾ ಹೆಚ್ಚಾಗಬಹುದು ಎಂದು ಹೇಳುತ್ತಾ ಕೊನೆಯಲ್ಲಿ ವಿದ್ಯುತ್‌ನ ವಿಚಾರಕ್ಕೆ ನಾನು ಬರುತ್ತಿದ್ದೇನೆ. ವಿದ್ಯುತ್ ನಮ್ಮಗಳಿಗೆ ಬಹಳ ಅವಶ್ಯಕವಾದಂಥ ಒಂದು ವಸ್ತು. ನನಗನಿಸಿದಮಟ್ಟಿಗೆ ಉತ್ತರ ಕನ್ನಡ ಜಿಲ್ಲೆ ಇವತ್ತು ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಅನ್ನು ಬೇರೆ ಕಡೆಗೆ ಹಾಗೂ ನಮ್ಮ ರಾಜ್ಯಕ್ಕೆ ಕೊಡುತ್ತಿದೆ. ನಾವು ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಯವರಿಗೆ ಮತ್ತು ಕೆ.ಇ.ಬಿ.ಯ ಛೇರ್ಮನ್‌ರವರಿಗೆ ಧನ್ಯವಾದಗಳನ್ನು

ಅರ್ಪಿಸದಿದ್ದರೆ ತಪ್ಪು ಎಂದು ನನಗನ್ನಿಸುತ್ತದೆ. ನಾವು ಪವರನ್ನು ಉತ್ಪಾದಿಸಿ ಕೊಡುತ್ತಾ ಇದ್ದೇವೆ. ಒಮ್ಮೆ ನಮ್ಮ ಕ್ಷೇತ್ರದಲ್ಲಿ ಒಂದು ಪರಿಣಾಮವಾಯಿತು.. ಏನೆಂದರೆ ನಮಗೆ ಎಂಟು ತಾಸಿನಷ್ಟು ಪವರ್ ಕಟ್‌ನ್ನು ಮಾಡುತ್ತಿದ್ದರು. ಇದನ್ನು ಜನತೆ ನನ್ನ ಗಮನಕ್ಕೆ ತಂದ ಕೂಡಲೇ ನಾನು ಅಧ್ಯಕ್ಷರನ್ನು ಹಾಗೂ ಮಂತ್ರಿಗಳಲ್ಲಿ ವಿನಂತಿಸಿಕೊಂಡೆ. ಕೂಡಲೇ ಆ ಪವರ್ ಕಟ್ ಏನು ಮಾಡುತ್ತಿದ್ದರು, ಆ ಪವರ್ ಕಟ್‌ನ್ನು ಬಂದ್ ಮಾಡಿದರು. ನಮಗೆ ಸುರಕ್ಷಿತವಾಗಿ ಪವರನ್ನು ಕೊಟ್ಟರು. ಅದಕ್ಕಾಗಿ ಸಂಬಂಧಪಟ್ಟವರಿಗೆಲ್ಲಾ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಉತ್ತರ ಕನ್ನಡ ಜಿಲ್ಲೆ ಎಂದರೆ ಇದೊಂದು ಗುಡ್ಡಗಾಡು ಪ್ರದೇಶ ಇದೆ. ನನ್ನ ಕ್ಷೇತ್ರಲ್ಲಿ ಬರುವ ಶಿರಸಿ, ಯಲ್ಲಾಪುರ, ಮತ್ತು ಅಂಕೋಲ ಕ್ಷೇತ್ರಗಳು ಗುಡ್ಡಗಾಡು ಪ್ರದೇಶದಿಂದ ಕೂಡಿವೆ. ನಮ್ಮ ಜನರ ಅನುಕೂಲಕ್ಕಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಛೇರಿಗಳನ್ನು ಘನಸರ್ಕಾರ ಯಲ್ಲಾಪುರ, ಸಿರಸಿ ಮತ್ತು ಅಂಕೋಲದಲ್ಲಿ ತೆರೆದಿರುವುದಕ್ಕಾಗಿ ತುಂಬ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಕೆ.ಇ.ಬಿ. ಅಧ್ಯಕ್ಷರನ್ನು ಒಮ್ಮೆ ಭೇಟಿ ಮಾಡಿ ಅವರಲ್ಲಿ ನಮ್ಮ ಭಾಗದ ಕೆಲವು ಕುಂದುಕೊರತೆಗಳ ಬಗ್ಗೆ ಹೇಳಿದಾಗ ನಾನು ಕೂಡಲೇ ಮಾಡಿಸಿ ಕೊಡುತ್ತೇನೆ ಎಂದು ಅವರು ಹೇಳಿದರು. ಅದಕ್ಕೆ ನಾನು ನಮ್ಮ ಮಂತ್ರಿಗಳ ಹತ್ತಿರ ವಿನಂತಿಯನ್ನು ಕೂಡ ಮಾಡುತ್ತೇನೆ. ತಾವು ಎಲ್ಲಾ ತರಹದ ಸಹಕಾರವನ್ನು ತಮ್ಮ ಅಧ್ಯಕ್ಷರಿಗೆ ಕೊಟ್ಟು ಕೂಡಲೇ ನಾವು ಮಾಡಿದಂಥ ವಿನಂತಿಯ ಕೆಲಸಗಳನ್ನು ತಾವು ಮಾಡಿಸಿಕೊಡುತ್ತೀರಿ ಎನ್ನತಕ್ಕಂಥ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆ ಇಷ್ಟೆಲ್ಲಾ ಪವರ್ ಕೊಡುತ್ತೀ ಇದೆ. ಇವತ್ತು ಸೂಪಾ ಒಂದೇ ಒಂದು ಡ್ಯಾಮ್‌ನಿಂದ 75 ರಿಂದ 80 ಲಕ್ಷ ರೂಪಾಯಿಗಳ ಟ್ಯಾಕ್ಸನ್ನು ಪ್ರತಿ ತಿಂಗಳೂ ನಾವು ಕೊಡುತ್ತಿದ್ದೇವೆ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್‌ಗಳಲ್ಲಿ ಕೇಳಿದರೆ ನಮಗೆ ವಾಹನವೇ ಇಲ್ಲ ಎಂದು ಹೇಳುತ್ತಾರೆ. ಈ ವಾಹನಗಳು ಇಲ್ಲದೇ ಹೋದರೆ ಅವರು ಹೇಗೆ ಕೆಲಸ ಮಾಡಲು ಸಾಧ್ಯ ? ಹಳೆಯ ವಾಹನಗಳು ಇವೆ. 25 ವರ್ಷಗಳ ಹಿಂದಿನ ವಾಹನಗಳು ಕೂಡ ನಮ್ಮ ಏರಿಯಾದಲ್ಲಿವೆ. ಹಳೆಯ ವಾಹನಗಳಿಂದ ಬಹಳ ತೊಂದರೆಯಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ನಾನು ಈ ವಿಚಾರವನ್ನು ಈಗಾಗಲೇ ಮಂತ್ರಿಗಳ ಗಮನಕ್ಕೂ ಅಧ್ಯಕ್ಷರ ಗಮನಕ್ಕೂ ತಂದಿದ್ದೇನೆ. ಯಲ್ಲಾಪುರದಲ್ಲಿ ಜೀಪುಗಳು ಇಲ್ಲ. ಅಂಕೋಲದಲ್ಲೂ ಕೂಡ ಜೀಪುಗಳು ಇಲ್ಲ. ಜೀಪುಗಳ ಸಂಗಡ ಟ್ರಕ್‌ಗಳು ಇಲ್ಲ. ಅವರು ಯಾವ ರೀತಿಯಿಂದ ಟ್ರಾನ್ಸ್‌ಪೋರ್ಟ್ ಮಾಡಬೇಕು? ಉತ್ತರ ಕನ್ನಡ ಜಿಲ್ಲೆಯವರಾದ ನಾವು ನಿಮ್ಮೆಲ್ಲರಿಗೂ ಕೂಡ ನಾವು ತ್ಯಾಗ ಮಾಡಿಕೊಂಡು ಪವರನ್ನು ಕೊಡುತ್ತಿದ್ದೇವೆ. ಅದಕ್ಕಾಗಿ ನಮಗೆ ಸರಿಯಾದಂಥ ಮೆಟೀರಿಯಲ್‌ಗಳನ್ನು ಮತ್ತು ಇತರೇ ವಸ್ತುಗಳನ್ನು ಸರ್ಕಾರ ಒದಗಿಸಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯವರು ಇಷ್ಟೆಲ್ಲಾ ತ್ಯಾಗ ಮಾಡುತ್ತಿರುವಾಗ ನಮಗೆ ಬೇಕಾದ ಕೆಲವು ಸೌಲಭ್ಯಗಳನ್ನಾದರೂ ಕೊಡಬೇಕು. ನಮ್ಮಲ್ಲಿ ಡ್ಯಾಮ್‌ಗಳು ಇನ್ನೂ ಬರುತ್ತಿವೆ. ಉದಾಹರಣೆಗೆ ಬೇಡ್ತಿ ಯೋಜನೆ ಬರುತ್ತಿದೆ, ನನ್ನ ಕ್ಷೇತ್ರಕ್ಕೆ ನಾನು ಹೋದಾಗ ಈ ಬೇಡ್ತಿ ಯೋಜನೆ ಬೇಡ ಅನ್ನುವಂತಹ ವಿಚಾರವನ್ನು ಪ್ರತಿಸಲವೂ ಜನರು ಹೇಳುತ್ತಿದ್ದಾರೆ. ಅವರ ಕೂಗು ಸರ್ಕಾರಕ್ಕೆ ಈಗಾಗಲೇ ಕೇಳಿರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಇದು ನನ್ನ ಸ್ವಂತ ವ್ಯೆಯಕ್ತಿಕವಾದ ಅಭಿಪ್ರಾಯ ಅಲ್ಲದೆ ಇದ್ದರೂ ಕೂಡ ಜನರ ಹಲವಾರು ಸಮಸ್ಯೆಗಳನ್ನು ತಾವು ಕೇಳಲೇ ಬೇಕಾಗುತ್ತದೆ. ನಮಗೆ ಹೆಚ್ಚಿನದಾಗಿ ಬೇಡ್ತಿ ಯೋಜನೆ ಏನು ಬಂದಿದೆ. ಇದರಿಂದಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರಲ್ಲಿಯೂ ನನ್ನ ಕ್ಷೇತ್ರದಲ್ಲಿನ ಜನರ ತೊಂದರೆಯನ್ನು ನನಗೆ ಕೇಳಲಿಕ್ಕೆ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಯೋಜನೆ ಮೂಲಕ ಹೆಚ್ಚುವರಿ ವಿದ್ಯುತ್‌ನ್ನು ಏನು ಉತ್ಪಾದನೆ ಮಾಡುತ್ತೇವೆ ಅನ್ನತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ. ಆ ಕಾರ್ಯಕ್ರಮದ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ವಿಚಾರ ಮಾಡಿ. ನಾನು ಈ ಯೋಜನೆಗಳು ಬೇಡ ಅನ್ನುವಂತಹ ವಿಚಾರಕ್ಕೆ ಹೋಗುವುದಿಲ್ಲ. ಈಗ ಉದಾಹರಣೆಗೆ ಮಹಾರಾಷ್ಟ್ರ, ಮತ್ತು ಬೇರೆ ರಾಜ್ಯಗಳಲ್ಲಿ ಮಿನಿ ಹೈಡ್ರೋ ಎಲೆಕ್ಟ್ರಿಕ್

ಪವರ್ ಅನ್ನು ಉತ್ಪಾದನೆ ಮಾಡಿ ಜನರಿಗೆ ಕೊಡುತ್ತಿರುವಂತೆ ಇಲ್ಲಿಯೂ ಆ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಕೊಟ್ಟು ಆ ಬೇಡ್ತಿ ಯೋಜನೆಯನ್ನು ಬಂದ್ ಮಾಡುವ ಕಡೆಗೆ ಸರ್ಕಾರ ಹೆಚ್ಚಿನ ಗಮನವನ್ನು ಕೊಡಲಿ ಎಂದು ಹೇಳುತ್ತೇನೆ. ಬೇಡ್ತಿ ಯೋಜನೆಯನ್ನು ಜನರ ಅಭಿಪ್ರಾಯದ ಪ್ರಕಾರ ಕೈಬಿಟ್ಟು ಬೇರೆ ಯಾವುದಾದರೂ ಯೋಜನೆಯನ್ನು ಕೈಗೊಂಡು ಹೆಚ್ಚಿನ ಪವರ್ ಅನ್ನು ಉತ್ಪಾದನೆ ಮಾಡಿ ನಮ್ಮ ಜನರಿಗೆ ಕೊಡಲಿ ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ಬೇಡ್ತಿ ಯೋಜನೆಯ ಬಗ್ಗೆ ಬೇಕಾದಷ್ಟು ತಜ್ಞರುಗಳು ಸ್ಟಡಿ ಮಾಡಿದ್ದಾರೆ. ಆ ಯೋಜನೆ ಕೆಲವು ಜನ ಒಳ್ಳೆಯದು ಎಂದು ಹೇಳಿದ್ದರೆ ಮತ್ತೆ ಕೆಲವು ಜನ ಉಪಯೋಗವಿಲ್ಲ, ಆದ್ದರಿಂದ ನಮ್ಮ ಪರಿಸರ ಹಾಳಾಗುತ್ತದೆಂದು ಹೇಳುತ್ತಾರೆ. ನಾನು ಪತ್ರಿಕೆಯಲ್ಲಿ ಈ ಬಗ್ಗೆ ವರದಿ ಬಂದಿರುವುದನ್ನು ಓದಿದ್ದೇನೆ. ಒಂದು ರೂಪಾಯಿಯನ್ನು ಖರ್ಚುಮಾಡಿದರೆ 1-50 ಪೈಸೆ ಪ್ರಾಫಿಟ್ ಬರುವಂತಹ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ಆದರೆ ಈ ಬೇಡ್ತಿ ಯೋಜನೆಯನ್ನು ಕೈಗೊಳ್ಳುವುದರಿಂದ ಒಂದು ರೂಪಾಯಿಯನ್ನು ಖರ್ಚು ಮಾಡಿದರೆ 90 ಪೈಸೆ ನಮಗೆ ಪ್ರಾಫಿಟ್ ಬರುತ್ತದೆ. ಅಂದರೆ 10 ಪೈಸೆ ಇನ್ನೂ ಲಾಸ್ ಆಗುತ್ತದೆ. ಎನ್ನುವಂತಹ ವಿಚಾರದ ಬಗ್ಗೆ ಹಲವಾರು ಸಂಸ್ಥೆಗಳವರು ಹೇಳಿದ್ದಾರೆ. ಇದು ಮೊದಲು ಪ್ರಾರಂಭವಾಗುವಾಗ 105 ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿತ್ತು. ಆದರೆ ಈ ಬೇಡ್ತಿ ಯೋಜನೆ ಮುಗಿಯುವಾಗ 600-700 ಕೋಟಿ ರೂಪಾಯಿ ಖರ್ಚಾಗ ಬಹುದೆಂದು ಜನ ತಮ್ಮ ಅಭಿಪ್ರಾಯ ಹೇಳುತ್ತಿದ್ದಾರೆ. ಅದೂ ಅಲ್ಲದೆ ಬಹಳಷ್ಟು ಅರಣ್ಯಗಳು ಇದರಿಂದ ನಾಶವಾಗುತ್ತಿವೆ. ಇಕಲಾಜಿಕಲ್ ಬ್ಯಾಲೆನ್ಸ್ ಇರಬೇಕೆಂದು ನಾವು ಏನು ಅನ್ನುತ್ತೇವೆ ಅದಕ್ಕೂ ಸಹ ಹಾನಿಯಾಗುತ್ತದೆ. ಇದನ್ನು ಏತಕ್ಕೆ ನಾನು ಹೇಳಿದೆ ಅಂದರೆ ನಮ್ಮ ಪಕ್ಕದ 50ಕಿ.ಮೀ ದೂರದಲ್ಲೇ ಕೊಡಸಳ್ಳಿ ಬರುತ್ತಿದೆ, ಆ ಕೋಡಸಳ್ಳಿ ಬಗ್ಗೆ ನಮ್ಮ ಘನ ಸರ್ಕಾರಕ್ಕೆ ಒಂದು ರೀತಿಯಲ್ಲಿ ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ ಈ ರಿಹ್ಯಾಬಿಲಿಟೇಷನ್ ಪ್ರಶ್ನೆ ಬಂದಾಗ ಕೊಡಸಳ್ಳಿಯಲ್ಲಿ ಬಹಳ ಗದ್ದಲ ನಡೆಯುತ್ತಿತ್ತು. ಆದರೂ ಘನ ಸರ್ಕಾರ ಈಗಾಗಲೇ 1400 ಎಕರೆಯಷ್ಟು ಪ್ರದೇಶವನ್ನು ರಿಹ್ಯಾಬಿಲಿಟೇಷನ್‌ಗೋಸ್ಕರ ಈಗಾಗಲೇ ಮಂಜೂರಾತಿ ಕೊಟ್ಟಿದೆ. ನಾನೂ ಸಹ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೊಡಸಳ್ಳಿ ಯಲ್ಲಿ ಏನು ನೀವು ರಿಹ್ಯಾಬಿಲಿಟೇಷನ್ ಮಾಡುತ್ತಿದ್ದೀರಿ ಅದನ್ನು ಕೂಡಲೇ ಮಾಡಿ. ಈಗಾಗಲೇ ಕೊಡಸಳ್ಳಿಯ ಡ್ಯಾಮ್ ಹೆಚ್ಚು ಕಡಿಮೆ ಮುಕ್ತಾಯಗೊಳ್ಳುವ ಸ್ಥಿತಿಗೆ ಬರುತ್ತಿದೆ. ಆದ್ದರಿಂದ ಕೂಡಲೇ ರಿಹ್ಯಾಬಿಲಿಟೇಷನ್ ಮಾಡಿ ನಮ್ಮ ಸರ್ಕಾರದ ಗೌರವವನ್ನು ಮತ್ತು ನಮ್ಮ ಗೌರವವನ್ನು ತಾವು ಎತ್ತಿ ಹಿಡಿಯಬೇಕು ಅಂತ ಹೇಳುತ್ತೇನೆ. ಆದರೆ ಈ ಬೇಡ್ತಿ ಯೋಜನೆಯ ಬಗ್ಗೆ ತಾವು ಇನ್ನೂ ಹೆಚ್ಚಿನ ಅಭ್ಯಾಸ ಮಾಡಿ ಇದು ಒಳ್ಳೆಯದೇ ಕೆಟ್ಟದೇ ಎಂಬುದರ ಬಗ್ಗೆ ವಿಚಾರ ಮಾಡಿ, ನಂತರ ಈ ಕಾರ್ಯಕ್ರಮ ಕೈಗೊಂಡರೆ ನಮಗೆಲ್ಲರಿಗೂ ಆನಂದವಾಗಬಹುದು. ನಮ್ಮ ಜನ ಕೂಡ ಬಹಳ ಆನಂದ ಪಡಬಹುದು. ಇದರಿಂದ ಏನು ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೋ ಆ ತೊಂದರೆ ನಿವಾರಿಸಲು ತಾವು ಹೆಚ್ಚಿನ ಗಮನವನ್ನು ಕೊಡಬೇಕೆನ್ನುವ ವಿಚಾರವನ್ನು ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂಜುನಾಥ. ಸಿ. ಕುನ್ನೂರ್ (ಶಿಗ್ಗಾಂವ್):- ಮಾನ್ಯ ಸಭಾಧ್ಯಕ್ಷಿಣಿಯವರೇ, ಇಂದಿನ ದಿವಸ ಭಾರಿ ನೀರಾವರಿ ಸಚಿವರು, ಲೋಕೋಪಯೋಗಿ ಸಚಿವರು ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಖಾತೆ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ನಾವು ನೀರಾವರಿ ಬಗ್ಗೆ ಯೋಚನೆ ಮಾಡಿದಾಗ, ನಾವು'ಆಮೆ ವೇಗ' ದಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಗುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. 2000 ಇಸವಿಯೊಳಗಾಗಿ ಬಚಾವತ್ ಅವಾರ್ಡ್ ಪ್ರಕಾರ ಈ ರಾಜ್ಯದಲ್ಲಿ ನಮಗೆ ದೊರಕಬೇಕಾದಂಥ ಒಂದು ಹನಿ ನೀರನ್ನು ಕೂಡ ಹೊರಗಡೆ ಬಿಡದೆ, ಇವೊತ್ತು ನಾವು ಸಂಪೂರ್ಣವಾಗಿ ನೀರಿನ ಉಪಯೋಗ

ಮಾಡಿಕೊಳ್ಳಬೇಕಾಗಿದೆ. ನಮ್ಮ ದೇಶ ಕೃಷಿ ಪ್ರಧಾನವಾಗಿರತಕ್ಕಂಥ ದೇಶ. ನಾವು ಇವೊತ್ತು ರೈತನನ್ನು ಈ ದೇಶದ ಬೆನ್ನೆಲುಬು ಎಂದು ಹೇಳುವಾಗ ನೀರಾವರಿಯ ಸವಲತ್ತುಗಳನ್ನು ನಾವು ಈ ರಾಜ್ಯದಲ್ಲಿ ರೈತನಿಗೆ ಮಾಡಿಕೊಡದೆ ಹೋದರೆ ನಿಜವಾಗಿಯೂ ಆತನಿಗೆ ಒಂದು ರೀತಿಯ ವಂಚನೆಯನ್ನು ನಾವು ಈ ಸ್ಥಾನದಲ್ಲಿದ್ದುಕೊಂಡು ಮಾಡಿದಂತಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ನಮಗೆಲ್ಲರಿಗೂ ಗೊತ್ತಿರುವಂತೆ ಪಂಡಿತ ಜವಹರಲಾಲ್ ನೆಹರುರವರು ಪ್ರಧಾನ ಮಂತ್ರಿಗಳಾಗಿದ್ದಾಗ ಎಸ್.ವಿ.ಗುಲ್ಬಾರಿಯವರ ಅಧ್ಯಕ್ಷತೆಯಲ್ಲಿ ಈ ಒಂದು ಬಚಾವತ್ ಅವಾರ್ಡ್ ಅನ್ನು ಮಾಡಲಾಯಿತು. ಅದಾದ ನಂತರ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ನೆರೆ ರಾಜ್ಯಗಳಾದಂಥಾ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದವರು ಈಗಾಗಲೇ ಅವರ ನೀರಿನ ಹಕ್ಕನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದಾರೆ. ಕೇವಲ 9 ವರ್ಷಗಳು ಉಳಿದಾಗ 2000 ಇಸವಿಯೊಳಗೆ ನಾವು ಪ್ರತಿ ವರ್ಷ ಈ ಸದನದಲ್ಲಿ ಮಾತನಾಡುತ್ತಾ ಹೋದರೆ ನಮ್ಮ ನೀರಿನ ಬಳಕೆಯನ್ನು ಈ ರಾಜ್ಯದ ರೈತರ ಪ್ರಗತಿಯ ಕುರಿತು ಚಿಂತನೆ ಮಾಡುತ್ತಾ ಹೋದರೆ ನಾವು ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಹಾಗಾಗಿ, ಈ ನೀರಾವರಿ ಕ್ಷೇತ್ರಕ್ಕೆ ನಾವು ಬಹಳಷ್ಟು ಮಹತ್ವವನ್ನು ಯಾವ ರೀತಿ ಕೊಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ನಾವು ಇಡೀ ರಾಜ್ಯಾದ್ಯಂತ ಇವೊತ್ತು ಎಲ್ಲರ ಒಂದು ಸಭೆಯನ್ನು ಕರೆದು, ನೀರಾವರಿಗೆ ಸಂಪೂರ್ಣವಾಗಿ ಹಣವನ್ನು ಉಪಯೋಗ ಮಾಡುವ ದಿಸೆಯಲ್ಲಿ ಕೂಡ ಚಿಂತನೆ ಮಾಡಿದರೆ ತಪ್ಪಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಇವೊತ್ತು ನಾವು ಈ ನಮ್ಮ ಹಕ್ಕಿನ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಅನೇಕ ನದಿಗಳಿವೆ. ಈ ಒಂದು ವಿಚಾರದಲ್ಲಿ ನಾವು ಈ ವರ್ಷದ ಬಜೆಟ್ ಅನ್ನು ನೋಡಿದಾಗ, ನೀರಾವರಿ ಕ್ಷೇತ್ರಕ್ಕೆ ಸುಮಾರು 349.85 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಮತ್ತು ಆಯುವ್ಯಯ ಪತ್ರದಲ್ಲಿ ನಮ್ಮ ಮುಖ್ಯಮಂತ್ರಿಗಳು 549.85 ಕೋಟಿ ರೂಪಾಯಿಗಳವರೆಗೆ ಹಣವನ್ನು ಕೊಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಈ ಹಣವನ್ನು ಸಂಪೂರ್ಣವಾಗಿ ನಾವು ಆದಷ್ಟು ಬೇಗ ಖರ್ಚು ಮಾಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. ಜೊತೆಗೆ ಹೆಚ್ಚೆಚ್ಚು ಹಣವನ್ನು ಇವೊತ್ತು ವಿವಿಧ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಯೋಜನೆಯನ್ನು ಅತಿ ತ್ವರಿತ ಗತಿಯಿಂದ ಹಾಕಿಕೊಳ್ಳಬೇಕಾಗಿದೆ. ಇನ್ನು ತುಂಗಾ ಮೇಲ್ದಂಡೆ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದರೆ ನಿಜವಾಗಿಯೂ ಕಳೆದ ವರ್ಷ ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದಿದ್ದು ಬಹಳ ಸಂತೋಷದ ಸಂಗತಿ. ಆದರೆ, ಈ ಯೋಜನೆಗೆ ಮಂಜೂರಾತಿ ದೊರೆತಿರುವುದಿಲ್ಲ. ಹಾಗಾಗಿ ಕೂಡಲೇ ಕೇಂದ್ರ ಸರ್ಕಾರದ ಮಂಜೂರಾತಿಯನ್ನು ಪಡೆದು ಈ ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿದೆ. ಈ ಯೋಜನೆಯನ್ನು ಜಾರಿಗೊಳಿಸಿದ ಪೂರ್ವದಲ್ಲಿ ಮಾಲತಿ ಜಲಾನಯನವನ್ನು ಒಳಗೊಂಡಂಥ ಈ ಯೋಜನೆಯನ್ನು ಜಾರಿಗೆ ತರುವ ಹಾಗಿದ್ದರೆ ನಿಜವಾಗಿಯೂ ಧಾರವಾಡ ಜಿಲ್ಲೆಯ ಇನ್ನು 8-10 ತಾಲ್ಲೂಕುಗಳಿಗೆ ನೀರಾವರಿಯಿಂದ ಉಪಯೋಗವಾಗುತ್ತಿತ್ತು. ಆದರೆ, ದುರ್ದೈವದಿಂದ ಈ ಮಾಲತಿ ಜಲಾನಯನವನ್ನು ಬಿಟ್ಟು ಈ ಒಂದು ಯೋಜನೆಯನ್ನು ಏತಕ್ಕೆ ತಂದಿದ್ದಾರೆ ಎಂಬುದನ್ನು ಹೇಳುತ್ತೇನೆ. ಇವೊತ್ತು ತೀರ್ಥಹಳ್ಳಿಯಲ್ಲಿ ಸಾವಿರಾರು ಎಕರೆ ಜಮೀನು ಮುಳುಗಡೆಯಾಗಿರುವುದರಿಂದ ಅಲ್ಲಿನ ರೈತರಿಗೆ ತೊಂದರೆಯಾಗುತ್ತದೆ. ಎನ್ನುವ ಏಕೈಕ ಉದ್ದೇಶದಿಂದ ಮತ್ತು ರಾಜಕೀಯದ ಒಂದು ಉದ್ದೇಶದಿಂದ ಮಾಲತಿ ಜಲಾನಯನ ಬಿಟ್ಟು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆಂದರೆ ತಪ್ಪಾಗುವುದಿಲ್ಲ. ಸಾವಿರಾರು ಎಕರೆ ಜಮೀನು ಮುಳುಗಡೆಯಾದರೂ ಕೂಡ ಇವೊತ್ತು ಲಕ್ಷಾಂತರ ಎಕರೆಗಳು ಹಾವೇರಿಯ ನಂತರ ಬರತಕ್ಕಂಥ ಕ್ಷೇತ್ರಗಳಾದ ಶಿಗ್ಗಾಂವ್, ಸವಣೂರು, ಶಿರಹಟ್ಟಿ, ಮುಂಡರಗಿ ಮತ್ತು ಕೊಪ್ಪಳದವರೆಗೆ ಇರತಕ್ಕಂಥ ಈ ಒಂದು ಯೋಜನೆಯನ್ನು ಸಂಪೂರ್ಣವಾಗಿ ನಾವು ತುಂಗಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಾಗ ಈ ಯೋಜನೆಯನ್ನು ಜಾರಿಗೆ ತರಬೇಕಾಗಿತ್ತು. ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡು

ಕೇಳಿಕೊಳ್ಳುವುದೇನೆಂದರೆ ಮೊದಲನೆಯ ಹಂತವಾಗಿ, ಮೊದಲನೆಯ ಸ್ಟೇಜ್ ಎಂದು ಪರಿಗಣಿಸಿ ಈಗ ಶಂಕುಸ್ಥಾಪನೆ ಮಾಡಿದ ಪ್ರಕಾರ ತುಂಗಾಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಅನಂತರ ಎರಡನೆಯ ಸ್ಟೇಜ್ ಆಗಿ ಮಾಲತಿ ಜಲಾನಯನದ ಯೋಜನೆಯನ್ನು ಜಾರಿ ಮಾಡಬೇಕು. ಭೂಮಿ ಮುಳುಗಡೆಯಾದರೂ ಚಿಂತೆ ಇಲ್ಲ. ಇದನ್ನು ಮಾಡಿದರೆ ಲಕ್ಷಾಂತರ ರೈತರಿಗೆ ಹಾಗೂ ಲಕ್ಷಾಂತರ ಎಕರೆ ಜಮೀನಿಗೆ ನೀರನ್ನು ಉಪಯೋಗಮಾಡಿಕೊಳ್ಳಲು ಅನುಕೂಲವಾಗುತ್ತದೆ. ಆದುದರಿಂದ ಈವತ್ತು ಆ ಯೋಜನೆಯನ್ನು ಎರಡನೇ ಸ್ಟೇಜ್ ಆಗಿ ಪರಿಗಣಿಸಿ ಮುಂದಿನ ದಿನಗಳಲ್ಲಿ ಆ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಈಗ ಈ ತುಂಗಾ ಮೇಲ್ದಂಡೆ ಯೋಜನೆಗೆ ಇಟ್ಟಿರತಕ್ಕಂಥ ಹಣ ಬಹಳ ಅಲ್ಪವಾಗಿದೆ. ಈ ಹಣದಿಂದ ಯಾವ ಯೋಜನೆಯನ್ನೂ ಸಹ ಕಾರ್ಯಗತ ಮಾಡಲು ಆಗುವುದಿಲ್ಲ. ಆದುದರಿಂದ ಇದಕ್ಕೆ ಮಾನ್ಯ ಸಚಿವರು ಹೆಚ್ಚು ಹಣವನ್ನು ಕೊಡಲು ಮತ್ತು ಆಯವ್ಯಯದಲ್ಲಿ ಹೆಚ್ಚು ಹಣವನ್ನು ಇಡಲು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಹಾವೇರಿಗೆ ಬಂದಿದ್ದಾಗ ಈ ಯೋಜನೆಗೆ ಹೆಚ್ಚು ಹಣವನ್ನು ಕೊಡಬೇಕು ಮತ್ತು ಬೇರೆ ಬೇರೆ ಯೋಜನೆಗಳಾದ ವರದಾ ನದಿ ಮತ್ತು ಇತರ ದೊಡ್ಡ ಯೋಜನೆಗಳಿಗೆ ತಾವು ವಿಶೇಷವಾದಂಥ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದೆ. ಆದರೂ ಕೂಡ ಈ ಇಲಾಖೆಯಲ್ಲಿ discretionary grant ಎನ್ನತಕ್ಕದ್ದನ್ನು ಕೂಡ ಇಡತಕ್ಕದ್ದು ಅತಿ ಅವಶ್ಯವಾಗಿದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಬೇರೆ ಬೇರೆ ಇಲಾಖೆಗಳಲ್ಲಿ ಈ ಒಂದು ವ್ಯವಸ್ಥೆ ಇರುವಾಗ, ಅತಿ ಪ್ರಾಮುಖ್ಯವಾದ ಇಲಾಖೆ ಈ ನೀರಾವರಿ ಇಲಾಖೆಯಾಗಿರುವುದರಿಂದ ಇಲ್ಲೂ ಕೂಡ ಅದನ್ನು ಮಾಡಬೇಕು. ಇವತ್ತು ಅನೇಕ ನಮ್ಮ ರೈತಬಾಂಧವರು, ಸಾರ್ವಜನಿಕರು ತಮ್ಮ ಒಂದು ಕೆಲಸವನ್ನು ಈಡೇರಿಸುವುದಕ್ಕೋಸ್ಕರ ಸಚಿವರ ಹತ್ತಿರ ಬಂದು ಅವರ ದು:ಖಗಳನ್ನು ತೋಡಿಕೊಂಡಾಗ ತಕ್ಷಣ ಕೆಲವು ಸಲ ಕೆಲವು ಕ್ರಮಗಳನ್ನು ರೈತರ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಅಂ ಸಂದರ್ಭದಲ್ಲಿ ಇವತ್ತು discretionary grant ಕನಿಷ್ಠ ಪಕ್ಷ 5-10 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡರೆ ಇಂಥ ಕೆಲವು ಕಾರ್ಯಕ್ರಮಗಳನ್ನು ಮಾಡಿಕೊಡಲು ತಮಗೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಈ ಒಂದು ವ್ಯವಸ್ಥೆಯನ್ನು ಕೂಡ ನಮ್ಮ ಆಯವ್ಯಯದಲ್ಲಿ ಸೇರಿಸಬೇಕು ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇದರ ಜೊತೆಗೆ ಇವತ್ತು ಒಂದು ಯೋಜನೆಯನ್ನು ಕಾರ್ಯಗತಮಾಡತಕ್ಕ ಸಂದರ್ಭದಲ್ಲಿ ಕಾನೂನಿನ ಪ್ರಕಾರ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತದೆ. ರೈತಭಾಂದವರಿಗೆ ಅನುಕೂಲಮಾಡಿಕೊಡಲು ಈ ಕಾನೂನಿನಲ್ಲಿ ಸಮಗ್ರವಾದ ಒಂದು ತಿದ್ದುಪಡಿಯಾಗಬೇಕಾಗಿದೆ. ಇವತ್ತು 10 ಸಾವಿರ ಬೆಲೆ ಬಾಳತಕ್ಕ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಹತ್ತಾರು ವರ್ಷಗಳವರೆಗೆ ಹಾಗೆಯೇ ಇಟ್ಟುಕೊಳ್ಳುವುದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. 10 ಸಾವಿರ ಬೆಲೆ ಬಾಳತಕ್ಕ ಜಮೀನುಗಳನ್ನು ನಾವು ಇವತ್ತು ಒಂದು ಲಕ್ಷಕ್ಕೆ ಕೊಡತಕ್ಕ ಪ್ರಕರಣಗಳನ್ನು ನೋಡುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ ನೂರಾರು ಕೋಟಿ ರೂಪಾಯಿಗಳಷ್ಟು ಹಣ ಈ ಒಂದು ಭೂಸ್ವಾಧೀನ ಕೇಸುಗಳಲ್ಲಿ ಸೋರಿಹೋಗತಕ್ಕ ಒಂದು ವ್ಯವಸ್ಥೆಯನ್ನು ನೋಡಿದ್ದೇವೆ. ಹೀಗಾಗಿ ಭೂಸ್ವಾಧೀನದ ಕಾನೂನಿಗೆ ಒಂದು ತಿದ್ದುಪಡಿ ಮಾಡಿ ಇವತ್ತು ಪ್ರೈವೇಟ್ ನೆಗೋಷಿಯೇಷನ್ ಪ್ರಕಾರ ಸರ್ಕಾರ ಮತ್ತು ರೈತರ ನಡುವೆ, ಸಾರ್ವಜನಿಕರ ಕೆಲಸಗಳಿಗೆ ಅನುಕೂಲವಾಗುವ ದಿಸೆಯಲ್ಲಿ ಕೂಡಲೇ ತಿದ್ದುಪಡಿ ಮಾಡುವುದು ಅತಿ ಅವಶ್ಯಕವಾಗಿದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

ಇನ್ನು ಚಿಕ್ಕ ನೀರಾವರಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನನ್ನ ಮತಕ್ಷೇತ್ರದಲ್ಲಿ ವರದಾನದಿ ಹರಿಯುತ್ತಿದೆ. ಈ ಒಂದು ನದಿಯ ಹತ್ತಿರ ಕಳಸೂರು ಗ್ರಾಮ, ಹಿರೇಹಳ್ಳಿ, ಪುನೀಮರಳ್ಳಿ ಎನ್ನತಕ್ಕ ಗ್ರಾಮಗಳಿವೆ. ನಾವು ಈ ಶಾಸನ ಸಭೆಗೆ ಬಂದು ಎರಡುವರೆ ವರ್ಷಗಳಾದರೂ ಕೂಡ ಒಂದೂ ಕಾರ್ಯಕ್ರಮವನ್ನು ತೆಗೆದುಕೊಳ್ಳದಂಥ ಕೆಟ್ಟ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ನಮ್ಮ ಭಾಗದ ರೈತಭಾಂದವರು ಅನೇಕ ಸಲ ಮಾನ್ಯ

ಸಚಿವರ ಹತ್ತಿರ ಬಂದು ಮನವಿಗಳನ್ನು ಕೊಟ್ಟರು. ನಮ್ಮ ರೈತರಿಗೆ ಪದೇ ಪದೇ ಮಾನ್ಯ ಸಚಿವರು ಕೊಟ್ಟ ಆಶ್ವಾಸನೆಯು ಇನ್ನೂ ಜಾರಿ ಆಗದಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಮಾನ್ಯ ಸಚಿವರು ಈ ಕಳಸೂರು ಬ್ಯಾರೇಜ್ ಒಂದನ್ನಾದರೂ ಮಾಡಿಸಿಕೊಡಬೇಕು. ಮತ್ತು ಕಡೆಯ ಪಕ್ಷ ವರ್ಷಕ್ಕೆ ಒಂದು ಬ್ಯಾರೇಜನ್ನಾದರೂ ಒಂದು ವಿಧಾನಸಭಾ ಕ್ಷೇತ್ರದಲ್ಲಿ ತೆಗೆದುಕೊಂಡರೆ ನಾವು ರೈತರಿಗೆ ಕೊಟ್ಟಿರತಕ್ಕ ಆಶ್ವಾಸನೆಯನ್ನು ಈಡೇರಿಸಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಆ ಕಾರಣದಿಂದ ಮಾನ್ಯ ಸಚಿವರು ಈ ಆಯವ್ಯಯದಲ್ಲಿ ನಾನು ಹೇಳಿದ ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇನ್ನು ಪುನೀಮರಳ್ಳಿಯ ಹತ್ತಿರ ಒಂದು ಬ್ಯಾರೇಜು ಇದೆ. ಇಲ್ಲಿ ಸುಮಾರು10 ಲಕ್ಷ ರೂಪಾಯಿಗಳಲ್ಲಿ ಆಗಬೇಕಾದ ಒಂದು ಲಿಫ್ಟ್ ಇರಿಗೇಷನ್ ಕೆಲಸ ಕಳೆದ ಎರಡೂವರೆ ವರ್ಷಗಳಿಂದ ಆಗದೆ ನಿಂತಿದೆ. 36 ಲಕ್ಷ ರೂಪಾಯಿಯ ಕೆಲಸಕ್ಕೆ 26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 10 ಲಕ್ಷ ರೂಪಾಯಿಗಳನ್ನು ಕೊಡದೇ ಆ ಕೆಲಸ ಹಾಗೆಯೇ ನಿಂತಿದೆ. ಆದುದರಿಂದ ನಾವು ಯಾವ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೋ ಆ ಕೆಲಸವನ್ನು ಪೂರ್ಣ ಮಾಡಲು ಮೊದಲು ಪ್ರಾಧಾನ್ಯತೆಯನ್ನು ಕೊಟ್ಟು ಆ ಕೆಲಸವನ್ನು ಕೂಡಲೇ ಮುಗಿಸಲು ವ್ಯವಸ್ಥೆಯನ್ನು ಮಾಡಬೇಕಾದ ಆವಶ್ಯಕತೆ ಇದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ಏತನೀರಾವರಿಯ ಬಗ್ಗೆ ಹೇಳಬೇಕೆಂದರೆ ಇವತ್ತು ಕೃಷ್ಣಾ ಜಲಾನಯನ ಪ್ರದೇಶವಾದ ಬಿಜಾಪುರದಲ್ಲಿ ಒಂದು ಏತನೀರಾವರಿ ನಿಯಮವನ್ನು ಮಾಡಿದ್ದಾರೆ. ಆ ಏತ ನೀರಾವರಿ ನಿಗಮವನ್ನು ನಾವು ಕಳೆದ ವರ್ಷ "ಬಿಳಿ ಆನೆ" ಎನ್ನುವ ಮಾತನ್ನು ಹೇಳಿದ್ದೇವೆ. ಇವತ್ತು ಆ ಏತನೀರಾವರಿ ನಿಗಮವನ್ನು ಸರಿಯಾಗಿ ಬಳಸುವುದು ಬಹಳ ಪ್ರಾಮುಖ್ಯವಾದಂತಹ ವಿಚಾರ. ಆದರೆ ಇವತ್ತು ಈ ಒಂದು ಆಯವ್ಯಯ ನೋಡಿದಾಗ ಈ ಒಂದು ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಪ್ರಾಧಿಕಾರದ ಜೊತೆಗೆ ಇದನ್ನು ವಿಲೀನ ಮಾಡುವಂತಹ ಯೋಜನೆಯನ್ನು ಹಾಕಿಕೊಂಡಿದ್ದು ಬಹಳ ಸಂತೋಷದ ಸಂಗತಿ. ಆ ಒಂದು ನಿಗಮವು ಸುಮಾರು 5-6 ವರ್ಷಗಳ ಹಿಂದೆ ಸ್ಥಾಪನೆಯಾದರೂ ಸಹ ಇವತ್ತಿನವರೆಗೂ ಒಂದು ಕೆಲಸವೂ ಆಗದಂತಹ ಒಂದು ವಿಚಾರ ನೋಡಿದರೆ ಇಂತಹ ನಿಗಮುಗಳಿಂದ ಯಾವುದೇ ಲಾಭವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಜೊತೆಗೆ ವಿದ್ಯುತ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದರೆ ಇವತ್ತು ವಿದ್ಯುತ್ ಇಲಾಖೆಗೆ ಸುಮಾರು 495.57 ಕೋಟಿ ರೂಪಾಯಿಗಳನ್ನು ಇಟ್ಟಿರತಕ್ಕಂಥದ್ದು ಬಹಳ ಸ್ವಾಗತಾರ್ಹ ಮತ್ತು ಸಂತೋಷದ ಸಂಗತಿ. ವಿದ್ಯುತ್ ಮನುಷ್ಯನಿಗೆ ಬೇಕು, ಬೇಸಾಯಕ್ಕೆ ಬೇಕು, ಕೈಗಾರಿಕೆಗೆ ಬೇಕು, ದೀಪ ಹಚ್ಚುವುದಕ್ಕೆ ಬೇಕು, ಹೀಗೆ ಪ್ರತಿಯೊಂದಕ್ಕೂ ಇದು ಅತ್ಯಾವಶ್ಯಕವಾಗಿರುವುದರಿಂದ ವಿದ್ಯುತ್ ಇಲಾಖೆಯಲ್ಲಿ ಪವರ್ ಜನರೇಷನ್‌ನ್ನು ಹೆಚ್ಚಿಗೆ ಮಾಡಿಕೊಳ್ಳಬೇಕು. ಈಗ ನಮ್ಮ ಭಾಗಗಳಲ್ಲಿ ರೈತರು, ಸಾಮಾನ್ಯ ಜನರು, ಸಾರ್ವಜನಿಕರು ಹೀಗೆ ಪ್ರತಿಯೊಬ್ಬರೂ ವಿದ್ಯುತ್‌ಗಾಗಿ ಪಡತಕ್ಕಂತಹ ಕಷ್ಟವನ್ನು ನೋಡಿದರೆ ಆ ಗೋಳು ದೇವರಿಗೇ ಗೊತ್ತು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಕಾರಣದಿಂದ ಇವತ್ತು ಈಗಾಗಲೇ ನಮಗೆ ಕೊಟ್ಟ ಅಂಕಿ ಸಂಖ್ಯೆಗಳ ಮುಖಾಂತರ 1440 ಮಿಲಿಯನ್ ಯೂನಿಟ್ ವಿದ್ಯುತ್ ನಮಗೆ ಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ನಮಗೆ 100 ಕ್ಕೆ 20 ರಷ್ಟು ಕೊರತೆ ಇರುವುದರಿಂದ ಹೆಚ್ಚಿನ ಪವರ್ ಜನರೇಷನ್ ಮಾಡಿ, ರೈತರಿಗೆ ಹೆಚ್ಚು ವೋಲ್ಟೇಜ್ ಇರತಕ್ಕಂತಹ ವಿದ್ಯುತ್ತನ್ನು ಕೊಡಬೇಕೆಂದು ಹೇಳುತ್ತೇನೆ. ನನ್ನ ಭಾಗದಲ್ಲಿ ಶಿಗ್ಗಾಂವ್, ಸವನೂರ್, ಬಂಕಾಪುರ ಈ ಮೂರು ಕ್ಷೇತ್ರಗಳಲ್ಲಿ ಸುಮಾರು 20 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂತಹ ಊರುಗಳಿದ್ದು ಇವತ್ತಿನವರೆಗೂ ಅಲ್ಲಿ ಕೇವಲ 33 ಕೆ.ವಿ. ಟ್ರಾನ್ಸ್‌ಫಾರ್ಮರ್ ಇರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಅಲ್ಲಿ 110 ಕೆ.ವಿ. ಟ್ರಾನ್ಸ್‌ಫಾರ್ಮರ್ ಅಳವಡಿಸಿ ಈ ವಿದ್ಯುತ್ ವೋಲ್ಟೇಜ್ ಹೆಚ್ಚಿಸಿದ್ದೇ ಆದರೆ ನಿಜವಾಗಲೂ ಆ ಭಾಗದ ಸಾರ್ವಜನಿಕರು ತಮಗೆ ತುಂಬಾ ಕೃತಜ್ಞರಾಗಿರುತ್ತಾರೆ. ಅವರು ಮೇಲಿಂದ ಮೇಲೆ ತಮ್ಮ ತೊಂದರೆಗಳನ್ನು ಹೇಳುತ್ತಿದ್ದಾರೆ. ನಾನು ಸುಮಾರು ಹತ್ತಾರು ಬಾರಿ ಪತ್ರಗಳನ್ನು ತಮ್ಮ ಇಲಾಖೆಗೆ

ಕೊಟ್ಟಿದ್ದೇನೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಮಾನ್ಯ ಸಚಿವರು ಇದನ್ನು ಪರಿಶೀಲಿಸಿ ಕೂಡಲೇ ಒಂದು ಪರಿಹಾರವನ್ನು ಒದಗಿಸಿ ಕೊಡಬೇಕೆಂದು ನಾನು ಅವರ ಪರವಾಗಿ ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳಬೇಕೆಂದರೆ ಕರ್ನಾಟಕ ರಾಜ್ಯವು ಇವತ್ತು ಅನೇಕ ಪ್ರವಾಸೋದ್ಯಮ ಕೇಂದ್ರಗಳನ್ನು ಗುರ್ತಿಸಿ ನಿಜವಾಗಲೂ ಒಳ್ಳೆಯ ಕೆಲಸವನ್ನು ಮಾಡುತ್ತಿದೆ ಎನ್ನುವ ಮಾತನ್ನು ಹೇಳುತಿದ್ದೇನೆ. ಈ ಒಂದು ಇಲಾಖೆಯ ಮುಖಾಂತರ ನಾನು ಸುಮಾರು 5-6 ತಿಂಗಳ ಹಿಂದೆ ತಿರುಪತಿಗೆ ಹೋಗಿದ್ದೆನು. ಆಗ ತಕ್ಷಣ ಹೋಗಬೇಕಾದಂತಹ ಸಂದರ್ಭದಲ್ಲಿ ಈ ಇಲಾಖೆಯ ಅಧಿಕಾರಿಗಳಿಗೆ ಫೋನ್ ಮಾಡಿದಾಗ ಅವರು ನಮಗೆ ಬಸ್‌ನಲ್ಲಿ ಅನುಕೂಲತೆಯನ್ನು ಮಾಡಿ ಆ ಒಂದು ತಿರುಪತಿ ಕ್ಷೇತ್ರದಲ್ಲಿ ದೇವರ ದರ್ಶನವನ್ನು ಕೂಡ ಮಾಡಿಸಿದರು. ಅಲ್ಲಿ ಇರತಕ್ಕಂಥ ಹೋಟೆಲ್‌ನಲ್ಲಿ ನಾವು ಊಟ ಮಾಡಿದಾಗ ನಮಗಂತೂ ಈ ಇಲಾಖೆಯ ವ್ಯವಸ್ಥೆಯನ್ನು ನೋಡಿ ಬಹಳ ಸಂತೋಷವಾಯಿತು. ನಾನು ಮೊನ್ನೆ ತಮ್ಮ ಗಮನಕ್ಕೆ ತಂದಂತೆ ನನ್ನ ಕ್ಷೇತ್ರದಲ್ಲಿ ಶಿಶುನಾಳ ಷರೀಫ್ ಶಿವಯೋಗಿಗಳ ಒಂದು ಪುಣ್ಯ ಕ್ಷೇತ್ರವಿದೆ. ಕನಕದಾಸರು ಹುಟ್ಟಿದಂತಹ ಒಂದು ಬಾಡ ಕ್ಷೇತ್ರವೂ ಇದೆ. ಕನಕದಾಸರು ಹುಟ್ಟಿದಂತಹ ಸ್ಥಳ "ಬಾಡ" ಎಂದು ಹೇಳಿದಾಗ ಆಗ ಒಂದು ತಪ್ಪು ಕಲ್ಪನೆಯಿಂದ ಕಾಗಿನೆಲೆ ಎನ್ನುವಂತಾದ್ದು ಪತ್ರಿಕೆಯಲ್ಲಿ ವರದಿಯಾಯಿತು. ಅದು ಟಿ.ವಿ.ಯಲ್ಲಿ ಕೂಡ ಬಂತು. ಆದರೆ ನಿಜವಾಗಲೂ ಇವತ್ತಿನ ದಿವಸ ಆ ಭಾಗದ ಜನರು ಒಂದು ಪತ್ರವನ್ನು ಬರೆದು ಒಂದು ಕ್ಲಾರಿಫಿಕೇಷನ್ ಕೇಳಿದ್ದಾರೆ. ನೀವು ಕನಕದಾಸರು ಹುಟ್ಟಿದ್ದು ಬಾಡ ಅಂತ ಹೇಳಿದ್ದೀರೋ ಅಥವಾ ಕಾಗಿನೆಲೆ ಎಂದು ಹೇಳಿದ್ದೀರೊ ಎಂದು ಕೇಳಿದ್ದಾರೆ. ಆದರೆ ಕನಕದಾಸರು ಹುಟ್ಟಿದ್ದು "ಬಾಡದಲ್ಲಿ". ಅವರು ಕಾಗಿನೆಲೆಗೆ ಹೋಗಿ ಅಲ್ಲಿಯೂ ಕೂಡ ಇದ್ದುದರಿಂದ ಆ ಕ್ಷೇತ್ರಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದಾರೆ. ಆದರೆ ಮೂಲತಃ ಕನಕದಾಸರು ಹುಟ್ಟಿದಂತ ಸ್ಥಳ ಬಾಡ, ಆದ್ದರಿಂದ ಆ ಸ್ಥಳಕ್ಕೆ ಹೆಚ್ಚು ಮಹತ್ವವಿದೆ. ಈಗಾಗಲೇ ಅಲ್ಲಿ ಒಂದು ಸರ್ಕಲ್ ಮಾಡುತ್ತಿದ್ದೇವೆ. ಅದಕ್ಕೆ ಕನಕದಾಸ 7-00 ಪಿ. ಎಂ. ಸರ್ಕಲ್ ಎಂದು ನಾಮಕರಣ ಮಾಡಬೇಕೆಂದು ನಾವು ನಿಶ್ಚಯಿಸಿದ್ದೇವೆ. ಈ ಕ್ಷೇತ್ರವನ್ನು ಅಭಿವೃದ್ಧಿ ಕೇಂದ್ರ ಎಂದು ಪರಿಗಣಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, ನನ್ನ ಮತ ಕ್ಷೇತ್ರದಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿದ್ದು ಈಗ ಈ ಒಂದೊಂದೂ ಸಹ ಒಂದೊಂದು ತಾಲ್ಲೂಕಿಗೆ ಪಾಯಿಂಟ್ ಆಗಿವೆ. ಸವಣೂರನ್ನು ಹಾವೇರಿ ಸಬ್ ಡಿವಿಜನ್‌ಗೆ ಒಳಪಡಿಸಿದರೆ ಶಿಗ್ಗಾಂವ್‌ಅನ್ನು ಹಾನಗಲ್‌ಗೆ ಒಳಪಡಿಸಿದೆ. ಆದರೆ ಮುಖ್ಯ ಕೇಂದ್ರದಲ್ಲಿರತಕ್ಕ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಈ ತಾಲ್ಲೂಕುಗಳಿಗೆ ಲಕ್ಷ್ಯವನ್ನು ಕೊಡುತ್ತಿಲ್ಲ. ಅಷ್ಟೇ ಅಲ್ಲ, ನಮಗೆ ಅಧಿಕಾರಿಗಳೂ ಕೂಡ ಸಿಕ್ಕುತ್ತಿಲ್ಲ. ಜೊತೆಗೆ ಅಭಿವೃದ್ಧಿ ಕೆಲಸಗಳನ್ನೂ ಅಲ್ಲಿ ಮಾಡುವ ಸಲುವಾಗಿ ಸಬ್ ಡಿವಿಜನ್‌ಗೆ ಹಣವನ್ನು ಕೊಟ್ಟರೆ ಕೇಂದ್ರ ಸ್ಥಳದಲ್ಲಿ ಅದನ್ನು ಖರ್ಚುಮಾಡದೇ ಇರತಕ್ಕದ್ದನ್ನು ಸಹ ನೋಡಿದ್ದೇವೆ. ಈ ಕಾರಣದಿಂದ ಆ ಅಧಿಕಾರಿಗಳು ನಮ್ಮ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಿದ್ದಾರೆಂಬುದನ್ನು ತರಿಸಿ ತಾವು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಶಿಗ್ಗಾಂವ್ ಮತ್ತು ಸವಣೂರು ಈ 2 ತಾಲ್ಲೂಕುಗಳನ್ನು ಒಂದುಗೂಡಿಸಿ ಒಂದು ಆಫೀಸನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಇನ್ನು ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳ ಪರಿಸ್ಥಿತಿ ತುಂಬಾ ಕೆಟ್ಟು, ಹೋಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ರಸ್ತೆ ರಿಪೇರಿ ಅಧಿಕಾರವನ್ನು ನಾವು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೇವೆ. ರಾಷ್ಟ್ರೀಯ ಹೆದ್ದಾರಿ,. ರಾಜ್ಯ ಹೆದ್ದಾರಿ, ಗ್ರಾಮಾಂತರ ಹೆದ್ದಾರಿ ಎಂದು ನಾವು ಪರಿಗಣಿಸುವುದರಿಂದ ಬೇರೆಬೇರೆಯವರಿಗೆ ಅಧಿಕಾರ ಕೊಟ್ಟು, ಇವುಗಳ ವ್ಯವಸ್ಥೆಯನ್ನು ಅವರು ಸರಿಯಾಗಿ ನೋಡಿಕೊಳ್ಳದಿದ್ದರೆ ಅವರಮೇಲೆ ನಾವು ಯಾವುದೇ ಹತೋಟಿಯನ್ನೂ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಯಾವುದೇ ರಸ್ತೆಯಾಗಿರಲಿ ಅದು ಪಿ.ಡಬ್ಲ್ಯೂ.ಡಿ. ಇಲಾಖೆಗೆ ಒಳಪಟ್ಟರೆ ಮುಂದಿನ ದಿನಗಳಲ್ಲಿ ಒಂದು ಸುಧಾರಣೆ ಕಾಣುವುದಕ್ಕೆ ಸಾಧ್ಯ ಎಂಬುದನ್ನು ಹೇಳಬಯಸುತ್ತೇನೆ. ತಾವೇ ಎಲ್ಲಾ ರಸ್ತೆಗಳ

ದುರಸ್ತಿಯನ್ನೂ ಮಾಡಿಸತಕ್ಕದ್ದು ಒಳ್ಳೆಯದೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು):- ಮಾನ್ಯ ಅಧ್ಯಕ್ಷರೇ, ಬಿಸಿಲಿನ ಬೇಗೆಯಲ್ಲಿ ಬಸವಳಿದಿದ್ದಾಗ ತಂಪಾದ ಮಳೆ ಸುರಿದಂತೆ, ಕ್ಷಾಮದಿಂದ ಬೆಂಗಾಡಾದ ನಾಡಿಗೆ ಒಮ್ಮಲೇ ಜಲಾಶಯದ ಗೇಟನ್ನು ತೆರೆದು ನೀರಿನ ಸೌಲಭ್ಯವನ್ನು ಒದಗಿಸಿದಂತೆ , ಕತ್ತಲೆಯ ಕೂಪದಲ್ಲಿ ಕೊಳೆಯುತ್ತಿದ್ದಾಗ ಕೈ ಕೊಟ್ಟಿದ್ದ ಕರೆಂಟ್ ಥಕ್ಕನೆ ಹತ್ತಿಕೊಂಡಹಾಗೆ, ನನಗೆ ಸಂತೋಷವಾಗಿದೆ. ಏಕೆಂದರೆ, ಹತ್ತು ನಿಮಿಷವಾದರೂ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿತಲ್ಲಾ ಎಂದು. ನೀರಾವರಿಯನ್ನು ಕುರಿತು ಸಮಗ್ರವಾದ ಚಿಂತನೆ ನಡೆಯಬೇಕು. ನಮಗೆ ಕೊಟ್ಟಿರತಕ್ಕ ವಾರ್ಷಿಕ ವರದಿಯಲ್ಲಿ ರಾಜ್ಯದಲ್ಲಿ ಅಂತಿಮ ನೀರಾವರಿ ಸಾಮರ್ಥ್ಯ 55 ಲಕ್ಷ ಹೆಕ್ಟಾರ್ಎಂದು ಅಂದಾಜು ಮಾಡಲಾಗಿದೆ. ಇತ್ತೀಚಿನ ಅನೇಕ ವರ್ಷಗಳ ಸಾಧನೆಯ ಫಲವಾಗಿ 1992ನೇ ಮಾರ್ಚಿ ಕೊನೆಯೊಳಗೆ 22 ಲಕ್ಷ ಹೆಕ್ಟಾರ್‌ಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಎಂದರೆ ನಾವು ಎಷ್ಟು ಹಿಂದೆ ಇದ್ದೇವೆ, ಇಷ್ಟು ವರ್ಷಗಳ ಸಾಧನೆಯ ಪಲವಾಗಿ, ಇಷ್ಟು ವರ್ಷಗಳ ಚಿಂತನೆಯ ಪರಿಣಾಮವಾಗಿ ಇಷ್ಟು ಹಿಂದಿದ್ದೇವೆ ಎಂಬುದು ಗೊತ್ತಾಗುತ್ತದೆ. 55 ಲಕ್ಷ ಹೆಕ್ಟಾರ್ ನೀರಾವರಿ ಆಗಬೇಕಾದ ಕಡೆ 25 ಲಕ್ಷ ರೆಕ್ಟಾರ್ ಮಾತ್ರ ಆಗಿದೆ. ಈ ದಿಸೆಯಲ್ಲಿ ಸೆಕ್ಟರಲ್ ಅಲೋಕೇಷನ್ ಪ್ರತಿ ವರ್ಷದ್ದು ಎಷ್ಟು? ಈ ಹಿಂದೆ ಕಾವೇರಿಗೆ ಇಷ್ಟು, ಕೃಷ್ಣಾಕ್ಕೆ ಇಷ್ಟು ಎಂದು ಆ ಕಡೆಯವರು , ಈ ಕಡೆಯವರು ಎಲ್ಲರೂ ಹೇಳಿದರೂ ಕೂಡ ಅಷ್ಟು ಹಣ ಖರ್ಚಾಗಲಿಲ್ಲ. ಇದು ಏತಕ್ಕೆ ಆಗುತ್ತಿಲ್ಲ? ನಮ್ಮಲ್ಲಿ ರಿಸೋರ್ಸ್‌ನ ಮೊಬಿಲೈಸೇಷನ್ ಇಲ್ಲವೇ? ಅಥವಾ ಕೆಲಸ ಮಾಡುವಂಥ ಸ್ಪಿರಿತ ಇಲ್ಲವೇ? ಅಥವಾ ವಿಲ್ ಪವರ್ ಇಲ್ಲವೇ? ಏತಕ್ಕೆ ಹೀಗೆ ಆಗುತ್ತದೆಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕು. ಮೀಸಲಿಟ್ಟ ಹಣ ಪೂರ್ತಿ ಖರ್ಚಾಗಬೇಕು. ನಮ್ಮ ಮೆಷಿನರಿ ಸಾಕಷ್ಟು ಬೆಳೆದಿವೆ. ಇಂಜಿನಿಯರ್‌ಗಳ ಸಂಖ್ಯೆ ಹೆಚ್ಚಾಗಿದೆಯೆಂದು ಮಾನ್ಯ ಮಿತ್ರರು ಹೇಳಿದರು, ನಾನು ಅಧಿಕಾರಿಗಳ ದೋಷದ ಬಗ್ಗೆ ಹೇಳುತ್ತಿಲ್ಲ. ಅನೇಕಸಾರಿ ನಾವು ಭ್ರಷ್ಟಾಚಾರದ ಬಗ್ಗೆ ಮಾತನಾಡಿ ಮಾತನಾಡಿ ಅದು ಬಹಳ ಸಡಿಲವಾಗಿದೆ. ಅದು ಸಮಾಜದ ಒಂದು ಅಂಗವಾಗಿದೆ ಎನ್ನುವಂತಾಗಿದೆ. ಅದು ಏನೇ ಇರಲಿ, ನಮ್ಮಲ್ಲಿ ಇಂಜಿನಿಯರ್‌ಗಳು ಬಹಳ ಒಳ್ಳೆಯವರಿದ್ದಾರೆ. ಇದರ ಬಗ್ಗೆ ಆಲೋಚನೆ ಮಾಡುವ ಒಳ್ಳೆಯ ಮೇಧಾವಿಗಳಿದ್ದಾರೆ. ಅವರೆಲ್ಲರೂ ಸೇರಿ ನಮ್ಮ ಇರಿಗೇಷನ್ ಪೊಟೆನ್‌ಷಿಯಲ್ ಏನಿದೆ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವಂಥ ಆಲೋಚನೆ ಮಾಡಬೇಕಾಗುತ್ತದೆ. ಅದು ಕಾವೇರಿ ಜಲ ವಿವಾದ ಇರಲಿ, ತೆಲುಗು ಗಂಗಾ ವಿಚಾರ ಇರಲಿ, ಅಥವಾ ಬೇರೆ ಯಾವುದೇ ಯೋಜನೆ ಇರಲಿ, ವಾಸ್ತವಿಕವಾಗಿ ಹೇಳುವುದಾದರೆ, ಕೆಲವು ಸಂಧಾನಕ್ಕೆ ಒಪ್ಪಿ ಮಾಡಿದಂಥ ಒಂದು ವಿವಾದಾಸ್ಪದ ಕಾರ್ಯಕ್ರಮದಿಂದ ಈರೀತಿ ತೊಂದರೆಯಾಗಿದೆ ಎಂದು ಹೇಳಬಯಸುತ್ತೇನೆ. ರಾಷ್ಟ್ರದ ರಾಜಕೀಯ ಹಿತಾಸಕ್ತಿಯಲ್ಲಿ ನಾಡಿನ ಹಿತಾಸಕ್ತಿ ಬಲಿಯಾಗಬಾರದು, ರಾಜಕೀಯ ಬಲಿಯಾಗಬಾರದು. ಇದನ್ನು ಬಿಡಿಸಿ ಹೇಳುವುದಕ್ಕೆ ನನಗೆ ಸಮಯವಿಲ್ಲವಾದ್ದರಿಂದ ನೀರಾವರಿ ಪೊಟೆನ್‌ಷಿಯಲ್ ಏನಿದೆ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅದು ಕೃಷ್ಣಾ ಬೇಸಿನ್ ಇರಬಹುದು, ಕಾವೇರಿ ಬೇಸಿನ್ ಇರಬಹುದು ಅಥವಾ ಗೋದಾವರಿ ಬೇಸಿನ್ ಇರಬಹುದು. ಇರುವ ವಿವಾದಗಳನ್ನು ಪರಿಹರಿಸಿಕೊಳ್ಳಬೇಕು. ಜೊತೆಗೆ ನಮ್ಮ ಕೆಲಸಗಳಾಗಬೇಕು. ಅದೇರೀತಿಯಲ್ಲಿ ಸಾಧಾರಣವಾಗಿ ನಮ್ಮ ರಾಜ್ಯದಲ್ಲಿ 40 ಸಾವಿರ ಟ್ಯಾಂಕ್‌ಗಳಿವೆ. ಅವುಗಳಲ್ಲಿ ಹೂಳನ್ನು ತೆಗೆಸಲು ಬೇಕಾಗುವ ಹಣವನ್ನು ಒದಗಿಸಲಿಲ್ಲ. 1991-92ನೇ ವರ್ಷದಲ್ಲಿ ಕೆಲವೊಂದು ಐಟಂಗಳಿಗೆ ಬಹಳ ಕಡಿಮೆ ಹಣ ಒದಗಿಸಲಾಗಿದೆ. ಉದಾಹರಣೆಗೆ ಫ್ಲಡ್ ಕಂಟ್ರೋಲ್‌ಗೆ ಎರಡು ಕೋಟಿ ಇದೆ. ಫ್ಲಡ್ ಕಂಟ್ರೋಲ್ ಅಥವಾ ಸೀಇರೋಷನ್ ಎನ್ನತಕ್ಕಂಥದ್ದು ಏನಿದೆ ಅಲ್ಲಿಗೆ ನಾವು ನಮ್ಮ ಮಂತ್ರಿಗಳನ್ನೂ ಕರೆದುಕೊಂಡು ಹೋಗಿ ತೋರಿಸುತ್ತೇವೆ. ಮನವಿಗಳನ್ನು ಕೊಡುತ್ತೇವೆ. ನಂತರ ನಮ್ಮ ಮನವಿಗಳು ಕೇಂದ್ರಕ್ಕೆ ಹೋಗಿದೆ ಎಂದು ಹೇಳುತ್ತಾರೆ.

ಸಮಗ್ರವಾಗಿ ಚಿಂತನೆ ಆಗುತ್ತದೆ ಎಂದು ಹೇಳುತ್ತಿರುತ್ತಾರೆ. ಆದರೆ ಕೆಲಸ ಆಗಲಿಲ್ಲ. ಮಳೆಗಾಲದಲ್ಲಿ ಎಲ್ಲಿಂದ ಟೆಲಿಗ್ರಾಂ ಬರುತ್ತದೆ ಅಲ್ಲಿಗೆ ಹೋಗಿ ಡಿ.ಸಿ.ಕೈಯಲ್ಲಿ ಒಂದಿಷ್ಟು ಹಣವನ್ನು ಕೊಡುತ್ತೀರಿ. ಅರ್ಜೆಂಟಾಗಿ ಒಂದಿಷ್ಟು ಕಲ್ಲು ಹಾಕುತ್ತಾರೆ. ಮುಂದಿನ ವರ್ಷವೂ ಈ ಕಲ್ಲು ಹಾಕತಕ್ಕ ಕಾರ್ಯಕ್ರಮ ನಡೆಯುತ್ತದೆ. ಅದರ ಬದಲು ಸಮಗ್ರವಾಗಿ ಒಂದು ಚಿಂತನೆಯನ್ನು ಮಾಡಿ ಫ್ಲಡ್ ಕಂಟ್ರೋಲ್ ಅಥವಾ ಸೀಇರೋಷನ್ ತಡೆಗಟ್ಟಬೇಕೆಂಬ ಚಿಂತನೆಯನ್ನು ಏತಕ್ಕೆ ತಾವು ಮಾಡಲಿಲ್ಲ. ಈ ಒಂದು ಖಾಯಂ ಕಾರ್ಯಕ್ರಮ ನಿಮ್ಮಲ್ಲಿ ಆಗುತ್ತಿಲ್ಲವೆಂದು ಇಷ್ಟು ಮಾತ್ರ ಹೇಳಬಯಸುತ್ತೇನೆ. ಇನ್ನು ಇಲ್ಲಿ ಯಾರೋ ಮಾತನಾಡುವಾಗ ನನ್ನ ಮಿತ್ರರು ನೇತ್ರಾವತಿ ನದಿಯ ನೀರನ್ನು ಪೂರ್ವಕ್ಕೆ ತೆಗೆದುಕೊಂಡು ಹೋಗಬೇಕೆಂದು ಹೇಳಿದರು. All west flowing rivers ಅನ್ನು ಪೂರ್ವಕ್ಕೆ ತಿರುಗಿಸಬೇಕೆಂಬ ಮಾತು ಹಿಂದೆ ಒಮ್ಮೆ ಕೇಳಿ ಬಂದಿತ್ತು. ಆಗ ಅದಕ್ಕೆ ನಾನು ಉತ್ತರ ಕೊಟ್ಟಿದ್ದೆ. ಮಳೆಗಾಲದಲ್ಲಿ ವೆಸ್ಟ್ ಫ್ಲೋಯಿಂಗ್ ರಿವರ್ಸ್‌ನಿಂದ ನೀರು ಹರಿದು ಹೋಗುವುದನ್ನು ನೋಡಿ ಜನರು ಸಂತೋಷಪಡುತ್ತಾರೆ. ಈಗ ಬಂದು ನೋಡಬೇಕು. ಬೇಸಿಗೆಯಲ್ಲಿ ನೇತ್ರಾವತಿ ನದಿಯಲ್ಲಾಗಲಿ ಇನ್ನೊಂದು ನದಿಯಲ್ಲಾಗಲಿ, ನೀರು ಇಲ್ಲವೇ ಇಲ್ಲ. ಆದ್ದರಿಂದ ಈ ನದಿ ನೀರನ್ನು ಪೂರ್ವಕ್ಕೆ ಹರಿಯುವಂತೆ ಮಾಡಿ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಬೆಂಗಾವಲನ್ನಾಗಿ ಮಾಡುವಂಥ ಕೆಲಸ ಮಾಡಬಾರದು. ಅದರ ಬದಲಾಗಿ ವೆಸ್ಟ್ ಫ್ಲೋಯಿಂಗ್ ರಿವರ್ಸ್‌ಗಳಿಗೆ ಅಲ್ಲಿ ಜಲಸಂಕೀರ್ಣ ಮಾಡಿ, ಮಧ್ಯೆ ಅಣೆಕಟ್ಟುಗಳನ್ನು ಕಟ್ಟಿ ಒಂದಕ್ಕೊಂದು ಕನೆಕ್ಷನ್ ಮಾಡುವ ಮೂಲಕ ಜಲಸಂಗ್ರಹ ಮಾಡುವಂಥದ್ದು ಹಾಗೂ ಪ್ರವಾಹ ನಿಯಂತ್ರಣ ಮಾಡುವಂಥದ್ದು ಕುಡಿಯುವ ನೀರಿನ ಕಾರ್ಯಕ್ರಮವನ್ನು ಏರ್ಪಡಿಸುವಂತದ್ದು ಏನಿದೆ, ಇವುಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಇನ್ನು ದೊಡ್ಡ ನೀರಾವರಿಯ ಬಗ್ಗೆ ಯಾರೋ ಹೇಳಿದ ಇನ್ನೊಂದು ವಿಚಾರವನ್ನು ನಾನು ಹೇಳುತ್ತೇನೆ. 1979 ನೇ ಇಸವಿಯಲ್ಲಿ ವರಾಹಿ ಪ್ರಾಜೆಕ್ಟ್‌ಗೆ ತಾಂತ್ರಿಕ ಮಂಜೂರಾತಿ ಕೊಟ್ಟರು. ಇದು 943 ಲಕ್ಷ ರೂಪಾಯಿಗಳ ಒಂದು ಪ್ರಾಜೆಕ್ಟ್. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರಾಹಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಏನಿದೆ ಇದನ್ನು ಕೈಗೊಳ್ಳುವುದರಿಂದ ಬೇಕಾದಷ್ಟು ನೀರು ಹರಿದು ಸಮುದ್ರಕ್ಕೆ ಸೇರುವುದನ್ನು ತಪ್ಪಿಸಬಹುದು ಮತ್ತು ಅದಕ್ಕೆ ಒಂದು ಹಣೆಕಟ್ಟನ್ನು ಕಟ್ಟಿ ಕುಂದಾಪುರ ಮತ್ತು ಉಡುಪಿ ತಾಲ್ಲೂಕ್‌ಗಳ ಸುಮಾರು 38 ಸಾವಿರ ಎಕರೆ ಜಮೀನಿಗೆ ನೀರನ್ನು ಉಳಿಸುವಂತಹ ಒಂದು ಕಾರ್ಯಕ್ರಮದ ಜೊತೆಗೆ ಪವರ್ ಕಾರ್ಪೊರೇಷನ್‌ನವರು ಪವರ್ ಉತ್ಪಾದನೆ ಕೂಡ ಮಾಡಲಿಕ್ಕೆ ಸಾಧ್ಯ ಎನ್ನುವ ಕಾರಣದಿಂದ ಅಣೆಕಟ್ಟನ್ನು ಸ್ವಲ್ಪ ಎತ್ತರ ಮಾಡಲಿಕ್ಕೆ ಸೂಚನೆ ಕೊಟ್ಟರು. ಅದು ಹತ್ತು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅರಣ್ಯವಸ್ತುಗಳು ನಾಶವಾಗುತ್ತದೆ ಎನ್ನುವ ಕಾರಣಕ್ಕಾಗಿ ಸ್ವಲ್ಪ ಅಬ್ಜೆಕ್ಷನ್ ಬಂದಿದೆ. ಆದರೆ ಹತ್ತು ವರ್ಷಗಳನ್ನು ಬಿಟ್ಟು ಈಗ ಅರಣ್ಯ ಇಲಾಖೆಗೆ ಬೇಕಾದಂಥ ಜಾಗವನ್ನು ಕೊಡಲು ಕಂದಾಯ ಇಲಾಖೆಯವರೂ ಕೂಡ 300 ಎಕರೆಗಳಷ್ಟು ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸುತ್ತಿದ್ದಾರೆ. ಏತಕ್ಕೆ ಇದನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ? ಹಿಂದೆ ಮಾನ್ಯ ವೀರಣ್ಣಗೌಡರು ಲೋಕೋಪಯೋಗಿ ಸಚಿವರಾಗಿದ್ದಾಗ ನಾವು ಹೇಳಿದ್ದೆವು. ನಾವೂ ಕೂಡ ಒತ್ತಾಯ ಮಾಡಿದ್ದೆವು. ಅದೇ ಜಾಗದಲ್ಲಿಯೇ ನಾನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಇಲ್ಲಿ ಸದನದಲ್ಲಿಯೂ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಖಂಡಿತವಾಗಿಯೂ ಈಗ ಮಾನ್ಯ ಮಲ್ಲಾರಿಗೌಡ ಪಾಟೀಲರು ಇದ್ದಾರೆ. ದಯವಿಟ್ಟು ಇದನ್ನು ತೆಗೆದುಕೊಳ್ಳಬೇಕು. ತಮಗೆ ಪುಣ್ಯ ಬರುತ್ತದೆ. ಬ್ರಹ್ಮಾವರ ಷುಗರ್ ಫ್ಯಾಕ್ಟರಿಯಲ್ಲಿ 10 ಕೋಟಿ ರೂಪಾಯಿಗಳನ್ನು ಸರ್ಕಾರದವರು, ರೈತರು ಮತ್ತು ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್‌ಗಳವರು ಹಾಕಿದ್ದಾರೆ. ಇದಕ್ಕೂ ಅದಕ್ಕೂ ಇಂಟರ್‌ಲಿಂಕಿಂಗ್ ಅನ್ನು ಅವತ್ತು ಸರ್ಕಾರ ಕಲ್ಪನೆ ಮಾಡಿದಂಥದ್ದು ಅದಕ್ಕೋಸ್ಕರ ನೀವಾದರೂ ಇದನ್ನು ಕೈಗೆ ಎತ್ತಿಕೊಳ್ಳಬೇಕೆನ್ನುವಂಥ ವಿಚಾರವನ್ನು ಹೇಳುತ್ತೇನೆ. ಇನ್ನು ಪಿಡಬ್ಲ್ಯೂಡಿ ವಿಚಾರದಲ್ಲಿ ಹೇಳಬೇಕಾದರೆ, ಅನೇಕ ಕಾಮಗಾರಿಗಳು ಸಂಪೂರ್ಣವಾಗಿ ಆಗಿಲ್ಲವೆಂದು ಕಾಣುತ್ತದೆ. ನಮಗೆ ಕೊಟ್ಟಿರುವ ವರದಿಯಲ್ಲಿ ಸಂಪೂರ್ಣವಾಗಿ ಆಗಿಲ್ಲವೆನ್ನುವುದಕ್ಕೆ ಕೆಲವೊಂದು ಉದಾಹರಣೆಗಳನ್ನು ಕೊಡುತ್ತೇನೆ.

ಗ್ರಾಮಾಂತರ ಬೃಹತ್ ರಸ್ತೆ ಯೋಜನೆಗಳ ಕಾರ್ಯಕ್ರಮ 500 ಸಂಖ್ಯೆಯಲ್ಲಿ ಆಗಬೇಕಾದ ಕಡೆ ಸಾಧನೆ ಆಗಿರುವುದು ಕೇವಲ 178. ಐ.ಸಿ.ಡಿ.ಸಿ. ರಸ್ತೆಗಳು1973ಕ್ಕೆ ಸಾಧನೆ ಆಗಿರುವುದು 37. ಅದೇರೀತಿಯಲ್ಲಿ ಸುಮಾರು ಕಾರ್ಯಕ್ರಮಗಳು ಬಾಕಿ ಇವೆ. ಜಿಲ್ಲಾ ಯೋಜನೆಗಳು 1979 ಲಕ್ಷದ ಬದಲಿಗೆ 848 ಲಕ್ಷ ಖರ್ಚು ಆಗಿದೆ. 1207 ಲಕ್ಷ ರೂಪಾಯಿಗಳು ಗ್ರಾಮೀಣ ರಸ್ತೆಗಳಿಗೆಂದು ಖರ್ಚಾಗಬೇಕಾಗಿತ್ತು. ಆದರೆ ಖರ್ಚಾಗಿರುವುದು 705 ಲಕ್ಷ ರೂಪಾಯಿಗಳು ಮಾತ್ರ. ಜಿಲ್ಲಾ ಯೋಜನೆಗಳು, ರಾಜ್ಯದ ಯೋಜನೆಗಳು ಎಲ್ಲದರಲ್ಲೂ ಹಾಗೆಯೇ. ಹಣ ಉಳಿಯುತ್ತದೆ, ಆದರೆ ಹಣ ಇಲ್ಲವೆಂದು ಹೇಳುತ್ತಾರೆ. ಇರತಕ್ಕ ಅಲೋಕೇಷನ್ ಏನಿದೆ ಅದನ್ನು ಸಹ ಖರ್ಚು ಮಾಡಲಿಲ್ಲ. ಜಿಲ್ಲಾ ಮಟ್ಟದ ರಸ್ತೆಗಳು 1833 ಕಿಲೋಮೀಟರ್ ಇದ್ದರೆ 773 ಕಿಲೋಮೀಟರ್ ಮಾತ್ರ ಆಗಿದೆ. ಹಳ್ಳಿ ಹೆದ್ದಾರಿಗೆ 117 ಲಕ್ಷ ರೂಪಾಯಿ ಖರ್ಚು ಮಾಡಿ 27 ಹಳ್ಳಿಗಳಿಗೆ ಸರ್ವಋತು ರಸ್ತೆ ಸಂಪರ್ಕ ಒದಗಿಸಿದೆ. ಸೇತು ಬಂಧನ ಯೋಜನೆಯ ಅಡಿಯಲ್ಲಿ 67 ಅಡ್ಡಮೋರಿಗಳನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಮಾಡಲಾಗಿದೆ. ಗ್ರಾಮಾಂತರ ಸಂಪರ್ಕ ರಸ್ತೆಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 6 ಕಿಲೋಮೀಟರ್ ರಸ್ತೆ ಆಗಿದೆ. ಗ್ರಾಮಾಂತರ ಸರಹದ್ದಿನಲ್ಲಿರುವ ರಸ್ತೆಗಳಿಗೆ ಡಾಮರ್ ಹಾಕುವ ಕಾರ್ಯಕ್ರಮದಲ್ಲಿ 30 ಕಿಲೋಮೀಟರ್ ರಸ್ತೆಗೆ ಡಾಮರ್ ಮಾಡಲಾಗಿದೆ. ಜನರು ಭಾಗವಹಿಸುವ ರಸ್ತೆ 9 ಕಿಲೋಮೀಟರ್ ಆಗಿದೆ. ಅದು ನನ್ನ ಕ್ಷೇತ್ರದಲ್ಲಿ ಒಂದು ಇದೆ. ಗ್ರಾಮಾಂತರ ಜನರು ಭಾಗವಹಿಸುವ ರಸ್ತೆ ಬಗ್ಗೆ ಹೇಳುತ್ತಾರೆ, ಇದರಲ್ಲಿ ಮಣ್ಣಿನ ಕೆಲಸದ ಶೇಕಡ 25 ಇಷ್ಟನ್ನು ಜನರು ಮಾಡಿದರೆ ಉಳಿದದ್ದು ಸರ್ಕಾರ ಮಾಡುತ್ತದೆ. ಮಣ್ಣಿನ ಕೆಲಸವನ್ನು ಜನರು ಯಾವತ್ತೋ ಮಾಡಿದ್ದಾರೆ. ಇವತ್ತು ಹೇಳುತ್ತಿದ್ದಾರೆ, ಸಂಪೂರ್ಣ ಕೆಲಸದ ಶೇಕಡ 25 ರಷ್ಟು ಹಣವನ್ನು ಡಿಪಾಸಿಟ್ ಮಾಡಿ ಎಂದು. ಇದನ್ನು ಇಂಜಿನಿಯರ್‌ಗಳ ಗಮನಕ್ಕೆ ತಂದಿದ್ದೇನೆ. ಆದರೂ ಈ ಕೆಲಸ ಆಗುತ್ತಿಲ್ಲ. ಇನ್ನು ಪವರ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿ, ವಾರ್ತಾ ಇಲಾಖೆ ಕುರಿತು ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. ಪವರ್ ಕುರಿತು ಹೇಳುವುದಾದರೆ, ರೈತರಿಗೆ ರಿಯಾಯಿತಿ ಕೊಟ್ಟದ್ದು ಸಂತೋಷ. ಆದರೆ ಕರೆಂಟ್ ಇರುವುದಿಲ್ಲವಲ್ಲ ಸ್ವಾಮಿ? ಮಧ್ಯೆ ಮಧ್ಯೆ ಹೋಗುತ್ತಿರುತ್ತದೆ. ಅದರ ಉಪಯೋಗ ರೈತರಿಗೆ ಸರಿಯಾಗಿ ಆಗುತ್ತಿಲ್ಲ. ಲೋ ಓಲ್ಟೇಜ್ ನಿಂದಾಗಿ ಮೀಟರ್ ಬರ್ನ್ ಆಗುವ ಸಮಸ್ಯೆ ಇದೆ. ನಮ್ಮ ಬೈಂದೂರಿನಲ್ಲಿ ಸಬ್ ಸ್ಟೇಷನ್ ಕೆಲಸ ಮಧ್ಯದಲ್ಲಿಯೇ ನಿಂತಿದೆ. ವಿಳಂಬವಾದರೆ ತೊಂದರೆಯಾಗುತ್ತದೆ. ಅದೇ ರೀತಿ ಇನ್ನೂ 3-4 ಊರುಗಳಿಗೆ ಸಬ್‌ಸ್ಟೇಷನ್ ಬೇಕೆಂಬ ಪ್ರಪೋಸಲ್ ಇದೆ. ಇನ್ನು ಮಿನಿ ಹೈಡಲ್ ಪ್ರಾಜೆಕ್ಟ್ ವಿಚಾರ ಹೇಳಿದರು. ದಕ್ಷಿಣ ಕನ್ನಡ. ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅನೇಕ ಜಲಪಾತಗಳಿವೆ. ಅವುಗಳಿಂದ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ,. ಉತ್ಪಾದನೆ ಮತ್ತು ವಿತರಣೆಯಲ್ಲಿ ಸಾಮರಸ್ಯ ಇರಬೇಕು. ಅದೆಲ್ಲವನ್ನೂ ಮಾನ್ಯ ರಾಮಪ್ಪನವರು ತಮ್ಮ ಚಿಂತನೆಯಿಂದ ಸರಿಪಡಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇನ್ನು ವಾರ್ತಾ ಮತ್ತು ಪ್ರವಾಸೋದ್ಯಮದ ಬಗ್ಗೆ ಅನೇಕ ವಿಚಾರಗಳಿವೆ. ಪತ್ರಿಕೋದ್ಯಮದಲ್ಲಿ ತರಬೇತಿ, ವಸ್ತು ಪ್ರದರ್ಶನ, ಪತ್ರಕರ್ತರ ಮಾಸಾಶನ, ಬಡಬಗ್ಗರಿಗೆ ಮಾಸಾಶನ, ಚಲನಚಿತ್ರಗಳಿಗೆ ಸಹಾಯಧನ, ಸಾಕ್ಷ್ಯಚಿತ್ರ, ಕಣಗಾಲ್ ಪುಟ್ಟಣ್ಣ ಪ್ರಶಸ್ತಿ, ಹೀಗೆ ಬಹಳ ಅಮೋಘ ಕಾರ್ಯಕ್ರಮಗಳು ಇವೆ.. ಆದರೆ ಚಲನಚಿತ್ರೋತ್ಸವ ಬೆಂಗಳೂರಿನಲ್ಲಿ ನಡೆದದ್ದು ಶಾಸಕರಿಗೆ ಗೊತ್ತಾಗಲಿಲ್ಲ. ಏತಕ್ಕೆ ಹೀಗೆ ಮಾಡಿದರು ಎಂದು ಗೊತ್ತಿಲ್ಲ. ನಮಗೆ ಆಹ್ವಾನ ಕೊಟ್ಟಿದ್ದರೆ ನಾವು ಕಣ್ಣಲ್ಲಿ ನೋಡಿ ಆನಂದಿಸುತ್ತಿದ್ದೆವು. ಕರ್ನಾಟಕ ಕಲಾವಿದರು ಅದರಲ್ಲಿ ಭಾಗವಹಿಸಲಿಲ್ಲವೆಂದು ಕೇಳಿದೆ. ಇಲ್ಲಿ ನಡೆದ ಚಲನಚಿತ್ರೋತ್ಸವ ಕರ್ನಾಟಕ ಚಲನಚಿತ್ರ ರಂಗಕ್ಕೆ ಒಂದು ಹೊಸ ತಿರುವು ಕೊಡುವ ಕಾರ್ಯಕ್ರಮವಾಗಬೇಕಾಗಿತ್ತು. ಹಾಗೆ ಆಗದೆ ಖರ್ಚು ಮಾಡಿದ ಹಣ ವ್ಯರ್ಥವಾಗಿದ್ದು ಅಷ್ಟೇ ಬೇಸರ. ಪ್ರವಾಸೋದ್ಯಮ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಬಹಳಷ್ಟು ಆಕರ್ಷಣೀಯ ಸ್ಥಳಗಳು ಇವೆ. ಇವತ್ತಿನ ದಿವಸ ನಾವು ಕೇರಳಕ್ಕೆ, ತಮಿಳ್ನಾಡಿಗೆ ಹೋದರೆ ಅಲ್ಲಿ ನೋಡುವುದಕ್ಕೆ ಬಹಳ ಸಂತೋಷವಾಗುತ್ತದೆ. ಮಾನ್ಯ ಮಂತ್ರಿಗಳು ನಮ್ಮ

ಭಾಗದಲ್ಲಿರತಕ್ಕ ಮರವಂತೆಯನ್ನು ಅಭಿವೃದ್ಧಿಪಡಿಸಲಾಗುವುದೆಂದು ಹೇಳಿದರು. ಆದರೆ ಅದು ಈ ಪುಸ್ತಕದಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಒಂದು ಕಡೆ ಸಮುದ್ರ, ಮತ್ತೊಂದು ಕಡೆಹೊಳೆ, ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದಂತಹ ಒಂದು ಪ್ರದೇಶ. ಅದನ್ನು ಅಭಿವೃದ್ಧಿಪಡಿಸಲು ಏತಕ್ಕೆ ಡಿಲೇ ಆಗುತ್ತಿದೆ? ಕೆ.ಎಸ್.ಟಿ.ಡಿ.ಸಿ. ಬಸ್ಸುಗಳು ಏನಿವೆ ಅವನ್ನೂ ಕೂಡ ಇಂಪ್ರೂವ್ ಮಾಡಬೇಕು. ಇವತ್ತಿನ ದಿವಸ ಜೋಗ್ ನೋಡಿದರೆ ಬಹಳ ಬೇಸರವಾಗುತ್ತದೆ. ಅಲ್ಲಿರತಕ್ಕ ಗೆಸ್ಟ್ ಹೌಸ್ ನೋಡಿದರೆ ಅದನ್ನು ಗೆಸ್ಟ್ ಹೌಸ್ ಎಂದುಕೊಳ್ಳುವುದಕ್ಕೆ ಬೇಸರವಾಗುತ್ತದೆ. ಇನ್ನು ಮಾನ್ಯ ಅಧ್ಯಕ್ಷಿಣಿಯವರು ಎರಡನೇ ಬೆಲ್ ಹೊಡೆಯುವುದಕ್ಕೆ ಮುಂಚೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಸಂಗೀತಪ್ರಿಯರು ಮತ್ತು ಸಾಹಿತ್ಯಪ್ರಿಯರು. ಪ್ರವಾಸಿ ಕೇಂದ್ರಗಳಲ್ಲಿ ಸಂಗೀತ, ನೃತ್ಯ ಕಾರ್ಯಕ್ರಮಗಳು, ಜನಪದ ಕಲೆಯ ಪ್ರದರ್ಶನ, ಶಿವ ತಾಂಡವ ನೃತ್ಯ ಇವೆಲ್ಲ ಶಿವಮೂರ್ತಿಯವರ ಕಾಲದಲ್ಲಿ ಆಗಬೇಕು. ಮಲ್ಲಾರಿಗೌಡರ ಕಾಲದಲ್ಲಿ ನೀರಾವರಿ ಸೌಲಭ್ಯ ದೊರಕಿಸಿ ಜನರಿಗೆ ತಂಪು ಕೊಡಬೇಕು. ಚಿಕ್ಕ ನೀರಾವರಿ ಸಚಿವರಾದ ಶ್ರೀ ಮಲ್ಲಿಕಾರ್ಜುನ ಪ್ರಸನ್ನರ ಕಾಲದಲ್ಲಿ ನಾಡು ಪ್ರಸನ್ನವಾಗಬೇಕು. ಅಸ್ವಸ್ಥವಾಗಿರತಕ್ಕ ರಸ್ತೆಗಳು ಅಶ್ವತ್ಥರೆಡ್ಡಿಯವರ ಕಾಲದಲ್ಲಿ ಸ್ವಸ್ತವಾಗಬೇಕು. ರಾಮಪ್ಪನವರ ಕಾಲದಲ್ಲಿ ದೀಪದ ಬೆಳಕು ಪ್ರಜ್ವಲಿಸುವಂತೆ ಆಗಬೇಕು. ಈ ಎಲ್ಲಾ ಕಾರ್ಯಗಳು ನಿರಂತರವಾಗಿ ನಡೆಯಲಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಕೆ. ಶಾಮಣ್ಣ(ಶೃಂಗೇರಿ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿವಸ ಈ ಸದನದಲ್ಲಿ, ಇಟ್ಟಿರುವಂಥ ದೊಡ್ಡ ನೀರಾವರಿ, ಸಣ್ಣ ನೀರಾವರಿ, ಲೋಕೋಪಯೋಗಿ, ವಿದ್ಯುಚ್ಛಕ್ತಿ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಈ ಇಲಾಖಾ ಮಂತ್ರಿಗಳು ಮಂಡಿಸಿದ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನನಗೆ ಕೊನೇ ಗಳಿಗೆಯಲ್ಲಿ ನಾಲ್ಕು ಮಾತುಗಳನ್ನು ಆಡುವುದಕ್ಕೆಅವಕಾಶ ಕೊಟ್ಟಿರುವ ಉಪಾಧ್ಯಕ್ಷಿಣಿಯವರಿಗೆ ಮತ್ತೊಮ್ಮೆ ವಂದಿಸುತ್ತಾ ನಾನು ಒಂದೆರಡು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಈಗಾಗಲೇ ಈ ಕೆ.ಇ.ಬಿ. ಇಲಾಖೆ ಬಗ್ಗೆ ಹಿರಿಯ ನುರಿತ ರಾಜಕಾರಿಣಿ ಹಾಗೂ ಇಲಾಖಾ ಮಂತ್ರಿಯಾಗಿರುವ ಶ್ರೀಮಾನ್ ರಾಮಪ್ಪನವರು ನನ್ನ ಕ್ಷೇತ್ರವಾದ ಶೃಂಗೇರಿಗೆ ಈಗಾಗಲೇ ಒಂದು ತಿಂಗಳ ಹಿಂದೆ ಪ್ರವಾಸ ಬಂದು ಬಹಶಃ ಅಲ್ಲಿಯ ಕಹಿ ಸಿಹಿಯನ್ನು ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ತಪ್ಪಿಲ್ಲ. ಬಹುಶಃ ಅವರು ಬಂದ ಸಂದರ್ಭದಲ್ಲಿ ಅವರಿಗೆ ಅಭೂತಪೂರ್ವವಾದ ಸ್ವಾಗತವನ್ನು ನೀಡುವುದರ ಜೊತೆಗೆ ಕೆ.ಇ.ಬಿ. ಇಲಾಖೆಯ ಕುಂದುಕೊರತೆಗಳನ್ನು ನನ್ನ ಕ್ಷೇತ್ರದ ಹಾಗೂ ಜಿಲ್ಲೆಯ ಎಲ್ಲಾ ಭಾಗದ ಕುಂದುಕೊರತೆಗಳನ್ನು ಅವರಲ್ಲಿ ನಿವೇದಿಸಿಕೊಂಡಿದ್ದೇವೆ. ಸಂಪೂರ್ಣವಾಗಿ ನಾನು ಎಲ್ಲವನ್ನೂ ಮಾಡಿಕೊಡುತ್ತೇನೆ ಎಂದು ಹೇಳುವಂಥ ಮಾತನ್ನು ಅವರು ಹೇಳಿ ಬಂದಿದ್ದರು. ಮಾರ್ಚಿ 4 ನೇ ತಾರೀಖಿನ ದಿವಸ ರಾಷ್ಟ್ರದ ಪ್ರಥಮ ಪ್ರಜೆಯಾಗಿರುವ ಪ್ರಸಿಡೆಂಟ್ ಆಫ್ ಇಂಡಿಯಾ ವೆಂಕಟರಾಮ್ ಅವರು ನಮ್ಮ ಶೃಂಗೇರಿಗೆ ಬಂದ ಸಂದರ್ಭದಲ್ಲಿ ಬಹುಶಃ ಇದೆಲ್ಲವನ್ನೂ ಸಂಪೂರ್ಣವಾಗಿ ಈಡೇರಿಸುತ್ತಾರೆ, ಆಗುತ್ತದೆ ಎಂದು ಭಾವಿಸಿಕೊಂಡಿದ್ದೆವು. ಆದರೆ ಬಹುಶಃ ಆ ದಿವಸ ನಮಗೆ ಬಹಳ ನೋವನ್ನು ತಂದಿರುವ ದಿವಸ ಎಂದರೆ ತಪ್ಪಿಲ್ಲ. ಶೃಂಗೇರಿ ಊರಿನಲ್ಲಿ ಪ್ರಮುಖ ದ್ವಾರಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ಬಂದ್ ಆಚರಿಸಿ ಸಾರ್ವಜನಿಕರು ಬಹಳ ವಿಷಾದವನ್ನು ವ್ಯಕ್ತಪಡಿಸಿದರು. ಕಾರಣ ಈ ವಿದ್ಯುತ್ ಅಭಾವ ಅದನ್ನು ತಿಳಿದು ಈ ಹಿಂದೆ 2 ದಿವಸ ನಾವು ಕರ್ನಾಟಕ ಸರ್ಕಾರದ ಕಾರ್ಯದರ್ಶಿಯವರು ಹಾಗೂ ಮಂತ್ರಿಯವರ ಆದೇಶದಂತೆ ಚೀಫ್ ಇಂಜಿನಿಯರ್ ಅವರು ಎಲ್ಲರೂ ಬಂದು ಶೃಂಗೇರಿಗೆ ಬೇಕಾಗಿರುವ ವಿದ್ಯುಚ್ಛಕ್ತಿ ಕೊರತೆ ಕೇಳಿದಾಗ ದಿವಸದಲ್ಲಿ 23 ಗಂಟೆಗಳ ಕಾಲ ಕರೆಂಟ್ ಇಲ್ಲದಿರುವ ದಿವಸಗಳನ್ನು ಸಹ ನಾವು ಸಂಪೂರ್ಣವಾಗಿ ಹೇಳಿದ್ದೇವೆ. ಆದರೆ ಒಂದು ಗಂಟೆಯಾದರೂ ಸಂಪೂರ್ಣವಾಗಿ ಇದೆಯೇ ಎಂದರೆ ಅದರಲ್ಲೂ 8-10 ಸಾರಿ ಡಿಸ್‌ಕನೆಕ್ಟ್ ಆಗುವ ವ್ಯವಸ್ಥೆ ಸಹ ಇತ್ತು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಲೆನಾಡು

ಭಾಗವಾದ ಶೃಂಗೇರಿ ಕ್ಷೇತ್ರ ಚಿಕ್ಕಮಗಳೂರು ಜಿಲ್ಲೆ ಇಂಡಸ್ಟ್ರಿಯಲ್ ಏರಿಯಾ ಅಲ್ಲ ಎಂದು ಹೇಳುವ ಪ್ರಶ್ನೆ ಇಲ್ಲ. ಕಾಫಿ ಬೆಳೆಗಾರರ ಸಮೂಹ ಇರುವಂಥ ಪ್ರದೇಶ ಇರುವುದರಿಂದ ಸ್ಪ್ರಿಂಕ್ಲರ್ ಮತ್ತು ಪಲ್ಪರಿನ್ ಕೆಲಸವನ್ನು ಮಾಡುವಂಥ ವ್ಯವಸ್ಥೆ ಎಲೆಕ್ಟ್ರಿಕಲ್ ಸೌಲಭ್ಯಗಳ ಮೂಲಕವಾಗಿ ಆಗುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಬಹಳ ತೊಂದರೆಯಾಗಿದೆ. ವಿದ್ಯಾರ್ಥಿಗಳು ಸಹ ಅಂದಿನ ಪ್ರೊಸೆಷನ್‌ನಲ್ಲಿ ಭಾಗವಹಿಸಿದ್ದರು. ಏಕೆಂದರೆ ಓದುವುದಕ್ಕೆ ಮನೆಯಲ್ಲಿ ದೀಪ ಇಲ್ಲ. ಸೀಮೆಎಣ್ಣೆ ವ್ಯವಸ್ಥೆ ಸರಿಯಿಲ್ಲ ಎಂಬ ದೃಷ್ಟಿಯಿಂದ ಅವರೂ ಸಹ ಪಾರ್ಟಿಸಿಪೇಟ್ ಮಾಡಿದ್ದರು. ಪಕ್ಷಾತೀತವಾಗಿ ಆವತ್ತು ಬಂದ್ ಆಚರಿಸಿದ್ದಾರೆ ಎಂದು ಈ ಸಂದರ್ಭದಲ್ಲಿ ನೆನೆಸಿಕೊಂಡು ಅವತ್ತಿನ ದಿವಸ ರಾಮಪ್ಪನವರು ನಮ್ಮ ಬೇಡಿಕೆಯಾದ ಬಾಳೆಹೊನ್ನೂರಿನಿಂದ ಶೃಂಗೇರಿಗೆ ಎಕ್ಸ್‌ಪ್ರೆಸ್ ಲೈನ್ ಹಾಕಿಕೊಡಬೇಕೆಂದು ಏನಿತ್ತು, ಈಗಾಗಲೇ ಅದು ಮಂಜೂರಾತಿಯಾಗಿದೆ, ಅದನ್ನು ಕೂಡಲೇ ಪ್ರಾರಂಭ ಮಾಡಿ ಇನ್ನು ಒಂದು ತಿಂಗಳಲ್ಲಿ ಆ ಕಾರ್ಯವನ್ನು ಮಾಡಿಸುತ್ತೇವೆಂದು ಹೇಳಿದ್ದಾರೆ. ಪುನಃ ಅದನ್ನು ನೆನೆಸುವುದು ಉತ್ತಮ ಎಂದು ಭಾವಿಸಿಕೊಂಡು ಈ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಪ್ರೆಸಿಡೆಂಟ್ ಆಫ್ ಇಂಡಿಯಾ ಈ ತಿಂಗಳು ಬಂದಿದ್ದರು. ಮುಂದಿನ ತಿಂಗಳು ಪ್ರೈಮ್ ಮಿನಿಸ್ಟರ್ ಆಫ್ ಇಂಡಿಯಾ ಬರುತ್ತಿದ್ದಾರೆ ಎಂದು ಹೇಳುವ ಶುಭ ಸೂಚನೆ ಸಹ ನಮಗೆ ಇದೆ. ಬಹುಶಃ ಅವರು ಬರುವ ದಿವಸ ಮಾತ್ರ ವಿದ್ಯುತ್ ವ್ಯವಸ್ಥೆ ಮಾಡಿದರೆ ಖಂಡಿತ ನೋವಾಗುತ್ತದೆ. ಶಿವಮೊಗ್ಗ ಟಿ.ವಿ.ಸೆಂಟರ್ ಪ್ರಾರಂಭವಾಗಿ ಈಗಾಗಲೇ ಒಂದು ತಿಂಗಳಾಗಿದೆ. ಟಿ.ವಿ.ನೋಡಬೇಕೆಂದು ಎಲ್ಲರಿಗೂ ಆಸಕ್ತಿ. ಆದರೆ ಕರೆಂಟ್ ಇಲ್ಲ. ಬೇರೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದಯಮಾಡಿ ಎಕ್ಸ್‌ಪ್ರೆಸ್ ಲೈನ್ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೇ ಕೊಪ್ಪದಲ್ಲಿ ಕೆ.ಇ.ಬಿ. ಸಬ್ ಡಿವಿಷನ್ ಮಾಡಿದ್ದಾರೆ. ಅಲ್ಲಿ ವೆಹಿಕಲ್ ಕೊಡಬೇಕೆಂದಿದ್ದರೆ ಒಂದು ಹಳೇ ಜೀಪು ಒಂದು ಹಳೇ ಲಾರಿ ಕೊಟ್ಟಿದ್ದಾರೆ. ಹೊಸ ಸಬ್‌ಡಿವಿಷನ್‌ನಲ್ಲಿ ಕೊಡುವಾಗ ವಾಹನಗಳನ್ನು ಬದಲಾಯಿಸಿ ಕಳುಹಿಸುವಂಥ ವ್ಯವಸ್ಥೆಯನ್ನು ತಾವು ಬಿಡಬೇಕು. ಮತ್ತು ಹೊಸ ವೆಹಿಕಲ್ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ರಾಮಪ್ಪನವರಿಗೆ ಅವರು ಬಂದಾಗ ಕೆ.ಇ.ಬಿ. ಇಲಾಖೆಯವರೂ ಹೇಳಿದ್ದಾರೆ. ಮರದ ಕಂಬಗಳನ್ನು ನಮ್ಮ ಪ್ರದೇಶದಲ್ಲಿ ಹಾಕಿದ್ದಾರೆ. ಒಂದು ಸಾವಿರ ಮರದ ಕಂಬಗಳ ಕೊರತೆ ಇದ್ದುದನ್ನು ತುಂಬಿಸಬೇಕಾಗಿದೆ. ಅದನ್ನು ಈಡೇರಿಸಿಕೊಡುತ್ತೇನೆಂಬ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಈಡೇರಿಸದೇ ಇದ್ದರೆ ಏನು ತೊಂದರೆಯಾಗುತ್ತದೆಂದರೆ ಇನ್ನು ಎರಡು ತಿಂಗಳಲ್ಲಿ ಮಳೆಗಾಲ ಶುರುವಾಗುತ್ತದೆ. ಮಳೆಯಲ್ಲಿ ಬಹುಶಃಮರದ ಕಂಬಗಳು ತೇಲಾಡುತ್ತವೆ. ಗಾಳಿಗೆ ಇವತ್ತು ಅವು ಅಲ್ಲಾಡುತ್ತಿವೆ. ದಯಮಾಡಿ ಇವುಗಳ ಮೂಲಕ ಆಗುವ ಅಘಾತವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇನ್ನು ಹರಿಜನ ಬಸ್ತಿಗಳಿಗೆ ದೀಪದ ವ್ಯವಸ್ಥೆ ಮಾಡುವ ಬಗ್ಗೆ ಶ್ರೀಮತಿ ಮೋಟಮ್ಮನವರು ಕೇಳಿದ್ದಾರೆ. ನಮ್ಮಲ್ಲಿ ಇರುವ 294 ಹರಿಜನ ಹ್ಯಾಮ್ಲೆಟ್‌ಗಳಲ್ಲಿ ಕೇವಲ 68 ಕ್ಕೆ ಮಾತ್ರ ದೀಪದ ವ್ಯವಸ್ಥೆ ಆಗಿದೆ. ಆದ್ದರಿಂದ ದಯಮಾಡಿ ವಿದ್ಯುತ್ ಸೌಲಭ್ಯವನ್ನು ಇನ್ನುಳಿದ ಬಸ್ತಿಗಳಿಗೆ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ನ್ಯಾಷನಲ್ ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮ್ ಸೌಲಭ್ಯ ನಮ್ಮ ಮಲೆನಾಡು ಭಾಗಕ್ಕೆ ಸಿಕ್ಕಿಲ್ಲ. ಆದಷ್ಟು ಜಾಗ್ರತೆ ಅದನ್ನು ಪಡೆಯಬೇಕೆಂದು ಹೇಳುತ್ತೇನೆ. ಇನ್ನು ನಾನು ಸಣ್ಣ ನೀರಾವರಿ ಇಲಾಖೆ ಬಗ್ಗೆ ಒಂದೆರಡು ಬೇಡಿಕೆಗಳನ್ನು ಇಡುತ್ತೇನೆ. ಬಹುಶಃ ಕೈಯ್ಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪವನ್ನು ಹುಡುಕುತ್ತಿದ್ದೇವೆ. ಆದರೆ ತುಪ್ಪ ಬಿಸಿಯಾಗಿದೆ. ಕಾರಣ, ನಮ್ಮ ಜಿಲ್ಲಾ ಮಂತ್ರಿಗಳಾದ ಮಲ್ಲಿಕಾರ್ಜುನ ಪ್ರಸನ್ನ ಅವರೇ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಬಹುಶಃ ಅವರು ಯಾವತ್ತೂ ಇಲ್ಲ ಎಂದು ಹೇಳಿಲ್ಲ. ಆದರೆ ಕೆಲಸ ಆಗಿಲ್ಲ. ಈ ಸಾಲಿನಲ್ಲಿ ಮಾಡಿಕೊಡುತ್ತೇನೆಂದು ಹೇಳಿದ್ದಾರೆ. ಸ್ವಲ್ಪ ಭಾಗ ಹಣ ಇಟ್ಟಿದ್ದೇವೆಂದು ಹೇಳಿದ್ದಾರೆ. ಖಂಡಿತಾ ಕೋಟಿ ಬೇಡ . ಕೆಲವೇ ಲಕ್ಷಗಳನ್ನು ಕೊಟ್ಟರೆ ಊರಿನಲ್ಲಿರುವ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎಂದು

ಕೇಳುತ್ತೇನೆ. ಇವತ್ತು ಎನ್‌ಆರ್ ಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ, ಒಂದು ಪ್ರದೇಶದಲ್ಲಿ ಸುಮಾರು 500 ಎಕರೆ ಪ್ರದೇಶಕ್ಕೆ ನೀರುಣಿಸುವ ಒಂದು ಪ್ರದೇಶ ಇದೆ ಮೊನ್ನೆ ಈ ಯೋಜನೆ ಬಗ್ಗೆ ಕೇಳಿದಾಗ ಅವರ ಖಾತೆಯಲ್ಲೇ ಅದು ಬರುತ್ತದೆ ಎಂದು ಅವರು ಹೇಳಿದರು. ಮತ್ತೆ ಇದು ಶಿವಣ್ಣನವರ ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ ಎಂದು ಹೇಳಿದರು. ಇದು ಯಾವ ಇಲಾಖೆಯಲ್ಲಿಯೇ ಇರಲಿ ಇವತ್ತು ಎಲೆಕ್ಟ್ರಿಸಿಟಿ ಕೊಟ್ಟರೆ ಸಾಕು. ಛಾನಲ್ ಸರಿಮಾಡಿದರೆ ಕೇವಲ ಕೆಲವೇ ಸಾವಿರ ರೂಪಾಯಿಗಳಲ್ಲಿ ಈ ಕೆಲಸ ಆಗುತ್ತದೆ ಆ ಒಂದು ವ್ಯವಸ್ಥೆಯಲ್ಲಿ ಅದು ನಿಂತಿದೆ. ಇದನ್ನು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಹಾಗೆಯೇ ಇವತ್ತು ಅಪ್ಪರ್ ತುಂಗ ಬಗ್ಗೆ ಮಾನ್ಯ ಕುನ್ನೂರ್‌ರವರು ಹೇಳಿದ್ದಾರೆ. ನಾವು ಬಹುಶಃ ದುಃಖಿತಪ್ತರಾಗಿದ್ದೇವೆ. ಏಕೆಂದರೆ ಎನ್ ಆರ್ ಪುರ ತಾಲ್ಲೂಕಿನ ಬಹಳ ಜಾಗ ಸಬ್‌ಮರ್ಸಿಬಲ್ ಏರಿಯಾಕ್ಕೆ ಬರುತ್ತದೆ. ಇವತ್ತು ಏನು ಒಂದು ಜಾಗ ಮುಳುಗಡೆ ಆಗುತ್ತದೆ ಅಲ್ಲಿಗೆ ಪರಿಹಾರವನ್ನು ಮೊದಲು ಕೊಟ್ಟು ರೀಹ್ಯಾಬಿಲೇಷನ್ ಮಾಡಬೇಕೆಂದು ಕೇಳುತ್ತಾ, ಮಾನ್ಯ ಶಿವಮೂರ್ತಿಯವರ ಟೂರಿಸಂ ಬಗ್ಗೆ ಒಂದೇ ಒಂದು ಬೇಡಿಕೆಯನ್ನು ಇಡುತ್ತಿದ್ದೇನೆ. ಶೃಂಗೇರಿಯಲ್ಲಿ ಅನೇಕ ವರ್ಷಗಳಿಂದ ಮಂಜೂರಾಗಿರುವ ಹೋಟೆಲ್, ಟೂರಿಸಂ ಹೋಟೆಲ್ ಕಟ್ಟಡದ ಕೆಲಸ ಪ್ರಾರಂಭವಾಗಿ 10 ವರ್ಷಗಳೇ ಕಳೆದಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಇದಕ್ಕೆ ಕಾರಣ ಏನೆಂಬುದು ಗೊತ್ತಾಗಿಲ್ಲ. ಕಂಟ್ರಾಕ್ಟರ್ ಟೆಂಡರ್ ಪ್ರಾಬ್ಲಮ್‌ನಿಂದ ಕೆಲಸ ಹಿಂದೆ ಬಿದ್ದಿದೆಯೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಈಗಿನವರೆಗೆ ಟೆಂಡರ್ ತಪ್ಪಿಸಿ ಬೇರೆಯವರಿಗೆ ಕೊಟ್ಟು ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ. ಮತ್ತು ಮಲೆನಾಡು ಪ್ರದೇಶದಲ್ಲಿರುವ ಕುಂದಾದ್ರಿ ಬೆಟ್ಟ ಬಹಶಃ ಉತ್ತಮವಾದ ಪ್ರವಾಸಿಗರ ಗಮನವನ್ನು ಸೆಳೆಯುವ ಪ್ರದೇಶವಾಗಿದೆ. ಜೈನ್‌ಮತ ಬಾಂಧವರ ಒಂದು ಪುಟ್ಟ ಪವಿತ್ರ ಕ್ಷೇತ್ರ ಆದಾಗಿರುವುದರಿಂದ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕು. ಇನ್ನು ಆಗುಂಬೆಯಲ್ಲಿರುವ ಒನಕೆಅಬ್ಬ, ಹೊರನಾಡು, ಬಾಬಾಬುಡನ್‌ಗಿರಿ, ಕೆಮ್ಮಣ್ಣುಗುಂಡಿ ಇವೆಲ್ಲವೂ ಉತ್ತಮ ಪ್ರದೇಶಗಳಾಗಿವೆ. ಇಲ್ಲಿಗೆ ಹೆಚ್ಚು ಪ್ರವಾಸಿಗಳನ್ನು ಆಕರ್ಷಿಸುವ ರೀತಿ ವ್ಯವಸ್ಥೆ ಮಾಡಬೇಕು. ನೀವು ಯುವಶಕ್ತಿಯಲ್ಲಿ ಸ್ಫೂರ್ತಿಯನ್ನು ಹೆಚ್ಚಿಸುತ್ತೀರೆಂದು ಹೇಳುತ್ತಾ, ಚಲನಚಿತ್ರೋತ್ಸವದ ಬಗ್ಗೆ ಬಹಳ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ನನಗೂ ಕೂಡಾ ನೋವು ಆಗಿದೆ. ಬಹುಶಃ ನಮ್ಮಲ್ಲಿ ಕೆಲವರಲ್ಲಿ ಚಲನಚಿತ್ರೋತ್ಸವ ನೋಡಬೇಕೆಂದು ಕಾಳಜಿ ಹೊಂದಿದ್ದರು. ಜನಪ್ರತಿನಿಧಿಗಳಾದ ಶಾಸಕರು ಇವತ್ತು ಬೀದಿಗೆ ಹೋಗಿ ಆಹ್ವಾನ ಪತ್ರಿಕೆ ಕೇಳುವುದು ಸರಿಯಲ್ಲವೆಂಬ ಮನಸ್ಸು ಇದ್ದುದರಿಂದ ದೃಢ ನಿರ್ಧಾರ ತೆಗೆದುಕೊಂಡು ನಾವು ಬರಲಿಲ್ಲ. ಎಷ್ಟು ಜನಕ್ಕೆ ಆಹ್ವಾನ ಪತ್ರಿಕೆ ಬಂದಿತ್ತೋ ಗೊತ್ತಿಲ್ಲ. ನಾವು ಚಿತ್ರೋತ್ಸವವನ್ನು ನೋಡಲೇ ಬೇಕೆನ್ನುವ ಪ್ರಶ್ನೆ ಇಲ್ಲ. ಆದರೆ ಆಹ್ವಾನ ಪತ್ರಿಕೆಯನ್ನು ಯಾವ ದೃಷ್ಟಿಯಿಂದ ಕೊಟ್ಟಿಲ್ಲ?

CHAIRMAN:- He was not incharge of Film Festival.

ಶ್ರೀ ಯು. ಕೆ. ಶಾಮಣ್ಣ:- ಆಹ್ವಾನ ಬಂದಿಲ್ಲ ಎಂದು ಮನನೊಂದು ಹೇಳುತ್ತಿದ್ದೇನೆ. ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳಬೇಕೆಂದರೆ ಇವತ್ತು ನಿಜವಾಗಿಯೂ ಮಂತ್ರಿಗಳಿಗೆ ವಂದಿಸಬೇಕಾಗಿದೆ. ಬಹುಶಃ ಇವತ್ತು ಮಲೆನಾಡು ಪ್ರದೇಶಕ್ಕೆ ಹೋದರೆ ಸ್ವಲ್ಪ ಭಾಗ ಲೋಕೋಪಯೋಗಿ ರಸ್ತೆಗಳು ಚೆನ್ನಾಗಿ ಇವೆ. ಅಲ್ಲಿ ರಸ್ತೆ ಪಕ್ಕದಲ್ಲಿ ಚರಂಡಿ ಕೆತ್ತಿಸಿದ್ದು ಸೈಡ್‌ನಲ್ಲಿ ಮಣ್ಣನ್ನು ಕೂಡಾ ಹಾಕಿದ್ದಾರೆ. ಏನೋ ಹೊಸ ಹುರುಪು ತಂದಿದ್ದಾರೆಂದು ಹೇಳುವ ಧೈರ್ಯ ನಮಗೆ ಇದೆ. ಕಾರಣ ಉತ್ತಮ ಲೋಕೋಪಯೋಗಿ ಮಂತ್ರಿಗಳು ಇದ್ದಾರೆ. ಉತ್ತಮ ಲೋಕೋಪಯೋಗಿ ಸೆಕ್ರೆಟರಿಯವರು ಇದ್ದಾರೆ. ಹಾಗೂ ಒಳ್ಳೆಯ ಮುಖ್ಯಮಂತ್ರಿಗಳು ಇದ್ದಾರೆ. ಹೀಗೆ ಎಲ್ಲರೂ ಒಳ್ಳೆಯವರಿದ್ದಾರೆಂದು ಹೇಳಿದರೆ ತಪ್ಪೇನೂ ಇಲ್ಲ. ಉತ್ತಮರು ಇದ್ದಾಗ ಉತ್ತಮ ಕೆಲಸ ನಡೆಯುತ್ತದೆಂದು ಹೇಳಿದರೆ ಅದಕ್ಕೊಂದು ಬೆಲೆ ಬರುತ್ತದೆಂದು ನಾನು ನಂಬಿಕೊಂಡಿದ್ದೇನೆ. ಈವೊಂದು ಬೇಡಿಕೆಯಲ್ಲಿ ಈ ಸಾಲಿನ ಬಜೆಟ್ ಪುಸ್ತಕದಲ್ಲಿ ನಮ್ಮದು ಯಾವುದೂ ಹೆಸರೇ ಇಲ್ಲ. ಇದೇನಪ್ಪ, ನಾವೆಲ್ಲಿ ಹೋಗುವುದೆಂದು ಯೋಚನೆ ಮಾಡಿದಾಗ, ನಮಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು

ಕೊಟ್ಟಿದ್ದಾರೆ. 50ಕಿಲೋಮೀಟರ್ ರಸ್ತೆಯನ್ನು ನಮಗೆ ಕೊಡುತ್ತೇವೆಂದು ಹೇಳಿದ್ದಾರೆ. ಅವರಲ್ಲಿ ನನ್ನ ಕಳಕಳಿಯ ಪ್ರಾರ್ಥನೆ ಏನೆಂದರೆ 650 ಕಿಲೋಮೀಟರ್ ರಸ್ತೆ ನನ್ನ ಮತದಾರ ಕ್ಷೇತ್ರದಲ್ಲಿ ಬರುತ್ತದೆ. ನನ್ನ ಮತದಾರ ಕ್ಷೇತ್ರ ಮೂರು ತಾಲ್ಲೂಕುಗಳನ್ನು ಹೊಂದಿದೆ. ದಯಮಾಡಿ ಈ ಮೂರು ತಾಲ್ಲೂಕುಗಳಿಗೂ 50 ಕಿಲೋಮೀಟರ್‌ನಂತೆ ರಸ್ತೆಗಳನ್ನು ಕೊಡಬೇಕು. ಮಲೆನಾಡುಪ್ರದೇಶ ಗುಡ್ಡಗಾಡು ಪ್ರದೇಶವಾಗಿರುವುದರಿಂದ ನಾನು ಈ ಸಲಹೆಯನ್ನು ಮಾಡುತ್ತಿದ್ದೇನೆ. ಇವತ್ತು ಪ್ರತಿ ಮತಕ್ಷೇತ್ರಕ್ಕೆ 40 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಬಹಳ ಸಂತೋಷ. ಈ ಕೆಲಸವನ್ನು ಬಜೆಟ್‌ನಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನು 80 ಲಕ್ಷಕ್ಕೆ ಹೆಚ್ಚು ಮಾಡಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಸ್ತೆಗಳಿಗೆ ಟಾರ್ ಮಾಡಿದ್ದಾರೆ. ಬಹಳ ಕಷ್ಟಪಟ್ಟು ಮಾಡುತ್ತಿದ್ದಾರೆ. ಅದಕ್ಕಾಗಿ ಒಂದು ಒಂದೂಕಾಲು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೆ ಕಳೆದ ಸಲ ಹಾಕಿರತಕ್ಕ ಟಾರು ಈ ಸಾಲಿನಲ್ಲಿ ಎದ್ದುಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾನು ಅದನ್ನು ಗಮನಿಸಿದ್ದೇನೆ. ಮಲೆನಾಡು ಪ್ರದೇಶದಲ್ಲಿ ಮಳೆ ಜಾಸ್ತಿಯಿರುವುದರಿಂದ, ಟಾರ್ ಹಾಕುವ ವ್ಯವಸ್ಥೆ ಸರಿಯಿಲ್ಲದಿರುವುದರಿಂದ, ಸೂಪರ್‌ವಿಷನ್ ಸಹ ಸರಿಯಿಲ್ಲದಿರುವುದರಿಂದ, ಇಂಜಿನಿಯರ್ ಸಹ ಆ ಕೆಲಸವನ್ನು ಸೂಕ್ತ ರೀತಿಯಲ್ಲಿ ಗಮನಹರಿಸಿ ಉತ್ತಮ ಹಾಗೂ ವ್ಯವಸ್ಥಿತ ರೀತಿಯಲ್ಲಿ ಟಾರ್ ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:- ಮಾನ್ಯ ಹನುಮೇಗೌಡರೆ ತಾವು ಮಾತನಾಡಿ.

ಶ್ರೀ ಕೆ. ಹೆಚ್. ಹನುಮೇಗೌಡ:-ಮಾನ್ಯ ಅಧ್ಯಕ್ಷಿಣಿಯವರೆ, ನನಗೆ ಎಷ್ಟು ಸಮಯ ಕೊಟ್ಟಿದ್ದೀರಿ?

ಛೇರ್ಮನ್:- ಐದು ನಿಮಿಷ

ಶ್ರೀ ಕೆ. ಹೆಚ್. ಹನುಮೇಗೌಡ:- ಹಾ, ಐದು ನಿಮಿಷ.

ಛೇರ್ಮನ್:- ಜಾಸ್ತಿ ಸಮಯ ಮಾತನಾಡುವವರನ್ನು ಕರಿಸುವವರು ಯಾರು?ನಾವು ಬೆಲ್ ಹೊಡೆದೂ ಹೊಡೆದು ಸಾಕಾಗುತ್ತದೆ. ಇನ್ಸಿಯೇಟ್ ಮಾಡುವವರಿಗೆ ಸ್ವಲ್ಪ ಜಾಸ್ತಿ ಟೈಮ್ ಕೊಡಬೇಕಾಗುತ್ತದೆ. ಇವತ್ತು ಐದು ಜನ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಹೇಗೆ ಮಾಡುವುದು ಹೇಳಿ? ಈಗಾಗಲೇ ಟೈಮ್ ಆಗಿದೆ.

ಶ್ರೀ ಎಂ. ವಿ. ವೆಂಕಟಪ್ಪ:- ಮಾನ್ಯ ಅಧ್ಯಕ್ಷಿಣಿಯವರೆ ಮೊನ್ನೆ ಲೋಕಸಭೆಯಲ್ಲಿ ರಾತ್ರಿ 2 ಗಂಟೆಯವರೆಗೂ ಸಭೆಯನ್ನು ನಡೆಸಿದ್ದಾರೆ.

ಛೇರ್ಮನ್:- ಇಲ್ಲಿ ಮಾತನಾಡಿದವರು ಹೊರಟುಹೋಗುತ್ತಾರೆ ಹೀಗಾದರೆ ಕೋರಂ ಎಲ್ಲಿ ಬರಬೇಕು?

ಶ್ರೀ ಎಂ. ವಿ. ವೆಂಕಟಪ್ಪ:-ನಾಳೆ ಬೆಳಿಗ್ಗೆ ಸಭೆಯನ್ನು 9 ಗಂಟೆಗೆ ಕರೆಯಿರಿ. ಮಂತ್ರಿಗಳು ಉತ್ತರ ಕೊಡಬೇಕಾದರೆ ಅವರವರ ಸೆಕ್ರೆಟರಿಯವರನ್ನು ಕೇಳಿ ಕೆಲವು ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಸೆಕ್ರೆಟರಿಯವರನ್ನು ಕೇಳದೆ ಹಾಗೆಯೇ ಉತ್ತರ ಹೇಳುವುದಕ್ಕಾಗುತ್ತದೆಯೇ?

+ ಶ್ರೀ ಕೆ. ಹೆಚ್. ಹನುಮೇಗೌಡ(ಹಾಸನ):- ಮಾನ್ಯ ಅಧ್ಯಕ್ಷಿಣಿಯವರೇ, ಲೋಕೋಪಯೋಗಿ, ಭಾರಿ ಮತ್ತು ಮಧ್ಯಮ ನೀರಾವರಿ, ಸಣ್ಣ ನೀರಾವರಿ ಮತ್ತು ಇಂಧನ ಇಲಾಖೆಗಳ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಒಂದೆರಡು ವಿಚಾರಗಳನ್ನು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯ ಸಲ ಈ ಇಲಾಖೆಗೆ ರೈತರ ಮನೆಯಿಂದ ಬಂದಂತವರು ಮಂತ್ರಿಗಳಾಗಿದ್ದಾರೆ. ಇದುವರೆಗೆ ನಾವು ರೈತರ ಕಷ್ಟ ಸುಖಗಳನ್ನು ತಿಳಿದುಕೊಂಡಿರುವವರು ಈ ಇಲಾಖೆಗಳ ಮಂತ್ರಿಗಳಾದರೆ ಒಳ್ಳೆಯದನ್ನು ಮಾಡುತ್ತಾರೆಂದು ಹೇಳುತ್ತಾ ಬಂದಿದ್ದೇವೆ. ಈಗ ಏನೋ ಒಂದು ಅವಕಾಶವನ್ನು ದೇವರು ಕೊಟ್ಟಿದ್ದಾನೆ. ಅವರು ಸ್ವಲ್ಪ ಉತ್ತಮವಾಗಿ ಕೆಲಸಮಾಡಿ ರೈತರ

ವಿಶ್ವಾಸಕ್ಕೆ ಪಾತ್ರರಾಗುತ್ತಾರೆಂದು ನನಗನ್ನಿಸುತ್ತದೆ. ನಾಲ್ಕೈದು ತಿಂಗಳುಗಳಿಂದ ಇವರ ಮೇಲೆ ಕಂಪ್ಲೈಂಟ್ ಏನೂ ಬಂದಿಲ್ಲ. ಮುಂದೆ ಹೇಗೋನಾನು ಕಾಣೆ. ಅವರು ಹೀಗೆ ಮುಂದುವರೆದರೆ ಒಳ್ಳೆಯ ಹೆಸರು ತೆಗೆದುಕೊಳ್ಳುತ್ತಾರೆಂದು ನನಗೆ ಅನಿಸುತ್ತದೆ. ಕಂಪ್ಲೈಂಟ್ ಒಬ್ಬೊಬ್ಬರ ಮೇಲೆ ಒಂದೊಂದು ಚೂರು ಇದೆ.

ಶ್ರೀ ಎಂ. ಮಹದೇವ್: ಯಾರ್‍ಯಾರು ರೈತರ ಮನೆಯವರು ಮಂತ್ರಿಗಳಿದ್ದಾರೆ? ಯಾರ್‍ಯಾರ ಮೇಲೆ ಕಂಪ್ಲೈಂಟ್ ಬಂದಿಲ್ಲ?

ಶ್ರೀ ಕೆ. ಹೆಚ್. ಹನುಮೇಗೌಡ:- ಸಧ್ಯಕ್ಕಂತೂ ಒಳ್ಳೆಯ ಅಭಿಪ್ರಾಯವಿದೆ. ಇವರುಗಳು ಹೀಗೆಯೇ ಕಂಟಿನ್ಯೂ ಆದರೆ ಕೀರ್ತಿವಂತರಾಗುತ್ತಾರೆ ಮತ್ತು ಬಹಳ ಉತ್ತಮವಾಗಿ ಇಲಾಖೆಯನ್ನು ಅಭಿವೃದ್ಧಿ ಪಡಿಸುತ್ತಾರೆಂದು ನನಗನಿಸುತ್ತಾ ಇದೆ. ದಯಮಾಡಿ ಯಾರೂ ಮಧ್ಯದಲ್ಲಿ ಮಾತನಾಡಬೇಡಿ.

ಛೇರ್ಮನ್:- ಈಗಾಗಲೇ ನಾಲ್ಕು ನಿಮಿಷ ಆಗಿ ಹೋಯಿತು.

ಶ್ರೀ ಕೆ. ಹೆಚ್. ಹನುಮೇಗೌಡ:- ಈಗ ನೀರಾವರಿ ಬಗ್ಗೆ ಮಾತನಾಡುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣ ರಾಜ್ಯದಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳನ್ನು ಅಂದೇ ಕಂಪ್ಲೀಟ್ ಮಾಡಿದ್ದರೆ ಬಹುಶಃ ಕರ್ನಾಟಕ ರಾಜ್ಯ ಸಂಮೃದ್ಧವಾಗುತ್ತಿತ್ತು. ಉದಾಹರಣೆ ಪಂಜಾಬ್‌ನಲ್ಲಿ ಕೈರಾನ್‌ರವರು ಇದ್ದಂತಹ ಕಾಲದಲ್ಲಿ ಎಲ್ಲಾ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಿ ಶೇಕಡ 90 ರಷ್ಟು ನೀರಾವರಿಗೆ ಅನುಕೂಲ ಮಾಡಿದ್ದಾರೆ. ಬಹುಶಃ ಇವತ್ತು , ಆ ರಾಜ್ಯಕ್ಕೆ ಹೋಗಿ ನೋಡಿದರೆ ಅಷ್ಟೊಂದು ಸಂತೋಷವಾಗುತ್ತದೆ. ಭತ್ತ ಬೆಳೆಯುವುದರಲ್ಲಿ ಇಂಡಿಯಾದೇಶದಲ್ಲಿ ಅವರೇ ಫಸ್ಟ್. ಗೋಧಿ ಬೆಳೆಯುವುದರಲ್ಲಿ ಆಲೂಗಡ್ಡೆ ಬೆಳೆಯುವುದರಲ್ಲಿ ಅವರೇ ಫಸ್ಟ್. ಆ ರಾಜ್ಯದಲ್ಲಿ ಬಡತನ ಎನ್ನುವುದೇ ಕಡಿಮೆ. ಅಲ್ಲಿ ಭಿಕ್ಷುಕರ ಸಂಖ್ಯೆ ಇಲ್ಲವೇ ಇಲ್ಲವೆಂದು ಹೇಳಬಹುದು. ಹಾಗೆಯೇ ಕರ್ನಾಟಕ ರಾಜ್ಯದಲ್ಲಿ ಕೂಡಾ ಇರಿಗೇಷನ್ ಡ್ಯಾಮ್‌ಗಳನ್ನು ಮುಂಚೆಯೇ ಕಂಪ್ಲೀಟ್ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಈಗಲೂ ಲೇಟಾದರೂ ಚಿಂತೆಯಿಲ್ಲ, ಆ ಕೆಲಸವನ್ನು ಮಾಡಬೇಕೆಂದು ಮಾನ್ಯ ಇರಿಗೇಷನ್ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇರಿಗೇಷನ್ ಕೆಲಸ ಮಾಡಬೇಕಾದರೆ ದುಡ್ಡು ಇಲ್ಲ ಎನ್ನುವ ಪ್ರಶ್ನೆ ಹೇಳುತ್ತಾರೆ. ಕಳೆದ ಸಾರಿ ಹಾಗೆಯೇ ಹೇಳಿದರು. ಈ ವರ್ಷ 50 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಂದರೆ 25 ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಜಾಸ್ತಿ ಹಣವನ್ನು ತೆಗೆದುಕೊಳ್ಳಲಿಕ್ಕೆ ಹೋರಾಟ ಮಾಡಿದ್ದೇವೆ ಎಂದು ಹೇಳುತ್ತಾರೆ. ಪ್ರತಿ ವರ್ಷ 15 ರಿಂದ 20 ಪರ್ಸೆಂಟ್ ಷೆಡ್ಯೂಲ್‌ರೇಟ್‌ನಲ್ಲಿ ಜಾಸ್ತಿಯಾಗುತ್ತದೆ. 7-30 ಪಿ. ಎಂ. ಅದನ್ನು ಮರೆತುಬಿಟ್ಟಿದ್ದಾರೆ. ಹೋದವರ್ಷ ಅಷ್ಟು ಕೊಟ್ಟಿದ್ದೆವು ಇಷ್ಟು ಕೊಟ್ಟಿದ್ದೆವು ಅಂತ ಹೇಳುತ್ತಾರೆ. ನೀವು ಆ ಪ್ರಪೋರ್ಷನ್‌ಗೆ ಲೆಕ್ಕ ಹಾಕಿದರೆ ನೀವು ಈಗ ಕೊಡತಕ್ಕಂಥ ಹಣ ಅಲ್ಲಿಗಲ್ಲಿಗೆ ಸರಿಯಾಗುತ್ತದೆಂದು ನನಗನ್ನಿಸುತ್ತದೆ. ತಾವು ಈ ಇಲಾಖೆಗೆ ಸ್ವಲ್ಪ ಜಾಸ್ತಿ ದುಡ್ಡು ತೆಗೆದುಕೊಳ್ಳಬೇಕೆಂದು ನಾನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ದುಡ್ಡು ಯು.ಕೆ.ಪಿ.ಗೆ ತೆಗೆದುಕೊಂಡ ಹಾಗೆ ವರ್ಲ್ಡ್ ಬ್ಯಾಂಕ್‌ನಿಂದಾದರೂ ತೆಗೆದುಕೊಳ್ಳಿ. ಕೆಲವು ಅನುಪಯುಕ್ತವಾದ ಯೋಜನೆಗಳನ್ನು ನಮ್ಮ ರಾಜ್ಯದಲ್ಲಿ ಕಾರ್ಯಗತ ಮಾಡುತ್ತಿದ್ದಾರೆ. ಉದಾಹರಣೆಗೆ ಸಾಕ್ಷರತಾ ಯೋಜನೆ. ನಾನು ಹೇಳುತ್ತೇನೆ, ಇದನ್ನು ಬಹುಶಃ ಇನ್ನು ಎರಡು ವರ್ಷ ಮುಂದೆ ಹಾಕಬಹುದಾಗಿತ್ತು. ಆಮೇಲೆ ಅಡಲ್ಟ್ ಎಜ್ಯುಕೇಷನ್. ಯಾವ ಊರಿನಲ್ಲೂ ಯಾರಿಗೂ ಏನೂ ಹೇಳಿಕೊಟ್ಟಿಲ್ಲ. ನಾನು ಅನೇಕ ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ. ಪಾಪ, ಒಳ್ಳೊಳ್ಳೆ ರಿಪೋರ್ಟ್ ಏನೋ ಕೊಡುತ್ತಾರೆ. ಈ ದೇಶದ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕಾತುರತೆ ನಿಮಗಿದೆ. ದಕ್ಷತೆಯಿಂದ ಕೆಲಸ ಮಾಡತಕ್ಕಂಥ ಇಚ್ಛೆ ಕೂಡ ಇದೆ. ಆದರೆ ನಿಮ್ಮ ಇಚ್ಛೆ ಈ ಯೋಜನೆಗಳಿಂದ ಫಲಪ್ರದವಾಗುವುದಿಲ್ಲ. ಏಕೆಂದರೆ ನಾನು ಅನೇಕ ಹಳ್ಳಿಗಳಲ್ಲಿ ನೋಡಿದ್ದೇನೆ. ಆದ್ದರಿಂದ ಸಧ್ಯಕ್ಕೆ ಇವು ಉಪಯುಕ್ತವಾದ ಯೋಜನೆ ಅಲ್ಲ. ಆದ್ದರಿಂದ ಇದನ್ನೆಲ್ಲಾ ಕೈಬಿಡಬೇಕಿತ್ತು. ಎಂದು ನನಗನ್ನಿಸುತ್ತದೆ. ಈ ವಿದ್ಯಾರ್ಥಿಗಳಿಗೆ ಬಟ್ಟೆ ಕೊಡುವುದು, ಪುಸ್ತಕ ಕೊಡುವುದು.

ಛೇರ್ಮನ್:- ಅದನ್ನೆಲ್ಲಾ ಹೇಳುವುದು ಬೇಡ.

ಶ್ರೀ ಕೆ. ಹೆಚ್. ಹನುಮೇಗೌಡ:- ಇದನ್ನೆಲ್ಲಾ ತಪ್ಪಿಸಿ ಆ ದುಡ್ಡು ಉಳಿಸಿ ಡ್ಯಾಮ್ ಕಟ್ಟಿ ಪಂಜಾಬ್ ಹಾಗೆ ನಮ್ಮದೂ ಸಮೃದ್ಧ ದೇಶ ಆಗಲಿ ಅಂತ ನಾನು ಹೇಳುತ್ತಿರುವುದು. ನಾನು ಆ ವಿಚಾರ ಬಿಟ್ಟು ಹೋಗುತ್ತಿಲ್ಲ. ಈಗ ನಮ್ಮ ಜಿಲ್ಲೆಯಲ್ಲಿ ಒಂದು ಎಚ್.ಪಿ.ಪ್ರಾಜೆಕ್ಟ್ ನಡೆಯುತ್ತಿದೆ. ಸುಮಾರು ಎರಡು ಎರಡೂವರೆ ವರ್ಷ ಆಯಿತು. ಸ್ವಲ್ಪ ಮಣ್ಣು ಹಾಕಿದ್ದಾರೆ ಅಷ್ಟೆ. ಆಮೇಲೆ ಅದು ಪತ್ತೆಯೇ ಇಲ್ಲ. ಹೋದಸಲ ಪ್ರಶ್ನೆ ಹಾಕಿದಾಗ ಟೆಂಡರ್ ಕರೆದಿದ್ದೇವೆ, ಕೆಲಸ ಆಗುತ್ತದೆ ಎಂದು ಹೇಳಿದರು. ಟೆಂಡರ್ ಕರೆದರೂ ಕೆಲಸ ಆಗದೆ ಇದ್ದರೆ ಅಥವಾ ಒಂದೆರಡು ವರ್ಷಗಳಲ್ಲಿ ಕೆಲಸ ಕಂಪ್ಲೀಟ್ ಆಗದಿದ್ದರೆ. ಶೆಡ್ಯೂಲ್ಡ್ ರೇಟ್ ಎಷ್ಟು ಜಾಸ್ತಿಯಾಗುತ್ತದೆ? ರೇಷಿಯೋ ಎಷ್ಟು ಜಾಸ್ತಿಯಾಗುತ್ತದೆ? ಇದಕ್ಕೆ ಹೊಣೆಗಾರರು ಮತ್ತು ಜವಾಬ್ದಾರರು ಯಾರು? ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಟೆಂಡರ್ ವರ್ಕನ್ನು ಈ ರೀತಿ ವಿನಾಕಾರಣ ಪೋಸ್ಟ್ ಪೋನ್ ಮಾಡುವ ಪ್ರವೃತ್ತಿಯನ್ನು ಅವರು ಸ್ವಲ್ಪ ನಿಲ್ಲಿಸಬೇಕು. ಆದಷ್ಟು ಬೇಗ ಕೆಲಸ ಮಾಡುವ ಹಾಗೆ ಮಾಡಬೇಕು ಎನ್ನುವ ಮಾತನ್ನು ಅವರಿಗೆ ತಿಳಿಸುತ್ತೇನೆ. ಈ ಗೊರೂರು, ಹಾಸನ ರೋಡ್‌ನಲ್ಲಿ ಒಂದು ಸಲ ನಾಲ್ಕೈದು ಜನ ಬಂದು ಹುಲ್ಲು ಕಿತ್ತು ಹೋಗಿಬಿಟ್ಟಿದ್ದಾರೆ ಎಂದು ಬಹಳ ಗಲಾಟೆ ಮಾಡಿದರು. ಯಾರೋ ಎಂದೆ. ಇಂಜಿನಿಯರಿಂಗ್ ಇಲಾಖೆಯಿಂದ ಕಿತ್ತು ಹಾಕಿದ್ದಾರೆ ಎಂದರು. ಕಿತ್ತಿಬಿಟ್ಟು ದುಡ್ಡು ತೆಗೆದುಕೊಂಡಿದ್ದಾರೆ. 16 ಲಕ್ಷಕ್ಕೆ ಎಸ್ಟಿಮೇಟ್ ಮಾಡಿದ್ದಾರೆ ಮತ್ತು 7 ಲಕ್ಷಕ್ಕೆ ಬಿಲ್ ತಗೊಂಡುಬಿಟ್ಟಿದಾರೆ ಎಂದರು. ಹುಚ್ಚಾಪಟ್ಟೆ ಮಾತನಾಡಬೇಡಿ ಅದು ಹೇಗೋ ತಗೊಳ್ತಾರೆ ಎಂದು ನಾನು ಅಂದೆ. ಹಾಗಲ್ಲ, ಐದಾರು ವರ್ಷಗಳಿಂದ ಇದೇ ಕಸುಬು ಮಾಡುತ್ತಿದ್ದಾರೆ. ಮೇಲ್ಪಟ್ಟವರು ಯಾರೂ ನೋಡೇ ಇಲ್ಲ ಅಂತ ಹೇಳಿದರು. ಆಮೇಲೆ ನಾನು ನೋಡೋಣ. ನೀವು ಹೋಗಿ ಅಂತ ಬಂದರೆ ಮೊನ್ನೆ ದಿನ ಒಂದು ಲೆಟರ್ ಬರೆದಿದ್ದಾರೆ. ನಿಮಗೆಷ್ಟು ಇಸ್ಸೆ ಬಂತು ಇದರಲ್ಲಿ ಹನುಮೇಗೌಡ್ರೆ? ನೀವು ಯಾಕೆ ಸುಮ್ಮನಿದ್ದೀರಿ ಅಂತ ಕೇಳಿದ್ದಾರೆ. ಆ ಪತ್ರವನ್ನು ನಾನು ಮಾನ್ಯ ಮಂತ್ರಿಗಳಿಗೆ ಕೊಟ್ಟೆ. ನೋಡಿ, ಇದರಲ್ಲಿ ನನ್ನನ್ನೂ ಸೇರಿಸಿಬಿಟ್ಟಿದ್ದಾರೆ. ದಯವಿಟ್ಟು ವಿಚಾರ ಮಾಡಿ. ಇದು ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಎಂದು ನಾನು ಅವರಿಗೆ ಹೇಳಿದೆ. ಒಂದು ಸಾರಿ ಏಳೆಂಟು ದಿವಸಗಳ ಹಿಂದೆ ಹೋಗುತ್ತಿದ್ದಾಗ ಆ ರಸ್ತೆಯನ್ನು ನೋಡಿದೆ. ಹುಲ್ಲು ಕಿತ್ತಿರುವುದಂತೂ ನಿಜ. ಒಂದು ಚೂರು ಬಿಡದ ಹಾಗೆ ಕಿತ್ತುಹಾಕಿಬಿಟ್ಟಿದ್ದಾರೆ. ಮತ್ತೆ ಇನ್ನೇನೂ ಕೆಲಸ ಆದ ಹಾಗೆ ಕಾಣಲಿಲ್ಲ. ನಾನೇನು ಇಂಜಿನಿಯರ್ ಅಲ್ಲ, ನಾನೇನೂ ಇಂಜಿನಿಯರ್ ಓದಿಲ್ಲ. ನಾನು ಮಾನ್ಯ ಮಂತ್ರಿಗಳನ್ನು ಬಹಳ ವಿನಯದಿಂದ ಕೇಳುತ್ತಿದ್ದೇನೆ. ಇಂತಹ ವಿಚಾರಗಳನ್ನು ನೀವು ಸರಿಯಾಗಿ ಸ್ವಲ್ಪ ಸ್ಟ್ರಿಕ್ಟ್ ಆಗಿ ಮಾಡದೆ ಹೋದರೆ ನಮ್ಮಂಥವರ ಹಣೆಗೂ ಪಟ್ಟಿ ಹಚ್ಚಿಬಿಡುತ್ತಾರೆ. ದಯವಿಟ್ಟು ಇದನ್ನು ಸ್ವಲ್ಪ ನೋಡಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ನನಗೆ ಇನ್ನೊಂದು ಅರ್ಜಿ ಬಂದಿದೆ. ಅಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಇನ್‌ಚಾರ್ಜ್‌ನಲ್ಲಿರುವವರು ಏಳು ಲಕ್ಷ ರೂಪಾಯಿ ಸಾಮುಗ್ರಿಗಳನ್ನು ಕೂಡಿಹಾಕಿದ್ದಾರಂತೆ. ಕೊಟೇಷನ್ ಇಲ್ಲ, ಟೆಂಡರ್ ಇಲ್ಲ. ಮೇಲ್ಪಟ್ಟ ಅಧಿಕಾರಿಗಳ ಅಪ್ರೂವಲ್ ಇಲ್ಲ. ಆ ಸಾಮಾನುಗಳು ಯಾರಿಗೂ ಹೇಳದೆ ಕೇಳದೆ ರಾತ್ರೋ ರಾತ್ರಿ ಖರೀದಿ ಮಾಡಿ ಇಟ್ಟಿದ್ದಾರೆ. ಇದು ಅವರ ಯಾವ ಧೈರ್ಯವೋ,ಅವರಿಗೆ ಏಕೆ ಈ ಧೈರ್ಯ ಬಂತೋ ನನಗಂತೂ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಇದನ್ನು ವಿಚಾರಣೆ ಮಾಡಿ ಇದು ನಿಜವೋ, ಸುಳ್ಳೋ ಎಂದು ಅಸೆಂಬ್ಲಿ ಮುಗಿಯುವುದರೊಳಗೆ ಹೇಳಬೇಕು. ಇದನ್ನೆಲ್ಲ ವೆರಿಫೈ ಮಾಡಿ ಅವರು ಉತ್ತರ ಹೇಳಬೇಕು.

ಛೇರ್ಮನ್:- ಈಗ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ರಿಪ್ಲೈ ಕೊಡುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಇನ್ನು ಪಿ.ಡಬ್ಲ್ಯೂ.ಡಿ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯ ವಿಚಾರವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಹೇಳುತ್ತೇನೆ. ನಮ್ಮಲ್ಲಿ ಈಗ್ಗೆ 10-12 ವರ್ಷಗಳ ಹಿಂದೆ

ಒಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್ ಇದ್ದರು. 8 ಜನ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇದ್ದರು. ರೋಡುಗಳನ್ನೂ ಅವರೇ ನೋಡಿಕೊಳ್ಳುತ್ತಿದ್ದರು, ಕೆರೆ ರಿಪೇರಿಯನ್ನೂ ಅವರೇ ನೋಡಿಕೊಳ್ಳುತ್ತಿದ್ದರು. ಬಿಲ್ಡಿಂಗ್‌ಗಳನ್ನೂ ಅವರೇ ನೋಡಿಕೊಳ್ಳುತ್ತಿದ್ದರು. ಆಗ ಬಹಳ ಚೆನ್ನಾಗಿ ಕೆಲಸಗಳೂ ಆಗುತ್ತಿದ್ದವು. ಅವರಿಗೆ ಕೈ ತುಂಬ ಕೆಲಸ ಇತ್ತು. ಅವರು ಬೇರೆ ವ್ಯವಹಾರಕ್ಕೆ ಹೋಗುತ್ತಿರಲಿಲ್ಲ. ಈಗೇನು ಮಾಡಿಬಿಟ್ಟಿದ್ದಾರೆಂದರೆ ನಮ್ಮ ಜಿಲ್ಲೆಯದನ್ನೇ ಉದಾಹರಣೆಗೆ ಹೇಳುವುದಾದರೆ, ಈಗ 4ಜನ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇದ್ದಾರೆ. ಜಿಲ್ಲಾಪರಿಷತ್ತಿಗೆ ಒಬ್ಬರು, ಇದ್ದಾರೆ, ಹಾಸನದಲ್ಲಿ ಪಿ.ಡಬ್ಲ್ಯೂ.ಡಿ.ಗೆ ಎರಡು ಡಿವಿಜನ್ ಮಾಡಿದರು. ಅಲ್ಲಿಗೆ ಇಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್ಸ್, ಒಬ್ಬರು ಜಿಲ್ಲಾಪರಿಷತ್ತಿಗೆ ಮತ್ತೊಬ್ಬರು ಮೈನರ್ ಇರಿಗೇಷನ್‌ಗೆ. ನಾನು ಮೈನರ್ ಇರಿಗೇಷನ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಕೇಳಿದೆ. ಏಕೆ ನೀವು ಯಾವಾಗಲೂ ಇಷ್ಟೊಂದು ಫ್ರೀಯಾಗಿ ಇರುತ್ತೀರಿ ಎಂದು. ಅದಕ್ಕೆ ಅವರು ಹೇಳಿದರು, ಎರಡು ಕೆರೆಗಳಿವೆ, 10-15-20 ಕಿಲೋಮೀಟರ್ ಚಾನಲ್ ಇದೆ. ಅದಕ್ಕಾಗಿಯೇ ಫ್ರೀಯಾಗಿ ಇದ್ದೇವೆ ಎನ್ನುವ ತರದಲ್ಲಿ ಮಾತನಾಡಿದರು. ನಾನು ಹೇಳುತ್ತೇನೆ, ಒಂದು ಕಡೆ ಕೆಲಸ ಇಲ್ಲ, ಇನ್ನೊಂದು ಕಡೆ ಹಣ ಕೊಟ್ಟು ಆ ಹಣ ಖರ್ಚಾಗದೇ ಇರುವುದು ಇನ್ನೊಂದು ಕಡೆ, ಏಕೆ ಈ ವಿಪರ್ಯಾಸ ಈ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಏಕೆ ಇಷ್ಟೊಂದು ಹುದ್ದೆಗಳನ್ನು ಕ್ರಿಯೇಟ್ ಮಾಡಿದರು, ಯಾವುದೋ ಒಬ್ಬ ಇಂಜಿನಿಯರ್ ಅವರನ್ನು ಕೇಳಿದೆ, ಏನೆಂದರೆ, ಮೊದಲಿದ್ದ ಹಾಗೆ ಮಾಡಿದರೆ ಏನಾದರೂ ಕೆಲಸ ವಾಗುತ್ತದೆಯೇ ಎಂದು, ಅದಕ್ಕೆ ಅವರು ಸೊಗಸಾಗಿ ಕೆಲಸವಾಗುತ್ತದೆ ಎಂದು ಹೇಳಿದರು. ನಾನು ಪಿಯಡಬ್ಲ್ಯೂ.ಡಿ ಸಚಿವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ, ದಯಮಾಡಿ ಎಷ್ಟು ಬೇಕೋ ಅಷ್ಟು ಹುದ್ದೆಗಳನ್ನು ಮಾತ್ರ ಕ್ರಿಯೇಟ್ ಮಾಡಿ, ಅವರಿಗೆ ಸಾಕಷ್ಟು ಗ್ರಾಂಟನ್ನು ಕೊಡಿ , ಜೊತೆಗೆ ನೀವು ಮಧ್ಯೆ ಮಧ್ಯೆ ಹೋಗಿ ಚೆಕ್ ಮಾಡಿ, ಕೆಲಸ ಕಾರ್ಯಗಳನ್ನು ತಿಳಿದುಕೊಂಡು, ಸ್ವಲ್ಪ ಉತ್ತಮವಾಗಿ ಕೆಲಸ ಕಾರ್ಯಗಳಾಗುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ವಿಚಾರವಾಗಿ ಹೇಳುವುದಾದರೆ, ಆಂಧ್ರದವರು ಅಷ್ಟರ ಮಟ್ಟಿಗೆ ಸವಾರಿ ಮಾಡುತ್ತಿದ್ದಾರೆ, ಇವರು ಗಂಡಸರೇ ಅಲ್ಲ, ಏನು ಮಾಡಿದರೂ ತಾವು ಬಚಾವ್ ಎಂದು ಹೇಳಿ,ಅವರು ಮಾಡುತ್ತಿರತಕ್ಕ ಟೈಮ್‌ನಲ್ಲಿ ಈಗಲಾದರೂ ಎಚ್ಚೆತ್ತು, ಸಾಕಷ್ಟು ದುಡ್ಡು ಕೊಟ್ಟು . . . .

ಛೇರ್ಮನ್:- ಈಗ ಮಂತ್ರಿಗಳು ಉತ್ತರ ಕೊಡಬೇಕು, ದಯಮಾಡಿ ಬೇಗ ಮುಗಿಸಿ. ಹೆಂಗಸರು ಇರತಕ್ಕ ಸಭೆಯಲ್ಲಿ ಹೀಗೆ ಹೇಳಬಾರದು. ನಿಮಗೆ ಏನು ಕೊಂಬು ಇದೆಯೇ. . . .

ಒಬ್ಬ ಮಾನ್ಯ ಸದಸ್ಯರು:- ನಿಮಗೆ ಕೊಂಬು ಇದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ :- ಇದು ಕೊಂಬಿನ ಮಾತಲ್ಲ. ನಾವು ಮಾಡುವ ಕೆಲಸ ನಿಮ್ಮ ಕೈಲಿ ಮಾಡುವುದಕ್ಕಾಗುವುದಿಲ್ಲ. ಆದ ಕಾರಣ ನಾವು ಮಾಡುವ ಕೆಲಸ ನಾವು ಮಾಡುತ್ತೇವೆ, ನೀವು ಮಾಡುವ ಕೆಲಸ ನೀವು ಮಾಡಬೇಕು. ಏಕೆ ಆ ರೀತಿ ಹೇಳುತ್ತೀರಿ? ದೈವದತ್ತವಾಗಿ ಬಂದಿರ ತಕ್ಕಂತಾದ್ದು, ಇದು ಕೋಡುಪಾಡಿನ ಪ್ರಶ್ನೆ ಅಲ್ಲ. ನೀವು ಮಾಡುವುದನ್ನು ನೀವು ಮಾಡಬೇಕು, ನಾವು ಮಾಡುವುದನ್ನು ನಾವು ಮಾಡಬೇಕು. ಸುಮ್ಮನೆ ವಿವರಿಸಿಕೊಂಡು ಹೇಳುವುದಕ್ಕೆ ಹೋದರೆ ಏನೂ ಪ್ರಯೋಜನ ಇಲ್ಲ.

ಛೇರ್ಮನ್:- ಪಿ.ಡಬ್ಲ್ಯೂ.ಡಿ. ಮಂತ್ರಿಗಳೇ, ದಯಮಾಡಿ ತಾವು ಉತ್ತರ ಪ್ರಾರಂಭ ಮಾಡಿ.

ಶ್ರೀ ಕೆ. ಲಕ್ಕಣ್ಣ:- ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ . . .

ಶ್ರೀ ಎಂ. ವಿ. ವೆಂಕಟಪ್ಪ:- ಇವತ್ತು ಚರ್ಚೆ ಆಗಲಿ, ನಾಳೆ ಬೆಳಿಗ್ಗೆ 9 ಗಂಟೆಗೆ ಸೇರಿ, ಮಂತ್ರಿಗಳು ಉತ್ತರ ಹೇಳಲಿ. ನಮ್ಮದೇನೂ ಆಕ್ಷೇಪಣೆ ಇಲ್ಲ.

ಛೇರ್ಮನ್:- ನೀವು ಬಿ.ಎ.ಸಿ.ನಲ್ಲಿ ಇದ್ದೀರಾ. ನೀವು ತೀರ್ಮಾನ ಮಾಡಿದ ಹಾಗೆ, ನಾವು ಅದನ್ನು ಫಾಲೋ ಮಾಡಬೇಡವೇ?

ಶ್ರೀ ಎಂ.ವಿ. ವೆಂಕಟಪ್ಪ:- ಬಿ.ಎ.ಸಿ.ನಲ್ಲಿ ಏನು ಆಯಿತೋ ಆ ಪ್ರಕಾರ ನಡೆಯುತ್ತಾ ಇಲ್ಲ. ಎಲ್ಲವೂ ಮುಂದಕ್ಕೆ ಹೋಗುತ್ತಿದೆ. 1-2-3 ಗಂಟೆ ಮುಂದಕ್ಕೆ ಹೋಗುತ್ತಿದೆ. ಅಲ್ಲದೆ, ಅಲ್ಲಿ ಇಷ್ಟು ಹೊತ್ತಿಗೆ ಮುಗಿಸಬೇಕೆಂದು ತೀರ್ಮಾನ ಆಗಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ:- ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ನಾನಾ ರೀತಿಯಲ್ಲಿ ಬ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಹಾಗೆ ನಡೆಯುತ್ತಿರುವುದೂ ವಾಸ್ತವಿಕ ವಿಚಾರ. ಹಿಂದೆ ಒಂದು ಕಾಲದಲ್ಲಿ 50-60 ಪರ್ಸೆಂಟ್ ಕೆಲಸವಾಗುತ್ತಿತ್ತು ಎಂದು ಹೇಳುತ್ತಿದ್ದರು. ಈಗ ಅದು ಇನ್ನೂ ಕಡಿಮೆ ಆಗುತ್ತಿದೆ ಎಂದು ಹೇಳುವುದಕ್ಕೆ ಶುರು ಮಾಡಿದ್ದಾರೆ. ಏಕೆಂದರೆ, ಕೆಲವರು 25-30 ಪರ್ಸೆಂಟ್‌ಗೆ ಇಳಿಸಿದ್ದಾರೆ. ಅವರು ಏನಾದರೂ ಮಾಡಿಕೊಳ್ಳಲಿ ಈಗ ಒಂದು ಹೊಸ ವಿಧಾನ ಕಂಡು ಹಿಡಿದಿದ್ದಾರೆ. ಪಿ.ಡಬ್ಲ್ಯೂ.ಡಿನಲ್ಲಿ ಪತ್ತೆ ಇಲ್ಲದ ಹಾಗೆ ದುಡ್ಡು ಹೊಡೆಯುವುದಕ್ಕೆ ಎನ್.ಎಂ.ಆರ್ ಎಂಬ ಸ್ಕೀಮನ್ನು ಕಂಡುಹಿಡಿದಿದ್ದಾರೆ. ಇದು ತಾಲ್ಲೂಕು ಮಟ್ಟದಿಂದ ಕೆಳಕ್ಕೆ ಮಾತ್ರ ನಡೆಯುತ್ತಿದೆ. ಚೀಫ್ ಇಂಜಿನಿಯರ್, ಎಕ್ಸಿಕ್ಯುಟಿವ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಇವರ ಕಿವಿಗೇ ಬರುವುದಿಲ್ಲ. ಇನ್ನು ಮಿನಿಸ್ಟರ್ ಕಿವಿಗೂ ಬರುವುದೇ ಇಲ್ಲ. ಅವರು ಏನು ಮಾಡುತ್ತಾರೆಂದು ಹೇಳಿದರೆ, ಯಾವುದಾದರೂ ಕೆಲಸ ಅಂದರೆ 5 ಲಕ್ಷ, 10 ಲಕ್ಷ,20ಲಕ್ಷ ರೂ.ಗಳ ಕೆಲಸ ಇರಲಿ. ನಮ್ಮವರೇ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡುತ್ತಾರೆ, ಅಂದರೆ ಎಸ್ಟಿಮೇಟ್ ಅಪ್ರೂವಲ್ ಮಾಡುವುದು ಅವರೇ, ಪೇಮೆಂಟ್ ಮಾಡುವುದು ಅವರೇ, ಚೆಕಿಂಗ್ ಮಾಡುವವರೂ ಅವರೇ. ಯಾರಾದರೂ ನೆತ್ತಿಗೆ ಎಣ್ಣೆ ಕಾಣದೇ ಇರತಕ್ಕವರು ಇರುತ್ತಾರಲ್ಲಾ, ದನಪನ ಕಾಯ್ದುಕೊಂಡು ಇರುತ್ತಾರಲ್ಲಾ, ಅವರನ್ನು ಹಿಡಿದುಕೊಂಡು ಬಂದು, ಅವರ ಕೈಯಲ್ಲಿ ರುಜು ಹಾಕಿಸುವುದು. ಕೈನಲ್ಲಿ ಆದರೂ ಹಾಕಿಸಿಕೊಳ್ಳಬಹುದು, ಕಾಲಿನಲ್ಲಿ ಆದರೂ ಹಾಕಿಸಿಕೊಳ್ಳಬಹುದು ಅಥವಾ ಬೇರೆ ಯಾವುದರಲ್ಲಾದರೂ ಹಾಕಿಸಿಕೊಳ್ಳಬಹುದು, ರುಜು ಹಾಕಿಸಿಕೊಂಡು ಬಿಲ್‌ನ ಹಣ ಹೊಡೆಯುವುದೇ ಅವರ ಕೆಲಸ, ಆಮೇಲೆ ತಾವು ಯಾರಾದರೂ ಚೆಕ್ಕಿಂಗ್‌ಗೆ ಹೋದರೆ ಅಲ್ಲಿ ಏನೂ ಸಿಗಲಿಕ್ಕಿಲ್ಲ. ಏನಾದರೂ ಕೆಲಸ ಮಾಡಿಸ ಬೇಕಾದರೆ ಟೆಂಡರ್ ಕರೆಯಬೇಕು. ಇಲ್ಲಾ ಪೀಸ್ ವರ್ಕ್‌ನಲ್ಲಿ ಕೊಡಬೇಕು. ಪೀಸ್ ವರ್ಕ್‌ನಲ್ಲಿ ಕೊಟ್ಟರೆ ದಾಖಲೆ ಇರುತ್ತದೆ. ಅವರು ಕಂಟ್ರಾಕ್ಟರ್ ಯಾರು ಎಂದು ಆಗ ಗೊತ್ತಾಗುತ್ತದೆ. ಆದರೆ ಇದು ಯಾವಾಗಿನಿಂದ ಹುಟ್ಟಿಕೊಂಡಿತೋ ನಾನು ಕಾಣೆ. ಮಾನ್ಯ ಅಶ್ವತ್ಥರೆಡ್ಡಿಯವರೇ, ನಾನು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ, ಇದನ್ನು ಮಾತ್ರ ನೀವು ತಪ್ಪಿಸದೇ ಹೋದರೆ ನಿಮ್ಮ ಇಲಾಖೆಗೆ ಬರತಕ್ಕಂಥ ಕೆಟ್ಟ ಹೆಸರನ್ನು ಯಾರು ಸಹ ತೆಗೆಯುವುದಕ್ಕಾಗುವುದಿಲ್ಲ. ಇಂತಿಷ್ಟು ಜನ ಕಂಟ್ರಾಕ್ಟರ್ಸ್ ಕೆಲಸ ಮಾಡಿದರು ಅಂತ ಹೇಳುತ್ತಾರೆ. ಆದರೆ ಆ ಕಂಟ್ರಾಕ್ಟ್‌ದಾರರು ಯಾರು ಎಂದು ಒಬ್ಬರಿಗೂ ಗೊತ್ತಿಲ್ಲ.

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷಿಣಿಯವರು:- ಏನು ಹನುಮೇಗೌಡ್ರೇ ಮುಗಿಸುತ್ತೀರಾ?

ಶ್ರೀ ಕೆ. ಹೆಚ್. ಹನುಮೇಗೌಡ:- ನಮ್ಮ ಇಂಜಿನಿಯರ್‌ಗಳು ದುಡ್ಡು ಮಾಡುವುದಕ್ಕೆ ಈ ಎನ್ ಎಂ ಆರ್ ಎಂಬ ಹೊಸ ವಿಧಾನ ಕಂಡುಹಿಡಿದಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಎನ್ ಎಂ ಆರ್ ಅಂತ ಹೇಳಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು. ಯಾರಿಗೂ ಭಯ ಭೀತಿ ಅಂಜಿಕೆ ಏನೂ ಇಲ್ಲ. ಅವರೇ ಕೆಲಸ ಮಾಡಿಸುವುದು. ಅವರದ್ದೇ ಬಿಲ್ ಅವರೇ ಪಾಸ್ ಮಾಡಿಕೊಳ್ಳುವುದು. ಆಮೇಲೆ ದುಡ್ಡು ಡ್ರಾ ಮಾಡಿ ಹಂಚಿಕೊಳ್ಳುವುದು. ಆದರೂ ನಾನು ಒಬ್ಬರನ್ನು ಬಹಳ ಹಿಂಸೆ ಮಾಡಿ ಎಷ್ಟು ಪರ್ಸೆಂಟ್ ಹಿಡಿದುಕೊಳ್ಳುತ್ತಾರೆ ನಿಮಗೆಷ್ಟು ಕೊಡುತ್ತಾರೆ ಅಂತ ಕೇಳಿದೆ. ಅವರು 25 ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ನಮಗೊಂದು 5-6 ಪರ್ಸೆಂಟ್ ಕೊಡುತ್ತಾರೆ ಅಂತ ಹೇಳಿದರು. ಅಶ್ವತ್ಥರೆಡ್ಡಿಯವರೇ ನಾನು ತಮಾಷೆಗೆ ಹೇಳುತ್ತಿಲ್ಲ. ಇದು ನಿಜವಾದ ಮಾತು. ಅದೇ ಜಿಲ್ಲಾಪರಿಷತ್ತಿನಲ್ಲಿರುವ ಇಂಜಿನೀಯರ್‌ಗಳು 70-80

ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಪಾಪ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ನನ್ನಂತಹವನು ಯಾವೋನಾದರೂ ಹೋಗಿ ಗಲಾಟೆ ಮಾಡಿದರೆ ಒಂದು ದಿವಸ ಅವನನ್ನು ಹೋಟೆಲ್‌ಗೆ ಕರೆದುಕೊಂಡು ಹೋಗಿ ಸರಿ ಮಾಡಿಬಿಡುತ್ತಾರೆ. ಅಲ್ಲಿಗೆ ಮುಗಿದು ಹೋಯಿತು. ಇದು ಎನ್ ಎಂ ಆರ್ ಅಲ್ಲಿ ಒಂದು ರೀತಿ ಹಗಲು ದರೋಡೆ. ಸೋಗಸಾದ ದರೋಡೆ. ಹಗಲು ರಾತ್ರಿ ಅನ್ನದೆ ದರೋಡೆ ಮಾಡುತ್ತಿದ್ದಾರೆ. ಯಾರಿಗೂ ಪತ್ತೆ ಆಗುವುದಿಲ್ಲ. ಇದು ಮೇಲ್ಪಟ್ಟವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಇದು ನಿಜವೋ ಸುಳ್ಳೋ ಅಂತ ತಿಳಿಯಬೇಕಾದರೆ ಹಾಸನದಲ್ಲಿ ನ್ಯಾಷನಲ್ ಹೈವೇ ನಲ್ಲಿ 8 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದಾರೆ. ದಯಮಾಡಿ ಅದರ ರೆಕಾರ್ಡ್ಸ್ ತೆಗೆಸಿ ನೋಡಿ. ಈ ಎನ್ ಎಂ ಆರ್ ಹೆಸರಿನಲ್ಲಿ ರಸ್ತೆ ಮೇಲೆ ಮಣ್ಣು ಹಾಕುತ್ತಾರೆ. ಇದು ಒಂದು ತರಹ ಹೊಸ ವಿಧಾನ. ನಾನು ಮೊನ್ನೆ ಕೇಳಿದಾಗ ನನಗೇ ಆಶ್ಚರ್ಯವಾಯಿತು. ದಯಮಾಡಿ ಇಂತಹದ್ದನ್ನೆಲ್ಲಾ ತಾವು ಸ್ವಲ್ಪ ತಪ್ಪಿಸಬೇಕು ಎನ್ನುವ ಮಾತನ್ನು ಹೇಳಿ ಇನ್ನು ಕೊನೆಯದಾಗಿ ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಕಾಲುವೆ ತೆಗೆಸಿದರಲ್ಲಾ, ಅದರಲ್ಲಿ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್ ಇಬ್ಬರೂ ಸೇರಿ ಅಡ್ವಾನ್ಸ್ ಡ್ರಾ ಮಾಡಿಬಿಟ್ಟಿದ್ದಾರಂತೆ ಮತ್ತು ಅವರಿಬ್ಬರೂ ಹಂಚಿಕೊಂಡಿದ್ದಾರಂತೆ. ಅಲ್ಲಿ ಕೆಲಸ ಇನ್ನೂ ಹಾಗೆಯೇ ಬಾಕಿ ಇದೆ. ಇದು ನಡೆದು 4-5 ವರ್ಷಗಳಾಗಿವೆ. ಇದು ಸಂಬಂಧಪಟ್ಟವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಕಂಟ್ರಾಕ್ಟರ್ಸ್ ಹೆದರಿಕೊಂಡರೇ ಇಲ್ಲ ಇಂಜಿನಿಯರ್ಸ್ ಕೊಡುವ ಬಡ್ತಿ ಏನಾದರೂ ನಿಂತು ಹೋಯಿತೇ? ಇಲ್ಲ, ಎಲ್ಲಾ ಸಲೀಸಾಗಿ ನಡೆಯುತ್ತಿದೆ. ದುಡ್ಡು ತೆಗೆದುಕೊಂಡು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಯಾರ ಮೇಲೂ ಏನೂ ಆಕ್ಷನ್ ತೆಗೆದುಕೊಂಡಿಲ್ಲ. ಈ ಬಗ್ಗೆ 4-5 ಅರ್ಜಿಗಳು ಬಂದಿದ್ದವು. ಆದ ಮೇಲೆ ನಾನು ಹಿಂದೆ ಬರೆದು ಬರೆದು ಸಾಕಾಗಿ ಕೊನೆಗೆ ಮೊನ್ನೆ ಅಶ್ವತ್ಥರೆಡ್ಡಿಯವರಿಗೆ ಒಂದು ಅರ್ಜಿ ಕೊಟ್ಟೆ. ಅವರಿಗೆ ಸಂಬಂಧಪಟ್ಟಿದ್ದು ಅಲ್ಲ ಎಂಬುದು ಗೊತ್ತಿಲ್ಲದೆ ಅವರಿಗೆ ಕೊಟ್ಟೆ. ಆಮೇಲೆ ನಮ್ಮ ಮಲ್ಲಾರಿಗೌಡ ಪಾಟೀಲರಿಗೆ ಒಂದು ಅರ್ಜಿ ಕೊಟ್ಟೆ. ಪಾಪ ಅವರು ತಕ್ಷಣ ಎನ್‌ಕ್ವೈರಿ ಮಾಡಿಸಿ ನಾನು ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಹೀಗೆ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ನಡೆದಿದೆ. ಹಣ ತಿಂದವರೆಲ್ಲಾ ನಿರ್ಭೀತಿಯಿಂದ ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಯಾರಾದರೂ ಚೆಕಿಂಗ್‌ಗೆ ಹೋದಾಗ ಇದನ್ನೆಲ್ಲಾ ಚೆಕ್ ಮಾಡಬೇಕು. ಅದರಲ್ಲಿ 4-5 ಸ್ಪೆಸಿಫಿಕೇಷನ್ಸ್ ಇದೆಯಂತೆ. ಅನೇಕ ಸಲ ಮಣ್ಣು ತಂದು ಹಾಕಿ ಹಾರ್ಡ್ ರಾಕ್ ಹಾಕಿದ್ದೇವೆ ಎಂದು ಹೇಳಿ ಅಲ್ಲಿ ಬಿಲ್ ಕೊಡುವಂತಹ ಉದಾಹರಣೆಗಳು ಬೇಕಾದಷ್ಟು ಇವೆ. ಅದರಲ್ಲಿ ಮಣ್ಣಿಗೆ 20-25 ರೂಪಾಯಿಗಳ ದರ ಇದ್ದರೆ ಹಾರ್ಡ್ ರಾಕ್‌ಗೆ 150-160 ರೂಪಾಯಿಗಳ ದರ ಇದೆ. ಇವೆಲ್ಲಾ ನಡೆದಿರುವುದರಿಂದ ದಯಮಾಡಿ ತಾವ್ಯಾರಾದರೂ ತನಿಖೆಗೆ ಹೋಗುವಾಗ ಇದನ್ನೆಲ್ಲಾ ನೋಡಬೇಕು. ತಾವು ಹೊಸಬರು ಪಾಪ. ತಾವಿನ್ನೂ ಪಳಗಿಲ್ಲ. ತಾವು ಕಂಟ್ರಾಕ್ಟ್ ಮಾಡುವವರು ಅಲ್ಲ, ಅವರ ಜೊತೆಯಲ್ಲಿ ಇರುವವರೂ ಅಲ್ಲ. ಅಥವಾ ಲೋಕೋಪಯೋಗಿ ಮಿನಿಸ್ಟರ್ ಜೊತೆಯಲ್ಲಿ ಹೊಂದಿಕೊಂಡಿರುವವರು ಅಲ್ಲ. ನೀವು 3 ಜನರೂ ಅಂತಹವರಲ್ಲ. ನೀವು ಅವರ ಜೊತೆ ಹೊಂದಿಕೊಂಡಿಲ್ಲ ಅಂತ ಕಾಣುತ್ತದೆ. ತಮಗೆ ಅಂತಹ ಅನುಭವ ಕಡಿಮೆ, ಇಂತಹ ವಿಚಾರಗಳಲ್ಲಿ ನೀವಿನ್ನೂ ಪಳಗಿಲ್ಲ. ದಯಮಾಡಿ ತಾವು ಒಂದೊಂದು ಸಾರಿ ಅನಿರೀಕ್ಷಿತ ಭೇಟಿಯನ್ನು ಕೊಟ್ಟರೆ ಇವರುಗಳು ಮಾಡುವ ಅನ್ಯಾಯಗಳನ್ನು ತಪ್ಪಿಸಬಹುದು. ಆಮೇಲೆ ರಾಮಪ್ಪನವರದ್ದು ಒಂದೇ ಒಂದು ವಿಚಾರ.

ಉಪಾಧ್ಯಕ್ಷಿಣಿಯವರು:-ಈಗ ಎಂಟು ಗಂಟೆಗೆ ಮಿನಿಸ್ಟರ್ ಅವರು ಉತ್ತರ ಪ್ರಾರಂಭ ಮಾಡಬೇಕು. ಇನ್ನು 15 ನಿಮಿಷ ಇದೆ. ನನ್ನ ಹತ್ತಿರ ಇನ್ನೂ ನಾಲ್ಕು ಜನರ ಹೆಸರುಗಳಿವೆ. ಎಲ್ಲರಿಗೂ ಐದು ನಿಮಿಷ ಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:- ರಾಮಪ್ಪನವರ ಬಗ್ಗೆ ಒಂದೇ ಒಂದು ಸೆಂಟೆನ್ಸ್.

ಉಪಾಧ್ಯಕ್ಷಿಣಿಯವರು :- ಎಲೆಕ್ಟ್ರಿಸಿಟಿ ಬಗ್ಗೆ ಹೇಳುತ್ತೀರಾ ?

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ:- ಎಲೆಕ್ಟ್ರಿಸಿಟಿ ಉತ್ಪಾದನೆ ಬಗ್ಗೆ ಸ್ವಲ್ಪ ಜಾಸ್ತಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಕೆಲವರು ಕೈಗಾ ಯೋಜನೆ ಮಾಡಬೇಡಿ, ಬೇಡ್ತಿ ಯೋಜನೆ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಇವರು ಯಾರು ಎಂದರೆ ಅವರಿಗೆ ಎಲ್ಲಾ ಅನುಕೂಲ ಆಗಿದೆಯಲ್ಲಾ ಅವರು, ಬೇರೆಯವರಿಗೆ ಅನುಕೂಲ ಸಿಗುತ್ತದಲ್ಲ ಎಂದು ಅವರು ಚೇಷ್ಟೆ ಮಾಡುತ್ತಾರೆ. ಅವರಿಗೆ ಕೇರ್ ಮಾಡದೆ ಎಲ್ಲೆಲ್ಲಿ ಏನೇನಾಗಬೇಕು ಆ ಯೋಜನೆಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಿ. ಒಂದು ಪಕ್ಷ ಕಾಡು ಮುಳುಗಿದರೆ ಇನ್ನೊಂದು ಜಾಗದಲ್ಲಿ ಕಾಡು ಬೆಳೆಸಬಹುದು, ಅದರೆ ಎಲ್ಲಾ ಜಾಗದಲ್ಲೂ ಎಲೆಕ್ಟ್ರಿಸಿಟಿ ಪ್ರಡ್ಯೂಸ್ ಮಾಡುವುದಕ್ಕಾಗುವುದಿಲ್ಲ. ಕೈಗಾದಂತಹ ಯೋಜನೆಗಳನ್ನು ಹೊರದೇಶದಲ್ಲಿ ಬೇಕಾದಷ್ಟು ಮಾಡಿದ್ದಾರೆ. ಸಾಯುವುದಾದರೆ ಒಂದು ಐವತ್ತು ಜನ ಸತ್ತರೂ ಪರವಾಗಿಲ್ಲ. ಇಡೀ ಜನ ಎಲ್ಲಾ ಉಪವಾಸ ಬಿದ್ದು ಅನುಕೂಲ ಇಲ್ಲದೆ ಸಾಯುವುದರ ಬದಲು ಒಂದು ನಾಲ್ಕು ಜನ ಸತ್ತರೆ ಏನೂ ಆಗುವುದಿಲ್ಲ. ಅಂತಹ ಕಾಲ ಬರುವುದಿಲ್ಲ. ಆದುದರಿಂದ ನೀವು ಯಾವುದಕ್ಕೂ ಮನಸ್ಸು ಕೊಡದೆ ಆ ಯೋಜನೆ ಗಳನ್ನು ಕಾರ್ಯಗತ ಮಾಡಿ. ಐದಾರು ವರ್ಷದ ಅವಧಿ ಹಾಕಿಕೊಂಡು ಮಾಡಿ,ಇನ್ನು ಆರು ವರ್ಷದಲ್ಲಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಬೇಕು, ಎಷ್ಟು ಸಪ್ಲೈ ಆಗಬೇಕು ಎಂಬುದನ್ನು ನೋಡಿಕೊಂಡು ಇಂತಹ ಯೋಜನೆಗಳನ್ನು ಮಾಡಿ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗುಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ಐದು ಜನರ ಹೆಸರು ನನ್ನ ಮುಂದಿದೆ. ಈಗ ಎಂಟು ಘಂಟೆಗೆ ಮಿನಿಸ್ಟರ್ ಉತ್ತರ ಕೊಡಬೇಕು, ಐದು ಜನ ಮಿನಿಸ್ಟರ್ ಮಾತನಾಡುವುದಕ್ಕೆ ಒಂದು ಘಂಟೆ ಹೊತ್ತಾದರೂ ನಾವು ಸಮಯ ಕೊಡಬೇಕಾಗುತ್ತದೆ. ಈಗ ಉಳಿದಿರುವ 15 ನಿಮಿಷವನ್ನು ಐದು ಜನರೂ ಹಂಚಿಕೊಂಡು ಮಾತನಾಡಿ.

+ಶ್ರೀ ಎಂ. ವಿ. ವೆಂಕಟಪ್ಪ(ಮುಳುಬಾಗಿಲು):- ದಯವಿಟ್ಟು ಕ್ಷಮಿಸಬೇಕು ಉಪಾಧ್ಯಕ್ಷಿಣಿಯವರೇ, ನಮ್ಮ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ತೀರ್ಮಾನ ಆಗಿರುವುದು ಇವತ್ತೇ ಇದನ್ನು ಮುಗಿಸಬೇಕೆಂದು. ಆದರೆ ಮುಖ್ಯಮಂತ್ರಿಗಳ ಬೇಡಿಕೆ ಬಗ್ಗೆ ಚರ್ಚೆ ನಾಳೆ 11 ಘಂಟೆಗೆ ಪ್ರಾರಂಭವಾಗಬೇಕು. ಅದನ್ನು ನಾಳೆ ಬೆಳಿಗ್ಗೆ 11 ಘಂಟೆಗೆ ಪ್ರಾರಂಭ ಮಾಡೋಣ.

ಉಪಾಧ್ಯಕ್ಷಿಣಿಯವರು:- ಬೇರೆ ಬಿಸಿನೆಸ್ ಸಹ ಇದೆ..

ಶ್ರೀ ಎಂ. ವಿ. ವೆಂಕಟಪ್ಪ:- ನಾಳೆ 11 ಘಂಟೆಗೆ ಸಭೆಯನ್ನು ಪ್ರಾರಂಭ ಮಾಡುವುದಕ್ಕೆ ಬದಲು 9 ಘಂಟೆಗೆ ಪ್ರಾರಂಭ ಮಾಡೋಣ. ಏತಕ್ಕೆಂದರೆ ಮಂತ್ರಿಗಳು ಉತ್ತರ ನೀಡಿದ ಮೇಲೆ ನಾವು ಅವರ ಹತ್ತಿರ ಅನೇಕ ಕ್ಲಾರಿಫಿಕೇಷನ್ ಕೂಡಾ ಕೇಳಬೇಕಾಗುತ್ತದೆ. ನನಗೆ ಮಾತನಾಡಲು ಹತ್ತು ನಿಮಿಷಗಳ ಕಾಲ ಬೇಕು, ಆದುದರಿಂದ ನಾಳೆ ಬೆಳಗ್ಗೆ 8 ಘಂಟೆಗೆ ಸಭೆ ಪ್ರಾರಂಭ ಮಾಡೋಣ.

ಉಪಾಧ್ಯಕ್ಷಿಣಿಯವರು:- ನಾನು ಇವತ್ತು ಬೆಳಗ್ಗೆ 10 ಘಂಟೆಗೆ ಸಭೆ ಪ್ರಾರಂಭ ಮಾಡೋಣ ಎಂದು ಬೆಲ್ ಹಾಕಿದಾಗ ಬೆಲ್ 45 ಮಿನಿಟ್ಸ್ ಹೊಡೆದಿದೆ. 10-45 ಆದರೂ ಒಬ್ಬ ಸದಸ್ಯರೂ ಬರಲಿಲ್ಲ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- 8 ಘಂಟೆಗೆ ಊಟ ಇದೆ, ಬೇಕಾದರೆ ಊಟ ಮುಗಿಸಿಕೊಂಡು ಬಂದು 9 ಘಂಟೆಗೆ ಮತ್ತೆ ಕುಳಿತುಕೊಳ್ಳೋಣ.

ಶ್ರೀ ಎಂ. ವಿ. ವೆಂಕಟಪ್ಪ:- ನಾವು ಕುಳಿತುಕೊಳ್ಳುವುದಕ್ಕೆ ತಯಾರು ಇದ್ದೇವೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ನಾವೆಲ್ಲಾ ಹಿಂದೆ 11 ಘಂಟೆಯವರೆಗೆ ಕುಳಿತಿದ್ದೇವೆ. ನನ್ನದೇನೂ ಪ್ರಶ್ನೆ ಇಲ್ಲ. ಬೇಕಾದರೆ 9 ಘಂಟೆಗೆ ಮತ್ತೆ ಊಟ ಮಾಡಿ ಬರೋಣ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಮಾನ್ಯ ವೆಂಕಟಪ್ಪನವರೇ, ನೀವು ಹತ್ತು ನಿಮಿಷ ಮಾತನಾಡಿಬಿಡಿ. ಇಷ್ಟು ಹೊತ್ತಿಗೆ ಅರ್ಧ ಮುಗಿದುಹೋಗಿರುತ್ತಿತ್ತು.

ಶ್ರೀ ಎಂ. ವಿ. ವೆಂಕಟಪ್ಪ:- ಮಾನ್ಯ ಉಪಾಧ್ಯಕ್ಷರೇ ಮೈನರ್ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಬಗ್ಗೆ ನಾನು ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನೀರಾವರಿ ಕಾಮಗಾರಿಗಳ ಬಗ್ಗೆ ಬಹುಶಃ ದಕ್ಷಿಣ ರಾಜ್ಯದಲ್ಲಿ ಕೋಲಾರ, ಬೆಂಗಳೂರು ರೂರಲ್ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಉಪೇಕ್ಷಿಸಲಾಗಿದೆ. ಚಿತ್ರದುರ್ಗಕ್ಕೆ 50 ಪರ್ಸೆಂಟ್ ಆದರೂ ಇದೆ. ಆದರೆ ತುಮಕೂರು ಕೋಲಾರ ಜಿಲ್ಲೆಗಳನ್ನು ಸರಕಾರದವರು ಬಹಳ ಕಡೆಗಣಿಸಿದ್ದಾರೆ. ಅದಕ್ಕೆ ಕಾರಣ ಚೀಫ್ ಮಿನಿಸ್ಟರ್ ಬಂಗಾರಪ್ಪನವರು ನಮ್ಮ ಬೆಂಗಳೂರು ಜಿಲ್ಲೆ, ಬೆಂಗಳೂರು ಡಿವಿಜನ್ ಎಂ.ಎಲ್.ಎ.ಗಳನ್ನೆಲ್ಲಾ ಕರೆದು ಹಣದ ಕೊರತೆ ಏನಿಲ್ಲ, ಎಷ್ಟಾದರೂ ಸರಿ, ಯಾವುದಾದರೂ ಪ್ರಾಜೆಕ್ಟ್‌ಗಳು ಇದ್ದರೆ ನಿಮ್ಮ ಜಿಲ್ಲೆಯಲ್ಲಿ ಕೊಡಿ ಎಂದು ಹೇಳಿದರು. ಆಗ ನಮ್ಮ ಜಿಲ್ಲೆಯಲ್ಲಿ ಎರಡು ಪ್ರಾಜೆಕ್ಟ್‌ಗಳ ವಿವರ ಕೊಟ್ಟಿದ್ದೇನೆ. ನಮ್ಮ ತಾಲ್ಲೂಕಿನ ನಾಚನಹಳ್ಳಿ ಫೀಡರ್ ಚಾನಲ್ ಒಂದು, ಎರಡನೆಯದು ಬೇತಮಂಗಲ ವಾಟರ್ ಟ್ಯಾಂಕ್ ಲಿಫ್ಟ್ ಬ್ಯಾಂಕ್ ಕೆನಾಲ್ ಲಿಫ್ಟ್ ಇರಗೇಷನ್ ಬಗ್ಗೆ ಹೇಳಿದ್ದೇನೆ. ಅಲ್ಲಿ ನೂರಾರು ವರ್ಷಕ್ಕೆ ಹಿಂದೆ ಕೆ.ಜಿ.ಎಫ್‌ಗೆ ವಾಟರ್ ಸಪ್ಲೈ ಮಾಡಿದಾಗ ಎರಡು ಸಾವಿರ ಎಕರೆಗೆ ಏನು ನೀರು ಹರಿಯುತ್ತಿತ್ತು, ಪಾಲಾರ್ ರಿವರ್‌ನಲ್ಲಿ ಅದನ್ನು ಕಿತ್ತುಕೊಂಡು ಬಿಟ್ಟರು. ಅಂತಹ ವಿಚಾರದಲ್ಲಿ ಮೊದಲೇ ಬೇಕೆಂದು ಮಂತ್ರಿಗಳು ಹೇಳುತ್ತಾರೆ. ನಾನು ಮಾನ್ಯ ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಮಿನಿಸ್ಟರ್ ರವರ ಹತ್ತಿರ ನಾಲ್ಕೈದು ಸಲ ಹೋಗಿದ್ದೆ. ಪಾಪ ಅವರು ಹೇಳುತ್ತಾರೆ. ಆದರೆ ಅಧಿಕಾರಿಗಳು ಇದನ್ನು ಕಡೆಗಣಿಸಿದ್ದಾರೆ. ಮುಂದಿನ ಅಧಿವೇಶನದಲ್ಲಿ ನಾನು ಈ ಎರಡೂ ಯೋಜನೆಗಳ ಬಗ್ಗೆ ಯಾರು ಕಡೆಗಣಿಸಿದ್ದಾರೆ ಎಂಬ ಬಗ್ಗೆ ಬಹಳ ಜೋರಾಗಿ ತೆಗೆದುಕೊಂಡು ಏನು ಶಾಸ್ತಿ ಮಾಡಬೇಕೆಂದು ನನಗೆ ಗೊತ್ತಿದೆ, ನಾನು ಮಾಡುತ್ತೇನೆ. ಜೊತೆಗೆ ಪಾಲಾರ್ ರಿವರ್ ಬೇಸಿನ್, ಪೆನ್ನಾರ್ ರಿವರ್ ಬೇಸಿನ್ ಇವುಗಳಿಂದ ನಮಗೆ ಅನುಕೂಲವಾಗುತ್ತದೆ. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಮತ್ತು ಕೋಲಾರ ಜಿಲ್ಲೆಯಲ್ಲಿ ಇದರ ಬಗ್ಗೆ ನೋಡುವವರು ಯಾರೂ ಇಲ್ಲ. ಪಾಲಾರ್, ಕಣ್ವ ಮತ್ತು ಪೆನ್ನಾರ್ ರಿವರ್ ಬೇಸಿನ್‌ಗಳು ಏನಿವೆ ಇವುಗಳ ಬಗ್ಗೆ ಮುತವರ್ಜಿ ವಹಿಸಬೇಕೆಂದು ನಾನು ಹೇಳುತ್ತೇನೆ. ಎರಡನೆಯದಾಗಿ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಇಲ್ಲಿ ಇಲ್ಲ. ಆದರೂ ಹೇಳುತ್ತೇನೆ. ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ವೀರೇಂದ್ರಪಾಟೀಲರು ಇದ್ದಾಗ 12 ಲಕ್ಷ ರೂಪಾಯಿಗಳನ್ನು ಟಾರ್ ರೋಡ್ಸ್ ಅಥವಾ ರೋಡ್ಸ್ ಇಂಪ್ರೂವ್‌ಮೆಂಟ್‌ಗೆ ಕೊಟ್ಟಿದ್ದರು. ಆ ಇಂಪ್ರೂವ್‌ಮೆಂಟ್‌ನ್ನು ಈಗ ನಿಲ್ಲಿಸಿದ್ದಾರೆ. ಅದನ್ನು ಮಾಡುತ್ತಿಲ್ಲ. ಮಾನ್ಯ ಅಶ್ವತ್ಥರೆಡ್ಡಿಯವರಿಗೆ ನನ್ನ ಪ್ರಾರ್ಥನೆ ಇಷ್ಟೇ, 12 ಲಕ್ಷ ಕೊಟ್ಟರೆ, 13ಲಕ್ಷ ಕೊಟ್ಟರೆ 224 ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಗಳಿಗೆ 30 ಕೋಟಿ ರೂಪಾಯಿ ಆಗುತ್ತದೆ. ಅದನ್ನು ಕಂಟಿನ್ಯೂ ಮಾಡಬೇಕೆಂಬುದು ಒಂದು. ಇನ್ನು ಮೂರನೆಯದು ಕೆರೆಗಳ ಹೂಳು ಎತ್ತುವುದು. ಮೆಡಮ್, ಬಹುಶಃ ನಾನು ನಿನ್ನೆತಾನೇ ಹೇಳುತ್ತಿದ್ದೆ. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಕಾಲದಲ್ಲಿ ಅವರು ರಾತ್ರಿ ಹೊತ್ತು ಮಲಗುವುದಕ್ಕೆ ಮೊದಲು ಅವರಿಗೆ ಎರಡು ಸುವಾರ್ತೆಗಳು ಬರಬೇಕಾಗಿತ್ತು. ಒಂದು. ಕೆರೆ ಕಟ್ಟಿದ್ದು ಮುಗಿದಿರಬೇಕು, ಎರಡನೆಯದು ದೇವಸ್ಥಾನ ಕಟ್ಟಿದ್ದು ಮುಗಿದಿರಬೇಕು. ಈ ಎರಡು ವಾರ್ತೆಗಳು ಬರುವವರೆಗೂ ಅವರು ಮಲಗುತ್ತಿರಲಿಲ್ಲ. ಇದು ಕೃಷ್ಣದೇವರಾಯನ ಕಾಲದಲ್ಲಿ. ಚೋಳ ರಾಜರ ಕಾಲದಲ್ಲಿ ಕಟ್ಟಿರುವ ಕೆರೆಗಳು ನಮ್ಮ ಜಿಲ್ಲೆಯಲ್ಲಿ ಇವೆ. 4 ಸಾವಿರ ಕೆರೆಗಳು ಇವೆ. ಈ 4 ಸಾವಿರ ಕೆರೆಗಳು ನಮ್ಮ ಜಿಲ್ಲೆಯಲ್ಲೇ ಇವೆ. ರಾಜ್ಯದ ಒಟ್ಟು 40 ಸಾವಿರ ಕೆರೆಗಳಿಗೆ ನೀವು 50 ಲಕ್ಷ ಕೊಟ್ಟರೆ ಯಾವ ಮೂಲೆಗೆ? 50 ಕೋಟಿ ಕೂಡ ಸಾಲದು. ದಯವಿಟ್ಟು ಕೆರೆಗಳ ಹೂಳು ಎತ್ತಬೇಕು. ಅಕಸ್ಮಾತ್ ಆ ಹೂಳು ಎತ್ತುವುದಕ್ಕೆ ಆಗದಿದ್ದರೆ, ಇದೊಂದು ಸಲಹೆ ಅಂದರೆ ನೀವು ನಿಮ್ಮ ಟೆಕ್ನಿಕಲ್ ಪೀಪಲ್ಸ್ ಹತ್ತಿರ ಸಮಾಲೋಚನೆ ಮಾಡಿ. ತೂಬುಗಳ ಹತ್ತಿರ, ಕೊನೆಯಲ್ಲಿ ಯಾವಾಗ ಎಂದರೆ 1 ತಿಂಗಳು ಒಂದೂವರೆ ತಿಂಗಳು ನೀರು ಸಾಲುವುದಿಲ್ಲ,

ಅದಕ್ಕೋಸ್ಕರ ತೂಬುಗಳ ಹತ್ತಿರ, ತೂಬುಗಳ ಅರ್ಧ ಅಡಿ ಡಯಾಮೀಟರ್ ಅಥವಾ 1 ಅಡಿ ಡಯಾಮೀಟರ್ ಇರುತ್ತದೆ. ಸುಮಾರು ನಾಲ್ಕೈದು ಬೋರ್‌ವೆಲ್‌ಗಳನ್ನು ಎರಡು ಲಕ್ಷ ಮೂರು ಲಕ್ಷ ಖರ್ಚು ಮಾಡಿ ಹಾಕಿದರೆ, ಹೂಳು ಎತ್ತಬೇಕಾಗಿಲ್ಲ. ಎರಡು ಮೂರು ಬೋರ್‌ವೆಲ್ ಹಾಕಿದರೆ ಆ ಬೋರ್‌ವೆಲ್ ನೀರು ಆ ತೂವಿನಲ್ಲಿ ಹೋಗಿ, ಒಂದು ತಿಂಗಳು, ಎರಡು ತಿಂಗಳು ಏನು ನೀರು ಸಾಲುವುದಿಲ್ಲ ಅದರ ಬಗ್ಗೆ ಇದು ಸರಿಹೋಗುತ್ತದೆ. ಈ ಸಜೆಷನ್ ಅನ್ನು ನಾನು ಮಾಡುತ್ತಿದ್ದೇನೆ. ದಯವಿಟ್ಟು ಟೆಕ್ನಿಕಲ್ಸ್ ಅಥವಾ ಚೀಫ್ ಇಂಜಿನಿಯರ್ಸ್ ಈ ಬಗ್ಗೆ ಸಮಾಲೋಚನೆ ಮಾಡಿ. ಜೊತೆಗೆ ವಿದ್ಯುತ್‌ಚ್ಛಕ್ತಿ ಬಗ್ಗೆ ಶ್ರೀಮಾನ್ ರಾಮಪ್ಪವರೇ ದಯವಿಟ್ಟು ಕೇಳಿ. ರಾಮಪ್ಪನವರಿಗೆ ಶಕ್ತಿ ಇದೆ. ಅವರು ಚೀಫ್ ಮಿನಿಸ್ಟರ್‌ಗೆ ಬಹಳ ಹತ್ತಿರ ಇರುವವರು. ಅವರಿಗೆ ಸುಮಾರು 440 ಕಿಲೋವಾಟ್ ಅಷ್ಟು ಪವರ್ ಇದೆ. ಅವರು ಅದನ್ನು ಚೆನ್ನಾಗಿ ಉಪಯೋಗಿಸುತ್ತಿಲ್ಲ. ಚೆನ್ನಾಗಿ ಉಪಯೋಗಿಸಬೇಕು. ಅವರನ್ನು ನೋಡಿದಾಗಲೆಲ್ಲಾ ನನಗೆ ಅನಿಸಿದ್ದನ್ನು ಹೇಳಿದರೆ ಏನೂ ತಿಳಿದುಕೊಳ್ಳಬೇಡಿ. ಈ ಮಹಾಭಾರತದಲ್ಲಿ ಭೀಮನ ಪಾತ್ರ ಮಾಡಿದ್ದರಲ್ಲಾ, ರಾಮಾಯಣದಲ್ಲಿ ರಾವಣನ ಪಾತ್ರ ಮಾಡಿದ್ದರಲ್ಲಾ ಅಷ್ಟು ಶಕ್ತಿ ಅವರಿಗೆ ಇದೆ,

ಉಪಾಧ್ಯಕ್ಷಿಣಿಯವರು:- ರಾವಣ ಬೇಡ.

ಶ್ರೀ ಎಂ. ವಿ. ವೆಂಕಟಪ್ಪ:- ಅವರಿಗೆ 440 ಕಿಲೋವಾಟ್‌ನಷ್ಟು ಶಕ್ತಿ ಇದೆ. ಆದರೆ ಅದನ್ನು ಅವರು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಎಲ್ಲೆಲ್ಲಿ ಪ್ರೈವೇಟ್‌ನವರು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಮುಂದೆ ಬರುತ್ತಾರೋ, ಅವರೊಡನೆ ಮಾತುಕತೆಯಾಡಿ ಆದಷ್ಟು ಬೇಗ ಹೆಚ್ಚು ಪವರ್ ಉತ್ಪತ್ತಿ ಮಾಡುವುದಕ್ಕೆ ಏರ್ಪಾಡು ಮಾಡಬೇಕು? ಜೊತೆಗೆ ಮುಳಬಾಗಿಲಿನಲ್ಲಿ 66 ಕೆ.ವಿ.ಗೆ ಏನು ಚೇಂಜ್ ಮಾಡಿದ್ದೀರಿ, ಅಲ್ಲಿಗೆ ಒಂದೇ ಒಂದು ಟ್ರಾನ್ಸ್‌ಫಾರ್ಮರ್ ಕೊಟ್ಟಿದ್ದೀರಿ. ಇನ್ನೊಂದು ಟ್ರಾನ್ಸ್‌ಫಾರ್ಮರ್ ಬಂದರೆ ಫುಲ್ ವೋಲ್ಟೇಜ್ ಇರುತ್ತದೆ. ದಯವಿಟ್ಟು ಅದನ್ನು ಒಂದೆರಡು ತಿಂಗಳಲ್ಲಿ ವ್ಯವಸ್ಥೆ ಮಾಡಿ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಮೇಲೆ ನಮ್ಮ ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ ಎಂಬ ದಪ್ಪ ಪುಸ್ತಕವನ್ನು 1992ನೇ ಇಸವಿಯಲ್ಲಿ ಹೊರಡಿಸಿದ್ದಾರೆ. ನಾನು ಮೊನ್ನೆ ಬೆಳಿಗ್ಗೆ 5 ಗಂಟೆಗೆ ಎದ್ದು ಅದನ್ನು ಓದುತ್ತಿದ್ದೆ. ಅದರಲ್ಲಿ 13 ಸಾವಿರ ಭಾಗ್ಯಜ್ಯೋತಿ ಲೈಟ್ಸ್ ಹಾಕಲಾಗಿದೆ ಎಂದಿದೆ. ನಾನು ಈ ಬಗ್ಗೆ ಆರ್.ಡಿ.ಪಿ.ಆರ್. ಸೆಕ್ರೆಟರಿಯವರನ್ನು ವಿಚಾರಿಸಿದೆ. ಆಗ ಅವರು ಈಗ ಕೊಡುತ್ತಿರುವ 400 ರೂಪಾಯಿಗಳು ಸಾಲುವುದಿಲ್ಲ ಎಂದು ನಾವು ಸರ್ಕಾರಕ್ಕೆ ಪತ್ರ ಬರೆದಿದ್ದೇವೆಂದು ಹೇಳಿದರು. ಈಗ ವರ್ಷೇ ವರ್ಷೇ ಒಂದೊಂದು ಬಜೆಟ್‌ನಲ್ಲೂ ಎಲೆಕ್ಟ್ರಿಕ್ ಸಾಮಾನುಗಳ ಬೆಲೆ ಜಾಸ್ತಿಯಾಗುತ್ತಿದೆ. ಈ 400 ರೂಪಾಯಿಗಳು ಯಾವ ಮೂಲೆಗೂ ಸಾಲುವುದಿಲ್ಲ. ಆದ್ದರಿಂದ ದಯವಿಟ್ಟು ನೀವು ಅದನ್ನು ಐನೂರು ಅಥವಾ ಆರು ನೂರಕ್ಕೆ ಏರಿಸಿದರೆ ಒಳ್ಳೆಯದು. ಕಂಟ್ರಾಕ್ಟರ್ ಯಾರೂ ಬರದೇ ಈ ರೀತಿ ಕಡಿಮೆ ಆಗಿರುವುದು. ಅಧಿಕಾರಿಗಳ ನೆಗ್ಲಿಜೆನ್ಸ್‌ನಿಂದ ಏನೂ ಆಗಿಲ್ಲ. ಈಗಿರುವ ಕೆ.ಇ.ಬಿ ಚೇರ್‌ಮನ್‌ರವರು ಒಳ್ಳೆಯವರು. ನಾವು ಎಷ್ಟೇ ಗಲಾಟೆ ಮಾಡಲಿ ಹೋದವರಿಗೆಲ್ಲಾ ಸಮಾಧಾನವಾಗಿ ಮಾತನಾಡಿ ಏನು ಕೆಲಸ ಆಗಬೇಕೋ ಅದನ್ನು ತಕ್ಷಣ ಫೋನ್ ಮಾಡಿ ಮಾಡಿಸಿಕೊಡುತ್ತಾರೆ. We must have some appreciation for our present KEB Chairman. ಮಾನ್ಯ ಮಂತ್ರಿಗಳು ಇವತ್ತು ಬೆಳಿಗ್ಗೆ ಕೂಡ ಡಾ. ಅಂಬೇಡ್ಕರ್ ಸೆಂಟಿನರಿ ಇಯರ್‌ನಲ್ಲಿ ಒಂದೊಂದು ಕಾನ್ಸಟಿಟ್ಯೂಯೆನ್ಸಿಗೆ ಒಂದು ಸಾವಿರ ಭಾಗ್ಯಜ್ಯೋತಿ ಲೈಟ್ಸ್ ಹಾಕುವ ಏರ್ಪಾಡು ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಖಂಡಿತವಾಗಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ನಮ್ಮ ಶಿವಮೂರ್ತಿಯವರ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಮುಳಬಾಗಿಲು ಟೌನ್ ಕೃಷ್ಣದೇವರಾಯನ ಕಾಲದಲ್ಲಿ ಎರಡನೇ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ನಮ್ಮಲ್ಲಿ ಸುಮಾರು 101 ದೇವಸ್ಥಾನಗಳಿವೆ. ಇಂಡಿಯಾ ಗೌರ್ನಮೆಂಟ್‌ನವರು ಪ್ರೊಟೆಕ್ಟೆಡ್ ಮಾನ್ಯುಮೆಂಟ್ಸ್ ಎಂದು ಎಲ್ಲಾ ಕಡೆ ಬೋರ್ಡ್ಸ್ ಹಾಕಿದ್ದಾರೆ. ಉದಾಹರಣೆಗೆ

ಕುರುಡುಮಲೆ ಯಲ್ಲಿ 22 ಅಡಿ ಎತ್ತರದ ಗಣೇಶ ಇದೆ. ಅಂತಹ ವಿಗ್ರಹ ಬೇರೆ ಎಲ್ಲೂ ಇಲ್ಲ. ನಮ್ಮ ಇಂಡಿಯಾದಲ್ಲೇ ಇಲ್ಲ. ಮುಳಬಾಗಿಲು ಆಂಜನೇಯ ವಿಗ್ರಹ 18 ಅಡಿ ಎತ್ತರ ಇದೆ. ಹಾಗೆಯೇ ಅನೇಕ ಪವಿತ್ರವಾದ ಸ್ಥಳಗಳು ಮುಳಬಾಗಿಲು ಟೌನ್‌ನಲ್ಲಿ ಇವೆ. ಅದನ್ನು ನೀವು ಡಿಸ್ಟ್ರಿಕ್ಟ್ ಟೂರಿಸ್ಟ್ ಸೆಂಟರ್‌ನಲ್ಲಿ ಸೇರಿಸಿಕೊಳ್ಳಿ. ನಂದಿ, ಮುಳಬಾಗಿಲು ಕೆ.ಜಿ.ಎಫ್. ಚಿನ್ನದಗಣಿ ಪ್ರದೇಶಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕು. ನಮ್ಮಲ್ಲಿ ಟೂರಿಸ್ಟ್ ಹೋಟೆಲ್ ಕಟ್ಟಿ ಒಂದು ವರ್ಷ ಆಯಿತು. ಇದಕ್ಕೆ ಇಂಡಿಯಾ ಗೌರ್ನಮೆಂಟ್‌ನವರು 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹೋಟೆಲ್‌ನಲ್ಲಿ 12 ರೂಮುಗಳಿವೆ. ಅದು ಬಹಳ ಸೊಗಸಾಗಿದೆ ಹಾಗೂ ಅಶೋಕ ಹೋಟೆಲ್ ಟೈಪ್ ಇದೆ. ಅದನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಅದನ್ನು ಆದಷ್ಟು ಬೇಗನೆ ಪ್ರಾರಂಭ ಮಾಡಬೇಕೆಂದು ಹೇಳಿ ಕೊನೆಗಾದರೂ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

8-00 ಪಿ. ಎಂ.

ಶ್ರೀ ಹೆಚ್. ಎಂ. ರೇವಣ್ಣ(ಮಾಗಡಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಲೋಕೋಪಯೋಗಿ, ನೀರಾವರಿ, ಪ್ರವಾಸೋದ್ಯಮ, ಸಣ್ಣ ನೀರಾವರಿ, ಹಾಗೂ ವಿದ್ಯುಚ್ಛಕ್ತಿ ಇಲಾಖೆಗಳ ಬೇಡಿಕೆಗಳಿಗೆ ನಾನು ಅನುಮೋದನೆ ಕೊಡುತ್ತಾ ಕೆಲವು ಸಲಹೆ ಕೊಡಲು ಇಚ್ಛಿಸುತ್ತೇನೆ. ಮಾಗಡಿ ತಾಲ್ಲೂಕು ಮಳೆಯಾಶ್ರಿತರ ಪ್ರದೇಶ ಇಲ್ಲಿ ಮೂರು ಅಣೆಕಟ್ಟುಗಳಿವೆ. ಮೊದಲನೆಯದು ತಿಪ್ಪಗೊಂಡನಹಳ್ಳಿ, ಎರಡನೆಯದು ,ಮಂಚನಬೆಲೆ, ಮೂರನೆಯದು ವೈದ್ಯಗುಡ್ಡ. ಈ ಮೂರು ಅಣೆಕಟ್ಟುಗಳಿಗೆ ಮಾಗಡಿಯ ಜಮೀನು ಮುಳುಗಡೆಯಾಗಿ ಇಂದು ನೀರಿನ ಉಪಯೋಗ ಸ್ವಲ್ಪವೂ ನಮಗೆ ಸಿಗುತ್ತಿಲ್ಲ. ತಿಪ್ಪಗೊಂಡನಹಳ್ಳಿ ನೀರು ಬೆಂಗಳೂರಿಗೆ ಕುಡಿಯಲು ಪೂರ್ಣ ಉಪಯೋಗವಾಗುತ್ತಿದೆ. ಮಂಚನಬೆಲೆಯ ನೀರು ರಾಮನಗರ ಮತ್ತು ಕನಕಪುರಕ್ಕೆ ಮೀಸಲಾಗಿದೆ. ಇನ್ನು ವೈದ್ಯ ಗುಡ್ಡದಿಂದ ಕೂಡ ನಮಗೆ ಕೇವಲ 1 ಸಾವಿರ ಎಕರೆಗೆ ನೀರಾವರಿಯಾಗುತ್ತಿದೆ. ಇದರಿಂದ ನಾನು ಸಂಬಂಧಪಟ್ಟ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ , ನಾವು ಜಮೀನನ್ನು ಕಳೆದುಕೊಂಡಂತಹ ಜನ. ನಮ್ಮ ರೈತರಿಗೂ ಕೂಡ ನೀರಿನ ಅವಶ್ಯಕತೆ ಇದೆ. ಆದ್ದರಿಂದ ನಮಗೆ ಈ ಎರಡು ಜಲಾಶಯಗಳಿಗೆ ಏತ ನೀರಾವರಿ ಪ್ರಾಧಿಕಾರ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಹೇಮಾವತಿ ಜಲಾಶಯದ ನಾಲೆ ನಮ್ಮ ತಾಲ್ಲೂಕಿನ ಪಕ್ಕದ ಹಳ್ಳಿಯವರೆಗೆ ಬಂದಿದೆ. ಹಿಂದಿನ ನಕ್ಷೆಯಲ್ಲಿ ಮಾಗಡಿ ತಾಲ್ಲೂಕು ಕೂಡ ಅದರಲ್ಲಿ ಒಳಪಟ್ಟಿದ್ದರೂ ಈಗಿನ ಕಾಮಗಾರಿಗಳಲ್ಲಿ ಅದು ಕೈಬಿಟ್ಟಿದೆ. ಆದ್ದರಿಂದ ಈಗಾಗಲೇ ನೀರಾವರಿ ಸಚಿವರು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಏನೆಂದರೆ, ಹೇಮಾವತಿ ನೀರಿನಿಂದ ಏತ ನೀರಾವರಿ ಮಾಡಿ ಆ ನೀರಿನಿಂದ ವೈದ್ಯ ಗುಡ್ಡಕ್ಕೂ ಮತ್ತು ಮಂಚನಬೆಲೆ ಜಲಾಶಯಕ್ಕೂ ಸೇರಿಸುವ ಒಂದು ಹೈಪವರ್ ಕಮಿಟಿ ಮಾಡುತ್ತೇವೆಂದು, ಇನ್ನೂ ಕೂಡ ಆ ಸಮಿತಿಗೆ ಆದೇಶ ಬಂದಿಲ್ಲ. ಅದನ್ನು ತಕ್ಷಣ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಸಣ್ಣ ನೀರಾವರಿ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರವಾದ ತಾವರೆಕೆರೆ ಹೋಬಳಿಯಲ್ಲಿ 22 ಲಕ್ಷ ರೂನಲ್ಲಿ ಅಜ್ಜನಹಳ್ಳಿ ಕೆರೆ ಎರಡು ವರ್ಷದ ಹಿಂದೆ ಬಜೆಟ್‌ನಲ್ಲಿ ಮಂಜೂರಾಗಿದ್ದರೂ ಕೂಡ ಆ ಕೆಲಸವನ್ನು ತೆಗೆದುಕೊಳ್ಳಲು ಮೂರನೇ ಒಂದು ಭಾಗದ ಮೊಬಲಗನ್ನು ಬಜೆಟ್‌ನಲ್ಲಿ ಇಟ್ಟಿಲ್ಲ, ಕೇವಲ ಒಂದೇ ಲಕ್ಷ ಇಟ್ಟಿರುವುದರಿಂದ ಕೆಲಸ ಮೂರು ವರ್ಷದಿಂದ ಪ್ರಾರಂಭವಾಗಿಲ್ಲ, ಅದನ್ನು ಈ ಸಲ ಸಚಿವರು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪುನರ್ವಸತಿ ಬಗ್ಗೆ ಹೇಳುವುದಾದರೆ ಅಪ್ಪೇರಳ್ಳಿ, ವಾಡಹಳ್ಳಿ ಮುಂತಾದ ಅನೇಕ ಗ್ರಾಮಗಳು ಮಂಚನಬೆಲೆ ಜಲಾನಯನದಲ್ಲಿ ಮುಳುಗಿದ್ದು ಆ ಜನರ ಸ್ಥಿತಿ ಬಹಳ ಶೋಚನೀಯವಾಗಿದೆ. ಅವರು ಕಳೆದ 20 ವರ್ಷಗಳಿಂದಲೂ ಕೂಡ ಇನ್ನೂ ಜಿಂಕ್‌ಶೀಟಿನ ಮನೆಯಲ್ಲಿಯೇ ವಾಸವಾಗಿದ್ದಾರೆ. ಅವರಿಗೆ ಜಮೀನು ಸಿಕ್ಕಿಲ್ಲ, ಮನೆ ಕಟ್ಟಿಸಿ ಕೊಟ್ಟಿಲ್ಲ ಹಾಗೂ ಯಾವುದೇ ವಿಧವಾದ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಮೂರು ಪುನರ್ವಸತಿ ಜಾಗಗಳಾದ ಚೋಳನಾಯಕನಹಳ್ಳಿ, ಕೋಲೂರು

ಕಡಬಗೆರೆ ಪ್ರದೇಶಗಳಿದ್ದರೂ ಅವರಿಗೆ ಸಮರ್ಪಕವಾಗಿ ಮನೆ ಕಟ್ಟಿಕೊಡುವುದಾಗಲಿ ಅಥವಾ ಜಮೀನು ನೀಡುವುದಾಗಲಿ ಸರ್ಕಾರದ ವತಿಯಿಂದ ಆಗಿಲ್ಲ. ಈ ಕಡೆ ಮಾನ್ಯ ಸಚಿವರು ಗಮನಕೊಟ್ಟು ನಿಜವಾಗಿಯೂ ಜಮೀನು ಕಳೆದುಕೊಂಡಿರತಕ್ಕ ಜನತೆಯ ಕಷ್ಟ ನಿವಾರಿಸಲು ಒಂದು ಸಮಿತಿ ಮಾಡಿ ಕೂಡಲೇ ಆ ಜನರ ಕಷ್ಟ ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳುವುದಾದರೆ ಬೆಂಗಳೂರು ಜಿಲ್ಲೆಯಲ್ಲಿ ಕಳೆದ ವರ್ಷ ಅತಿ ಮಳೆಯಿಂದ ಬಹಳ ಮನೆಗಳು ಹಾಳಾಗಿವೆ. ಈ ಮನೆಗಳ ರಿಪೇರಿಗೆ ಇವತ್ತು ಏನು ಹಣ ಕೊಡ್ತೀವಿ ಅಂತ ಹೇಳ್ತಿದ್ದೀರಿ ಅದು ಸಾಲುವುದಿಲ್ಲ, ಅದನ್ನು ಹೆಚ್ಚಿಸಬೇಕು ಹಾಗೂ ಬೆಂಗಳೂರು ಕೋಲಾರ, ತುಮಕೂರು ಜಿಲ್ಲೆಗಳಿಗೆ ಹಣವನ್ನು ನಿಗಧಿಮಾಡಿ ಈ ಜಿಲ್ಲೆಗಳಲ್ಲಿ ಕೆಟ್ಟಿರುವ ರಸ್ತೆಗಳನ್ನು ದುರಸ್ತಿ ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸೇತುವೆಗಳ ಬಗ್ಗೆ ಹೇಳುವುದಾದರೆ ಬಹಳ ಸೇತುವೆಗಳು ಬಿದ್ದುಹೋಗಿವೆ, ಉದಾಹರಣೆಗೆ ಚಿಕ್ಕತೊರೆ ಪಾಳ್ಯದ ಸೇತುವೆ ಕೆಲಸ ಪ್ರಾರಂಭವಾಗಿದೆ. ಆದರೆ ಸೇತುವೆಯ ಎತ್ತರ ಕಡಿಮೆಯಾಗಿದೆ. ನಾವು ಎಷ್ಟೇ ಸಲ ಸಂಬಂಧಪಟ್ಟ ಮುಖ್ಯಸ್ಥರನ್ನು ಕೇಳಿಕೊಂಡರೂ ಅದರ ಎಸ್ಟಿಮೇಟ್ ಅನ್ನು ಮಾರ್ಪಾಡು ಮಾಡಿಲ್ಲ. ಇದರ ಕೆಲಸ ಮುಗಿಸುತ್ತಾರಯೇ ಹೊರತು ಅದರಿಂದ ಜನಕ್ಕೇನು ಉಪಯೋಗವಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಆದಕಾರಣ ಈ ಚಿಕ್ಕತೊರೆಪಾಳ್ಯದ ಸೇತುವೆಗೆ ಬೇರೆ ಎಸ್ಟಿಮೇಟ್ ಮಾಡಿಸಿ ಅದರ ಎತ್ತರವನ್ನು ಹೆಚ್ಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿರುವ ಸಣ್ಣಪುಟ್ಟ ಕೆರೆಗಳಲ್ಲಿ ಹೂಳು ತುಂಬಿ ಬಹಳ ಕೆರೆಗಳಲ್ಲಿ ನೀರೇ ಇಲ್ಲದಂತಾಗಿದೆ. ಈ ಕೆರೆಗಳಲ್ಲಿನ ಹೂಳೆತ್ತುವ ಕಾರ್ಯವನನು ಖಂಡಿತ ನಮ್ಮ ತಾಲ್ಲೂಕಿನಲ್ಲಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ನನ್ನ ತಾಲ್ಲೂಕಿಗೆ ಮೂರು ಭಾಗಗಳಿಂದ ತೊಂದರೆಯಾಗುತ್ತಿದೆ. ಮಾಗಡಿಗೆ ವಿದ್ಯುತ್ ಬರಬೇಕಾದರೆ ಪೀಣ್ಯದಿಂದ ನಮಗೆ ಲೈನ್ ಇದೆ. ಪೀಣ್ಯದಿಂದ ತಿಪ್ಪಗೊಂಡನಹಳ್ಳಿಗೆ ಬಂದು ಮಾಗಡಿಗೆ ರೀಚ್ ಆಗುವಷ್ಟರ ವೇಳೆಗೆ ನಮಗೆ ಸರಿಯಾಗಿ ವಿದ್ಯುತ್ ಸರಬರಾಜಾಗುತ್ತಿಲ್ಲ, ಅದನ್ನು ತಪ್ಪಿಸಬೇಕು, ಪೀಣ್ಯದ ಮೂಲಕ ಬಂದಿರುವ ಲೈನ್ ಅನ್ನು ತೆಗೆದುಬಿಟ್ಟರೆ ರೈತರಿಗೆ ಮತ್ತು ನೇಕಾರರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಈ ಲೈನ್‌ನ್ನು ಹಾಗೆಯೇ ಉಳಿಸಬೇಕು ಮತ್ತು ಕುಣಿಗಲ್‌ನಿಂದ ಬರುವ ಲೈನ್‌ನಲ್ಲಿ ಜಾನ್‌ಸನ್ ಫ್ಯಾಕ್ಟರಿ ಬಂದಿದೆ, ಅದಕ್ಕೆ ಸಪರೇಟಾಗಿ ವಿದ್ಯುತ್ ಒದಗಿಸಬೇಕು, ರೈತರಿಗೆ ಬರುವ ವಿದ್ಯುತ್ತನ್ನು ಅವರಿಗೆ ನೀಡುವುದರಿಂದ ಆ ಭಾಗದ ರೈತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಖಂಡಿತ ಆ ಲೈನನ್ನು ಬದಲಾಯಿಸಿಕೊಡಬೇಕೆಂದು ಮಾನ್ಯ ವಿದ್ಯುತ್ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮಾಗಡಿ ಪಟ್ಟಣದಲ್ಲಿ 6.3 ಕೆ.ವಿ. ಸಬ್‌ಸ್ಟೇಷನ್ ಬಂದಿದೆ, ಇದು ಹೆಚ್ಚಿನ ಲೋಡ್ ತಡೆಯುತ್ತಿಲ್ಲ, ಆದ್ದರಿಂದ ಮತ್ತೊಂದು ಸಬ್‌ಸ್ಟೇಷನ್ನನ್ನು ಮಾಗಡಿಗೆ 6.3 ಕೆ.ವಿ.ಯದು ಮಾಡಿ ಕೊಡಬೇಕು, ನನ್ನ ಕ್ಷೇತ್ರದ ಕುದೂರಿನಲ್ಲಿ ಬಹಳ ನೇಕಾರರು ಇರುವುದರಿಂದ ಅಕೌಂಟ್ ಸೆಕ್ಷನನ್ನು ಅಲ್ಲಿ ಮಾಡಿಕೊಡಬೇಕು. ಇನ್ನು ಹರಿಜನಬಸ್ತಿಗಳಲ್ಲಿ ಇಂದು ಆರ್.ಇ.ಸಿ. ಸ್ಕೀಮ್‌ನಲ್ಲಿ ಮಾಗಡಿ ತಾಲ್ಲೂಕು ಪೂರ್ಣ ಎಲೆಕ್ಟ್ರಿಫಿಕೇಷನ್ ಆಗಿದೆ ಎಂಬ ದಾಖಲೆ ಇದೆ, ಆದರೆ ಇನ್ನೂ ಅನೇಕ ಹರಿಜನ ಬಸ್ತಿಗಳಿಗೆ ವಿದ್ಯುತ್ ನೀಡಿಲ್ಲ, ಆದ್ದರಿಂದ ವಿದ್ಯುತ್ತನ್ನು ಈ ಹರಿಜನ ಬಸ್ತಿಗಳಿಗೂ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಪ್ರವಾಸೋದ್ಯಮ ಇಲಾಖೆ ಬಗ್ಗೆ ಒಂದೆರಡು ಮಾತು ಆಡಲು ಇಷ್ಟಪಡುತ್ತೇನೆ. ಮಾಗಡಿ ತಾಲ್ಲೂಕು ಸಾವನದುರ್ಗ ಒಳ್ಳೆಯ ದೇವಸ್ಥಾನ ಹೊಂದಿದ ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಾಡಾಗಿದೆ. ಆ ಜಾಗದಲ್ಲಿ ಒಂದು ಟೂರಿಸ್ಟ್ ಹೋಮನ್ನು ಮಾಡಿಕೊಡಬೇಕು. ಒಂದು ದಿನದ ಪ್ರವಾಸದಲ್ಲಿ ಬೆಂಗಳೂರಿನಿಂದ ಹೊರಡುವ ಬಸ್ ಬೆಂಗಳೂರು, ತಿಪ್ಪಗೊಂಡನಹಳ್ಳಿ, ಮಾಗಡಿ, ಮಂಚನಬೆಲೆ ದೊಡ್ಡ ಆಲದ ಮರದ ಮೂಲಕ ಬೆಂಗಳೂರಿಗೆ ಬಂದಿದ್ದೇ ಆದರೆ ಒಂದು ದಿನದ ಪ್ರವಾಸ ನಿಜವಾಗೂ ಪ್ರೇಕ್ಷಣೀಯದ್ದಾಗಿರುತ್ತದೆ ಹಾಗೂ ಅದು ಸಾರ್ಥಕವಾಗುತ್ತದೆ. ಆ ದಿಸೆಯಲ್ಲಿ ಒಂದು ಬಸ್ ಅನ್ನು ಹಾಕಿಕೊಡಬೇಕೆಂದು ಟೂರಿಸಂ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ವಾರ್ತಾ ಇಲಾಖೆಯಿಂದ ಬಹಳ

ಟಿ.ವಿ.ಸೆಟ್ಸ್ ಕೊಡುತ್ತಿದ್ದೇವೆಂದು ಹೇಳಿದ್ದೀರಿ, ನಮ್ಮ ಪುಸ್ತಕದಲ್ಲಿದೆ, ಆದರೆ ಕಲರ್ ಟಿ.ವಿ.ಕೊಡ್ತೀವಿ, ಕಪ್ಪು ಬಿಳುಪು ಕೊಡುವುದಿಲ್ಲ ಎಂದು ಹೇಳಿದ್ದು ಇಲ್ಲಿವರೆಗೆ ಕಲರ್ ಟಿ.ವಿ.ಕೊಡಲಿಲ್ಲ, ಈ ಹರಿಜನ ಬಸ್ತಿಗಳಿಗೆ ಖಂಡಿತ ನೀವು ಟಿ.ವಿ. ಸೆಟ್ಸ್ ಕೊಡಬೇಕು, ಮತ್ತು ಲೋಕಸಭೆಯ ಪ್ರಶ್ನೋತ್ತರಗಳನ್ನು ದೂರದರ್ಶನದ ಮೂಲಕ ಬೆಳಿಗ್ಗೆ ಹೊತ್ತು ಹೇಗೆ ತೋರಿಸುತ್ತಾದ್ದಾರೋ ಅದೇ ರೀತಿ ನಮ್ಮ ಸದನದ ಪ್ರಶ್ನೋತ್ತರಗಳನ್ನು ದೂರದರ್ಶನದಲ್ಲಿ ಬಿತ್ತರಿಸಲು ಮಾನ್ಯ ಸಚಿವರು ಸಂಬಂಧಪಟ್ಟ ಕೇಂದ್ರ ಸಚಿವರನ್ನು ಸಂಪರ್ಕಿಸಿ ಈ ಕಾಲದಲ್ಲಿ ಅದನ್ನು ಸೇರಿಸಬೇಕೆಂದು ಹೇಳುತ್ತಾ ನನ್ನ ಈ ಎರಡು ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಭಾರಿ ನೀರಾವರಿ ಸಚಿವರು, ಸಣ್ಣ ನೀರಾವರಿ ಸಚಿವರು, ಲೋಕೋಪಯೋಗಿ, ವಿದ್ಯುಚ್ಛಕ್ತಿ ಮತ್ತು ಪ್ರವಾಸೋದ್ಯಮ ಸಚಿವರುಗಳು ಮಂಡಿಸಿರುವ ಬೇಡಿಕೆಗಳನ್ನು ಬೆಂಬಲಿಸಿ ನನಗೆ ಕೊಟ್ಟಿರುವ ಕಾಲವನ್ನು ಮನಸ್ಸಿನಲ್ಲಿಟ್ಟುಕೊಂಡು ನೀವು ಬೆಲ್ ಹೊಡೆಯುವುದಕ್ಕೆ ಮುಂಚೆ ಮುಗಿಸುತ್ತೇನೆ. ದಯವಿಟ್ಟು ಬೆಲ್ ಹೊಡಿಬೇಡಿ ಅಂತ ಕೇಳಿಕೊಂಡು ಪ್ರಾರಂಭ ಮಾಡುತ್ತೇನೆ. ಲೋಕೋಪಯೋಗಿ ಇಲಾಖೆಗೆ ಮಾನ್ಯ ಅಶ್ವತ್ಥರೆಡ್ಡಿಯವರು ಬರುವುದಕ್ಕೆ ಮುಂಚೆ ರಸ್ತೆಗಳು ಹೇಗಿತ್ತು ಅಂದರೆ, ಈ ಬಂಡೀಪುರ ರಸ್ತೆಗಿಂತ ಕಡೆಯಾಗಿತ್ತು. ನಮ್ಮ ಶ್ರೀಮತಿ ದಮಯಂತಿಯಮ್ಮನವರು ಇಲ್ಲೇ ಇದ್ದಾರೆ, ಅವರು ಅಧ್ಯಕ್ಷ ಸ್ಥಾನದಲ್ಲಿದ್ದಾಗ ಹೇಳೋಣ ಅಂತ ಇದ್ದೆ. ನಮ್ಮ ಊರ ಮೇಲೆ ಹೋಗುವಂಥಾದ್ದು, ಅವರ ರಸ್ತೆಯೊಂದಿದೆ, ರಾತ್ರಿ ಹೊತ್ತು ಅಲ್ಲಿ ಲಾರಿಗಳು ಓಡಾಡುತ್ತವೆ. ಲಾರಿಯಲ್ಲಿ ಈ ಕಡೆಯಿಂದ ಹೋಗೋನು ಕೆಳಕ್ಕೆ ಇಳಿಯೋ ಹಾಗಿಲ್ಲ, ಆ ಕಡೆ ಬರೋನೂ ಕೆಳಕ್ಕೆ ಇಳಿಯೋ ಹಾಗಿಲ್ಲ. ಅವನೂ, ಇವನೂ ಒಂದು ಗಂಟೆ ನಿಲ್ಲಿಸಿಕೊಳ್ಳೋದು. ಆ ಕಡೆ ಹತ್ತಿಪ್ಪತ್ತು ಲಾರಿಗಳು, ಈ ಕಡೆ ಹತ್ತಿಪ್ಪತ್ತು ಲಾರಿಗಳು ನಿಂತಿರುತ್ತವೆ. ಇಂತಹ ಒಂದು ಪರಿಸ್ಥಿತಿ ನಮ್ಮ ರಾಜ್ಯದ ಹೆದ್ದಾರಿಗಳಲ್ಲಿತ್ತು. ಶ್ರೀರಂಗಪಟ್ಟಣ- ಬೀದರ್ ರಸ್ತೆ, ಏನಿದೆ, ಮೈಸೂರು ರಸ್ತೆ ಏನಿದೆ, ಅಲ್ಲೆಲ್ಲಾ ಲಾರಿಗಳು ಸಲೀಸಾಗಿ ತಿರುಗಾಡೋಕೆ ಆಗ್ತಾ ಇರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಟ್‌ಲೀಸ್ಟ್ ಸೈಡ್‌ಮಾಡುವುದು, ರಸ್ತೆ ಅಗಲ ಮಾಡುವುದು ಮಾಡಿದ್ದರಿಂದ ಸ್ವಲ್ಪ ನಮ್ಮ ಸರ್ಕಾರದ ಮರ್ಯಾದೆ ಉಳಿಯೋ ಮಟ್ಟಕ್ಕೆ ಬಂದಿದೆ. ಬರೀ ಪಿಡಬ್ಲ್ಯೂಡಿ ರಸ್ತೆಗಳಿಂದ ನಮ್ಮ ಮರ್ಯಾದೆ ಉಳಿಯುತ್ತದೆಯೇ ಹೊರತು ಜಿಲ್ಲಾ ಪರಿಷತ್ತಿನ ರಸ್ತೆಗಳಿಂದ ನಮ್ಮ ಮರ್ಯಾದೆ ಮೂರು ಕಾಸಿಗೆ ಹರಾಜು ಆಗುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಏನೆಂದರೆ ಇವತ್ತು ನೀವು ಏನು ಜಿಲ್ಲಾಪರಿಷತ್ತಿನಿಂದ ಹತ್ತು ಸಾವಿರ ಕಿಲೋಮೀಟರ್ ರಸ್ತೆಯನ್ನು ವಹಿಸಿಕೊಳ್ಳುತ್ತೇವೆ ಎಂದು ಏನು ಹೇಳಿದ್ದೀರೊ ಇದರಿಂದ ಪ್ರಯೋಜನವಾಗುವುದಿಲ್ಲ. ಇವತ್ತು ಸರ್ಕಾರಕ್ಕೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರಿಗೆ ಇಷ್ಟೊಂದು ಸಹಾಯವನ್ನು ಮಾಡುತ್ತೇವೆ ಎನ್ನತಕ್ಕಂಥ ಉದ್ದೇಶ ಸರ್ಕಾರಕ್ಕೆ ಇರತಕ್ಕಂಥ ಸಂದರ್ಭದಲ್ಲಿ ನೀವು ಆ ರೂಟನ್ನು ಬಿಟ್ಟರೆ ಜಿಲ್ಲಾ ಪರಿಷತ್ತಿಗೆ ಬೇಕಾದ ಹಣ ಕೊಡಲೇಬೇಕಾಗುತ್ತದೆ. ಅಲ್ಲಿ ಅವರಿಗೆ ಇರತಕ್ಕಂಥ ಶಕ್ತಿ ಬಹಳ ಕಡಿಮೆ ಇದೆ. ಆದ್ದರಿಂದ ನೀವು ಕೇವಲ ಹಳ್ಳಿಯಿಂದ ಹಳ್ಳಿಗಳಿಗೆ ಸಣ್ಣ ರಸ್ತೆಗಳನ್ನು ಮಾತ್ರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬಿಟ್ಟು, ಎಲ್ಲಾ ರಸ್ತೆಗಳನ್ನು ಸಹಾ ತಾವು ಸರ್ಕಾರ ವಹಿಸಿಕೊಳ್ಳಬೇಕು. ಎಂದು ಹೇಳಿ ನಾನು ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ. ನೀವು ಕೇವಲ ಹತ್ತು ಸಾವಿರ ಕಿಲೋಮೀಟರ್ ರಸ್ತೆಯನ್ನು ವಹಿಸಿಕೊಳ್ಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲಾ ದೊಡ್ಡ ರಸ್ತೆಗಳನ್ನು ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ನೀವು ರಸ್ತೆಗಳನ್ನು ಕೊಡದೇ ಹೋದರೆ ಜನರು ಕ್ಷಮಿಸುವುದಿಲ್ಲ. ಜನರಿಗೆ ದೂರು ಹೇಳುವುದಕ್ಕೆ ಹಳೆಯ ಕಾಲವಲ್ಲ ಇದು. ವೋಟನ್ನು ತೆಗೆದುಕೊಂಡು ಐದು ವರ್ಷಕ್ಕೆ ಒಂದು ಸಾರಿ ಹೋಗಿದ್ದರೂ ಜನರು ಕೇಳುತ್ತಿದ್ದರು. ಈಗ ಪ್ರತಿ ಹಂತದಲ್ಲೂ ಜನ ಎಚ್ಚೆತ್ತಿದ್ದಾರೆ. ನಮಗೆ ಛೀಮಾರಿ ಹಾಕುತ್ತಾರೆ. ಶಾಸಕರುಗಳು ಹಳ್ಳಿಗೆ ಹೋಗುವುದಕ್ಕಾಗುವುದಿಲ್ಲ. ಇದರ ಬಗ್ಗೆ ತಾವು ಗಮನವನ್ನು ಹರಿಸಬೇಕು ಎಂದು ಹೇಳಿ ನಾನು ವಿನಂತಿ ಮಾಡುತ್ತಿದ್ದೇನೆ. ಸನ್ಮಾನ್ಯ ಹನುಮೇಗೌಡರು ಅವರದೇ ಆದಂಥ ಭಾಷೆಯಲ್ಲಿ ಚನ್ನಾಗಿ ಹೇಳಿದರು, ಈ

ಡ್ಯೂಪ್ಲಿಕೇಟ್ ಮ್ಯಾನೇಜ್‌ಮೆಂಟ್ ಇದೆಯಲ್ಲಾ, ಇದನ್ನು ತಪ್ಪಿಸಬೇಕು. ಏಕೆಂದರೆ ಐದು ಲಕ್ಷ ರೂಪಾಯಿ ಒಂದು ಸಬ್ ಡಿವಿಜನ್‌ಗೆ ಕೊಡತಕ್ಕಂಥದ್ದನ್ನು ಇಡೀ ಒಂದು ವಿಭಾಗಕ್ಕೆ ಕೊಡುತ್ತೀರಿ. ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು ಅಲ್ಲಿ ಕೂರಿಸುತ್ತೀರಿ. ಮೈನರ್ ಇರಿಗೇಷನ್ ನೀವು ಕೊಟ್ಟಿರತಕ್ಕಂಥಾ ಸರ್ಕಾರದ ಹಣ ಲೆಕ್ಕ ಹಾಕಿದರೆ ಹೊದವರ್ಷ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಈ ಸ್ಟೇಟ್‌ನಲ್ಲಿ ಇರತಕ್ಕಂಥವರು ಮಾಡಬಹುದು. ಇದನ್ನೆಲ್ಲಾ ಕ್ರೋಢೀಕರಿಸಿ ಏನು ಹೆಚ್ಚು ಮ್ಯಾನೇಜ್‌ಮೆಂಟ್‌ಗೆ ಹಣವನ್ನು ಕೊಡುತ್ತೀರಿ, ಅದಕ್ಕೆ ಸ್ವಲ್ಪ ಕಡಿವಾಣವನ್ನು ಹಾಕಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಮತ್ತೆ ನನ್ನ ತಾಲ್ಲೂಕಿನಲ್ಲಿ ಪಿಡಬ್ಲ್ಯೂಡಿ ಸಬ್ ಡಿವಿಜನ್‌ಗಳು ಇಲ್ಲ. ಪಿಡಬ್ಲ್ಯೂಡಿ ಸಬ್ ಡಿವಿಜನ್ ಕೆ.ಆರ್.ಪೇಟೆಯಲ್ಲಿ ಇರತಕ್ಕಂಥದ್ದು. ಇದರ ಬಗ್ಗೆ ಸರ್ಕಾರದವರು ಒಂದು ನಿಗದಿ ಮಾಡಬೇಕು. ಎರಡು ತಾಲ್ಲೂಕು ಅಥವಾ ಮೂರು ತಾಲ್ಲೂಕುಗಳನ್ನು ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಕೊಡುತ್ತೀರಿ. ಆತ ಕ್ರಮವಾಗಿ ವಾರಕ್ಕೆ ಎರಡು ದಿವಸವಾದರೂ ಜನರ ಕೈಯಲ್ಲಿ ಇಲ್ಲಿ ಸಿಗುತ್ತಾನೆ. ವಾರಕ್ಕೆ ಎರಡು ದಿವಸ ಒಂದೊಂದು ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಅವರು ಇರತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇದೂ ಅಲ್ಲದೆ ತಾವು ಓಬೀರಾಯನ ಕಾಲದ ಜೀಪನ್ನು ಇನ್ನೂ ಇಟ್ಟುಕೊಂಡಿದ್ದೀರಿ. 92ನೇ ಇಸವಿಯಲ್ಲಿ ಬಹುಶಃ ನಿಮ್ಮ ಹತ್ತಿರ ಇರತಕ್ಕಂಥ ಜೀಪನ್ನು ಹಿಂದೆ ಈ ಕಾರುಗಳನ್ನು ಪ್ರದರ್ಶನಕ್ಕೆ ತರುತ್ತಿದ್ದರಲ್ಲಾ, ಅಲ್ಲಿಗೆ ಇವುಗಳನ್ನು ಕಳುಹಿಸಬಹುದು. ಎರಡು ಕಿಲೋಮೀಟರ್ ಕೊಡುವುದಿಲ್ಲ. ಒಂದು ಲೀಟರ್ ಪೆಟ್ರೋಲ್‌ಗೆ. ಆ ರೀತಿಯ ಜೀಪುಗಳನ್ನು ತಾವು ಇಟ್ಟುಕೊಂಡಿದ್ದೀರಿ. ಅದಕ್ಕೆ ಎಸ್ಟಾಬೇಲಿಷ್‌ಮೆಂಟ್ ಕಾಸ್ಟ್ ಎಷ್ಟು ಬೀಳುತ್ತದೆ ಎನ್ನತಕ್ಕಂಥದ್ದರ ಬಗ್ಗೆ ತಾವು ಯೋಚನೆ ಮಾಡಬೇಕು. ನಿಮ್ಮ ಹತ್ತಿರ ಇರತಕ್ಕಂಥ ವಾಹನಗಳನ್ನೆಲ್ಲಾ ಗುಜರಿಗೆ ತಳ್ಳಿ ಹೊಸ ವಾಹನಗಳನ್ನು ಎಕಾನಮಿಯಾಗಿರತಕ್ಕಂಥ ವಾಹನಗಳನ್ನು ನಿಮ್ಮ ಇಲಾಖೆಗೆ ಅಳವಡಿಸಿಕೊಳ್ಳತಕ್ಕಂಥದ್ದು ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಲವತ್ತು ಲಕ್ಷ ರೂಪಾಯಿಗಳನ್ನು ಒಬ್ಬ ಎಂ. ಎಲ್. ಎ. ಕ್ಷೇತ್ರಕ್ಕೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಇದು ಬಹಳ ಸ್ವಾಗತಾರ್ಹ. ಮೂರು ವರ್ಷಗಳಿಗೆ ಎಂದು ಹೇಳಿದ್ದೀರಿ. ನಮಗೆ ಮರ್ಯಾದೆ ಉಳಿಯಬೇಕಾದರೆ ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಹೋಗಬೇಕಾದರೆ ನೀವು ಪಿಡಬ್ಲ್ಯೂಡಿ ರಸ್ತೆಗಳನ್ನು ಕೊಡಿ ಎಂದು ಕೇಳಬೇಡಿ. ನಾವು ಯಾವ ರಸ್ತೆಯನ್ನು ನಿಮ್ಮ ಕ್ಷೇತ್ರದ್ದು ಕೊಡುತ್ತೇವೋ ಆ ರಸ್ತೆಗಳನ್ನು ತೆಗೆದುಕೊಳ್ಳಿ. ನೀವು ಪಿಡಬ್ಲ್ಯೂಡಿಗೆ ಸಂಬಂಧಪಟ್ಟಂಥ ರಸ್ತೆಗಳನ್ನು ತೆಗೆದುಕೊಂಡರೆ ಇದರಿಂದ ಪ್ರಯೋಜನವಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಆ ರಸ್ತೆಗಳನ್ನು ತೆಗೆದುಕೊಂಡರೆ ಸ್ವಲ್ಪ ಸುಲಭವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತು ಮೈಸೂರು, ಬೆಂಗಳೂರು ರಸ್ತೆ ಬಗ್ಗೆ ಹೇಳುವುದಾದರೆ ನಾನು ಮತ್ತು ಸ್ಪೀಕರ್‌ರವರು ಒಂದು ದಿವಸ ಕಾರಿನಲ್ಲಿ ಬರುತ್ತಿದ್ದೆವು. ಕೆಎಸ್‌ಆರ್‌ಟಿಸಿಯ ನಮ್ಮ ಅಜೀಜ್‌ಸೇಠ್‌ರವರ ಬಸ್ಸುಗಳು ಮೇಲೆ ಬೀಳುತ್ತವೆ. ಹೊಲಮಾಳ ಬಿದ್ದು ಹೋದರೂ ಬಿಡುವುದಿಲ್ಲ ಅವು. ಹೊಲಮಾಳ ಬಿದ್ದು ಕಾರು ಹೊಡೆದರೂ ಕೂಡ ಅಲ್ಲಿಗೇ ಓಡಿಸಿಕೊಂಡು ಬರುತ್ತವೆ. ಇಂಥ ಪರಿಸ್ಥಿತಿ ಇದೆ. ಒಂದು ದಿನಕ್ಕೆ ಕೊನೆಪಕ್ಷ ಮೂರು ನಾಲ್ಕು ಅನಾಹುತಗಳು ನಡೆಯುತ್ತವೆ. ಅಲ್ಲಿ ಇವತ್ತು ನೂರಾರು ಜನರು ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಮದ್ದೂರ್ ಹತ್ತಿರ ಒಂದು ಸೇತುವೆ ಇದೆ. ಆ ಸೇತುವೆಗೆ 125 ವರ್ಷ ವಯಸ್ಸಾಗಿದೆ. ಆದ್ದರಿಂದ ಅಲ್ಲಿ ಹೊಸ ಒಂದು ಸೇತುವೆ ಆಗಬೇಕೆಂದು ವಿನಂತಿ ಮಾಡುತ್ತೇನೆ. ಮತ್ತೆ ನೂರು ಕೋಟಿ ರೂಪಾಯಿಗಳಿಗೆ ಬೆಂಗಳೂರಿನಿಂದ ಕಾಸರಗೋಡಿನವರೆಗೆ ಒಂದು ರಸ್ತೆ ಆಗಬೇಕು ಎಂದು ಹೇಳಿ ಸೆಂಟ್ರಲ್ ಗೌರ್ನಮೆಂಟ್‌ನ ಅನುಮತಿಗಾಗಿ ಕಳುಹಿಸಲಾಗಿದೆ. ಮುಖ್ಯವಾಗಿ ಪ್ರಮುಖ ರಸ್ತೆಗಳನ್ನು ತಾವು ರಿಪೇರಿ ಮಾಡತಕ್ಕಂಥದ್ದು ಅಥವಾ ಅಗಲ ಮಾಡತಕ್ಕಂಥ ಕೆಲಸವನ್ನು ತಾವು ಕೈಗೆತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಕೊನೆಯದಾಗಿ ಪಿಡಬ್ಲ್ಯೂಡಿ ಮಿನಿಸ್ಟರ್ ಆಗಿ ನಮ್ಮ ಪುಟ್ಟಸ್ವಾಮಿಗೌಡರು ಇದ್ದರು. ಅವರ ಕಾಲದಲ್ಲಿ ನಾನು ಕೇಳಿದೆ. "ನಮ್ಮ

ಬೆಳ್ಳೂರ್ ಕ್ರಾಸ್‌ನಲ್ಲಿ ನೆಲ್ಲಿಗೆರೆ ಹತ್ತಿರ ಇರತಕ್ಕಂಥ ಒಂದು ನ್ಯಾಷನಲ್ ಹೈವೇ ರಸ್ತೆ ಏನು ಇದೆ, ಅಲ್ಲಿನ ಸೇತುವೆಯ ಕೆಲಸವನ್ನು ಶೀಘ್ರವಾಗಿ ಮುಗಿಸಬೇಕು ಎಂದು, ಬೆಳ್ಳೂರ್ ಕ್ರಾಸ್‌ನಲ್ಲಿ ನೀವು ಒಂದು ಸರ್ಕಲನ್ನು ಮಾಡಬೇಕು ಹಾಗೂ ಕಡಬಳ್ಳಿಯಲ್ಲಿ ಒಂದು ಸರ್ಕಲನ್ನು ಮಾಡಬೇಕು ಎಂದು ಹೇಳಿದ್ದೆ. ಇದುವರೆಗೂ ಆ ಕೆಲಸ ಮಾಡತಕ್ಕಂಥ ಗೋಜಿಗೆ ಹೋಗಿಲ್ಲ. ನೆಲ್ಲಿಗೆರೆ ಸೇತುವೆಯ ಕೆಲಸವನ್ನು ಈಗ ನಿಧಾನವಾಗಿ ಮಾಡುತ್ತಿದ್ದಾರೆ. ಅದನ್ನು ಶೀಘ್ರವಾಗಿ ಮಾಡಿ ಮುಗಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳಿ ವಿನಂತಿ ಮಾಡುತ್ತೇನೆ. ನಮ್ಮ ಶ್ರೀರಂಗಪಟ್ಟಣ ಬೀದರ್ ರಸ್ತೆಯಲ್ಲಿ ಒಂದು ಸೇತುವೆ ಶಿಥಿಲವಾಗಿದೆ. ಆ ಸೇತುವೆ ಏನಾದರೂ ಬಿದ್ದು ಹೋದರೆ ಇವತ್ತು ಶ್ರೀರಂಗಪಟ್ಟಣ ಬೀದರ್ ರಸ್ತೆಯ ಕಂಪ್ಲೀಟ್ ಕಮ್ಯುನಿಕೇಷನ್ ಹೊರಟುಹೋಗುತ್ತದೆ. ದಯಮಾಡಿ ವಿನಂತಿ ಮಾಡುತ್ತೇನೆ, ನಾಗಮಂಗಲ ತಾಲ್ಲೂಕಿನಲ್ಲಿ ಒಣಕೇರಿ ಹತ್ತಿರ ಒಂದು ಸೇತುವೆ ಶಿಥಿಲವಾಗಿರತಕ್ಕಂಥದ್ದನ್ನು ಶೀಘ್ರವಾಗಿ ದುರಸ್ತಿ ಮಾಡತಕ್ಕಂಥ ಆದೇಶವನ್ನು ತಾವು ಕೊಡಬೇಕು. ತಮ್ಮ ಉತ್ತರದಲ್ಲಿ ಇದರ ಬಗ್ಗೆ ತಾವು ಹೇಳಬೇಕು ಎಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ಇರಿಗೇಷನ್‌ಗೆ 1000 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಮ್ಮ ಬಿಜೆಪಿ ಮಿತ್ರರು ಕಬ್ಬನ್ ಪಾರ್ಕಿನಲ್ಲಿ ಕುಳಿತುಕೊಂಡು ವಾದ ಮಾಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ನೀರಾವರಿಗೆ ಸಾಕಷ್ಟು ಹಣವನ್ನು ಈ ವರ್ಷ ಇಟ್ಟಿದ್ದಾರೆ. ಯಾವುದೇ ಕಾಲದಲ್ಲೂ ಇಷ್ಟು ಹಣ ಇಟ್ಟಿರಲಿಲ್ಲ. ಈ ಸಲ 135 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರಲ್ಲಿ ಕಾವೇರಿಗೆ ಎಷ್ಟು ಖರ್ಚು ಮಾಡಿದ್ದೀರಿ? ಕಳೆದ ವರ್ಷದಿಂದ ಕಾವೇರಿ ಬೆಂಕಿ ಹಚ್ಚಿಕೊಂಡು ಉರಿಯುತ್ತಿರತಕ್ಕಂಥ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಕೆಲಸ ಆಗಿದೆ ಎಂಬುದನ್ನು ನಾವು ಗಮನಿಸಬೇಕು. ನಾನು ಈ ಸಂದರ್ಭದಲ್ಲಿ ನಮ್ಮ ಭಾರಿ ನೀರಾವರಿ ಇಲಾಖೆಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ. ಇವತ್ತು ನಮ್ಮ ಹೇಮಾವತಿಗೆ ಒಳ್ಳೆಯ ಚೀಫ್ ಇಂಜಿನಿಯರ್‌ರವರನ್ನು ಹಾಕಿದ್ದೀರಿ. ಇತ್ತೀಚೆಗೆ ಕೆಲಸಗಳು ಸುಮಾರಾಗಿ ನಡೆಯುತ್ತಿವೆ. ಈ 135 ಕೋಟಿ ರೂಪಾಯಿಗಳಲ್ಲಿ ಹೋದ ವರ್ಷದ ಹಳೆಯ ಬಾಕಿ 26 ಕೋಟಿ ರೂಪಾಯಿಗಳು ಸೇರಿದೆ. ಇದರಲ್ಲಿ 14ಕೋಟಿ ರೂಪಾಯಿ ಸಂಬಳಕ್ಕೆ ಹೋಗುತ್ತದೆ. ಇನ್ನು 50 ಕೋಟಿ ರೂಪಾಯಿಗಳಲ್ಲಿ ಏನು ಕೆಲಸವಾಗುತ್ತದೆ? ಮಾನ್ಯ ಹನುಮೇಗೌಡರು ಹಿಂದಿನ ಪಿಡಬ್ಲ್ಯೂಡಿ ಮಂತ್ರಿಗಳು 100 ರೂಪಾಯಿಯನ್ನು ನಾವು ಕೊಟ್ಟರೆ ಅದರ 50 ರೂಪಾಯಿಯ ಕೆಲಸ ಇದರಲ್ಲಿ ಆದರೆ ಸಾಕೆಂದು ಹೇಳಿದರು. ಆ ಲೆಕ್ಕದಲ್ಲಿ ಹೋದರೆ 25ಕೋಟಿ ರೂಪಾಯಿಗಳನ್ನು ಮಾತ್ರ ಕಾವೇರಿಗೆ ನೀವು ಖರ್ಚು ಮಾಡಿರತಕ್ಕದ್ದು. ಈ ಸಲ ನೀವು 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಅಷ್ಟನ್ನೂ ಖರ್ಚು ಮಾಡಬೇಕು. ಖರ್ಚು ಮಾಡಬೇಕಾದರೆ ಇವತ್ತು ನೀವು ಟೈಮ್‌ಬಾಂಡ್ ಪ್ರೋಗ್ರಾಂ ಅನ್ನು ಹಾಕಬೇಕು. ಪ್ರತಿ ತಿಂಗಳು ಎಲ್‌ಒಸಿ ಅನ್ನು ಈ ವಿಭಾಗಕ್ಕೆ ಇಷ್ಟು, ಈ ನಾಲೆಗೆ ಇಷ್ಟು ಕೊಡುತ್ತೇವೆಂದು ತಾವು ತೀರ್ಮಾನ ಮಾಡಬೇಕು. ಯಾವ ಅಧಿಕಾರಿಗಳು ಇಷ್ಟು ಹಣವನ್ನು ಖರ್ಚು ಮಾಡುವುದಿಲ್ಲವೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು. ಆಗಲೇ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದು.

ಉಪಾಧ್ಯಕ್ಷಿಣಿಯವರು:- ಈಗ ಮಾನ್ಯ ಅನಂತಕೃಷ್ಣರವರು ಮಾತನಾಡುತ್ತಾರೆ. ತಾವು ಬೇಗ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಮುಗಿಸೇ ಬಿಡುತ್ತೇನೆ. ಇವತ್ತು ನಾಗಮಂಗಲ ತಾಲ್ಲೂಕಿನಲ್ಲಿ 29 ಸಾವಿರ ಎಕರೆ ನೀರಾವರಿ ಪ್ರದೇಶ ಬರುತ್ತದೆ. ನೀವು ಶೀಘ್ರವಾಗಿ ಕೆಲಸಗಳನ್ನು ತೆಗೆದುಕೊಂಡರೆ ಮಾತ್ರ ನಮಗೆ ಅನುಕೂಲ ಆಗುತ್ತದೆ. ಇವತ್ತು ನಾಗಮಂಗಲ ತಾಲ್ಲೂಕಿನ ಚಟ್ಟನ್‌ಗೆರೆ ಕೆನಾಲ್‌ಗೆ ತಾವು ತೀರ್ಪುಕೊಟ್ಟಿದ್ದೀರಿ. ನಿಮ್ಮ ಟೈಮ್‌ಬಾಂಡ್ ಕಾರ್ಯಕ್ರಮದ ಪ್ರಕಾರ ಜುಲೈಗೆ ನೀರನ್ನು ಬಿಡಬೇಕು. ಜುಲೈಗೆ ನೀರನ್ನು ಬಿಟ್ಟೇ ಬಿಡುತ್ತೇವೆನ್ನತಕ್ಕ ಭರವಸೆಯನ್ನು ತಾವು ಈ ಸಂದರ್ಭದಲ್ಲಿ ನೀಡಬೇಕು. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುತ್ತೇನೆ. ಕಳೆದ 8 ವರ್ಷಗಳಿಂದಲೂ ಒಂದು ಕೆರೆಯ ಹೂಳನ್ನು ಸಹ

ತೆಗೆದಿಲ್ಲ. ಇವತ್ತು ಕೆರೆಯಲ್ಲಿ ನೀರು ನಿಲ್ಲದೆ ಹೋದರೆ ಬೋರ್‌ವೆಲ್‌ಗಳಲ್ಲಿ ನೀರು ಬರುವುದಿಲ್ಲ. ಹೂಳನ್ನು ತೆಗೆಯಲಿಕ್ಕೆ ಯಾವುದೋ ಒಂದು ಪೊಕ್ಲೈಂಡ್ ಟೈಪ್ ಮಿಷನ್ ತರುತ್ತೇವೆಂದು ಹೇಳಿದಿರ, ದಯವಿಟ್ಟು ಆಧುನಿಕ ಮಿಷನರಿಗಳನ್ನು ತಂದು ಶೀಘ್ರವಾಗಿ ಕೆರೆಯ ಹೂಳೆತ್ತತಕ್ಕ ಕೆಲಸವನ್ನು ತಾವು ಮಾಡಬೇಕು. ಕೆರೆಯ ಹೂಳನ್ನು ಎತ್ತಿಸುವುದರ ಜೊತೆಗೆ ಚಾನಲ್‌ಗಳ ಹೂಳನ್ನು ಸಹ ತೆಗೆಸಬೇಕು. ನನ್ನ ತಾಲ್ಲೂಕಿನಲ್ಲಿ ಪೋಳಾರಿ ಕೆರೆ ಅಂತ ಇದೆ. ಪೋಳಾರಿ ಕೆರೆಯಿಂದ ಸುಮಾರು 800 ಎಕರೆ ಗದ್ದೆ ನೀರಾವರಿಯಾಗುತ್ತದೆ. ಆದರೆ ಇವತ್ತು ಆ ನೀರಾವರಿಯಾಗುವುದೆಲ್ಲಾ ತಪ್ಪಿಹೋಗಿದೆ. ಕೇವಲ 2-3 ಲಕ್ಷ ರೂಪಾಯಿ ಕೊಟ್ಟು ಚಾನಲ್ ರಿಪೇರಿ ಮಾಡಿಸಬೇಕು. ತಮ್ಮ ಉತ್ತರದಲ್ಲಿ ನಮ್ಮ ಪೋಳಾರಿ ಕೆರೆ ಮತ್ತು ವಿ.ಸಿ.ಚಾನಲ್ ನಾಗಮಂಗಲ ತಾಲ್ಲೂಕಿಗೆ ಬರತಕ್ಕದ್ದರ ಬಗ್ಗೆ ನೀವು ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷಿಣಿಯವರು:- ಈಗ ಚರ್ಚೆ ಮುಗಿದಿದೆ. ಮೇಲ್ಮನೆಯಿಂದ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ115ರ ಮೇರೆಗೆ " ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕದ ಪರಿಶೀಲನಾ ಪ್ರಸ್ತಾವವನ್ನು ವಿಧಾನ ಪರಿಷತ್ತಿನಲ್ಲಿ ದಿನಾಂಕ: 25-3-92 ರಂದು ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ. "ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕ್ ಪಂಚಾಯತಿಯ ಸಮಿತಿಗಳು ಮಂಡಲ್ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ತಿದ್ದುಪಡಿ ವಿಧೇಯಕ 1992

"1992-93ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ(ಲೋಕೋಪಯೋಗಿ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, 43,44,45ನೇ ಬೇಡಿಕೆಗಳ ಮೇಲೆ ಸಾಕಷ್ಟು ಜನ ಮಾನ್ಯ ಶಾಸಕರು ಮಾತನಾಡಿದ್ದಾರೆ. ಸೂಚನೆಗಳನ್ನು ಕೊಟ್ಟಿದ್ದಾರೆ ಹಾಗೂ ಸಲಹೆಗಳನ್ನೂ ಕೊಟ್ಟಿದ್ದಾರೆ. ಮೊದಲನೆಯದಾಗಿ ಮಾನ್ಯ ರಾಮಸ್ವಾಮಿಯವರು ಇಂಜಿನಿಯರ್‌ಗಳ ಹಂತದಲ್ಲಿ ಬಹಳ ಭ್ರಷ್ಟಾಚಾರ ಆಗುತ್ತಿದೆ ಹಾಗೂ ಅವರು ಕೆಲಸ ಚೆನ್ನಾಗಿ ಮಾಡುತ್ತಿಲ್ಲವೆಂದು ಹೇಳಿ ಅದೇ ಹಳ್ಳಿಗಾಡಿನಲ್ಲಿರತಕ್ಕ ರೈತರು ಇಂಜಿನಿಯರ್‌ಗಳ ಸಹಾಯವಿಲ್ಲದೆ ಕಟ್ಟಿರುವ ಮನೆಗಳು ಸುಮಾರು 200 ವರ್ಷಗಳಿಂದ ಚೆನ್ನಾಗಿವೆ ಎಂದು ಹೇಳಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿ ಮಣ್ಣಿನಲ್ಲಿ ಕಟ್ಟಿರತಕ್ಕ ಮನೆಗಳು 200 ವರ್ಷವೇನೂ ಬಾಳಿಕೆ ಬರುತ್ತಿಲ್ಲ. ಈ ವರ್ಷ ಸಾಕಷ್ಟು ಮಳೆ ಜಾಸ್ತಿ ಬಂದು ಎಷ್ಟೋ ಮನೆಗಳು ಬಿದ್ದುಹೋಗಿವೆ. ನಮ್ಮ ಇಂಜಿನಿಯರ್‌ಗಳು ಸಹ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಒಳ್ಳೆಯ ಕೆಲಸವನ್ನು ಮಾಡಿದವರನ್ನು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಬೇಕು. ಕೆಟ್ಟ ಕೆಲಸವನ್ನು ಮಾಡಿದವರಿಗೆ ಕೆಟ್ಟ ಕೆಲಸ ಮಾಡಿದ್ದಾರೆಂದು ಹೇಳಿದರೂ ತಪ್ಪಾಗಲಾರದು ಎನ್ನುವುದೇ ನನ್ನ ಭಾವನೆಯಾಗಿದೆ. ನಿಮಗೆ ಗೊತ್ತಿರುವ ಹಾಗೆ ನಮ್ಮ ಇಂಜಿನಿಯರ್‌ಗಳು ಬಹಳ ಒಳ್ಳೆಯ ಕಟ್ಟಡಗಳನ್ನು ಕಟ್ಟಿದ್ದಾರೆ. ವಿಧಾನಸೌಧವನ್ನು ಕಟ್ಟಿದ್ದಾರೆ, ಸೂಪಾ ಅಣೆಕಟ್ಟನ್ನು ಕಟ್ಟಿದ್ದಾರೆ, ಹೀಗೆ ಸಾಕಷ್ಟು ಒಳ್ಳೆಯ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ. ಮತ್ತು ಅವರ ವಿಷಯದಲ್ಲಿ ಏನೂ ಎನ್‌ಕ್ವೈರಿ ಮಾಡಿಲ್ಲ, ಶಿಕ್ಷೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಸುಮಾರು 39 ಜನರ ಮೇಲೆ ತನಿಖೆ ನಡೆಸಿ, ಅವರಲ್ಲಿ ಕೆಲವು ಜನರ ಮೇಲಿನ ಆಪಾದನೆಗಳನ್ನು ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ. ಮತ್ತು ಅವರಿಗೆ ಶಿಕ್ಷೆ ಕೂಡ ಕೊಟ್ಟಿದ್ದೇವೆ. ಅವರಿಗೆ ಯಾವುದೇ ತರಹದ ರಿಯಾಯಿತಿ ಕೊಟ್ಟಿಲ್ಲ. ತಪ್ಪು ಮಾಡಿದಂತಹವರಿಗೆ ಶಿಕ್ಷೆ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿತ್ತಿದೆ. ಮತ್ತೆ ಕ್ವಾಲಿಟಿ ಕಂಟ್ರೋಲ್ ವಿಷಯದಲ್ಲೂ ಕೂಡ ಅವರು

ಹೇಳಿದ್ದಾರೆ. ಸಾಕಷ್ಟು ಸೂಪರ್‌ವಿಷನ್ ಮೇಲೆ ಅವರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ಅದರಲ್ಲಿ ಏನೂ ತೊಂದರೆ ಆಗಿಲ್ಲವೆಂಬುದು ನನ್ನ ಭಾವನೆ. ರಸ್ತೆಗಳ ನಿರ್ಮಾಣವಾಗಲಿ, ಕಟ್ಟಡಗಳ ನಿರ್ಮಾಣವಾಗಲಿ ಅಥವಾ ಯಾವುದೇ ನಿರ್ಮಾಣವಾಗಲಿ ಒಳ್ಳೆಯ ರೀತಿಯಿಂದ ಮಾಡಬೇಕೆಂಬ ಬಗ್ಗೆ ಆದೇಶವಿದೆ. ಹಾಗೆಯೇ ಸಂಬಂಧಪಟ್ಟಂಥ ಪ್ರತಿಯೊಬ್ಬ ಅಧಿಕಾರಿಗಳಿಗೂ ಕೂಡ ಆದೇಶ ಕೊಟ್ಟಿದ್ದೇವೆ. ಅವರು ಅಷ್ಟೇ ಪ್ರಾಮಾಣಿಕತೆಯಿಂದ ಕೆಲಸಮಾಡುತ್ತಿದ್ದಾರೆ. ಆದರೆ, ತಾವು ಹೇಳಿದ ಪ್ರಕಾರ ಎಲ್ಲಾ ಅಧಿಕಾರಿಗಳು ಪ್ರಾಮಾಣಿಕರಾಗಿದ್ದಾರೆಂದು ನಾನು ಒಪ್ಪುವುದಿಲ್ಲ. ಕೆಲವರಿದ್ದಾರೆ ನಮಗೂ ಗೊತ್ತಿದೆ. ನಾನು ಮಾಹಿತಿಗೆ ಹೋಗುವುದಿಲ್ಲ. ಪಿಡಬ್ಲ್ಯೂಡಿ ಇಲಾಖೆಯಲ್ಲಿ ರಸ್ತೆ, ಸೇತುವೆ ಮತ್ತು ಕೆಲವು ನ್ಯಾಷನಲ್ ಹೈವೇಗೆ ಕೊಟ್ಟಿರತಕ್ಕಂಥ ಹಣದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದ್ದೇವೆ. ಅದನ್ನು ಕೂಡ ನಮ್ಮ ಇಲಾಖೆಯಿಂದ ನಿರ್ವಹಿಸುತ್ತಿದ್ದೇವೆ. ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅನ್ನು ಕೂಡ ನಾವೇ ನಿರ್ವಹಿಸುತ್ತಿದ್ದೇವೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಏರಿಯಾ ಕೆಲಸವನ್ನು ನಮ್ಮ ಇಂಜಿನಿಯರ್ಸ್ ಮಾಡುತ್ತಿದ್ದಾರೆ. ಕಟ್ಟಡಕ್ಕೋಸ್ಕರವಾಗಿ ಲೋಕೋಪಯೋಗಿ ಇಲಾಖೆಯಿಂದ ಸುಮಾರು 90ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತು ನ್ಯಾಷನಲ್ ಹೈವೇಗಾಗಿ ಕೊಡತಕ್ಕಂಥ ಹಣ ಬೇರೆ ಇದೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಏರಿಯಾದಲ್ಲಿ ಸರಿಸುಮಾರಾಗಿ 150 ಕೋಟಿ ರೂಪಾಯಿಗಳನ್ನು ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಮತ್ತು ನ್ಯಾಷನಲ್ ಹೈವೇಗಾಗಿ ಸಪರೇಟ್ ಹಣ ಕೇಂದ್ರ ಸರ್ಕಾರದಿಂದ ಬರುತ್ತಿದೆ. ಈ ವರ್ಷ 18 ಕೋಟಿ ಮತ್ತು 12 ಕೋಟಿ ರೂಪಾಯಿಗಳು ಮೇಂಟೆನೆನ್ಸ್‌ಗಾಗಿ ಬರುತ್ತಿದೆ, ಸುಮಾರು 25 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಬೆಂಗಳೂರು ಹೊಸೂರು ರಸ್ತೆ ಅಭಿವೃದ್ಧಿಗೆ ಮೊನ್ನೆ 45 ಕೋಟಿ ರೂಪಾಯಿಗಳು ಬಂದಿದೆ. 11 ರಸ್ತೆಗಳನ್ನು ಮಾಡುವುದಕ್ಕೋಸ್ಕರ ಲಾರ್ಸನ್ ಅಂಡ್ ಟೂಬ್ರೋ ಎಂಬ ದೊಡ್ಡ ಕಂಪನಿ ಕೇಂದ್ರ ಸರ್ಕಾರದವರೇ ವಹಿಸಿಕೊಟ್ಟಿದ್ದಾರೆ. ಮತ್ತು ಸಾಕಷ್ಟು ಜನ ಸದಸ್ಯರೂ ಬೆಂಗಳೂರು ಮೈಸೂರು ರಸ್ತೆ ಚೆನ್ನಾಗಿಲ್ಲವೆಂದು ಹೇಳಿದ್ದಾರೆ. ಅದನ್ನು ಎಕ್ಸ್‌ಪ್ರೆಸ್ ಹೈವೇ ಮಾಡುವುದಕ್ಕೆ ಸುಮಾರು 200 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಲ್ಯಾಂಡ್ ಅಕ್ವಿಸಿಷನ್‌ಗೋಸ್ಕರ ಈ ಸಲ 5 ಲಕ್ಷ ರೂಪಾಯಿಗಳ ಟೋಕನ್ ಗ್ರಾಂಟ್ ಕೊಟ್ಟಿದ್ದೇವೆ. ಮತ್ತು ಅದನ್ನು ಪ್ರೈವೇಟೈಜ್ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ. ಆದರೂ ಕೂಡ ಇದರ ಬಗ್ಗೆ ಒಂದು ಕಮಿಟಿ ಇದೆ. ಆ ಕಮಿಟಿ ಪ್ರಕಾರ ಇನ್ನೂ ವರದಿ ಕೊಟ್ಟಿಲ್ಲ. ಇಷ್ಟರಲ್ಲಿಯೇ ಕೊಡುತ್ತಾರೆ. ಏನು ಕೆಲಸ ಮಾಡಬೇಕು, ಯಾವ ರೀತಿ ಜಮೀನನ್ನು ಸ್ವಾಧೀನ ಮಾಡಿಕೊಂಡು ರಸ್ತೆಯನ್ನು ದುರಸ್ತಿ ಮಾಡಬೇಕು? ಯಾವ ರೀತಿ ಆಕ್ಸಿಡೆಂಟ್ಸ್ ಅವಾಯ್ಡ್ ಮಾಡಬೇಕು. ಎಂಬುದರ ಬಗ್ಗೆ 4 ಲೈನ್ ರಸ್ತೆ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ. ಇವೊತ್ತು ನಮ್ಮ ಕೆಲವು ಕಟ್ಟಡಗಳ ಕುರಿತು ತಮಗೆ ಗೊತ್ತಿರುವ ಹಾಗೆ ಪಿಡಬ್ಲ್ಯೂಡಿ ಕಟ್ಟಡಗಳ ಒಟ್ಟು ವಿಸ್ತೀರ್ಣ 78 ಲಕ್ಷ ಚದರ ಮೀಟರ್ ಮತ್ತು ಕಟ್ಟಡಗಳ ಬಂಡವಾಳ 250 ಕೋಟಿ ರೂಪಾಯಿಗಳು. ರಿಪೇರಿ ಅಥವಾ ಮೇಂಟೆನೆನ್ಸ್‌ಗೆ ಬಹಳ ಕಡಿಮೆ ಅಂದರೆ, ಒಂದೂವರೆ ಪರ್ಸೆಂಟ್‌ನಿಂದ ಆರು ಪರ್ಸೆಂಟ್‌ವರೆಗೆ ಕೊಡುತ್ತಿದ್ದೇವೆ. ಅದಕ್ಕೋಸ್ಕರ ನಾವು ಹೊಸ ಖಾತೆಯನ್ನು ಪ್ರಾರಂಭಿಸಿದ್ದೇವೆ. ಅಲ್ಲದೆ ರಿನೋವೇಷನ್ ಫಂಡ್ ಇದೆ. ಇದರಲ್ಲಿ ಸುಮಾರು 5 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ರಿನೋವೇಷನ್ ಫಂಡ್‌ನಿಂದ ಕೆಲಸ ತುರ್ತಾಗಿ ಆಗಬೇಕಾಗಿದ್ದರೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದುದರಿಂದ , ಈ ಹೊಸ ಖಾತೆಯನ್ನು ಪಿಡಬ್ಲ್ಯೂಡಿ ಇಲಾಖೆಯಲ್ಲಿ ಸೇರಿಸಿದ್ದೇವೆ. ಮತ್ತು ಬೆಂಗಳೂರಿನಲ್ಲಿ ಒಳ್ಳೊಳ್ಳೆಯ ಕಟ್ಟಡಗಳನ್ನು ಕಟ್ಟುವುದಕ್ಕೆ ಎಲ್ ಆರ್ ಡಿ ಈ ಏನು ಇತ್ತು ಅಲ್ಲಿ ಸರ್ಕಾರದ ವತಿಯಿಂದ ಒಂದು ಕೋಟಿ ರೂಪಾಯಿಗಳನ್ನು ಕನ್‌ವೆನ್‌ಷನ್ ಸೆಂಟರ್ ಕಟ್ಟಲು ಕೊಡುತ್ತಿದ್ದೇವೆ. ಮತ್ತೆ ಸೇತುವೆಗಳ ಬಗ್ಗೆ ಹೇಳಬೇಕೆಂದರೆ, ನೇತ್ರಾವತಿ ಮುಂತಾದ ಎಲ್ಲಾ ಕಡೆ ಪ್ರಾಮುಖ್ಯವಾದ ಸೇತುವೆಗಳನ್ನು ಕಟ್ಟುತ್ತಿದ್ದೇವೆ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ

ನಾವೆಲ್ಲರೂ ಹಳ್ಳಿಗಾಡಿನಿಂದ ಬಂದಿರತಕ್ಕಂಥವರು, ನಮ್ಮ ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಸಾಕಷ್ಟು ಒಳ್ಳೆಯದಾಗಬೇಕಾದರೆ ಹಳ್ಳಿಗಳಿಗೆ ಏನು ಸಂಪರ್ಕ ವ್ಯವಸ್ಥೆ ಇದೆ, ಅದು ಸರಿಯಾದ ರೀತಿಯಲ್ಲಿರ ಬೇಕೆನ್ನತಕ್ಕದ್ದೇ ಸರ್ಕಾರದ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರ ಉದ್ದೇಶವಾಗಿದೆ. ಆದುದರಿಂದ, ಪ್ರತಿ ಕ್ಷೇತ್ರದಲ್ಲೂ ಕೂಡ 50 ಕಿ.ಮೀ. ಜಿಲ್ಲಾ ಪರಿಷತ್ ರಸ್ತೆಗಳನ್ನು ಅಪ್‌ಗ್ರೇಡ್ ಮಾಡಿ ಅದಕ್ಕೆ 15 ಕೋಟಿಯನ್ನು ಕೊಟ್ಟು ಆ ರಸ್ತೆಗಳ ಅಗಲವನ್ನು ಹೆಚ್ಚು ಮಾಡುವುದಕ್ಕೆ ಮತ್ತು ಸೇತುವೆಗಳ ರಿಪೇರಿ ಮಾಡುವುದಕ್ಕಾಗಿ ಖರ್ಚು ಮಾಡುತ್ತೇವೆ. ಹೀಗೆ ಹಂತ ಹಂತವಾಗಿ ಈ 15 ಕೋಟಿ ರೂಪಾಯಿಗಳ ಜೊತೆಗೆ ಮತ್ತೊಂದು ಬಾಬಿನಲ್ಲಿ 13 ಕೋಟಿಯನ್ನು ಖರ್ಚು ಮಾಡಿ ಒಳ್ಳೆಯ ಪಕ್ಕಾ ರಸ್ತೆಗಳನ್ನು ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಮತ್ತೆ ಎಲ್ಲಾ ರಸ್ತೆಗಳನ್ನು ಕೂಡ ಜಿಲ್ಲಾ ಪರಿಷದ್‌ನಿಂದ ಪಿ.ಡಬ್ಲ್ಯೂ.ಡಿಗೆ ತೆಗೆದುಕೊಳ್ಳಬೇಕೆಂದು ನಮ್ಮ ಬಹಳಷ್ಟು ಸದಸ್ಯರು ಹೇಳಿದ್ದಾರೆ. ಆದರೆ, ಒಂದೇ ಸಾರಿ ಎಲ್ಲಾ ರಸ್ತೆಯನ್ನು ಪಿಡಬ್ಲ್ಯೂಡಿಗೆ ತೆಗೆದುಕೊಳ್ಳಲು ಆಗುವುದಿಲ್ಲ. ಎಲ್ಲಾ ರಸ್ತೆಯನ್ನು ಒಳ್ಳೆಯ ರಸ್ತೆಯನ್ನಾಗಿ ಮಾಡಬೇಕೆಂದರೆ ಸ್ವಲ್ಪ ಹಣಕಾಸಿನ ತೊಂದರೆ ಬರುತ್ತದೆ. ಮತ್ತು ಜಿಲ್ಲಾ ಪರಿಷತ್ತಿನ ಉದ್ದೇಶ ಏನಿದೆ ಅಂದರೆ ಹಳ್ಳಿಗಾಡಿನಲ್ಲಿರತಕ್ಕ ಹಳ್ಳಿಯ ಜನರಿಗೆ ಅಧಿಕಾರವನ್ನು ಕೊಡಬೇಕು, ಅವರೂ ಕೂಡ ಅಧಿಕಾರ ನಿರ್ವಹಣೆ ಮಾಡಬೇಕು ಎನ್ನುವುದು. ಆದರೆ, ಈ ದಿಶೆಯಲ್ಲಿ ಸರ್ಕಾರದ ಉದ್ದೇಶವೇನು ಇದೆ, ಅದು ಈಗ ವಿಫಲವಾಗುತ್ತಿದೆ. ಜಿಲ್ಲಾ ಪರಿಷತ್ತಿನಿಂದ ಒಳ್ಳೆಯ ಕೆಲಸವಾಗಿಲ್ಲವೆನ್ನುವುದು ನಮಗೂ ಗೊತ್ತಿದೆ. ಹಾಗೂ ತಮಗೆಲ್ಲರಿಗೂ ಗೊತ್ತಿದೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ ಹಾಗೂ ನಿಮ್ಮ ಅಭಿಪ್ರಾಯವು ಕೂಡ ಅದೇ ರೀತಿ ಇದೆ. ಇವತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ಕೂಡ ನಾವು ಹಣವನ್ನು ತರಿಸಿದ್ದೇವೆ. ಸಿರಸಿ ಮತ್ತು ಯಲ್ಲಾಪುರಗಳಿಗೆ 45 ಕೋಟಿಯಷ್ಟು ಹಣವನ್ನು ಕೊಟ್ಟಿದ್ದಾರೆ. ಆ ಹಣವನ್ನು ಇಂತಹ ರಸ್ತೆಗಳ ದುರಸ್ತಿಗೋಸ್ಕರ ನಾವು ಉಪಯೋಗ ಮಾಡುತ್ತಿದೇವೆ. ಇವೆಲ್ಲವುಗಳೂ ಕೂಡ ನ್ಯಾಷನಲ್ ಮಟ್ಟದಲ್ಲಿ ಆಗತಕ್ಕ ರಸ್ತೆಗಳು. ನಮ್ಮ ಕರ್ನಾಟಕ ರಾಜ್ಯದ ಯಾವುದೇ ರಸ್ತೆಗಳು ಸುಮಾರು 12-13 ವರ್ಷಗಳಿಂದ ಕೂಡ ರಾಷ್ಟ್ರೀಯ ಹೆದ್ದಾರಿಗೆ ಸೇರಿಲ್ಲ. ಬೇರೆ ರಾಜ್ಯಗಳೊಂದಿಗೆ ಲೆಕ್ಕ ಹಾಕಿದರೆ ನಮ್ಮ ರಾಜ್ಯದಲ್ಲಿ ಎರಡು ಸಾವಿರದ ಇಸವಿ ವೇಳೆಗೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಲೆಕ್ಕ ಹಾಕಿದರೆ 1000 ಕಿ.ಮೀ.ನಷ್ಟು ನಾವು ಕಮ್ಮಿ ಇದ್ದೇವೆ. ನಾವು 13 ರಾಜ್ಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ನಾನು ಕೇಂದ್ರದ ಭೂ ಸಾರಿಗೆ ಮಂತ್ರಿಗಳಾದ ಶ್ರೀಮಾನ್ ಜಗದೀಶ್ ಟೈಟ್ಲರ್‌ರವರನ್ನು ನೋಡಿದ್ದೇನೆ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಸಹ ಅವರನ್ನು ಭೇಟಿಯಾಗಿದ್ದಾರೆ. ಅವರು ನಮಗೆ ಈ ವರ್ಷದಲ್ಲಿ 2-3 ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುತ್ತೇವೆಂದು ಹೇಳಿದ್ದಾರೆ. ಆದರೂ ಕೂಡ 13 ರಸ್ತೆಗಳನ್ನಾದರೂ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಬೇಕೆಂದು ಮತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯ ಸರಿಪಡಿಸಬೇಕೆಂದು ಅವರಲ್ಲಿ ನಾವು ಒತ್ತಾಯ ಮಾಡುತ್ತಿದ್ದೇವೆ. ಮತ್ತು ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಬರತಕ್ಕ ಸಿ.ಆರ್.ಎಫ್. ಫಂಡ್ ಏನಿದೆ, ಅದರಿಂದ ಕೂಡ ಸುಮಾರು 45 ಕೋಟಿ ರೂಪಾಯಿಗಳು ನಮಗೆ ಬರಬೇಕಾಗಿದೆ. ಆ 45 ಕೋಟಿ ರೂಪಾಯಿಗಳು ಯಾವುದು ಎಂದರೆ, ನಾವು ಪೆಟ್ರೋಲ್ ಮತ್ತು ಡೀಸಲ್‌ಗೆ ಏನು ಟ್ಯಾಕ್ಸ್ ಅನ್ನು ಕೊಡುತ್ತಿದ್ದೇವೆ, ಅದರಲ್ಲಿ ನಮ್ಮ ಭಾಗವಾದ 5 ಪರ್ಸೆಂಟ್ ಬರಬೇಕಾಗಿತ್ತು. ಅಂದರೆ, ಸುಮಾರು 45 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ಕೇಂದ್ರ ಸರ್ಕಾರದವರು ಮೂರು ವರ್ಷಗಳಿಂದಲೂ ಅದನ್ನು ಕೊಟ್ಟಿಲ್ಲ. ನಾವು ಹೋದ ವರ್ಷ ಅಂದರೆ ಎರಡು ತಿಂಗಳ ಹಿಂದೆ ದೆಹಲಿಗೆ ಹೋಗಿದ್ದಾಗ ನಮಗೆ ಕೊಡಬೇಕಾದಂಥ ಹಣದಲ್ಲಿ ಮೂರು ಕೋಟಿ ರೂಪಾಯಿಗಳನ್ನು ಈ ರಸ್ತೆಗಳ ಕೆಲಸಗಳಿಗಾಗಿ ಕೊಟ್ಟಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಸ್ತೆಗಳ ಅಭಿವೃದ್ಧಿಯಿಂದ ನಮ್ಮ ಆರ್ಥಿಕ ಅಭಿವೃದ್ಧಿಯಾಗುತ್ತದೆ ಮತ್ತು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಂಬಂಧವನ್ನು ಕಲ್ಪಿಸಿಕೊಡುತ್ತದೆ. ಆದುದರಿಂದ, ಕೇಂದ್ರ ಸರ್ಕಾರ

ರಸ್ತೆಗಳಿಗೆ ಹಣವನ್ನು ಕೊಟ್ಟಿದೆ. ಆ ಕೆಲಸವನ್ನು ನಮ್ಮ ಇಲಾಖೆಯಿಂದ ಮಾಡುತ್ತಿದ್ದೇವೆ. ಮತ್ತು ಕರ್ನಾಟಕ ನಿರ್ಮಾಣ ನಿಗಮ (ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್) ಏನಿದೆ, ಅದರ ಬಂಡವಾಳ 2 ಕೋಟಿ 5 ಲಕ್ಷ ರೂಪಾಯಿಗಳು. ಹೋದ ವರ್ಷ ಅದು 35 ಲಕ್ಷ ರೂಪಾಯಿಗಳ ಲಾಭವನ್ನು ಗಳಿಸಿದೆ. ಈ ವರ್ಷ ಅದು ಒಂದು ಕೋಟಿ ರೂಪಾಯಿಗಳ ಲಾಭವನ್ನು ಗಳಿಸುವಂಥ ನಿರೀಕ್ಷೆ ಇದೆ. ಇದು ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಇದರಲ್ಲಿ ಸುಮಾರು 150ಜನ ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದಾರೆ. ಅವರು ಸಾಕಷ್ಟು ಕೆಲಸವನ್ನು ತೆಗೆದುಕೊಂಡು ಒಳ್ಳೆಯ, ಕ್ವಾಲಿಟಿ ಕೆಲಸವನ್ನು ಮಾಡುತ್ತಿದ್ದಾರೆ. ತಮಗೆ ಗೊತ್ತಿರುವಂತೆ ಇವತ್ತಿನ ಸಂದರ್ಭದಲ್ಲಿ ಬಹಳ ಹಿಂದುಳಿದಿರತಕ್ಕ ಪ್ರದೇಶಗಳಾದ ಬೀದರ್, ಬಳ್ಳಾರಿ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಅಭಿವೃದ್ಧಿಗಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಏರಿಯಾ ಮಂಡಳಿಯೆಂಬ ಸಂಸ್ಥೆಯನ್ನು ಮಾಡಿದ್ದೇವೆ. ಅದಕ್ಕೆ ಸಪರೇಟ್ ಆಡಳಿತ ವ್ಯವಸ್ಥೆ ಇದೆ. ಅದಕ್ಕೆ ಹೈ ಪವರ್ ಕಮಿಟಿ ಇದೆ. ಅಲ್ಲಿ ಒಂದು ವರ್ಷದಲ್ಲಿ 50 ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ. ಆದರೆ, ನಮ್ಮ ಇಲಾಖೆ ಹಿಂದಿನ ವರ್ಷ 6 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿದ್ದರೆ, ಈ ವರ್ಷ 12 ಕೋಟಿರೂಪಾಯಿಗಳ ಕೆಲಸವನ್ನು ಮಾಡಿದೆ. ಹೀಗೆ ಒಟ್ಟಾರೆ ಸುಮಾರು 65 ಕೋಟಿ ರೂ.ಗಳ ಕೆಲಸವನ್ನು 4 ವರ್ಷಗಳಲ್ಲಿ ಮಾಡಿ ಅಲ್ಲಿರತಕ್ಕ ರಸ್ತೆಗಳನ್ನು, ಕಟ್ಟಡಗಳನ್ನು, ಒಳ್ಳೆಯ ರೀತಿಯಲ್ಲಿ ಇಡಬೇಕು ಹಾಗೂ ಹೊಸದಾಗಿ ನಿರ್ಮಾಣ ಮಾಡಬೇಕೆಂಬ ಆಸೆಯಿಂದ ಹಿಂದುಳಿದ ಪ್ರದೇಶದಲ್ಲಿ ನಮ್ಮ ಇಲಾಖೆಯಿಂದ ಕೆಲಸ ಮಾಡುತ್ತಿದ್ದೇವೆ. ಇನ್ನು ಮಾನ್ಯ ಹನುಮೇಗೌಡರು ಮುಂತಾದ ಅನೇಕ ಶಾಸಕ ಮಿತ್ರರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಆಚಾರ್‌ಜಿರವರೂ ಕೂಡ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅಲ್ಲದೆ ಎನ್.ಎಂ.ಆರ್. ನಿಂದ ತೊಂದರೆಯಾಗುತ್ತಿರುವುದರಿಂದ ಪೀಸ್ ವರ್ಕ್ ಅಥವಾ ಟೆಂಡರ್ ಮುಖಾಂತರ ಕೆಲಸಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಎನ್.ಎಂ.ಆರ್. ಎಂದರೆ ಬಹಳ ತುರ್ತಾಗಿ ಮಾಡುವಂಥ ಕೆಲಸ. ಟೆಂಡರ್ ಕರೆದು ಮಾಡಿಸುವುದಕ್ಕೆ ಕಷ್ಟವಾಗುತ್ತದೆ. ಇದು ಮೊದಲಿನಿಂದಲೂ ಬಂದಿರತಕ್ಕ ಪದ್ಧತಿ. ಎಲ್ಲಾ ಕೆಲಸವನ್ನೂ ಎನ್.ಎಂ.ಆರ್.ನಲ್ಲಿ ಮಾಡಿಸುವುದಕ್ಕೆ ಕಷ್ಟ ವಾಗುತ್ತದೆ. ಪೀಸ್ ವರ್ಕ್ ಎಂದರೆ ಕೆಲವು ಗುತ್ತಿಗೆದಾರರು ಬರದೇ ಇರಬಹುದು. ಆದರೆ ನಮಗೆ ಆ ಕೆಲಸ ಬಹಳ ತುರ್ತಾಗಿ ಆಗಬೇಕಾಗಿರುತ್ತದೆ. ಹಾಸನ ಜಿಲ್ಲೆಯಲ್ಲಿ ಈ ರೀತಿಯಲ್ಲಿ ದುರುಪಯೋಗವಾಗಿದೆ ಎಂದು ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದ್ದಾರೆ. ಇದರ ಬಗ್ಗೆ ನಾನು ಮತ್ತು ನಮ್ಮ ಅಧಿಕಾರಿಗಳು ಸೇರಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಮನೆಗಳನ್ನು ಕಟ್ಟಿಸುವಾಗ ಒಳ್ಳೆಯ ಗಟ್ಟಿಯಾದ ಮರಮಟ್ಟುಗಳನ್ನು ಉಪಯೋಗಿಸಿ ಕಟ್ಟಿಸುತ್ತಿದ್ದೇವೆ. ಇದರಿಂದಾಗಿ ಮನೆಗಳ ಮತ್ತು ಇದಕ್ಕೆ ಉಪಯೋಗಿಸುವ ಮರಮಟ್ಟುಗಳ ಬೆಲೆ ಜಾಸ್ತಿಯಾಗಿರುತ್ತದೆಂದು ನಮ್ಮ ತಜ್ಞ ಇಂಜಿನಿಯರ್‌ಗಳು ಸೇರಿ 2-3 ಕಾನ್‌ಫರೆನ್ಸ್‌ಗಳನ್ನು ಬೆಂಗಳೂರು ಗುಲ್ಬರ್ಗಾಗಳಲ್ಲಿ ಮಾಡಿದ್ದಾರೆ. ಅದಕ್ಕೆ ಸುಮಾರು 500 ಜನ ಪ್ರತಿನಿಧಿಗಳು ಬಂದಿದ್ದರು. ಲೋ ಕಾಸ್ಟ್ ಮೆಟೀರಿಯಲ್ಸ್‌ನ್ನು ಉಪಯೋಗ ಮಾಡಿ ಭದ್ರವಾದ ಮನೆಯನ್ನು ಕಟ್ಟಬಹುದು ಹಾಗೂ ಇನ್ನೂ ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ನಾವು ಏನು ಮನೆಯನ್ನು ಕಟ್ಟುತ್ತೇವೆ ಅದರಲ್ಲಿ ಇನ್ನೂ 10-15 ಪರ್ಸೆಂಟ್ ಖರ್ಚು ಕಡಿಮೆಯಾಗುತ್ತದೆ ಮತ್ತು ಮನೆಯೂ ಕೂಡ ಭದ್ರವಾಗಿರುತ್ತದೆಂಬುದನ್ನು ತೋರಿಸಿದ್ದಾರೆ. ಇದನ್ನು ನಾವು ಕಾರ್ಯರೂಪಕ್ಕೆ ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇವತ್ತು ಅರಣ್ಯ ನಾಶವಾದರೆ ಎಷ್ಟು ತೊಂದರೆಯಾಗುತ್ತದೆ, ದೇಶಕ್ಕೆ ಎಷ್ಟು ನಷ್ಟವಾಗುತ್ತದೆ, ಮಳೆ ಬರುವುದಿಲ್ಲ, ದೇಶಕ್ಕೇ ವಿಪತ್ತು ಬರುತ್ತದೆ, ಕ್ಷಾಮ ಬರುತ್ತದೆಂದು ತಿಳಿದು ತಜ್ಞರನ್ನು ಕರೆಸಿ 2-3 ಸಮ್ಮೇಳನಗಳನ್ನು ಮಾಡಿಸಿದಮೇಲೆ ಲೋ ಕಾಸ್ಟ್ ಮೆಟೀರಿಯಲ್ಸ್‌ನ್ನು ಉಪಯೋಗಿಸಿ ಭದ್ರವಾದಮನೆಗಳನ್ನು ಕಟ್ಟಿಸಬೇಕೆಂದು ಸರ್ಕಾರ ಉದ್ದೇಶಿಸಿದೆ. ಇದರಲ್ಲಿ ನಾವು ಸಫಲರಾಗುತ್ತೇವೆಂದು ಭಾವಿಸಿದ್ದೇನೆ. ಪರಿಣತರು ತೋರಿಸಿಕೊಟ್ಟಿರುವ ರೀತಿಯಲ್ಲಿ ನಾವು ಫಾಲೋ ಮಾಡಿದರೆ ಕಡಿಮೆ ಬೆಲೆಯಲ್ಲಿ ಮನೆಗಳನ್ನು ಭದ್ರವಾಗಿ

ಕಟ್ಟಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಇರಿಗೇಷನ್ ಮತ್ತು ಲೋಕೋಪಯೋಗಿ ಇಲಾಖೆ, ಇವೆರಡನ್ನೂ ಸೇರಿಸಿದರೆ ಒಟ್ಟು 521 ಕೋಟಿ ರೂ.ಗಳ ಬೇಡಿಕೆ ಈ ಇಲಾಖೆಗೆ ಸಂಬಂಧಪಟ್ಟಂತಿದೆ. ಇದರಲ್ಲಿ ನಮ್ಮ ಸಿಬ್ಬಂದಿ ಖರ್ಚು 15 ಪರ್ಸೆಂಟ್ ಇದೆ. ಅಂದರೆ ಇದರಲ್ಲಿ ಸಿಬ್ಬಂದಿ ಖರ್ಚೇನೂ ಜಾಸ್ತಿಯಾಗಿಲ್ಲ. ಬಹಳ ಜನ ಅಧಿಕಾರಿಗಳಿದ್ದಾರೆಂದು ಕೆಲವರು ಭಾವಿಸಿದ್ದಾರೆ. ಅದೇ ರೀತಿ ಚೀಫ್ ಇಂಜಿನಿಯರ್‌ಗಳೂ ಕೂಡ ಬಹಳ ಜನರಿದ್ದಾರೆಂದು ಮಾನ್ಯ ರಾಮಸ್ವಾಮಿಯವರು ಹೇಳಿದರು. ಅಲ್ಲದೆ ಇಷ್ಟೊಂದು ಜನ ಬೇಕಾಗಿಲ್ಲವೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನಾವು ಬಹಳ ಕಷ್ಟದಲ್ಲಿದ್ದೇವೆ. ಕಾವೇರಿ ಯೋಜನೆಯನ್ನು ನಿಗದಿತ ವೇಳೆಯಲ್ಲಿ ಪೂರೈಸಲು ಇಷ್ಟೊಂದು ಕಷ್ಟವನ್ನು ಅನುಭವಿಸುತ್ತಿದ್ದೇವೆ. ಕೋಟ್ಯಾಂತರ ರೂಪಾಯಿ ಹಣ ನಷ್ಟವಾಯಿತು ಅಪ್ಪರ್ ಕೃಷ್ಣಾ ಆಗಲಿ, ಕಾವೇರಿ ಯೋಜನೆಯಾಗಲಿ, ಬೇರೆ ಯಾವುದೇ ಯೋಜನೆಯನ್ನಾಗಲಿ ನಿಗದಿತ ವೇಳೆಯಲ್ಲಿ ಮುಗಿಸಲು ನಮಗೆ ಹೆಚ್ಚಿನ ಇಂಜಿನಿಯರ್‌ಗಳು ಬೇಕಾಗುತ್ತಾರೆ. ಮತ್ತು ಈ ಕೆಲಸಕ್ಕಾಗಿ ಸರ್ಕಾರ ಕೂಡ ಅಷ್ಟೇ ಹಣವನ್ನೂ ಕೊಟ್ಟಿದೆ. ಹಣ ಇದೆ ಇಂಜಿನಿಯರ್‌ಗಳಿಲ್ಲ ಎಂದರೆ ಸರಿಯಾಗುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ಇಂಜಿನಿಯರ್‌ಗಳನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಪ್ರಾಜೆಕ್ಟ್‌ಗಳನ್ನು 2000 ಇಸವಿಯೊಳಗೆ ಪೂರೈಸಬೇಕಾಗಿದೆ. ಅದಕ್ಕಾಗಿ ಹೆಚ್ಚು ಇಂಜಿನಿಯರ್‌ಗಳು ಬೇಕಾಗಿದೆ. ಆದುದರಿಂದ ಇಂಜಿನಿಯರ್‌ಗಳು ಜಾಸ್ತಿ ಇದ್ದಾರೆ, ಅವರನ್ನು ಕಡಿಮೆ ಮಾಡಬೇಕೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅವರ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಇನ್ನು ದಿನಗೂಲಿಯಮೇಲೆ ಕೆಲಸ ಮಾಡುತ್ತಿರುವ ಎಸ್.ಸಿ.ಗಳಿಗೆ ಬಹಳ ಅನ್ಯಾಯವಾಗಿದೆ ಎಂದು ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಅದು ಸರಿಯಲ್ಲ. ಆ ರೀತಿ ಏನೂ ಅನ್ಯಾಯವಾಗಿಲ್ಲ. ನಾವು ಸಕ್ರಮಗೊಳಿಸತಕ್ಕ 7120 ಜನರಲ್ಲಿ ಎಲ್ಲಾ ಜಾತಿಯವರೂ ಇದ್ದಾರೆ. ಅದರಲ್ಲಿ ರೋಸ್ಟರ್ ಸಿಸ್ಟಂಮ್‌ನ್ನು ನಾವು ಫಾಲೋ ಮಾಡಿದ್ದೇವೆ. ಕಳೆದ 10 ವರ್ಷದಿಂದ ಇರತಕ್ಕವರು 5 ಸಾವಿರ ಜನರಿದ್ದಾರೆ. ಇದರಲ್ಲಿ 864 ಜನರು 1984ರ ನಂತರ ಬಂದಿರತಕ್ಕವರು ಕೋರ್ಟಿಗೆ ಹೋಗಿದ್ದಾರೆ. . . .

ಶ್ರೀ ಹೆಚ್. ಎಂ. ರೇವಣ್ಣ:- ನಾವು ರೋಸ್ಟರ್ ಸಿಸ್ಟಮನ್ನು ಅನುಸರಿಸಿದ್ದೇವೆಂದು ಹೇಳುವುದು ಸರಿಯಲ್ಲ. ಇದರಲ್ಲಿ ರೋಸ್ಟರ್ ಸಿಸ್ಟಂನ್ನು ಅನುಸರಿಸುವುದಕ್ಕಾಗುವುದಿಲ್ಲ. ಮೊದಲು ಇದನ್ನು ಪರಿಶೀಲಿಸಿ ಹೇಳಬೇಕು.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ:- ಎಲ್ಲಾ ಜಾತಿಯವರೂ ಇದರಲ್ಲಿ ಸೇರಿದ್ದಾರೆ. ತಾವು ಹೇಳಿದಂತೆ ರೋಸ್ಟರ್ ಸಿಸ್ಟಂ ಆಗಿಲ್ಲ. ಆದರೆ ಸಾಕಷ್ಟು ಜನ ಪರಿಶಿಷ್ಟವರ್ಗದವರಿದ್ದಾರೆ. ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ 1-7-84ರಲ್ಲಿ ಯಾರ್‍ಯಾರು ಟೆಂಪೊರರಿ ಬೇಸಿಸ್ ಮೇಲಿದ್ದಾರೆ ಅವರೆಲ್ಲರನ್ನೂ ಖಾಯಂ ಮಾಡಬೇಕೆಂದು ಸುಪ್ರೀಂ ಕೋರ್ಟ್‌ನ ಆದೇಶವಿದೆ. ಅಲ್ಲಿ ಎಲ್ಲಾ ಜಾತಿಯವರೂ ಇದ್ದಾರೆ. ನಾವು ರೋಸ್ಟರ್ ಸಿಸ್ಟಂನ್ನು ಪಾಲಿಸಿದ್ದೇವೆಂದು ಅಂದು ಕೊಂಡಿದ್ದೇನೆ. ಆದರೂ ಕೂಡ ಆಗಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಆದರ ಮಾಹಿತಿಯನ್ನು ತರಿಸಿ ರೋಸ್ಟರ್ ಸಿಸ್ಟಂನ್ನು ಫಾಲೋ ಮಾಡಬೇಕು ಮತ್ತು ಬಡವರಿಗೆ ಏನೂ ಸಿಕ್ಕಿಲ್ಲ. . . . .

ಶ್ರೀ ಆರ್. ವಿ. ದೇವರಾಜು:- ಸರ್ಕಾರದ ಕಮಿಟ್‌ಮೆಂಟ್ ಇರುವುದರಿಂದ ಇದರಲ್ಲಿ ರೋಸ್ಟರ್ ಸಿಸ್ಟಂ ಪಾಲನೆ ಮಾಡುವುದಕ್ಕೆ ಕಷ್ಟ ಎನಿಸುತ್ತದೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ:- ಸುಪ್ರೀಂ ಕೋರ್ಟಿಗೆ ಯಾರಾದರೂ ಅಪೀಲು ಹೋಗಬೇಕಾದರೆ ಏನಾದರೊಂದು ಉದ್ದೇಶ ಇದ್ದೇ ಇರುತ್ತದೆ. ನನಗೆ 4 ವರ್ಷ ಸರ್ವೀಸ್ ಆಗಿದೆ. ಈಗ ನನಗೆ ಕೆಲಸವಿಲ್ಲ, ಎಂದರೆ ಇವರನ್ನು ಕಂಪ್ಯಾಷನೇಟ್ ಗ್ರೌಂಡ್‌ಮೇಲೆ ಖಾಯಂ ಮಾಡಬೇಕೆಂದು ಹೇಳುತ್ತಾರೆ. ಆದರೆ ಅವರು ರೋಸ್ಟರ್ ಸಿಸ್ಟಂನ್ನು ನೋಡುವುದಿಲ್ಲ. ಮತ್ತೆ ಬೇರೆ ಕೇಸ್‌ನಲ್ಲಿ ರೋಸ್ಟರ್ ಸಿಸ್ಟಂ ಪಾಲನೆ ಮಾಡಿಲ್ಲ ಎಂದರೆ

ಸುಪ್ರೀಂ ಕೋರ್ಟ್ ಅದಕ್ಕೂ ಕೂಡ ಆದೇಶ ಕೊಡುತ್ತದೆ. ಆದುದರಿಂದ ನಾವು ಕೋರ್ಟ್ ಆದೇಶವನ್ನು ಪಾಲಿಸಬೇಕಾಗುತ್ತದೆ. ಎಸ್.ಸಿ.ಗಳಿಗೆ ಏನು ಅನ್ಯಾಯವಾಗಿದೆ ಎಂಬುದನ್ನು ನೋಡೋಣ. ರೋಸ್ಟರ್ ಸಿಸ್ಟಂ ಪಾಲನೆ ಆಗಲೇಬೇಕೆಂದರೆ, ಬೇರೆಯವರಿಗೆ ಅನ್ಯಾಯವಾಗುತ್ತದೆಂದರೆ ರೋಸ್ಟರ್ ಸಿಸ್ಟಂನ್ನೂ ಕೂಡ ಜಾರಿಗೆ ತರಲು ಪ್ರಯತ್ನ ಮಾಡುತ್ತೇನೆಂದು ಹೇಳಿ ಈ ಬೇಡಿಕೆಗಳ ಬಗ್ಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ. . . . . .

ಶ್ರೀ ಎಂ. ವಿ. ವೆಂಕಟಪ್ಪ:-ದೆಹಲಿಯಿಂದ 45 ಕೋಟಿ ರೂ. ಬಂತೇ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ:- ಮಾಜಿ ಮುಖ್ಯ ಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 12 ಲಕ್ಷ ರೂ. ಕೊಟ್ಟಿದ್ದರು. ಆದರೆ ಅದರಲ್ಲಿ ಎಲ್ಲಾ ಕೆಲಸ ಆದರೂ ಕೂಡ ಹಣವನ್ನೇ ಬಿಡುಗಡೆ ಮಾಡಿಲ್ಲವೆಂದು ಕೆಲವು ಸದಸ್ಯರು ಹೇಳಿದ್ದಾರೆ. ಸುಮಾರು 7 ಕೋಟಿ ರೂ.ಗಳನ್ನು ಮೊದಲೇ ಬಿಡುಗಡೆ ಮಾಡಲಾಗಿತ್ತು. ಇದರ ಜೊತೆಗೆ ಕಳೆದ 4 ದಿನಗಳ ಹಿಂದೆ ಮತ್ತೆ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ 3-4 ಕೋಟಿ ರೂ. ಕೊಡಬೇಕಾಗುತ್ತದೆ. ಇದನ್ನು 92-93ನೇ ಸಾಲಿನಲ್ಲಿ ಕೊಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು 3 ವರ್ಷದ ಅವಧಿಯಲ್ಲಿ ವರ್ಷಕ್ಕೆ 29 ಕೋಟಿ ರೂ.ಗಳಂತೆ ಕೊಡಬೇಕೆಂದು ಏನು ಹೇಳಿದ್ದಾರೆ, ಇದನ್ನು ಪ್ರಾಮುಖ್ಯತೆಯ ಆಧಾರದ ಮೇಲೆ ಖರ್ಚು ಮಾಡಲು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಉದ್ದೇಶವಿದೆ. ಇದರ ಸಾಧಕ ಬಾಧಕಗಳನ್ನು ನೋಡಿ ಪ್ರತಿಯೊಬ್ಬ ಶಾಸಕರ ಕ್ಷೇತ್ರಕ್ಕೂ 13 ಲಕ್ಷ ರೂ.ಗಳನ್ನಾದರೂ ಪ್ರತಿವರ್ಷ ಕೊಡಬೇಕೆಂದು ಮಾಡಿದ್ದೇವೆ. ಇದರಿಂದಾಗಿ ಸುಮಾರು 90 ಕೋಟಿ ರೂ.ಸರ್ಕಾರಕ್ಕೆ ಖರ್ಚು ಬರುತ್ತದೆ. ಆಯವ್ಯಯ ಪಟ್ಟಿಯಲ್ಲಿ ಯಾವ ಕೆಲಸವನ್ನೂ ಸೇರಿಸಿಲ್ಲ ಎಂದು ಕೆಲವು ಶಾಸಕರಿಗೆ ನಿರುತ್ಸಾಹ ಆಗಿದೆ ಎನ್ನತಕ್ಕ ಭಾವನೆ ಇದೆ. ಪ್ರಾಮುಖ್ಯತೆಯ ಆಧಾರದ ಮೇಲೆ ಶಾಸಕರು ಏನು ಕೆಲಸವನ್ನು ಹೇಳಿದ್ದಾರೆ ಆ ಕೆಲಸವನ್ನು ತೆಗೆದುಕೊಂಡು ಪೂರ್ತಿಮಾಡಬೇಕಾಗಿದೆ. 1 ವರ್ಷಕ್ಕೆ ಸುಮಾರು 29 ಕೋಟಿ ರೂ.ನಂತೆ 3 ವರ್ಷಕ್ಕೆ 90 ಕೋಟಿ ರೂ.ಆಗುತ್ತದೆ. ಈ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಬೇಕೆಂಬ ಆಸೆ ನನಗಿದೆ ಎಂದು ಇಷ್ಟು ಹೇಳಿ ನಮ್ಮ ಇಲಾಖೆಯ 43,44,ಮತ್ತು 45ನೇ ಬೇಡಿಕೆಗಳನ್ನು ಸರ್ವಾನುಮತದಿಂದ ಮಾನ್ಯ ಸದಸ್ಯರುಗಳು ಪಾಸ್ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಖಾತೆ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ ,ನಾನು ಡಿಮ್ಯಾಂಡ್ ನಂಬರ್ 33ರ ಬೇಡಿಕೆಗಳನ್ನು ಸಭೆಯಮುಂದಿಡಲು ಇಚ್ಛಿಸುತ್ತೇನೆ. ಅಂದರೆ ಮುಂದಿನ ವರ್ಷ 1992-93ರಲ್ಲಿ ಸಣ್ಣ ನೀರಾವರಿ ಇಲಾಖೆಗೆ 25.99 ಕೋಟಿ ರೂಪಾಯಿ ಗ್ರ್ಯಾಂಟನ್ನು ಕೊಡಲಾಗಿದೆ. 1991-92ರಲ್ಲಿ ಇದರ ಪ್ರಯೋಜನಾ ಗಾತ್ರ 17.37 ಕೋಟಿ ಆಗಿತ್ತು. ಮುಂದಿನ ವರ್ಷ ಸಮುದ್ರ ಕೊರತೆ ಮತ್ತು ಬೃಹತ್ ನೀರಾವರಿ ಯೋಜನೆಗೆ 5 ಕೋಟಿ ರಾಪಾಯಿಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದಿಂದ ಸಹಾಯಧನವಾಗಿ 3 ಕೋಟಿ ರೂಪಾಯಿಗಳು ಬರುವ ಸಂಭವವಿದೆ. ಸಣ್ಣ ನೀರಾವರಿ ಯೋಜನೆಗಳಲ್ಲಿ ಬರುವಂಥ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಪುನರ್‌ವಸತಿ ಗೊಳಿಸಲು 1.5 ಕೋಟಿ ರೂಪಾಯಿಗಳನ್ನು 1992-93 ರಲ್ಲಿ ಕಲ್ಪಿಸಿಕೊಡಲಾಗಿದೆ. ಇಷ್ಟೊಂದು ಹಣವನ್ನು ಹಿಂದೆ ಕೊಟ್ಟಿದ್ದಿಲ್ಲ. ಇದರ ಜೊತೆಯಲ್ಲಿ ಉಳಿದ ಕಾರ್ಯಕ್ರಮಗಳಿಗೋಸ್ಕರ ಅಂದರೆ 2 ಜಿ.ಸಿ.ಬಿ. ಮಿಷನ್‌ಗೆ ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಯಾಂಕ್ಷನ್ ಆಗಿರಬಹುದು. ನಿನ್ನೆ ಆಗದಿದ್ದರೆ ಇವತ್ತು ಆಗಿರಬಹುದು. ಅದನ್ನು ಟ್ರಯಲ್ ಬೇಸಿಸ್ ಮೇಲೆ ಮುಂದೆ ಹೆಚ್ಚಿನದಾದಂಥ ಜಿ.ಸಿ.ಬಿ.ಮಿಷನ್‌ಗಳನ್ನು ಕೊಂಡುಕೊಳ್ಳಲು ಅವಕಾಶವಾಗಲು ಇವತ್ತು 50 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ. ಇದೂ ಸಾಲುವುದಿಲ್ಲ. ಇನ್ನು ಯಾವುದಾದರೂ ಹಣವನ್ನು ಒದಗಿಸಿ ರೀ_ಅಪ್ರೊಪ್ರಿಯೇಟ್ ಮಾಡಿ ಇನ್ನೂ ಹೆಚ್ಚಿನದಾದಂಥ ಜಿ.ಸಿ.ಜಿ ಮೆಷಿನ್‌ಗಳನ್ನು

ತೆಗೆದುಕೊಳ್ಳಬೇಕೆನ್ನುವ ತೀರ್ಮಾನ ಮಾಡಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆರೆ ಕೆಲಸಗಳಿಗೋಸ್ಕರ 482 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಕೆರೆಗಳ ರಿಪೇರಿಗೋಸ್ಕರ 54 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಉಳಿದ ಕಾರ್ಯಕ್ರಮಗಳಿಗೆ 50 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಮತ್ತು 100 ಕೋಟಿ ರೂಪಾಯಿಗಳ ದುರಸ್ತಿ.

ಶ್ರೀ ಹೆಚ್. ಎಂ. ರೇವಣ್ಣ:- ಉಳಿದ ಕಾರ್ಯಕ್ರಮ ಯಾವುದು ಸ್ವಾಮಿ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಕೊನೆಗೆ ಉತ್ತರ ಕೊಡುವಾಗ ಹೇಳುತ್ತೇನೆ. ಸುಮಾರು 100 ಕೆರೆಗಳ ದುರಸ್ತಿಗೋಸ್ಕರ ಡಚ್ ಗೌರ್ನಮೆಂಟ್ ಮತ್ತು ಯೂರೋಪಿಯನ್ ಎಕನಾಮಿಕ ಏಡ್ ಗೆ ನಾವು ಈಗಾಗಲೇ 140 ಕೋಟಿ ರೂಪಾಯಿಗಳ ಸಹಾಯಧನವನ್ನು ಕೋರಿದ್ದೇವೆ. ಇದಕ್ಕಾಗಿ ಡೆಲಿಗೇಷನ್‌ನನ್ನು ಕಳುಹಿಸಿದ್ದೇವೆ. ವಿಶೇಷವಾಗಿ ಅಣೆಕಟ್ಟುಗಳು, ಪಿಕಪ್‌ಗಳು, ಭಂಡಾರಗಳು, ಫೀಡರ್‌ಚಾನಲ್‌ಗಳಿಗೋಸ್ಕರ 334 ಕೋಟಿ ರೂಪಾಯಿಗಳ ಹೊಸ ಒಂದು ಐಟಮ್ಮನ್ನಾಗಿ ಈ ವರ್ಷ ಸೇರಿಸಲಾಗಿದೆ. ಅಲ್ಲಲ್ಲಿ ಏತ ನೀರಾವರಿಗೋಸ್ಕರ 132 ಕೋಟಿ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಅಲ್ಲಿ ಹೂಳೆತ್ತುವ ಕೆಲಸ ನಡೆದಿದೆ. ಏತ ನೀರಾವರಿ ಪುನರ್‌ನವೀಕರಿಸಲು ಹಾಗೂ ಕೆಟ್ಟು ಹೋಗಿರುವುದನ್ನು ರಿಪೇರಿ ಮಾಡುವುದಕ್ಕೋಸ್ಕರ 150 ಲಕ್ಷ ರೂಪಾಯಿಗಳನ್ನು ತೆಗೆದಿರಿಸಿರುತ್ತೇವೆ. ಈ ವರ್ಷ ಯೋಜನೇತರ ಬಾಬುಗಳಲ್ಲಿ ಕೆರೆಗಳ ವಾರ್ಷಿಕ ನಿರ್ವಹಣೆ ಮತ್ತು ರಿಪೇರಿಗೊಸ್ಕರ ಹೆಚ್ಚಿನ ಅಂದರೆ 254 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಏತನೀರಾವರಿ ಯೋಜನೆಗಳಿಗೋಸ್ಕರ ಚಾಲ್ತಿ ಯೋಜನೆಗಳಿಗೆ 575.55 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಕಾಮಸಮುದ್ರ ಮತ್ತು ಮತ್ತೊಂದು ಏತನೀರಾವರಿ ತಲಾ 200 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಮಧ್ಯಮ ನೀರಾವರಿ ಯೋಜನೆಗಳಿಗೆ 39.57 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಅಚ್ಚುಕಟ್ಟು ರಸ್ತೆಗಾಗಿ 136.25 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ರಾಷ್ಟ್ರೀಯ ನೀರು ನಿರ್ವಹಣೆ ಕಾರ್ಯಕ್ರಮದಲ್ಲಿ ಅಂದಾಜು 140 ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಮತ್ತು ಎನ್.ಡಬ್ಲ್ಯೂ.ಎನ್.ಪಿ ಎಂದರೆ ಕೇಂದ್ರದಿಂದ ಬರತಕ್ಕ ಸಹಾಯಧನ 140 ಲಕ್ಷ ರೂಪಾಯಿಯಾಗಿರುತ್ತದೆ. ಈ ಕೆಲಸಗಳಿಗೆ 482 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆಯಕಟ್ಟು ರೋಡುಗಳಿಗೆ 136 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕಾಮಸಮುದ್ರ ಮತ್ತು ಹುಚ್ಚನಕುಪ್ಪಗಳಿಗೆ ತಲಾ 200 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅಂದರೆ ವರ್ಲ್ಡ್‌ಬ್ಯಾಂಕ್ ಕೆರೆಗಳ ಕಂಪ್ಲೀಷನ್‌ಗೋಸ್ಕರ 192 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಹುತೇಕ ಇದು ಬಹಳ ಕಡಿಮೆ ಹಣ. ತಮಗೆ ಗೊತ್ತಿರುವಂತೆ ಇದಕ್ಕೆ ಸುಮಾರು 12 ಕೋಟಿ ರೂಪಾಯಿಗಳು ನಮಗೆ ಬೇಕಾಗಿದೆ. ಆದರೆ ಹಣಕಾಸಿನ ಒಂದು ಕೊರತೆಯಿಂದಾಗಿ 192 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮುಂದೆ ಇನ್ನೂ ಹೆಚ್ಚಿನ ಹಣವನ್ನು ಕೊಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ವರ್ಲ್ಡ್‌ಬ್ಯಾಂಕ್‌ನಿಂದ ನಾವು ಕೇಳಿರುವ ಸಹಾಯ ಬಂದರೆ ಈ ವರ್ಷ ಎಲ್ಲಾ ಕೆಲಸಗಳನ್ನು ಪೂರ್ತಿ ಮಾಡಲು ಅನುಕೂಲವಾಗುತ್ತದೆ. ನಾವು 12 ಕೋಟಿ ರೂಪಾಯಿಗಳ ಒಂದು ವೆಚ್ಚವನ್ನು ಭರಿಸುವುದಕ್ಕೆ ತಯಾರಿದ್ದೇವೆಂದು ಹೇಳುತ್ತಾ ಎಲ್ಲಾ ಸ್ಕೀಮ್‌ಗಳಿಗೆ 575 ಲಕ್ಷ ರೂಪಾಯಿಗಳು ಮೆಯಿನ್‌ಟನೆನ್ಸ್‌ಗೆಂದು ಕೊಟ್ಟಿದ್ದೇವೆ. ಹಾಗೂ ಮೀಡಿಯಮ್ ಇರಿಗೇಷನ್ 39 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರ ಜೊತೆಗೆ 5 ಕೋಟಿ ರೂಪಾಯಿ ಸೀ ಇರೋಷನ್‌ಗೆ ಕೊಟ್ಟಿದ್ದೇವೆ. ಕೇಂದ್ರದವರು ಸಹ ಇದಕ್ಕೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಹಣ ಕೊಟ್ಟು ಮೈನರ್ ಇರಿಗೇಷನ್ ಕೆಲಸವನ್ನು ಮುಗಿಸಿದ್ದೇವೆ.

ಶ್ರೀ ಸಿ. ಎಂ. ಲಿಂಗಪ್ಪ:- ಮೈನರ್ ಇರಿಗೇಷನ್ ಕೆಲಸವನ್ನೇ ಮುಗಿಸಿದರಂತ ಅವರು

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಏತ ನೀರಾವರಿ ಬಗ್ಗೆ ಅನೇಕ ಟೀಕೆಗಳು ಬಂದಿವೆ. ಬಹುತೇಕ ಅವು ಕೆಲಸ ಮಾಡುತ್ತಿಲ್ಲ. ಅವನ್ನು ಮುಚ್ಚುವುದು ಒಳ್ಳೆಯದು. ಅಥವಾ ಮರ್ಜ್ ಮಾಡಬೇಕೆಂದು

ಹೇಳತಕ್ಕ ಅನೇಕ ಆಪಾದನೆಗಳು ಬಂದಿವೆ. ಆದರ ಬಗ್ಗೆ ಎರಡು ಮಾತು ಹೇಳಿದರೆ ತಪ್ಪಾಗಲಾರದು. ಏತ ನೀರಾವರಿ ಯೋಜನೆಗಳು 1986 ರಲ್ಲಿ ಪ್ರಾರಂಭವಾದದ್ದು ನಿಜ. 5 ವರ್ಷಗಳ ಕಾಲ ಅವು ಸ್ಥಗಿತಗೊಂಡು ತಾವು ಹೇಳಿದ ಹಾಗೆ ಕೆಲವು ಅಪಾಯಿಂಟ್‌ಮೆಂಟ್‌ಗೋಸ್ಕರ ಇದ್ದ ಯೋಜನೆಗಳಾಗಿದ್ದವು.. ಆದರೆ ಮಾನ್ಯ ಬಂಗಾರಪ್ಪನವರ ಸರ್ಕಾರ ಬಂದಮೇಲೆ 1991 ರಿಂದ ನಾವು ಸತ್ತು ಬಿದ್ದಿದ್ದ ಹೆಣವಾಗಿದ್ದ ನೀರಾವರಿ ಯೋಜನೆಗಳಿಗೆ ಚಾಲನೆ ಕೊಟ್ಟು ಕೆಲಸ ಪ್ರಾರಂಭ ಮಾಡಿದ್ದೇವೆ. ಬಹುತೇಕವಾಗಿ ನಾವು ಕೊಟ್ಟಿರತಕ್ಕ ಫಿಗರ್ ನೋಡಿದರೆ ತಾವು ಆಶ್ಚರ್ಯ ಪಡುವಂತ ಕೆಲಸ ಮಾಡಿದ್ದೇವೆಂದು ಹೇಳುತ್ತೇನೆ. ಕೃಷ್ಣ ನೀರಾವರಿ ಯೋಜನೆ ಆದಿಯಲ್ಲಿ ಹತ್ತು ಜಿಲ್ಲೆಗಳು ಬರುತ್ತವೆ. ಅವುಗಳೆಂದರೆ, ಬಿಜಾಪುರ, ರಾಯಚೂರು, ಬೀದರ್, ಬೆಳಗಾಂ, ಗುಲ್ಬರ್ಗಾ, ಧಾರವಾಡ, ಚಿತ್ರದುರ್ಗ, ಶಿವಮೊಗ್ಗ ಹಾಗು ಉತ್ತರ ಕನ್ನಡ ಜಿಲ್ಲೆಗಳು. ಇದರಲ್ಲಿ 25 ಭಾಗ ಸರ್ಕಾರದ್ದು ಮತ್ತು 75 ಭಾಗ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಕೆಲಸ ಮಾಡತಕ್ಕ ವ್ಯವಸ್ಥೆ ಇದೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 444 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದೇವೆ. ಅವುಗಳ ವೆಚ್ಚ 246 ಕೋಟಿ ರೂಪಾಯಿಗಳು. ನೀರಾವರಿ ಆಗತಕ್ಕ ಕ್ಷೇತ್ರ 1,12,540 ಸಾವಿರ ಹೆಕ್ಟೇರ್ ಪ್ರದೇಶ. 1992-93ರಲ್ಲಿ 94 ಯೋಜನೆಗಳನ್ನು 71 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಕೈಗೊಂಡು 38 ಸಾವಿರ ಹೆಕ್ಟೇರ್ ಭೂಮಿಗೆ ನೀರುಣಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಮೇಲ್ಕಂಡ ಯೋಜನೆಗಳನ್ನು ಹಣಕಾಸಿನ ಲಭ್ಯತೆ ಮೇಲೆ ಕೈಗೊಳ್ಳಲಾಗುವುದು. ವಿಶೇಷವಾಗಿ 7 ಯೋಜನೆಗಳನ್ನು ನಬಾರ್ಡಿಗೆ ಕಳುಹಿಸಲಾಗಿದೆ. ಆ ಪೈಕಿ ಒಂದು ಹಳೆಯ ಮತ್ತು 3 ಹೊಸ ಯೋಜನೆಗಳಿಗೆ ಮಂಜೂರಾತಿ ದೊರಕಿದೆ. ಉಳಿದ ಯೋಜನೆಗಳಿಗೆ ಸದ್ಯದಲ್ಲಿ ಮಂಜೂರಾತಿ ದೊರಕಲಿ ಮಂಜೂರಾದ 4 ಯೋಜನೆಗಳ ಒಟ್ಟು ಮೊತ್ತ 451.47 ಲಕ್ಷ ರೂಪಾಯಿಗಳು, ನೀರಾವರಿ ಆಗತಕ್ಕ ಕ್ಷೇತ್ರ 2502 ಹೆಕ್ಟೇರ್‌ಗಳು. ಇದಲ್ಲದೆ ಇನ್ನೂ 9 ಹೊಸ ಯೋಜನೆಗಳನ್ನು ನಬಾರ್ಡಿಗೆ ಕಳುಹಿಸಿದ್ದೇವೆ. ಅವುಗಳ ವೆಚ್ಚ 857.18 ಲಕ್ಷ ರೂಪಾಯಿಗಳು, ನೀರಾವರಿ ಆಗತಕ್ಕ ಕ್ಷೇತ್ರ 3606 ಹೆಕ್ಟೇರ್‌ಗಳು. ಇನ್ನೂ 4 ಯೋಜನೆಗಳನ್ನು ನಬಾರ್ಡಿಗೆ ಕಳುಹಿಸುವ ಹಂತದಲ್ಲಿದ್ದೇವೆ. ಅವುಗಳ ವೆಚ್ಚ 278.24 ಲಕ್ಷ ರೂಪಾಯಿಗಳು, ನೀರಾವರಿ ಆಗತಕ್ಕ ಕ್ಷೇತ್ರ 1223 ಹೆಕ್ಟೇರ್‌ಗಳು. ಈಗಾಗಲೇ 4 ಯೋಜನೆಗಳನ್ನು ಕೈಗೊಂಡು ಸೀಡ್ ಮನಿಯಿಂದ 3 ಲಕ್ಷದ 61 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. 1993-94 ರಲ್ಲಿ 60 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಅವುಗಳ ಅಂದಾಜು ವೆಚ್ಚ 35 ಕೋಟಿ ರೂಪಾಯಿಗಳು. ನೀರಾವರಿ ಆಗತಕ್ಕ ಪ್ರದೇಶ 12 ಸಾವಿರ ಹೆಕ್ಟೇರ್‌ಗಳು. 94-95 ರಲ್ಲಿ 70 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದ್ದು ಅವುಗಳ ಅಂದಾಜು ವೆಚ್ಚ 40ಕೋಟಿ ರೂಪಾಯಿಗಳು, ನೀರಾವರಿ ಆಗತಕ್ಕ ಪ್ರದೇಶ 4 ಸಾವಿರ ಹೆಕ್ಟೇರ್‌ಗಳು. 95-96 ರಲ್ಲಿ 85 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದ್ದು ಅವುಗಳ ಅಂದಾಜು ವೆಚ್ಚ 45 ಕೋಟಿ ರೂಪಾಯಿಗಳು, ನೀರಾವರಿ ಆಗತಕ್ಕ ಕ್ಷೇತ್ರ 10 ಸಾವಿರ ಹೆಕ್ಟೇರ್‌ಗಳು. 96-97ರಲ್ಲಿ 95 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದ್ದು ಅವುಗಳ ಅಂದಾಜು ವೆಚ್ಚ 55 ಕೋಟಿ 52 ಲಕ್ಷ ರೂಪಾಯಿಗಳು. ನೀರಾವರಿ ಆಗತಕ್ಕ ಪ್ರದೇಶ 18 ಸಾವಿರ ಹೆಕ್ಟೇರ್‌ಗಳು. ಮೇಲ್ಕಂಡ ಯೋಜನೆಗಳನ್ನು 8 ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣಕಾಸಿನ ಲಭ್ಯತೆ ಮೇಲೆ ಕೈಗೊಳ್ಳಲಾಗುವುದು. ಏತ ನೀರಾವರಿ ಮತ್ತೊಂದು ತೊಂದರೆ ಪ್ರಾರಂಭವಾಗಿದೆ. ಬ್ಯಾಂಕಿನ ಬಡ್ಡಿ ದರ ಸುಮಾರು 14.5 ಪರ್ಸೆಂಟ್ ಇದ್ದದ್ದು ಈಗ 25 ಪರ್ಸೆಂಟ್‌ವರೆಗೆ ಏರಿದೆ. ಇದು ರೈತರ ಮೇಲೆ ಹೆಚ್ಚಿನ ಹೊರೆ ಬೀಳತಕ್ಕದ್ದು. ಇದರ ಬಗ್ಗೆ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಜೊತೆ ಚರ್ಚೆ ಮಾಡಿದ್ದೇನೆ. ರೈತರಿಗೆ ಶೇಕಡ 15-16 ಪರ್ಸೆಂಟ್ ಬಡ್ಡಿ ಮೇಲೆ ಹಾಕಬಾರದು ಎಂದು ಹೇಳಿದ್ದೇನೆ. ಆ ಬಗ್ಗೆ ಒಂದು ಸುತ್ತೋಲೆಯನ್ನು ಎಲ್ಲಾ ಬ್ಯಾಂಕುಗಳಿಗೂ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ. ರೈತರಿಗೆ ಕಡಿಮೆ ಬಡ್ಡಿಯಲ್ಲಿ

ಸಾಲ ದೊರೆಯಬೇಕು ಮತ್ತು ಕೃಷಿ ಅಭಿವೃದ್ಧಿ ಬಗ್ಗೆ ಬ್ಯಾಂಕುಗಳ ಜೊತೆ ಚರ್ಚೆ ಮಾಡಿದ್ದೇವೆ. ಅವರು 15 ಪರ್ಸೆಂಟ್ ಬಡ್ಡಿಗೆ ಸಾಲ ಕೊಡಲು ಒಪ್ಪಿ ಸರ್ಕಾರ 3 ಪರ್ಸೆಂಟ್ ಷೇರು ಕೊಡುವುದಾದರೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಒಪ್ಪಿದ್ದಾರೆ. 14 ವರ್ಷಗಳ ನಂತರ ಸಾಲ ಮರುಪಾವತಿ ಆದ ಮೇಲೆ ರೈತರಿಗೆ ಆ ಹಣ ವಾಪಸ್ಸು ಬರುವುದಿಲ್ಲ. ಅವರು ವರ್ಷಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಕೊಡಲು ಸಿದ್ಧರಿದ್ದಾರೆ. ಈಗ ನಾವು 4 ಯೋಜನೆಗಳನ್ನು ಏನು ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದೇವೆ, ಅವುಗಳೆಂದರೆ ಕರಗಡ -31 ಲಕ್ಷ ರೂಪಾಯಿ ಯೋಜನೆ, 121 ಹೆಕ್ಟೇರ್ ನೀರಾವರಿ ಕ್ಷೇತ್ರ. ಅಡಲುಡಿ - 296 ಲಕ್ಷ ರೂಪಾಯಿ ಯೋಜನೆ, 149 ಹೆಕ್ಟೇರ್ ನೀರಾವರಿ ಕ್ಷೇತ್ರ, ಲಿಂಗಾಪುರ - 69 ಲಕ್ಷ ರೂಪಾಯಿ ಯೋಜನೆ, 405 ಹೆಕ್ಟೇರ್ ನೀರಾವರಿ ಕ್ಷೇತ್ರ. ಹಾಗೂ ಚಿಕ್ಕಹಸಬಿ 63 ಲಕ್ಷ ರೂ.ಗಳ ಯೋಜನೆ, 486ಹೆಕ್ಟೇರ್ ನೀರಾವರಿ ಕ್ಷೇತ್ರ. ಈ ರೀತಿ ನಾವು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ಈ ಒಂದು ಸೆಷನ್ ಆದ ಕೂಡಲೇ ನಾಲ್ಕು ಯೋಜನೆಗಳಿಗೆ ಅಸ್ತಿ ಭಾರ ಹಾಕತಕ್ಕ ಕಾರ್ಯಕ್ರಮ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಒಂದು ಮಾತು. ಈ ಸಂಸ್ಥೆಗಳು 1987 ರಲ್ಲಿ ಪ್ರಾರಂಭವಾದರೂ 1990 ರವರೆಗೆ ಏನೂ ಕೆಲಸ ಆಗಿಲ್ಲ. ಇದೂ ಅದೇರೀತಿಯಾಗಿದೆ. 17 ಯೋಜನೆಗಳನ್ನು ಹಣಕಾಸು ಸಂಸ್ಥೆಗಳಿಗೆ ಕಳುಹಿಸಿದ್ದೇವೆ. ಸುಮಾರು 7.5 ಕೋಟಿ ಅಂದಾಜು ವೆಚ್ಚದ ಯೋಜನೆಯನ್ನು ಪ್ರಾರಂಭಿಸಲು ನಿರ್ಧರಿಸಿದ್ದೇವೆ. ಇದರಿಂದ 3240 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೊಳಿಸಲು ಉದ್ದೇಶಿಸಲಾಗಿದೆ. ಮತ್ತು ಆಡಳಿತ ಮಂಜೂರಾತಿ ಆಗಿರತಕ್ಕ 69 ಯೋಜನೆಗಳನ್ನು ಸಿದ್ಧಪಡಿಸಲಾಗಿದೆ. ಇದರ ವೆಚ್ಚ ಸುಮಾರು 25 ಕೋಟಿ 30 ಲಕ್ಷ ರೂಪಾಯಿಗಳು. ನೀರಾವರಿ ಆಗತಕ್ಕ 11,622.28 ಹೆಕ್ಟೇರ್‌ಗಳು. ಮತ್ತು ಮುಂದೆ ಆಡಳಿತ ಮಂಜೂರಾತಿ ಆಗುವಂಥ 32 ಯೋಜನೆಗಳನ್ನು ತಯಾರು ಮಾಡಲಾಗಿದೆ. ಇದರ ಅಂದಾಜು ವೆಚ್ಚ 15 ಕೋಟಿ 27 ಲಕ್ಷ ರೂಪಾಯಿಗಳು. ನೀರಾವರಿ ಆಗತಕ್ಕ ಪ್ರದೇಶ 5459 ಎಕರೆ. ಪ್ರಾರಂಭದ ತನಿಖೆ ಮುಕ್ತಾಯವಾಗುತ್ತಿರುವ ಯೋಜನೆಗಳು 39. ಇದರ ಅಂದಾಜು ವೆಚ್ಚ 32 ಕೋಟಿ 86 ಲಕ್ಷ ರೂಪಾಯಿಗಳು. ಅಚ್ಚುಕಟ್ಟು 10 ಸಾವಿರ ಎಕರೆ. ಈಗ ತನಿಖೆ ಮಾಡಿಸುತ್ತಿರುವ ಯೋಜನೆಗಳು 143. ಇದರ ಅಂದಾಜು ವೆಚ್ಚ 41 ಕೋಟಿ 4 ಲಕ್ಷ ರೂಪಾಯಿಗಳು. ನೀರಾವರಿ ಆಗತಕ್ಕ ಒಟ್ಟು ಪ್ರದೇಶ18 ಸಾವಿರ ಹೆಕ್ಟೇರ್‌ಗಳು. ಈ ರೀತಿ ಒಟ್ಟು 8ನೇ ಪಂಚವಾರ್ಷಿಕ ಯೋಜನೆಯಲ್ಲಿ 300 ಯೋಜನೆಗಳನ್ನು ಕೈಗೊಂಡು 122 ಕೋಟಿ ರೂಪಾಯಿ ವೆಚ್ಚದಲ್ಲಿ 50 ಸಾವಿರ ಹೆಕ್ಟೇರ್ ಪ್ರದೇಶವನ್ನು ನೀರಾವರಿ ಮಾಡುವ ಯೋಜನೆ ಇದೆ. ಇಲ್ಲಿಯವರೆಗೆ 17 ಯೋಜನೆಯನ್ನು ಕೈಗೊಂಡು ಸೀಡ್ ಮನಿಯಿಂದ 88 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಒಟ್ಟು 27 ಯೋಜನೆಗಳನ್ನು ನಬಾರ್ಡ್‌ಗೆ ಕಳುಹಿಸುತ್ತಿದ್ದೇವೆ. ಅದರ ಅಂದಾಜು ವೆಚ್ಚ 11 ಕೋಟಿ ರೂಪಾಯಿಗಳು. ಮತ್ತು ಇನ್ನೂ 23 ಯೋಜನೆಗಳನ್ನು ಹಣಕಾಸು ಸಂಸ್ಥೆಗಳಿಗೆ ಕಳುಹಿಸಿಕೊಡಲಾಗುವುದು. ಒಟ್ಟು 50 ಯೋಜನೆಗಳಿಗೆ 20 ಕೋಟಿ ರೂಪಾಯಿಗಳ ಅಂದಾಜು ಇದೆ. ಮೇಲ್ಕಂಡ ಯೋಜನೆಗಳಲ್ಲಿ 9ಕ್ಕೆ ನಬಾರ್ಡ್‌ನಿಂದ ಅನುಮತಿ ದೊರೆತಿದೆ. ಇನ್ನು ಉಳಿದವುಗಳಿಗೆ ನಬಾರ್ಡ್‌ನಿಂದ ಅನುಮತಿ ದೊರೆಯಲಿದೆ. ಇಷ್ಟು ಹೇಳಿ ಎಲ್ಲ ಮಾನ್ಯ ಸದಸ್ಯರುಗಳು ನನ್ನ ಡಿಮ್ಯಾಂಡ್ ನಂಬರ್ 33 ಕ್ಕೆ ದಯಮಾಡಿ ಒಪ್ಪಿಗೆ ಕೊಡಬೇಕೆಂದು ಮಾತನ್ನು ಹೇಳುತ್ತೇನೆ. ಎಲ್ಲರಿಗೂ ಧನ್ಯವಾದಗಳು.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್(ಮಧ್ಯಮ ಮತ್ತು ಬೃಹತ್ ನೀರಾವರಿ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿನ ಈ ಸದನದಲ್ಲಿ ನೋಡಿದಾಗ ಸುಮಾರು 18 ಜನ ಮಾನ್ಯ ಶಾಸಕರು ಎಲ್ಲ ಇಲಾಖೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಅದೇರೀತಿ ನಮ್ಮ ಇಲಾಖೆಯಲ್ಲೂ ಅಭಿಪ್ರಾಯಗಳನ್ನು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೂ ನಾನು ನನ್ನ

ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಈ ,ಸದನಕ್ಕೆ ವಿರೋಧಪಕ್ಷದವರು ಇರಬೇಕಾಗುತ್ತದೆ. ಆದರೆ ವಿರೋಧಪಕ್ಷದ ಸ್ಥಾನದಲ್ಲಿ ಯಾರೂ ಕೂಡ ಇಲ್ಲ. ಇದು ಬಹಳ ವಿಶೇಷವಾದ ಸಂದರ್ಭವೆಂದು ಭಾವಿಸಿ ಈ ಸಂದರ್ಭದಲ್ಲಿ ಭಾರಿ ನೀರಾವರಿ ಇಲಾಖೆಗೆ ಕಳೆದ ಹಲವಾರು ವರ್ಷಗಳಿಂದ ನಾಡಿನ ಸಮಸ್ತ ರೈತ ಬಾಂಧವರು ಏನು ಒಂದು ಆಸೆ ಆಕಾಂಕ್ಷೆಗಳನ್ನು ಇಟ್ಟಿದ್ದರು ಆ ಆಸೆ ಆಕಾಂಕ್ಷೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರ ನೇತೃತ್ವದಲ್ಲಿ ಈ ವರ್ಷ ಸುಮಾರು 549 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಕಳೆದ ವರ್ಷ 383 ಕೋಟಿ ರೂಪಾಯಿಗಳನ್ನು ನೀರಾವರಿ ಪ್ರದೇಶಕ್ಕೆ ಈಗಾಗಲೇ ನಾವು ಖರ್ಚು ಮಾಡಿದ್ದೇವೆ. ಕಾವೇರಿ ಜಲಾನಯನ ಪ್ರದೇಶಗಳಿಗೆ ಸುಮಾರು 200 ಕೋಟಿ ರೂಪಾಯಿಗಳ ಅನುದಾನವನ್ನು ಈ ವರ್ಷದಲ್ಲಿ ಇಡಲಾಗಿದೆ. ಕಳೆದ ವರ್ಷ ಇದೇ ಒಂದು ಬೇಸಿನ್‌ನಲ್ಲಿ ಸುಮಾರು 136 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ರಾಜ್ಯದಲ್ಲಿ ಸುಮಾರು 55 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಮಾಡತಕ್ಕ ಅವಕಾಶ ಇದೆ. ಈಗಾಗಲೇ 24.4 ಲಕ್ಷ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಿದ್ದೇವೆ. ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ನೀರಾವರಿ ಅಭಿವೃದ್ಧಿಗಾಗಿ ಏನು ಕೆಲಸ ಮಾಡಿತ್ತಿದ್ದೇವೆ, ಇದನ್ನೆಲ್ಲಾ ತಿಳಿದುಕೊಳ್ಳಲು ವಿರೋಧಪಕ್ಷದವರು ಇರಬೇಕಾಗಿತ್ತು. ಆದರೆ ಅವರು ಇಲ್ಲ. ಅದಕ್ಕಾಗಿ ನಮ್ಮ ಪಕ್ಷದ ಸದಸ್ಯರಾದ ಶ್ರೀ ಎ.ಟಿ.ರಾಮಸ್ವಾಮಿಯವರು ವಿರೋಧ ಪಕ್ಷದ ಕೆಲಸವನ್ನು ಅನಿವಾರ್ಯವಾಗಿ ಮಾಡಿದರು. ಅವರು ನಮ್ಮ ಇಲಾಖೆಗೆ ಗೆದ್ದಲು ಹಿಡಿದಿದೆ, ನಮ್ಮ ಇಲಾಖೆಯಲ್ಲಿ ಸಾಕಷ್ಟು ಕರಪ್ಷನ್ ಇದೆ ಎಂದು ಹೇಳಿದ್ದಾರೆ. ಇದೆಲ್ಲಾ ಇದ್ದರೂ ನಮ್ಮ ಇಲಾಖೆಯಲ್ಲಿರತಕ್ಕ ಹಲವಾರು ಒಳ್ಳೆಯ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡತಕ್ಕ ಸಂದರ್ಭದಲ್ಲಿ ನಾನು ಆರು ತಿಂಗಳ ಅವಧಿಯಲ್ಲಿ ಎಲ್ಲಾ ಜಲಾನಯನ ಪ್ರದೇಶದಲ್ಲಿರತಕ್ಕ ಬೃಹತ್ ನೀರಾವರಿ ಯೋಜನೆಗಳಿಗೆ ಮಧ್ಯಮ ನೀರಾವರಿ ಯೋಜನೆಗಳಿಗೆ ಭೇಟಿ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ಮಹಾರಾಜರ ಕಾಲದಲ್ಲಿ ನಿರ್ಮಾಣವಾದಂಥ ಕನ್ನಂಬಾಡಿ ಅಣೆಕಟ್ಟಿನ ಬಗ್ಗೆ ಹೇಳಬೇಕಾಗುತ್ತದೆ. ಸುಮಾರು 2.36 ಕೋಟಿ ರೂ ಖರ್ಚುಮಾಡಿ ಈ ಕನ್ನಂಬಾಡಿಯನ್ನು ಕಟ್ಟಿಸಿದಂಥ ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯನವರನ್ನು ಸ್ಮರಿಸಲೇ ಬೇಕಾಗುತ್ತದೆ. ಇವತ್ತು ನಾವು ಇಂಥ ಒಂದು ಅಣೆಕಟ್ಟನ್ನು ಕಟ್ಟಬೇಕೆಂದರೆ ಸುಮಾರ 1000 ಕೋಟಿ ರೂ. ಖರ್ಚುಮಾಡಿದರೂ ಸಾಧ್ಯವಾಗುವುದಿಲ್ಲ.

ಈ ಇಲಾಖೆಯ ಮೇಲೆ ಸುಮಾರು' 18 ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ರಾಮಸ್ವಾಮಿಯವರಾಗಲಿ, ಮಲಕರೆಡ್ಡಿಯಾವರಾಗಲಿ, ಶಿವರಾಮೇಗೌಡರಾಗಲಿ, ಜಯಚಂದ್ರರವರಾಗಲಿ ಹಿರಿಯ ಸದಸ್ಯರಾದ ಮಾನ್ಯ ವೆಂಕಟಪ್ಪನವರಾಗಲಿ, ಇನ್ನೂ ಬೇರೆ ಬೇರೆ ಮಾನ್ಯ ಸದಸ್ಯರು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅದರ ಹಿನ್ನೆಲೆಯಲ್ಲಿ ನೋಡಿದಾಗ ಇನ್ನೂ ಹಲವಾರು ರೀತಿಯಲ್ಲಿ ನಾವು ಬಹಳಷ್ಟು ತೀವ್ರಗತಿಯಿಂದ ಹೋಗಬೇಕಾಗಿದೆ. ಆದರೆ ಕಳೆದ ಹಲವಾರು ವರ್ಷಗಳ ಇತಿಹಾಸವನ್ನು ನೋಡಿದರೆ ಈ ವರ್ಷ ಕೊಟ್ಟಿರತಕ್ಕ ಹಣ ಬಹಳಷ್ಟು ಹೆಚ್ಚಿಗೆ ಇದೆ. ಈಗ 1978 ರಿಂದ 83ರವರೆಗೆ 511 ಕೋಟಿ ರೂ. ಖರ್ಚು ಮಾಡಿದ್ದೇವೆ. 5 ವರ್ಷದ ಅವಧಿಯಲ್ಲಿ 511 ಕೋಟಿ ರೂ. ಖರ್ಚು ಮಾಡಿರುವಾಗ ಈ ಒಂದೇ ವರ್ಷದಲ್ಲಿ 549 ಕೋಟಿ ರೂ.ಗಳನ್ನು ಬೃಹತ್ ಮತ್ತು ಮಧ್ಯಮ ನೀರಾವರಿಗೆ ಖರ್ಚುಮಾಡತಕ್ಕ ಕ್ರಮ ತೆಗೆದುಕೊಂಡಿದ್ದೇವೆ. ಇಷ್ಟು ವೇಗವಾಗಿ ನಾವು ಹೋದರೆ ಇನ್ನು 8 ವರ್ಷಗಳಲ್ಲಿ ಅಂದರೆ 2000 ಇಸವಿಯೊಳಗಾಗಿ ನಮ್ಮ ಹಕ್ಕಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಮಾನ್ಯ ಸದಸ್ಯರು ಏನು ತಮ್ಮ ಆತಂಕವನ್ನು ವ್ಯಕ್ತಮಾಡಿದ್ದಾರೆ, ಅದನ್ನು ನಾನು ಯಾವುದೇ ರೀತಿಯಲ್ಲೂ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ 549ಕೋಟಿ ರೂ.ಗಳನ್ನು ಈ ವರ್ಷ ಇಟ್ಟಿರುವುದರಿಂದ ಮುಂದಿನ 8ವರ್ಷಗಳಲ್ಲಿ 4000 ಕೋಟಿ

ರೂ.ಗಿಂತ ಹೆಚ್ಚಿನ ಹಣವನ್ನು ನಾವು ಖರ್ಚುಮಾಡುವುದಕ್ಕೆ ಸಾಧ್ಯ ಇದೆ. ಎಲ್ಲ ಯೋಜನೆಗಳನ್ನೂ ಅಂದರೆ ಅದು ಕೃಷ್ಣಾ ಜಲಾನಯನ ಪ್ರದೇಶವಿರಬಹುದು, ಕಾವೇರಿ ಜಲಾನಯನ ಪ್ರದೇಶ ಇರಬಹುದು, ಬೇರೆ ಪ್ರದೇಶ ಇರಬಹುದು ಈ ಎಲ್ಲಾ ಯೋಜನೆಗಳಿಗೂ ಸುಮಾರು 5000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ ಎನ್ನತಕ್ಕ ಅಭಿಪ್ರಾಯ ಏನಿದೆ ಅದರ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದಕ್ಕೆ ಪೂರಕವಾಗಿ ನಾನು ಅನಿವಾರ್ಯವಾಗಿ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಹೇಳುವುದಾದರೆ ಮಾನ್ಯ ರಾಮಸ್ವಾಮಿಯವರು ಮಾತನಾಡುವಾಗ ಹಿಂದೆ ಎಷ್ಟೋ ಜನರು ಏನೇನೋ ಮಾತುಗಳನ್ನು ಹೇಳಿ ಹೋದರು ಎಂದು ಹೇಳಿದರು. ನಾನು ಅವರ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅಲ್ಲದೆ ಮಾತನಾಡತಕ್ಕದ್ದೂ ಸರಿಯಿಲ್ಲ. ಏಕೆಂದರೆ ಈ ಸದನದಲ್ಲಿ ನಾನು ಸದಸ್ಯನಾಗಿರಬಹುದು ಅಥವಾ ಮಂತ್ರಿಯಾಗಿರಬಹುದು, ಆದರೆ ಇಂಥ ಸಂದರ್ಭದಲ್ಲಿ ಏನು ಕೆಲಸವನ್ನು ಮಾಡಬೇಕಾಗುತ್ತದೆ ಅದನ್ನು ಪ್ರಾಮಾಣಿಕವಾಗಿ, ನಿಷ್ಠೆಯಿಂದ ತೀವ್ರವಾಗಿ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಂಥ ತಮಗೆಲ್ಲರಿಗೂ ನನ್ನ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾದರೆ, ಅದು ತಮ್ಮ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಭದ್ರಾ ಅಣೆಕಟ್ಟಿನ ಮುಂದೆ ಒಂದು ಕಾಲುವೆ ಒಡೆದು ಏನು ಅನಾಹುತವಾಯಿತು ಆ ಸಂದರ್ಭದಲ್ಲಿ ನಮ್ಮ ಇಲಾಖೆಯಲ್ಲಿರತಕ್ಕ ಹಲವಾರು ಸಿಬ್ಬಂದಿವರ್ಗ ಅದು ಮೇಲ್ಮಟ್ಟದ ಸಿಬ್ಬಂದಿ ಇರಬಹುದು, ಕೆಳಮಟ್ಟದಲ್ಲಿರುವ ಸಿಬ್ಬಂದಿ ಇರಬಹುದು ಅಥವಾ ಕೂಲಿಕಾರ ವರ್ಗ ಇರಬಹುದು, ಹೀಗೆ ಎಲ್ಲರೂ ಸೇರಿ ಕೇವಲ 22 ದಿವಸಗಳಲ್ಲಿ ಭದ್ರಾ ಅಣೆಕಟ್ಟಿನ ಕಾಲುವೆಯ ದುರಸ್ತಿ ಕೆಲಸಮಾಡಿ ರಾಷ್ಟ್ರದ ಇತಿಹಾಸದಲ್ಲಿ ಒಂದು ಹೊಸ ದಾಖಲೆಯನ್ನು ನಿರ್ಮಾಣ ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ಅವರೆಲ್ಲರಿಗೂ ಈ ಸದನದ ಮುಖಾಂತರ, ನನ್ನ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. 240 ಕೋಟಿ ರೂ.ಗಳ ಬೆಳೆಯನ್ನು ಉಳಿಸುವುದಕ್ಕೆ ಏನು ಪ್ರಯತ್ನಗಳನ್ನು ನಮ್ಮ ಇಲಾಖೆಯವರು ಮಾಡಿದರು ಅದರ ಬಗ್ಗೆ ವಿಶೇಷವಾದ ಧನ್ಯವಾದಗಳನ್ನು ಅವರಿಗೆ ಹೇಳಬೇಕಾಗುತ್ತದೆ. ಈಗ ನಾವು ಏನು ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅದನ್ನೂ ಕೂಡ 1 ತಿಂಗಳೊಳಗೆ ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮೂಲಭೂತವಾಗಿ ಕೆನಾಲ್ ಬಗ್ಗೆ ಟೆಕ್ನಿಕಲ್ ಕಮಿಟಿಯ ರಿಪೋರ್ಟ್ ಏನು ಬರುತ್ತಿದೆ, ಅದು ಬಂದ ಮೇಲೆ ಈ ಕೆಲಸವನ್ನು ನಾವು ಮುಂದಿನ 1-1 1/2 ವರ್ಷದೊಳಗೆ ಮುಗಿಸುತ್ತೇವೆ. ಕಾವೇರಿ ಜಲಾನಯನದ ಪ್ರದೇಶದಲ್ಲಿ ಏನು ಕೆಲಸಗಳನ್ನು ಮಾಡಬೇಕಾಗಿದೆ ಅದರ ಹಿನ್ನೆಲೆಯಲ್ಲಿ ಸುಮಾರು ಒಂದೂವರೆ ವರ್ಷದಿಂದ ನಡೆದಿರತಕ್ಕ ಚರ್ಚೆಯ ಸಂಬಂಧ ನಾನು ಈ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಬೇಕಾಗಿದೆ. ಆದರೆ ನಾನು ಹೇಳಿಕೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದ ಹಿತದೃಷ್ಟಿಯ ಉದ್ದೇಶದಿಂದ ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಮಂತ್ರಿಗಳ ನೇತೃತ್ವದಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರ ಸಹಕಾರದಿಂದ ಮಾನ್ಯ ಪಿ.ವಿ.ನರಸಿಂಹರಾವ್‌ರವರಿಂದ ವಿಶೇಷವಾದ ನೆಗೋಷಿಯೇಷನ್‌ಗೋಸ್ಕರ ಕಾಯುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಕೃಷ್ಣಾ ಜಲಾನಯನ ಪ್ರದೇಶ ಅಭಿವೃದ್ಧಿಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಅಧಿವೇಶನ ಮುಗಿಯುವುದರೊಳಗೆ ಕೃಷ್ಣಾ ಬೇಸಿನ್ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡತಕ್ಕ ಒಂದು ಮಸೂದೆಯನ್ನು ಮಂಡಿಸುತ್ತಿದ್ದೇವೆ. ಅದನ್ನು ಮಂಡನೆ ಮಾಡತಕ್ಕ ಸಂದರ್ಭದಲ್ಲಿ ತಮ್ಮಿಂದ ಬರತಕ್ಕ ಸಲಹೆ ಸೂಚನೆ ಗಮನಿಸಲಾಗುವುದು. ಈ ಒಂದು ವಿಶೇಷವಾದ ಪ್ರಾಧಿಕಾರ ರಚನೆಯಲ್ಲಿ ತಮ್ಮಿಂದ ವಿಶೇಷವಾದಂತಹ ಒಂದು ಮಾರ್ಗದರ್ಶನ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.. ಈ ಸಂದರ್ಭದಲ್ಲಿ ಬಹಳಷ್ಟು ಆತುರ ಆತುರವಾಗಿ ರಿಪ್ಲೈ ಮಾಡತಕ್ಕ ಸಂದರ್ಭವಿರುವುದರಿಂದ ಮಾನ್ಯ ಸದಸ್ಯರು ಏನು ಇಲ್ಲಿಯವರೆಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಆ ಹಿನ್ನೆಲೆಯಲ್ಲಿ ಬರುವ ಅವಧಿಯಲ್ಲಿ ಎಷ್ಟರ ಮಟ್ಟಿಗೆ ನಾನು ಕೆಲಸ ಮಾಡಬಲ್ಲೆ ಎನ್ನತಕ್ಕ ಸಂಶಯ ಬರುತ್ತಾ ಇದೆ. ನಮ್ಮ

ಇಲಾಖೆಯಲ್ಲಿ ಲೋಪದೋಷಗಳು ಇವೆ. ಅವುಗಳನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇಂತಹ ಒಂದು ಬೇಡಿಕೆ ಮಂಡನೆಯಾದಾಗ ಕೊನೆಯ ಪಕ್ಷ ನನ್ನ ತಿಳುವಳಿಕೆಯ ಪ್ರಕಾರ ರಿಪ್ಲೈ ಕೊಡುವುದಕ್ಕೆ ಒಂದೂವರೆ ತಾಸು ಬೇಕಾಗುತ್ತದೆ. ಇವತ್ತು ನಾವು ನಮ್ಮ ಇಲಾಖೆ ಮಾನ್ಯ ಮಂತ್ರಿಗಳು ನಿಮಗೆಲ್ಲಾ ಔತಣಕೂಟವನ್ನು ಏರ್ಪಡಿಸಿದ್ದೇವೆ ಅದು ರೆಡಿಯಾಗಿದೆ. ಆದರೂ ಅನಿವಾರ್ಯದಿಂದ ಈ ಸದನ ನಡೆಸಿಕೊಂಡು ಹೋಗಬೇಕಾಗಿದೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಏನು ಕೆಲಸಗಳಿವೆ ಅವುಗಳ ಬಗ್ಗೆ ವಿಶೇಷ ಪ್ರಾಧಿಕಾರ ರಚನೆ ಮಾಡತಕ್ಕ ಸಂದರ್ಭವಿರುವುದರಿಂದ. . . .

ಶ್ರೀ ಎಲ್. ಆರ್. ಶಿವರಾಮೇಗೌಡ:- ಅದೇ ರೀತಿ ಕಾವೇರಿ ಪ್ರಾಧಿಕಾರ ರಚನೆಯನ್ನು ಮಾಡಬೇಕು.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ತಾವು ಸಲಹೆ ಕೊಟ್ಟಿದ್ದೀರಿ. ಅದರ ಬಗ್ಗೆ ಕೂಡ ಅವಶ್ಯಕತೆ ಕಂಡರೆ ಅದನ್ನು ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಹಿಂದುಮುಂದು ನೋಡುವುದಿಲ್ಲವೆನ್ನುವ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಕಾವೇರಿ ಜಲಾನಯನದ ಪ್ರಾಧಿಕಾರವನ್ನು ಮಾಡಬೇಕು. ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಪ್ರಾಧಿಕಾರ ಮಾಡಿದರೆ ಹೇಗೆ ?

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್:- ಕೃಷ್ಣಾ ಜಲಾನಯನ ಪ್ರದೇಶಕ್ಕೆ ಪ್ರಾಧಿಕಾರ ಅವಶ್ಯಕತೆ ಇತ್ತು, ಆದ್ದರಿಂದ ಮಾಡಿದ್ದೇವೆ. ಕಾವೇರಿ ಜಲಾನಯನ ಪ್ರದೇಶಕ್ಕೆ ಪ್ರಾಧಿಕಾರದ ಅವಶ್ಯಕತೆ ಇದೆ ಎಂದಾಗ ಅದನ್ನು ಮಾಡಲಿಕ್ಕೆ ಯಾವುದೇ ಪರಿಸ್ಥಿತಿಯಲ್ಲಿ ನಾವು ಹಿಂಜರಿಯುವುದಿಲ್ಲವೆನ್ನತಕ್ಕ ಸರ್ಕಾರದ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದೇವೆ. ಅದೇ ತರಹ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಿವೆ. ಅದರ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಆ ಅಭಿಪ್ರಾಯವನ್ನು ಸಹ ತಾವು ವ್ಯಕ್ತ ಮಾಡಿದ್ದೀರಿ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸಂಪೂರ್ಣ ಕೆಲಸಕಾರ್ಯಗಳೆಲ್ಲ ಕೃಷ್ಣಾ ಜಲಾನಯನ ಪ್ರಾಧಿಕಾರಕ್ಕೆ ಬರುವುದರಿಂದ ಅದರ ಬಗ್ಗೆ ವಿಶೇಷವಾದ ಹೇಳಿಕೆ ಮಾಡುವ ಅವಶ್ಯಕತೆಯಿಲ್ಲ. ಕಾವೇರಿ ಜಲಾನಯನ ಪ್ರದೇಶದಲ್ಲಿ ಸಹ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಇದೆ. ಅದಕ್ಕೆ ವಿಶೇಷವಾಗಿ ಹಣಕಾಸು ನೆರವು ನೀಡಿದರೆ ಸರ್ಕಾರ ವೇಗದಲ್ಲಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈ ಸಂದರ್ಭದಲ್ಲಿ ಪ್ರಾಮಾಣಿಕವಾದ ಸಲಹೆ ಸೂಚನೆಗಳನ್ನು ಡಾ. ನಂಜಪ್ಪನವರು, ಜಯಚಂದ್ರ ಅವರು, ಶಿವರಾಮೇಗೌಡರು ಕೊಟ್ಟಿದ್ದಾರೆ. ಶಿವರಾಮೇಗೌಡರು ಕೊನೆಗೆ ಮಾತನಾಡಿದ್ದು ನನಗೆ ಹಿಡಿಸಲಿಲ್ಲ. ನಮ್ಮ ಮಾನ್ಯ ಹನುಮೇಗೌಡರು ಬಹಳಷ್ಟು ಟೀಕೆ ಟಿಪ್ಪಣಿ ಮಾಡಿದ್ದರೂ ನಿಜವಾಗಿಯೂ ಅಂತಹ ಟೀಕೆ ಟಿಪ್ಪಣಿಗಳು ವಿರೋಧಪಕ್ಷದವರಿಂದ ಬರಬೇಕಾಗಿತ್ತು. ಹೆಚ್ಚಿನ ಮಾರ್ಗದರ್ಶನವನ್ನು ಅವರಿಂದ ಅಪೇಕ್ಷೆ ಪಟ್ಟಿದ್ದೆ. ಆದರೆ ನನ್ನ ಅಪೇಕ್ಷೆಗೆ ಭಂಗವಾಗಿದೆ. ಇವತ್ತು ಏನು ತಾವೆಲ್ಲರೂ ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ, ಆ ಸಲಹೆ ಸೂಚನೆಗಳ ಪ್ರಕಾರ ನಮ್ಮ ಇಲಾಖೆಯಲ್ಲಿರತಕ್ಕ ಸಿಬ್ಬಂದಿ ವರ್ಗದ ಮೇಲೆ ಏನೊಂದು ಹಿಡಿತವಿದೆ, ಆ ಹಿನ್ನೆಲೆಯಲ್ಲಿ ಎಲ್ಲಾ ಪ್ರಯತ್ನವನ್ನು ಕೂಡ ಮಾಡಿ ಎಲ್ಲಾ ಕೆಲಸವನ್ನು ಪೂರ್ತಿ ಮಾಡಬೇಕಾಗಿದೆ. ಆ ದೃಷ್ಟಿಯಲ್ಲಿ ನಾನು ಒಳ್ಳೆಯ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಸಾಕಷ್ಟು ವಿವರವಾದ ಉತ್ತರವನ್ನು ಕೊಡಬೇಕಾಗಿತ್ತು. ಆದರೆ ಅನಿವಾರ್ಯ ಕಾರಣದಿಂದ ನನ್ನ ಉತ್ತರವನ್ನು ಹೇಳಿಕೆಯನ್ನು ನಿಲ್ಲಿಸುತ್ತಿದ್ದೇನೆ. ನನ್ನ ಡಿಮಾಂಡ್‌ಗೆ ಮಾನ್ಯ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ(ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೇ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಬಗ್ಗೆ ಕೇವಲ ಮೂರು ಜನರು ಮಾತ್ರ ಮಾತನಾಡಿದ್ದಾರೆ. ಮಾನ್ಯ ರೇವಣ್ಣನವರು ಮಾತ್ರ ಒಂದು ಸಲಹೆ ಕೊಟ್ಟಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಬಗ್ಗೆ 12 ಜನ ಸದಸ್ಯರು ಮಾತನಾಡಿದ್ದಾರೆ. ಬಹಳಷ್ಟು ಜನ ಮಾತನಾಡಬೇಕೆಂದು ಕಾತುರದಲ್ಲಿದ್ದರು.

ಪತ್ರವನ್ನೂ ಸಹ ಕಳುಹಿಸಿದ್ದಾರೆ. ಯಾರು ಮಾತನಾಡಿ ಸಲಹೆ ಸೂಚನೆಗಳನ್ನೆಲ್ಲಾ ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಸ್ವೀಕಾರ ಮಾಡಿ ನಾನು ಈ ಇಲಾಖೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ನಾನು ಸಹ ಉತ್ತರವನ್ನು ಬೇಗ ಮುಗಿಸಬೇಕಾಗಿದೆ. ಏಕೆಂದರೆ ಔತಣಕೂಟ ಏರ್ಪಾಡು ಆಗಿದೆ. ವಾರ್ತಾ ಇಲಾಖೆಗೆ 1991-92 ರಲ್ಲಿ 689.44 ಲಕ್ಷ ಇಟ್ಟಿದ್ದರೆ ಈ ಸಲ ಅಂದರೆ 1992-93ರಲ್ಲಿ 839.34ಲಕ್ಷ, ಅಂದರೆ ಅಲ್ಲಿ 140.90 ಲಕ್ಷ ಬಜೆಟ್ ಪ್ರಾವಿಷನ್ ಮಾಡಿದ್ದೇವೆ. ಇದು ಪ್ಲಾನ್ ಮತ್ತು ನಾನ್ ಪ್ಲಾನ್. ಹಾಗೆಯೇ ಟೂರಿಸಂ ಡಿಪಾರ್ಟ್‌ಮೆಂಟ್‌ಗೆ 1991-92 ರಲ್ಲಿ ಪ್ಲಾನ್‌ನಲ್ಲಿ 620 ಲಕ್ಷ ನಾನ್ ಪ್ಲಾನ್‌ನಲ್ಲಿ 55 ಲಕ್ಷ ಇಟ್ಟಿದ್ದೇವೆ. ಹೀಗೆ ಒಟ್ಟು 675 ಲಕ್ಷ ಇಟ್ಟಿದ್ದೇವೆ. 92-93 ರಲ್ಲಿ 11 ಕೋಟಿ 20 ಲಕ್ಷ ರೂಪಾಯಿಗಳನ್ನು ಹಾಗೆಯೇ ನಾನ್ ಪ್ಲಾನ್‌ನಲ್ಲಿ 62 ಲಕ್ಷದ 19 ಸಾವಿರ ರೂಪಾಯಿಗಳನ್ನು ಹೀಗೆ ಒಟ್ಟು 11ಕೋಟಿ 82ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರಲ್ಲಿ 8 ಕೋಟಿ ರೂಪಾಯಿಗಳನ್ನು ಒಎಸ್‌ಸಿಎಫ್. ಕೊಡುತ್ತೇವೆಂಬ ನಿರೀಕ್ಷೆ ಮೇರೆಗೆ ಇನ್‌ವೆಸ್ಟ್‌ಮೆಂಟ್ ರೂಪದಲ್ಲಿ ಇಟ್ಟುಕೊಂಡಿದ್ದೇವೆ. ಜೋಗ್ ಅಥಾರಿಟಿಗೆ ಒಂದು ಕೋಟಿ ರೂಪಾಯಿ ಇಟ್ಟು ಕೊಂಡಿದ್ದೇವೆ. ಅದು ಸೇರಿ ನಮಗೆ 507.19 ಲಕ್ಷ ರೂಪಾಯಿಗಳಷ್ಟು ಈ ಸಲ ಬಡ್ಜೆಟ್ ಪ್ರಾವಿಷನ್ ಮಾಡುವುದರಲ್ಲಿ ಇನ್‌ಕ್ರೀಸ್ ಆಗಿದೆ. ಮಾನ್ಯ ರೇವಣ್ಣನವರು ವಾರ್ತಾ ಇಲಾಖೆಯ ಕಲಾಪಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ನಾವು ಕೇಂದ್ರ ಸರ್ಕಾರಕ್ಕೆ ರೆಕಮಂಡ್ ಮಾಡುತ್ತೇವೆ. ಅದು ಒಳ್ಳೆಯ ಸಲಹೆ ಇದೆ, ಅದನ್ನು ನಾವು ಸ್ವೀಕರಿಸುತ್ತೇವೆ, ಮತ್ತು ಅದರ ಬಗ್ಗೆ ಕಾರ್ಯಪ್ರವೃತ್ತರಾಗುತ್ತೇವೆ. ಹಾಗೆಯೇ ಮಾನ್ಯ ಮುಖ್ಯ ಮಂತ್ರಿಗಳು ಚಿತ್ರರಂಗದಲ್ಲಿ ಬಹಳಷ್ಟು ಜನ ಪ್ರತಿಭಾವಂತ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ ಎಂದು ಕೊಡಲು ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ರಾಜ್ಯದಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ಅನುಮತಿ ನೀಡಲು ಒಂದು ಸಿಂಗಲ್ ವಿಂಡೋ ಏಜೆನ್ಸಿ ಮಾಡಿದ್ದಾರೆ. ಮೊದಲು ಬಹಳ ತೊಂದರೆ ಇತ್ತು. ಅದನ್ನು ತಪ್ಪಿಸಿ, ಒಂದು ಸಾರಿ ನಮ್ಮ ಇಲಾಖೆಯಿಂದ ಪರ್ಮಿಷನ್ ಸಿಕ್ಕಿದರೆ ಸಾಕು, ಇನ್ನು ಯಾವ ಇಲಾಖೆಯ ಹತ್ತಿರ ಹೋಗುವ ಹಾಗಿಲ್ಲ. ಅದಕ್ಕಾಗಿ ಪರದಾಡುವ ಹಾಗೆ ಇಲ್ಲ. ಚಿತ್ರರಂಗ ಬೆಳೆಯಬೇಕೆಂದು ಕೊಂಡು ಮುಖ್ಯ ಮಂತ್ರಿಗಳು ಮತ್ತು ಸರ್ಕಾರ ಈ ರೀತಿಯಿಂದ ಒಂದು ನಿಲುವು ತೆಗೆದುಕೊಂಡಿದೆ. ಇನ್ನು ಮೂರನೆಯದಾಗಿ, ಎಂ.ಬಿ. ಸಿಂಗ್ ಸಮಿತಿ ವರದಿಯಲ್ಲಿ ಸಣ್ಣ ಪತ್ರಿಕೆಗಳು, ಮಧ್ಯಮ ಪತ್ರಿಕೆಗಳು ಬೆಳೆಯಬೇಕು, ಉಳಿಯಬೇಕು ಎಂಬ ಬಗ್ಗೆ ಸಾಕಷ್ಟು ಹೇಳಿದೆ. ಆದರೆ ನಮ್ಮ ಸರ್ಕಾರ ಎಂ.ಬಿ. ಸಿಂಗ್ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರಲಿಲ್ಲ, ಆ ಬಗ್ಗೆ ಬಹಳಷ್ಟು ಜನ ಮಂತ್ರಿಗಳು ಹೇಳಿ ಹೋದರು ಎಂಬ ಆಪಾದನೆ ಇದೆ. ಇದು ಬರೀ ಪ್ರಚಾರದಲ್ಲಿದೆ, ಪತ್ರಿಕೆಗಳಲ್ಲಿ ಬರೀ ಹೇಳಿಕೆ ನೀಡಿದ್ದು ಆಗಿದೆ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಖಂಡಿತವಾಗಿ ಹೇಳುತ್ತೇನೆ, ನಾನು ಹಣಕಾಸಿನ ಇಲಾಖೆಯವರ ಜೊತೆ ಜಗಳ ಮಾಡಿದಮೇಲೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಶಿಫಾರಸ್ಸು ಮಾಡಿದ್ದನ್ನು ಕೆಳಗೆ ಇಳಿಸಿ 42 ಲಕ್ಷ ರೂಪಾಯಿಗಳಿಗೆ ರೆಕಮಂಡ್ ಮಾಡಿ ಹಣಕಾಸಿನ ಇಲಾಖೆಯವರು ಮಂಜೂರಾತಿ ಕೊಟ್ಟಿದ್ದಾರೆ. ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಸಣ್ಣ ಪತ್ರಿಕೆಗಳಿಗೆ ಏನು ತಾಪತ್ರಯಗಳಿವೆ ಎಂ.ಬಿ. ಸಿಂಗ್ ಸಮಿತಿಯವರು ಯಾವ ರೀತಿ ಸಣ್ಣ ಪತ್ರಿಕೆಗಳ ಉಪಯೋಗ ಆಗಬೇಕೆಂದು ಶಿಫಾರಸ್ಸು ಮಾಡಿದ್ದಾರೆ ಅದನ್ನು ಜಾರಿಗೊಳಿಸುತ್ತೇವೆ. ನಮ್ಮ ಇಲಾಖೆಯ ಬಗ್ಗೆ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಏನೆಂದರೆ ವಾರ್ತಾ ಇಲಾಖೆಯವರು 3 ಪ್ರಶಸ್ತಿಗಳನ್ನು ಪಡೆದಿದ್ದಾರೆ. ರಿಪಬ್ಲಿಕ್ ಡೇ ಪೆರೇಡ್‌ನಲ್ಲಿ ನಮ್ಮ ಟ್ಯಾಬ್ಲೋಗೆ ನ್ಯಾಷನಲ್ ಅವಾರ್ಡ್ ಬಂದಿದೆ. ದಸರಾ ಫೆಸ್ಟಿವಲ್‌ನಲ್ಲಿ ನಮ್ಮ ಇಲಾಖೆಗೆ ಟ್ಯಾಬ್ಲೋ ಮಾಡಿದಕ್ಕೆ ಅವಾರ್ಡ್ ಬಂದಿದೆ. ಪೂಲ್ ಓಂ ಕಿ ಪ್ರೋಗ್ರಾಂ ಮಾಡಿದ್ದಕ್ಕೆ ಕೇಂದ್ರ ಸರ್ಕಾರ ನ್ಯಾಷನಲ್ ಅವಾರ್ಡ್ ಕೊಟ್ಟಿದೆ. ಇದು ನಮ್ಮ ಇಲಾಖೆ ಮಾಡಿರತಕ್ಕ ಸಾಧನೆ. ಕೆಲವರು ಟಿ.ವಿ. ಬಗ್ಗೆ ಕೇಳಿದರು, ಎಲ್ಲರಿಗೂ ಕಲರ್ ಟಿ.ವಿ. ಬರಲಿಲ್ಲವೆಂದರು. ನಾವು ಕಪ್ಪು- ಬಿಳುಪು ಟಿ.ವಿ. ಖರೀದಿ ಮಾಡಿದೆವು.

ಏಕೆಂದರೆ ಸ್ಪೆಷಲ್ ಕಾಂಪೋನೆಂಟ್ ಬಡ್ಜೆಟ್ ಪ್ಲಾನ್‌ನಲ್ಲಿ 30 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಇಟ್ಟಿದ್ದೆವು. ಅದರಲ್ಲಿ 440 ಕಪ್ಪು-ಬಿಳುಪು ಟಿ.ವಿ. ಖರೀದಿ ಮಾಡಿದೆವು. ಆಮೇಲೆ ಮುಖ್ಯ ಮಂತ್ರಿಗಳು ಏತಕ್ಕೆ ಬ್ಲಾಕ್ ಅಂಡ್ ವೈಟ್ ಟಿ.ವಿ. ಖರೀದಿ ಮಾಡಿದಿರಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕಲರ್ ಟಿ.ವಿ. ನೋಡಬಾರದೆ ಎಂದು ಕೇಳಿ 440 ಕಲರ್ ಟಿ.ವಿ. ಪರ್ಚೇಸ್ ಮಾಡಬೇಕು, 30 ಲಕ್ಷ ರೂಪಾಯಿಗಳ ಜೊತೆಗೆ ಅಡಿಷಿನಲ್ ಗ್ರಾಂಟ್ 40 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಈಗ ಕಲರ್ ಟಿ.ವಿ.ಗಳನ್ನು ಪರ್ಚೇಸ್ ಮಾಡಿದ್ದೇವೆ. ಅವನ್ನು ಯಾವ ರೀತಿ, ಹೇಗೆ ವಿತರಣೆ ಮಾಬೇಕೆಂದರೆ ಎಲ್ಲಿ ಸಮುದಾಯ ಭವನ ಇರುತ್ತದೆ, ಎಲ್ಲಿ ಭಜನೆ ಮಂದಿರ ಇರುತ್ತದೆ, ಎಲ್ಲಿ ಹರಿಜನ ಕಾಲೋನಿಗಳು ಇರುತ್ತವೆ, ಲಂಬಾಣಿ ತಾಂಡಾಗಳು ಇರುತ್ತವೆ ಬೋವಿಗಳ, ಕೊರಚರ ಕಾಲೋನಿಗಳು ಇರುತ್ತವೆ, ಅಂಥಹ ಕಡೆಗಳಿಗೆ ಕೊಟ್ಟರೆ ಅಲ್ಲಿ ಎಲ್ಲರೂ ಸಾಮೂಹಿಕವಾಗಿ ನೋಡುವುದಕ್ಕೆ ಅನುಕೂಲವಾಗುತ್ತದೆಂದು ತಿಳಿದುಕೊಂಡು 440 ಕಲರ್ ಟಿ.ವಿ.ಗಳನ್ನು ಅಲ್ಲಿಗೆಲ್ಲಾ ಕೊಡುತ್ತಿದ್ದೇವೆ. ಆ ವಿಚಾರದಲ್ಲಿ ಫೀಲಿಂಗ್ಸ್ ಬರಬಾರದು. ಶ್ರೀಮಂತರಾದರೆ ಕಲರ್ ಟಿ.ವಿ. ನೋಡಬೇಕು, ನಾವು ಮಾತ್ರ ಕಪ್ಪು ಬಿಳುಪಿನ ಟಿ.ವಿ. ನೋಡಬೇಕೆಂಬ ಭಾವನೆ ಬರಬಾರದೆಂದು ಒಳ್ಳೆಯ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಈಗ ವಿತರಣೆಯನ್ನು ಯಾವ ರೀತಿ ಮಾಡಬೇಕೆಂದು ಗೊಂದಲ ಇದೆ. ಶಿವರಾಮೇಗೌಡರು ನಾಲ್ಕು, ಮೋಟಮ್ಮನವರು 10, ನಮ್ಮ ರಿಸರ್ವ್ ಕ್ಷೇತ್ರಕ್ಕೆ ಕೊಡಿ ಎಂದು ಹೇಳುತ್ತಿದ್ದಾರೆ. ನಾವು ಏನು ಮಾಡಿದ್ದೇವೆಂದರೆ 440 ಟಿ.ವಿ.ಗಳಲ್ಲಿ ರಿಸರ್ವ್ ಕ್ಷೇತ್ರಕ್ಕೆ 3-3ರಂತೆ ಕೊಟ್ಟಿದ್ದೇವೆ, ಬೇರೆ ಕ್ಷೇತ್ರಗಳಿಗೆ 2-2 ರಂತೆ ಕೊಟ್ಟಿದ್ದೇವೆ. ಲೋಕಸಭಾ ಸದಸ್ಯರಿಗೆ ಮತ್ತು ರಾಜ್ಯ ಸಭಾ ಸದಸ್ಯರಿಗೆ ಒಂದೊಂದನ್ನು ಸೂಚನೆ ಮಾಡಿ ಅವುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರ ಸೂಚನೆ ಮೇರೆಗೆ ಒಂದೊಂದು ಕೊಡಬೇಕೆಂದು ಇಟ್ಟಿದ್ದೇವೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಬೆಳಿಗ್ಗೆ ಮಾತನಾಡಿದ್ದೇನೆ. ಇನ್ನೂ ಬೇಡಿಕೆ ಹೆಚ್ಚಿಗೆ ಬಂದರೆ ನೋಡೋಣವೆಂದು ಹೇಳಿದರು. ಪಿಜಿಆರ್ ಸಿಂಧ್ಯ ಅವರು, ಶಿವರಾಮೇಗೌಡ ಅವರು ನಮಗೆ ಟಿವಿ. ಕೊಡಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯ ಮಾಡಿದ್ದಾರೆಂದು ಕೇಳಿದ್ದೇನೆ. ಒಟ್ಟಿನಲ್ಲಿ ಹೆಚ್ಚಿಗೆ ಟಿ.ವಿ.ಗಳನ್ನು ಪರ್ಚೇಸ್ ಮಾಡಿ ಷೆಡ್ಯೂಲ್ ಕ್ಯಾಸ್ಟ್ ಕಾಲೋನಿಗಳಿಗೆ ಕೊಡುತ್ತೇವೆಂಬ ಮಾತನ್ನು ಆಡಿದ್ದೇನೆ. ಶಿವರಾಮೇಗೌಡರೇ, ನಿಮ್ಮ ಕ್ಷೇತ್ರಕ್ಕೆ ಎರಡು ಟಿ.ವಿ.ಗಳನ್ನು ಕೊಡುತ್ತಿದ್ದೇವೆ. ಆಮೇಲೆ ಚೀಫ್ ಮಿನಿಸ್ಟರ್ ಮತ್ತು ಗೌರ್ನರ್, ಎಂ.ಎಲ್.ಎ, ಮಿನಿಸ್ಟರ್ಸ್ ಪ್ರೋಗ್ರಾಂ ಎಂ.ಪಿ. ಪ್ರೋಗ್ರಾಂ ಮತ್ತೆ ಗೌರ್ನಮೆಂಟ್ ಪ್ರೋಗ್ರಾಂ ಕವರ್ ಮಾಡುವುದಕ್ಕೆ ನಮ್ಮಲ್ಲಿ ಎಕ್ವಿಪ್‌ಮೆಂಟ್ಸ್, ವೆಹಿಕಲ್ಸ್ ಮತ್ತು ಸ್ಟಾಫ್ ಕಡಿಮೆಯಿತ್ತು. ಅದಕ್ಕೋಸ್ಕರ, ಈ ಸಲ ಮುಖ್ಯಮಂತ್ರಿಗಳ ಪ್ರೋಗ್ರಾಂ ಕವರ್ ಮಾಡಲಿಕ್ಕೆ ಪ್ರತ್ಯೇಕವಾಗಿ ಕ್ಯಾಮೆರಾ, ವೆಹಿಕಲ್ಸ್ ಮತ್ತು ಸ್ಟಾಫ್ ಅನ್ನು ನಾವು ನಿಯೋಜಿಸಿದ್ದೇವೆ. ಹಾಗೂ ಗೌರ್ನರ್, ಎಂ.ಎಲ್.ಎ, ಮಿನಿಸ್ಟರ್ಸ್, ಎಂ.ಪಿ.ಗಳ ಪ್ರೋಗ್ರಾಂ ಕವರ್ ಮಾಡಲಿಕ್ಕೋಸ್ಕರ ಸಪರೇಟ್ ಆಗಿ ಒಂದು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅದರ ಜೊತೆಗೆ ಮಾನ್ಯ ಅಧ್ಯಕ್ಷರೇ, ತಮ್ಮ ಕಾರ್ಯಕ್ರಮಗಳನ್ನು ಸಹ ಕವರ್ ಮಾಡಲು ಕ್ರಮ ಕೈಗೊಂಡಿದ್ದೇವೆ. ಇದರ ಜೊತೆಗೆ ಸರ್ಕಾರಿ ಕಾರ್ಯಕ್ರಮಗಳಾದ ಆಶ್ರಯ, ಶುಶ್ರೂಷಾ, ವಿಶ್ವ, ಆರಾಧನಾ ಮತ್ತು ಅಕ್ಷಯ ಅವುಗಳನ್ನೆಲ್ಲಾ ಒಂದು ವಿಡಿಯೋ ಫಿಲ್ಮ್ ಮಾಡಿ ಜನರಿಗೆ ಅದನ್ನು ತೋರಿಸಬೇಕು ಎಂದು ಹೇಳತಕ್ಕಂಥಾದ್ದು ಹಾಗೂ ಅದರ ಬಗ್ಗೆ ಎಷ್ಟು ಪ್ರಚಾರ ಕೊಡಲಿಕ್ಕೆ ಸಾಧ್ಯ ಎಂದು ಹೇಳತಕ್ಕಂಥಾದ್ದು ನಮ್ಮ ಇಲಾಖೆಯಲ್ಲಿ. . . .

ಶ್ರೀ ಎಲ್. ಆರ್. ಶಿವರಾಮೇಗೌಡ:- ನೀವು ದೂರದರ್ಶನಕ್ಕೆ ಕನ್ನಡ ಬರುವವರನ್ನು ಹಾಕಿಸಿ. ನೀವು ಮಲಯಾಳಿಗಳನ್ನು ಡೈರೆಕ್ಟರ್ ಆಗಿ ದೂರದರ್ಶನಕ್ಕೆ ಹಾಕಿದರೆ. . . .

ಶ್ರೀ ಕೆ. ಶಿವಮೂರ್ತಿ:-ದೂರದರ್ಶನ ನನಗೆ ಬರುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಕೇಂದ್ರ ಸರ್ಕಾರಕ್ಕೆ ನೀವು ಶಿಫಾರಸ್ಸು ಮಾಡಬೇಕು.

ಶ್ರೀ ಕೆ. ಶಿವಮೂರ್ತಿ:- ಇನ್ನು ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಮಾಡಿದಿರಿ, ನಮಗ್ಯಾರಿಗೂ ಇನ್‌ವಿಟೇಷನ್ಸ್ ಕೊಡಲಿಲ್ಲ ಅಂತ ಗಂಭೀರವಾದ ಆರೋಪವನ್ನು ಮಾನ್ಯ ಶಾಮಣ್ಣನವರು ಮತ್ತೆ ಮಾನ್ಯ ಆಚಾರ್‌ರವರು ಮಾಡಿದರು. ಇದರ ಬಗ್ಗೆ ನಾನು ಈಗಾಗಲೇ ಮೇಲ್ಮನೆಯಲ್ಲಿ ಅರ್ಧ ಗಂಟೆ ಕಾಲ ನಡೆದ ಚರ್ಚೆಗೆ ಉತ್ತರ ಕೊಟ್ಟಿದ್ದೇನೆ. ಏನು ಅಂತರ ರಾಷ್ಟ್ರೀಯ ಮಟ್ಟದ ಒಂದು ಚಲನಚಿತ್ರೋತ್ಸವ ಸುಮಾರು 12 ವರ್ಷಗಳ ನಂತರ ನಮ್ಮ ಬೆಂಗಳೂರಿನಲ್ಲಿ ಮಾಡಬೇಕು ಅಂತ ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದರು, ಅದಕ್ಕೆ ರಾಜ್ಯ ಸರ್ಕಾರ ಸಹಕರಿಸಬೇಕು ಅಂತ ಅವರು ಹೇಳಿದರು. ನಾವು ಸಹ ದುಡ್ಡು ಖರ್ಚು ಮಾಡಿದ್ದೇವೆ. ಕೊನೆಯವರೆಗೂ ನಾವು ಇದನ್ನು ಮಾಡುತ್ತೇವೆಯೋ ಇಲ್ಲವೋ ಎಂಬ ಅನುಮಾನದಲ್ಲೇ ಇದ್ದೆವು. ಪದೇ ಪದೇ ನಮ್ಮ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡಿ ಪೋಲೀಸಿನವರನ್ನು ಕರೆದು ಕಾನೂನು ಸುವ್ಯವಸ್ಥೆ ಯಾವ ರೀತಿಯಲ್ಲಿರಬೇಕು ಅಂತ ಹೇಳತಕ್ಕಂಥ ಪ್ರಶ್ನೆ ಬಂತು. ಆಗ ಕಾವೇರಿಯದ್ದು ಒಂದು ದೊಡ್ಡ ಸಮಸ್ಯೆ ಇತ್ತು. ಅದರಲ್ಲೂ ಡಾ.ರಾಜಕುಮಾರ್‌ರವರು ಇದನ್ನು ಬಾಯ್‌ಕಾಟ್ ಮಾಡಿದ ಮೇಲಂತೂ ತುಂಬಾ ಟೆನ್ಷನ್ ಆಯಿತು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೋಸ್ಕರ 1500 ಇನ್‌ವಿಟೇಷನ್ ಪ್ರಿಂಟ್ ಮಾಡಿ ಎಲ್ಲಾ ಎಂ.ಎಲ್.ಎಗಳಿಗೆ, ಲೋಕಸಭಾ ಸದಸ್ಯರುಗಳಿಗೆ ಕಳುಹಿಸಿಕೊಡಬೇಕೆಂದು ನಿರ್ಧರಿಸಿದ್ದೆವು. ಆದರೆ, ತರಾತುರಿಯಲ್ಲಿ ಮಾಡಿದ್ದರಿಂದ ಇಲ್ಲಿರತಕ್ಕಂಥ ಕೆಲವರಿಗೆ ಸಿಕ್ಕಿದೆ, ಇಲ್ಲದೇ ಇರತಕ್ಕಂಥ ಮಾನ್ಯ ಸದಸ್ಯರುಗಳಿಗೆ ಸಿಕ್ಕಿಲ್ಲ. ಏನೇ ಆದರೂ ಇದರಲ್ಲಿ ಲೋಪ ಆಗಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ದಯಮಾಡಿ ನಾನು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಇದಕ್ಕಾಗಿ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ನಾವು ಮಾಡಿರತಕ್ಕಂಥ ತಪ್ಪಿಗೆ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಇನ್ನೊಂದು ಸಲ ಫಿಲ್ಮೋತ್ಸವ ಮಾಡಿದಾಗ ಸರಿಯಾಗಿ ಎಲ್ಲರಿಗೂ ಆಹ್ವಾನ ಪತ್ರಿಕೆಗಳನ್ನು ಕೊಡಿ.

ಶ್ರೀ ಕೆ. ಶಿವಮೂರ್ತಿ:- ಆಮೇಲೆ ವೆಚ್ಚದಲ್ಲಿ ಕಡಿತ ತೋರಿಸಬೇಕೆಂದು ಹೇಳತಕ್ಕಂಥಾದ್ದು ನಮ್ಮ ಸರ್ಕಾರದ ಆಸೆ ಮತ್ತು ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ನೀತಿಯಾಗಿದೆ ಹಾಗೂ ಕಾಂಗ್ರೆಸ್ ಪಕ್ಷದ ನೀತಿಯಾಗಿದೆ. ಮಾನ್ಯ ಮೊಯಿಲಿಯವರು ಅವರ ವಿದ್ಯಾ ಇಲಾಖೆಯಲ್ಲಿ ಈಗಾಗಲೇ ಕಡಿತ ಮಾಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಇಲಾಖೆಯಲ್ಲಿಯೂ ಸಹ ರೀ-ಆರ್ಗನೈಜೇಷನ್ ಸೆಲ್ ಅಂತ ಮಾಡಿದ್ದೇವೆ. ವೇಸ್ಟ್ ಆಗಿರತಕ್ಕಂಥ ಕೆಲವು ಡಿಪಾರ್ಟ್‌ಮೆಂಟ್ಸ್ ಏನಿದ್ದಾವೆ, ಈಗ ಉದಾಹರಣೆಗೆ ಕರ್ನಾಟಕ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್, ಅದೇ ರೀತಿ ಟೆಂಪರೆನ್ಸ್ ಬೋರ್ಡ್ ಇದೆ, ಅದಕ್ಕೆಲ್ಲಾ 9 ಲಕ್ಷ,.10 ಲಕ್ಷ ಖರ್ಚಾಗುತ್ತಿದೆ. ಅಲ್ಲಿ ಏನೂ ಕೆಲಸ ಮಾಡುತ್ತಿಲ್ಲ. ಅದೇ ರೀತಿ ಕಂಠೀರವ ಸ್ಟುಡಿಯೋ ಇದೆ. ಇಲ್ಲಿನ ನೌಕರರನ್ನು ಯಾವ ರೀತಿಯಾಗಿ ಬೇರೆ ಕಡೆಗೆ ಅಡ್ಜಸ್ಟ್ ಮಾಡಬೇಕೆಂದು ನೋಡುತ್ತಿದ್ದೇವೆ. ಅಲ್ಲಿನ ನೌಕರರು ಸುಮ್ಮನೆ ಕುಳಿತುಕೊಂಡಿದ್ದಾರೆ. ಸುಮ್ಮನೆ ಹಣ ಖರ್ಚಾಗುತ್ತಿದೆ ಎಂಬುದರ ಬಗ್ಗೆ ಎಲ್ಲಾ ನಿಗಾ ಮಾಡಿ ಇದನ್ನು ಯಾವ ರೀತಿಯಲ್ಲಿ ರೀ-ಆರ್ಗನೈಜ್‌ಮಾಡಬಹುದು, ಯಾವ ರೀತಿಯಾಗಿ ವೆಚ್ಚವನ್ನು ಕಡಿಮೆ ಮಾಡಬೇಕೆನ್ನುವ ಬಗ್ಗೆ ನಮ್ಮ ಇಲಾಖೆ ನೋಡುತ್ತಿದೆ. ಮತ್ತೆ ನಮ್ಮ ಪತ್ರಕರ್ತ ಸ್ನೇಹಿತರಿಗೆ ಎಂ.ಬಿ. ಸಿಂಗ್ ವರದಿ ಜಾರಿ ಮಾಡುವುದರ ಜೊತೆಗೆ ಇನ್ನೂ ಕೆಲವು ಕಲ್ಯಾಣ ಕಾರ್ಯಕ್ರಮಗಳನ್ನು ನಾವು ಪತ್ರಕರ್ತರಿಗೆ ಪ್ರಾರಂಭ ಮಾಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಅದನ್ನು ಈಗಾಗಲೇ ಬಜೆಟ್‌ನಲ್ಲಿ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಉಚಿತವಾಗಿ ಬಸ್ಸು ಪ್ರಯಾಣ ಸೌಲಭ್ಯವನ್ನು ಪತ್ರಕರ್ತರಿಗೆ ಕೊಡತಕ್ಕದ್ದನ್ನು, ಆಮೇಲೆ ಗ್ರೂಪ್ ಇನ್‌ಷೂರೆನ್ಸ್ ಸ್ಕೀಮ್ ಅಂತ ಹೇಳತಕ್ಕಂಥಾದ್ದನ್ನು ಮಾಡುತ್ತೇವೆ, ಮತ್ತೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕಂಥ ಪತ್ರಕರ್ತರಿಗೆ ಸೈಟ್ ಕೊಡಬೇಕು, ಅವರು ಅಲ್ಲಿ ಮನೆ ಕಟ್ಟಿಕೊಂಡು ಚೆನ್ನಾಗಿರಬೇಕೆಂಬ ಬಗ್ಗೆ ಕ್ರಮ

ಕೈಗೊಂಡಿದ್ದೇವೆ. ಕೆಲವರಂತೂ ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಎಲ್ಲರೂ ಬಹಳ ಸುಖವಾಗಿ ಇದ್ದಾರೆಂದು ಅಲ್ಲ. ಅವರು ಮನೆ ಕಟ್ಟಿಕೊಳ್ಳಲಿಕ್ಕೆ ಒಂದೊಂದು ಸೈಟ್ ಕೊಡುವುದರ ಜೊತೆಗೆ ಕೆ.ಎಸ್.ಆರ್.ಟಿ.ಸಿ ಮತ್ತು ನಗರ ಸಾರಿಗೆಯಲ್ಲಿ ಸೌಲಭ್ಯ ಒದಗಿಸಿಕೊಡಲಾಗುವುದು. ಮಾಸಾಶನ ಕೊಡತಕ್ಕಂಥಾದ್ದು ಈಗ ಬಹಳ ಕಡಿಮೆ ಇದೆ, ಆದ್ದರಿಂದ, ಇದನ್ನು ಜಾಸ್ತಿ ಮಾಡುತ್ತೇವೆ. ಇನ್ನು ಪತ್ರಕರ್ತರ ಮಕ್ಕಳಿಗೆ ಕಾಂಪಿಟೇಟಿವ್ ಜಗತ್ತಿನಲ್ಲಿ ಮೆಡಿಕಲ್ ಸೀಟು ಮತ್ತು ಇಂಜಿನಿಯರಿಂಗ್ ಸೀಟು ಸಿಗತಕ್ಕಂಥಾದ್ದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ಪತ್ರಕರ್ತರ ಮಕ್ಕಳಿಗೆ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಸೀಟುಗಳನ್ನು ರಿಸರ್ವ್ ಮಾಡತಕ್ಕಂಥಾದ್ದು, ಹಾಗೆಯೇ ರೈಲು ಪ್ರಯಾಣದಲ್ಲಿ ರಿಯಾಯಿತಿ, ದೂರವಾಣಿ ಸೌಲಭ್ಯದಲ್ಲಿ ಆದ್ಯತೆ, ಇವೆಲ್ಲಾ ಪತ್ರಕರ್ತರ ಕಲ್ಯಾಣ ಕಾರ್ಯಕ್ರಮಗಳೆಂದು ತಿಳಿದು, ಈ ಬಗ್ಗೆ ಯೋಜನೆ ಹಮ್ಮಿಕೊಳ್ಳಲು ನಮ್ಮ ಸರ್ಕಾರ ತೀರ್ಮಾನ ಮಾಡಿದೆ. ಅದರ ಜೊತೆಗೆ, ಟೂರಿಸಂ ಬಗ್ಗೆ ಹೇಳುವುದಾದರೆ ಈಗಾಗಲೇ ನಾವು ಜೋಗ್ ಅನ್ನು ನಮ್ಮ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಜೋಗ್ ಡೆವಲಪ್‌ಮೆಂಟ್ ಅಥಾರಿಟಿ ಅಂತ ಮಾಡಿದ್ದಾರೆಂದು ಹೇಳಿದ್ದೇನೆ., ಅದಕ್ಕೆ ಸುಮಾರು 16 ಕೋಟಿ ರೂಪಾಯಿಗಳ ವೆಚ್ಚ ಮಾಡಿ ಅಲ್ಲಿ ಎಲ್ಲಾ ರೀತಿಯ ಓವರ್ ಆಲ್ ಡೆವಲಪ್‌ಮೆಂಟ್ ಮಾಡಬೇಕೆಂದು ಈ ವರ್ಷ 1 ಕೋಟಿ ರೂಪಾಯಿಗಳ ಪ್ರಾವಿಜನ್ ಅನ್ನು ನಾವು ಮಾಡಿಕೊಂಡಿದ್ದೇವೆ. ಅದರ ಜೊತೆಗೆ ನಮ್ಮ ಈ ಪ್ರವಾಸೋದ್ಯಮ ಇಲಾಖೆಯಲ್ಲಿ ಓವರ್ ಆಲ್ ಡೆವಲಪ್‌ಮೆಂಟ್ ಆಗಬೇಕೆಂದು110 ಕೋಟಿ ರೂಪಾಯಿಗಳ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಅದನ್ನು ಜಪಾನ್ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಮೂಲಕ ಕಳುಹಿಸಿ, ಅದಕ್ಕೆ ಸಹಾಯ ಕೇಳಿದ್ದೇವೆ. ಅದು ಇನ್ನೂ ಬರಲಿಲ್ಲ. ಅದು ನಮಗೆ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಇದರಿಂದ ನಮ್ಮ ಮಾಸ್ಟರ್ ಪ್ಲಾನ್ ಸೆಕ್ಸಸ್ ಆಗಲಿಲ್ಲ. ಹಲವಾರು ಜನ ಮಾನ್ಯ ಸದಸ್ಯರು ಸುಮಾರು 200-225-250 ಸ್ಥಳಗಳ ಬಗ್ಗೆ ಕೇಳುತ್ತಿದ್ದಾರೆ. ಇದನ್ನು ಡೆವಲಪ್‌ಮೆಂಟ್ ಮಾಡಿ ಇದು ದ್ವಾಪರಯುಗದ್ದು, ಇದು ಕಲಿಯುಗದ್ದು, ಇದು ತ್ರೇತಾಯುಗದ್ದು, ಇದು ಒಳ್ಳೆಯ ದೇವಸ್ಥಾನ, ಇದು ಒಳ್ಳೆಯ ಮಾನ್ಯುಮೆಂಟ್, ಇದು ಬಹಳ ಹಿಸ್ಟಾರಿಕಲ್ ಪ್ಲೇಸ್, ರಮಣೀಯವಾದ ಜಾಗ, ಇದು ಬಹಳ ಸೌಂದರ್ಯದಿಂದ ಕೂಡಿದೆ ಎಂದು ಹೇಳುತ್ತಿದ್ದಾರೆ. ಈ ಪೊಟೆನ್‌ಷಿಯಾಲಿಟಿ ಆಫ್ ಟೂರಿಸಂಗೆ ನಮ್ಮ ಕರ್ನಾಟಕದಲ್ಲಿ ಕೊರತೆ ಇಲ್ಲ. ಸಾಕಷ್ಟು ಇದೆ. ಕಣ್ಣಿಗೆ ನೋಡುವುದಕ್ಕೆ ಎಷ್ಟು ಸಾಧ್ಯವೋ ಅದಕ್ಕಿಂತ ಜಾಸ್ತಿ ಇದೆ. ಇವುಗಳನ್ನು ಡೆವಲಪ್ ಮಾಡಬೇಕು, ಫೆಸಿಲಿಟೀಸ್ ಕೊಡಬೇಕು ಆದರೆ ಇದನ್ನು ಕೊಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಕಾರಣ ಏನೆಂದರೆ ನಮ್ಮಲ್ಲಿರುವ ಹಣದ ಕೊರತೆ. ಆ ಒಂದು ದೃಷ್ಟಿಯಿಂದ ನಾವು ಒ ಎಸ್ ಸಿ ಎಫ್ ಸ್ಕೀಮ್‌ನ ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಆದರೆ ಅದು ಮರೀಚಿಕೆಯಾಗಿ ಉಳಿದಿದೆ. ಆದರೂ ನಾವು ಭರವಸೆ ಇಟ್ಟಿದ್ದೇವೆ. ಕೇಂದ್ರದ ಮಂತ್ರಿಗಳೂ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಸಲ ಕೊಡಬಹುದು ಎಂದು ಹೇಳತಕ್ಕಂಥ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾವು ಆ ಒಂದು ನಿರೀಕ್ಷೆಯಲ್ಲಿ ಹೋಗುತ್ತಿದ್ದೇವೆ. ಅದು ಬಂದರೆ 250 ಜಾಗಗಳನ್ನು ನಾವು ಟೂರಿಸಂ ಇಲಾಖೆಯಿಂದ ಏನು ಐಡೆಂಟಿಫೈ ಮಾಡಿರುತ್ತೇವೆ ಅಲ್ಲೆಲ್ಲಾ ತಂಗುವುದಕ್ಕೆ ವ್ಯವಸ್ಥೆ, ವಾಟರ್ ಮತ್ತು ಎಲೆಕ್ಟ್ರಿಸಿಟಿ ಫೆಸಿಲಿಟೀಸ್, ರೆಸ್ಟೋರೆಂಟ್, ಫಾಸ್ಟ್ ಫುಡ್ ಸೌಲಭ್ಯ ಇವನ್ನೆಲ್ಲಾ ಕೊಡುವುದಕ್ಕೆ ಅನುಕೂಲವಾಗುತ್ತದೆಂಬ ದೃಷ್ಟಿ ಇದೆ. ಹಾಗೆ ನಾವು ಕೆಲವು ಫೆಸ್ಟಿವಲ್‌ಗಳನ್ನು ಈಗಾಗಲೇ ಮಾಡಿರುತ್ತೇವೆ. ಮಾನ್ಯ ಉಪಾಧ್ಯಕ್ಷರೇ ತಮಗೂ ಗೊತ್ತು, ಈ ಸಲ ಚಿತ್ರದುರ್ಗದಲ್ಲಿ ಫೆಸ್ಟಿವಲ್ ಮಾಡಿರುತ್ತೇವೆ. ಮುಂದಿನ ಸಲ ದಾವಣಗೆರೆಯಲ್ಲಿ ಮಾಡುತ್ತೇವೆ. ಆಮೇಲೆ ಕರಾವಳಿ ಫೆಸ್ಟಿವಲ್ ಮಾಡಿರುತ್ತೇವೆ. ಪಟ್ಟದಕಲ್ ಫೆಸ್ಟಿವಲ್ ಮಾಡಿರುತ್ತೇವೆ. ಮಡಿಕೇರಿಯಲ್ಲಿ ವಸಂತೋತ್ಸವ ಮಾಡಿರುತ್ತೇವೆ. ಹಂಪೆ ಫೆಸ್ಟಿವಲ್ ಮಾಡುತ್ತೇವೆ. ಇದು ಸಪರೇಟ್, ಇದು ಇಂಟರ್ ನ್ಯಾಷನಲ್ ಸ್ಟೇಚರ್ ಇರತಕ್ಕಂಥ ಫೆಸ್ಟಿವಲ್. ಅದನ್ನು ಮುಂದಿನ ತಿಂಗಳು ಮಾಡುತ್ತೇವೆ, ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ತಾರೀಖನ್ನು ಕೊಡುತ್ತಿದ್ದಾರೆ, ಇದರ ಜೊತೆಗೆ ಮಾನ್ಯ

ಸದಸ್ಯರು ಏನು ಕೇಳುತ್ತಿದ್ದಾರೆಂದರೆ ಬೇರೆ ಬೇರೆ ಕಡೆಗಳಲ್ಲಿ ಫೆಸ್ಟಿವಲ್ ಮಾಡಿತ್ತಿದ್ದೀರಿ, ನಮ್ಮ ಜಿಲ್ಲೆಗಳಲ್ಲಿ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಫೆಸ್ಟಿವಲ್ ಮಾಡತಕ್ಕಂಥ ಉದ್ದೇಶ ಅಲ್ಲಿ ಸ್ಥಳೀಯವಾಗಿ ಇರತಕ್ಕಂಥ ಸಂಗೀತ, ಸಾಹಿತ್ಯ, ನೃತ್ಯ, ಕಲೆ, ಅಲ್ಲಿರತಕ್ಕಂಥ ಹ್ಯಾಂಡಿಕ್ರಾಫ್ಟ್, ಫುಡ್ ಸಿಸ್ಟಂ ಎಲ್ಲಾ ಗೊತ್ತಾಗಬೇಕೆಂಬ ಉದ್ದೇಶ ಮತ್ತು ಅಲ್ಲಿಯ ಒಂದು ಚರಿತ್ರೆಯನ್ನು ಮೆಲುಕು ಹಾಕತಕ್ಕಂಥ ಸದವಕಾಶ ಅಲ್ಲಿ ಸಿಗಬೇಕೆಂಬ ಉದ್ದೇಶದಿಂದ ಟೂರಿಸಂ ಇಲಾಖೆಯಿಂದ ಫೆಸ್ಟಿವಲ್ ಮಾಡುತ್ತಿದ್ದೇವೆ. ಹಂಪೆ ಫೆಸ್ಟಿವಲ್ ಇಂಟರ್ ನ್ಯಾಷನಲ್ ಮಟ್ಟದ್ದು ಆದರೆ ಸ್ಥಳೀಯವಾಗಿ ಡಿಸ್ಟ್ರಿಕ್ಟ್ ಲೆವೆಲ್ ಫೆಸ್ಟಿವಲ್ ಮಾಡಬೇಕೆಂದಿದ್ದೇವೆ. ಅದಕ್ಕೋಸ್ಕರ ಸರ್ಕಾರದ ಯೋಜನೆ ತಯಾರು ಮಾಡಿ ಎಲ್ಲಾ ಡಿಸ್ಟ್ರಿಕ್ಟ್‌ಗೆ ಒಂದೊಂದು ಫೆಸ್ಟಿವಲ್ ಮಾಡಬೇಕೆಂದು ಹೇಳತಕ್ಕಂಥಾದ್ದು ಇದೆ. ಈಗ ಮಂಡ್ಯ ಜಿಲ್ಲೆಗೆ ಕಾವೇರಿ ಫೆಸ್ಟಿವಲ್ ಎಂದು ಹೆಸರಿಟ್ಟಿದ್ದೇವೆ, ಏತಕ್ಕೆಂದರೆ ಜನರು ಕಾವೇರಿ ನೀರು ಕುಡಿದು ಅದನ್ನು ಬಹಳವಾಗಿ ಬಳಸಿಕೊಂಡಿದ್ದಾರೆ. ಕಾವೇರಿ ತಾಯಿ ಋಣ ತೀರಿಸುವುದು ಬಹಳ ಕಷ್ಟ. ಚಿಕ್ಕಮಗಳೂರಿಗೆ ಚೈತ್ರ ಫೆಸ್ಟಿವಲ್ ಎಂದು ಹೇಳತಕ್ಕಂಥಾದ್ದು, ಆಮೇಲೆ ಕೋಲಾರಕ್ಕೆ ನಂದಿ ಫೆಸ್ಟಿವಲ್ ಎಂದು ಹೇಳತಕ್ಕಂಥಾದ್ದು ಬೆಂಗಳೂರು ಗ್ರಾಮಾಂತರಕ್ಕೆ ಕೆಂಪೇಗೌಡ ಫೆಸ್ಟಿವಲ್ ಎಂದು ಹೇಳತಕ್ಕಂಥಾದ್ದು, ಬಳ್ಳಾರಿಗೆ ಹಂಪೆ ಫೆಸ್ಟಿವಲ್, ವಿಜಾಪುರಕ್ಕೆ ಪಟ್ಟದಕಲ್ ನವರಸ ಫೆಸ್ಟಿವಲ್, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕರಾವಳಿ ಫೆಸ್ಟಿವಲ್, ಆಮೇಲೆ ಗೂಲ್ಬರ್ಗಾ ಡಿಸ್ಟ್ರಿಕ್ಟ್‌ಗೆ, ಅಲ್ಲಿರತಕ್ಕಂಥ ಇನ್‌ಚಾರ್ಜ್ ಡಿಸ್ಟ್ರಿಕ್ಟ್ ಮಿನಿಸ್ಟರ್‌ಗಳಾದ ಮಾನ್ಯ ಧರ್ಮಸಿಂಗ್ ಮತ್ತು ಖರ್ಗೆ ಅವರುಗಳ ಹತ್ತಿರ ಮಾತನಾಡಿರುತ್ತೇವೆ, ಅವರು ಅದಕ್ಕೆ ನೃಪತುಂಗ ಎಂದು ಹೆಸರಿಡೋಣ ಎಂದು ಹೇಳಿದ್ದಾರೆ. ಅವನು ಜೈನರ ದೊಡ್ಡ ಆಡಳಿತಗಾರ, ಚಕ್ರವರ್ತಿ, ಅವರ ಹೆಸರು ಇಡಬೇಕೆಂದು ಹೇಳತಕ್ಕಂಥಾದ್ದು ಇದೆ. ಧಾರವಾಡಕ್ಕೆ ಶಿಶುನಾಳ ಷರೀಫರ ಹೆಸರಿಡಬೇಕೆಂದು ಇದೆ. ಏಕೆಂದರೆ ಅವರು ಸಂತರು, ಬಹಳ ದೊಡ್ಡವರು, ಹುಟ್ಟುತ್ತಾ ಅವರು ಮುಸ್ಲಿಮರಾದರೂ ಹಿಂದೂ ಜೈನರು, ಕ್ರೈಸ್ತರು ಎಂದು ನೋಡಲಿಲ್ಲ. ಆದ್ದರಿಂದ ಅವರ ಹೆಸರಿನಲ್ಲಿ ಮಾಡಬೇಕೆಂದು ಸೂಚನೆ ಬಂದಿದೆ. ನಾನು ಇನ್ನೂ ಅದನ್ನು ಫೈನಲೈಸ್ ಮಾಡಲಿಲ್ಲ. ಹಾಸನಕ್ಕೆ ಬೇಲೂರು ಹಳೇಬೀಡು ಇದೆ, ಇದು ಇಂಟರ್‌ನ್ಯಾಷನಲ್ ಫೇಮಸ್ ಆಗಿರತಕ್ಕಂಥ ಜಾಗ. ಅದಕ್ಕೆ ಹೋಯ್ಸಳರ ಫೆಸ್ಟಿವಲ್ ಎಂದು ಹೇಳತಕ್ಕಂಥಾದ್ದು ಇದೆ. ಹಾಗೆ ಬೀದರ್ ದೊಡ್ಡ ಹೆಸರನ್ನು ಕೊಡತಕ್ಕಂಥಾದ್ದು ಇದೆ. ರಾಯಚೂರಿಗೆ ಇನ್ನೂ ಕೊಟ್ಟಿಲ್ಲ, ಮೈಸೂರು ದಸರಾ ಫೆಸ್ಟಿವಲ್ ಇದೆ. ಆದಕಾರಣ ಬೇರೆ ಹೆಸರನ್ನು ಕೊಡತಕ್ಕಂಥಾದ್ದು ಅನಾವಶ್ಯಕ. ಚಿತ್ರದುರ್ಗಕ್ಕೆ ಚಿತ್ರದುರ್ಗ ಫೆಸ್ಟಿವಲ್ ಎಂದು ಕೊಟ್ಟಿದ್ದೇವೆ. ಹೀಗೆ ಕೆಲವು ಹೆಸರುಗಳನ್ನು ಕೊಟ್ಟಿದ್ದೇವೆ. ಮತ್ತೆ ಕೆಲವಕ್ಕೆ ಹೆಸರುಗಳನ್ನು ಕೊಟ್ಟಿಲ್ಲ, ಅದಕ್ಕೆ ಅಲ್ಲಿರತಕ್ಕಂಥ ದೊಡ್ಡ ದೊಡ್ಡ ಕಲಾವಿದರ ಹೆಸರುಗಳನ್ನು ಕೊಡಬೇಕೆಂದು ಇದೆ. ಬೆಳಗಾಂಗೆ ಕಿತ್ತೂರು ಫೆಸ್ಟಿವಲ್ ಎಂದು ಇದೆ. ಸ್ವಾತಂತ್ರ್ಯಕ್ಕೋಸ್ಕರ ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಕಿತ್ತೂರು ಫೆಸ್ಟಿವಲ್ ಎಂದು ಇಟ್ಟಿದ್ದೇವೆ. ಬೆಂಗಳೂರು ಗ್ರಾಮಾಂತರಕ್ಕೆ ಕೆಂಪೇಗೌಡ ಫೆಸ್ಟಿವಲ್, ಬೆಂಗಳೂರು ಪ್ರಾಪರ್‌ಗೆ ಏನೂ ಬೇಡ, ಇಲ್ಲೆಲ್ಲಾ ಇದ್ದೇ ಇದೆ. ಅದಕ್ಕೋಸ್ಕರ ಸಿಟಿಗೆ ಫೆಸ್ಟಿವಲ್ ಬೇಡ ಎಂದು ತೀರ್ಮಾನ ಮಾಡುತ್ತಿದ್ದೇವೆ. ಕೆಲವು ಹೆಸರುಗಳು ಕಾಂಟ್ರೋವರ್ಸಿಯಲ್ ಆಗಿರತಕ್ಕಂಥಾದ್ದು ಇದೆ. ಅದಕ್ಕೋಸ್ಕರ ಅಲ್ಲಿರತಕ್ಕಂಥ ಎಲ್ಲಾ ಎಂ.ಎಲ್.ಎ ಗಳು ಮತ್ತು ಎಂ.ಎಲ್.ಸಿಗಳನ್ನು , ಅಲ್ಲಿರತಕ್ಕಂಥ ಕಲಾವಿದರು, ಸಾಹಿತಿಗಳು, ಇತಿಹಾಸಕಾರರು, ದೊಡ್ಡ ದೊಡ್ಡ ಗಣ್ಯ ವ್ಯಕ್ತಿಗಳ ಹತ್ತಿರ ವಿಮರ್ಶೆ ಮಾಡಿ ಯಾವ ಹೆಸರನ್ನು ಇಟ್ಟರೆ ಸೂಕ್ತ ಎಂದು ನೋಡುತ್ತೇವೆ. ಇಲ್ಲಿ ಡೆಪ್ಯುಟಿ ಕಮೀಷನ್‌ರವರು ಚೇರ್ಮನ್ ಆಗಿರುತ್ತಾರೆ. ಅವರ ನೇತೃತ್ವದಲ್ಲಿ ನಮ್ಮ ಟೂರಿಸಂ ಡಿಪಾರ್ಟ್‌ಮೆಂಟ್‌ನವರು ಸ್ವಲ್ಪ ಹಣ ಕೊಡುತ್ತಾರೆ. ಪೂರ್ತಿ ಹಣ ಕೊಡುವುದಿಲ್ಲ. ಸಾಕಷ್ಟು ಹಣ ಇದೆ ಇಲ್ಲ ಎಂದು ಅಲ್ಲ. ಸ್ವಲ್ಪ ಮಟ್ಟಿಗೆ ಹಣವನ್ನು ಈ ಹೆಸರಿನಲ್ಲಿ ನಾವು ಕೊಡುತ್ತೇವೆ. ಅವರು ಅಲ್ಲಿ ಮುನಿಸಿಪಾಲಿಟಿ ಅಥವಾ ಪಬ್ಲಿಕ್ ಕಂಟ್ರಿಬ್ಯೂಷನ್‌ನಿಂದ ಆ ಯೋಜನೆಯನ್ನು ಜಾರಿ ಮಾಡಬೇಕೆಂದು

ಮಾಡಿದ್ದೇವೆ. ಇದು ಫೆಸ್ಟಿವಲ್ ಬಗ್ಗೆ ನಾವು ಮಾಡಿರತಕ್ಕಂಥ ಯೋಜನೆ. ಇನ್ನು 1993 ರಲ್ಲಿ ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ಪೂಜೆ ನಡೆಯಲಿದೆ. ಇದು ರಾಷ್ಟ್ರಮಟ್ಟದ, ಅಂತರ ರಾಷ್ಟ್ರೀಯ ಮಟ್ಟದ ಜೈನರ ಒಂದು ಪವಿತ್ರ ಸ್ಥಳ. ಇಲ್ಲಿ ಮಹಾಮಸ್ತಕಾಭಿಷೇಕ ಪೂಜೆ ಆಗುತ್ತದೆ. ನಾವು ಈಗಾಗಲೇ ಒಂದು ಮೀಟಿಂಗ್ ಮಾಡಿರುತ್ತೇವೆ. ನಮ್ಮ ಚೀಫ್ ಸೆಕ್ರೆಟರಿ ಟಿ.ಪಿ.ಇಸ್ಸಾರ್ ರವರು ಮೀಟಿಂಗ್ ಅಟೆಂಡ್ ಮಾಡಿದ್ದಾರೆ. ನಾವು ಕೆಲವು ತೀರ್ಮಾನಗಳಿಗೆ ಬಂದಿದ್ದೇವೆ. ಏನೆಂದರೆ, ಅಲ್ಲಿಗೆ ಬರತಕ್ಕಂಥ ಟೂರಿಸ್ಟ್‌ಗೆ ಫೆಸಿಲಿಟೀಸ್ ಕೊಡಬೇಕು, ಅಲ್ಲಿ ಗೆಸ್ಟ್ ಹೌಸ್ ಕಟ್ಟಲು ಎಷ್ಟು ವೆಚ್ಚವಾಗುತ್ತದೆಂಬ ಬಗ್ಗೆ ಯೋಜನೆ ಸಬ್‌ಮಿಟ್ ಮಾಡಿದಮೇಲೆ ಅದನ್ನು ತೀವ್ರಗತಿಯಲ್ಲಿ ತೆಗೆದುಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಇನ್ನು ನಮ್ಮ ಇಲಾಖೆಯಿಂದ ಮತ್ತೆ ಕೆ.ಎಸ್.ಟಿ.ಡಿ.ಸಿ. ಯಿಂದ ರೆಸ್ಟೋರೆಂಟ್ಸ್, ಹೋಟೆಲ್ಸ್ ಹಾಗೂ ಟ್ರಾನ್ಸಪೋರ್ಟೇಷನ್ ನಡೆಸುತ್ತಿದ್ದೇವೆ. ಮೇಲ್ಮನೆಯಲ್ಲಿ ಕೆಲವು ಮಾನ್ಯ ಸದಸ್ಯರು ನೀವು ದಯವಿಟ್ಟು ಕೆ.ಎಸ್.ಟಿ.ಡಿ.ಸಿ.ಯನ್ನು ವೈಂಡ್ ಅಪ್ ಮಾಡಿ ಎನ್ನತಕ್ಕಂಥ ಸಲಹೆಯನ್ನು ಕೊಟ್ಟರು. ಏಕೆಂದರೆ, ಅಲ್ಲಿ ಸರಿಯಾದ ಬಸ್ಸುಗಳ ಫೆಸಿಲಿಟೀಸ್ ಇಲ್ಲ. ಬಸ್ಸುಗಳಲ್ಲಿ ಏರ್ ಕಂಡೀಷನ್ ಇಲ್ಲ, ಕೋಚ್‌ಗಳು ಸರಿಯಾಗಿಲ್ಲ. ನಿಮ್ಮ ಹೋಟೆಲ್ಸ್‌ಗೆ ಹೋದರೆ ಕಾಫಿ ಬೇಗ ಕೊಡುವುದಿಲ್ಲವೆಂದು ಸಾಕಷ್ಟು ಸದಸ್ಯರು ಹೇಳಿದ್ದಾರೆ. ಮದ್ದೂರು ಮತ್ತು ಶ್ರೀರಂಗಪಟ್ಟಣ ಹಾಗೂ ಇತರ ಸ್ಥಳಗಳಲ್ಲಿ ಯಾವ ರೀತಿಯಲ್ಲಿ ವ್ಯವಸ್ಥೆ ಇದೆ ಎಂಬುದರ ಬಗ್ಗೆ ಹೇಳಿದ್ದಾರೆ. ನಾವೂ ಸಾಕಷ್ಟು ನೋಡಿದ್ದೇವೆ. ನಾನು ಆ ದಿಸೆಯಲ್ಲಿ ಅಬ್ರಪ್ಟ್ ಆಗಿ ವಿಸಿಟ್ ಹಾಕಿಕೊಂಡು ಹೋಗಿ ನೋಡಿ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ. ನಾಲ್ಕು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ಮೇಲೆ ನಾನು ಅವರನ್ನು ಕರೆದು ಏತಕ್ಕೆ ಈ ರೀತಿ ಆಗಿದೆ ಎಂದು ಕೇಳಿದಾಗ ನಾವು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿದ್ದವರು, ನಮಗೆ ತಂದು ಇಲ್ಲಿ ಹೋಟೆಲ್ ನಡೆಸಿ ಅಂತ ಹಾಕಿದ್ದಾರೆ, ನಮಗೇನೂ ಗೊತ್ತಾಗುವುದಿಲ್ಲ. ಅಂತ ಅವರು ನನಗೆ ಹೇಳಿದರು. They are not professionals. ಹೋಟೆಲ್ ನಡೆಸಬೇಕಾದರೆ ಪ್ರೊಫೆಷನಲ್ ಪೀಪಲ್ಸ್ ಬೇಕಾಗುತ್ತದೆಂದು ಆಗ ನನಗೆ ಗೊತ್ತಾಯಿತು. ಅವರಿಗೆ ಸ್ವಲ್ಪ ಒಳ್ಳೆಯ ಫೆಸಿಲಿಟೀಸ್ ಕೊಡಬೇಕೆಂಬ ಮನೋಭೂಮಿಕೆ ನನಗಿದೆ. ಆ ಒಂದು ದೃಷ್ಟಿಯಿಂದ ನಾವು ಪ್ರೈವಟೈಜೇಷನ್ ಅಂತ ಒಂದು ಕಾನ್‌ಸೆಪ್ಟ್ ಅನ್ನು ಇಟ್ಟುಕೊಂಡಿದ್ದೇವೆ. We will involve the private sector to invest large money into the Tourism. ಅಂದರೆ ನಮ್ಮ ಟೂರಿಸಂ ಇಲಾಖೆ ಮೂಲಕ ಹೋಟೆಲ್ಸ್ ಅನ್ನು ಹಾಗೆಯೇ ರೆಸ್ಟೋರೆಂಟ್ಸ್ ಅನ್ನು ನಡೆಸಿ ಹಾಗೂ ಟ್ರಾನ್ಸ್‌ಪೋರ್ಟ್ ಅನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಪ್ರೈವೇಟ್ ಸೆಕ್ಟಾರ್‌ನ್ನು ಇದರಲ್ಲಿ ಇನ್ವಾಲ್ವ ಮಾಡಬೇಕೆನ್ನತಕ್ಕಂಥ ದೃಷ್ಟಿಯಿಂದ ನಾವು ಪ್ರೈವಟೈಜೇಷನ್ ಅಂತ ಒಂದು ಕಾನ್‌ಸೆಪ್ಟ್ ಅನ್ನು ಇಟ್ಟುಕೊಂಡಿದ್ದೇವೆ. ಅದು ನಮ್ಮ ನೀತಿಯಾಗಿದೆ. ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಈಗಾಗಲೇ ಮೇಲ್ಮನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಇದರ ಜೊತೆಗೆ ನಮ್ಮ ಇಂಟರ್‌ನ್ಯಾಷನಲ್ ಇಯರ್ ಆಫ್ ಟೂರಿಸಂ ಅಂತ ಹೇಳತಕ್ಕಂಥಾದ್ದನ್ನು ಮಾರ್ಚಿವರೆಗೂ ಎಕ್ಸ್‌ಟೆಂಡ್ ಮಾಡಿದರು. ಇಂಟರ್ ನ್ಯಾಷನಲ್ ಇಯರ್ ಆಫ್ ಟೂರಿಸಂ ಯಶಸ್ವಿ ಆಯಿತೇ, ಏನು ಮಾಡಿದಿರಿ ಎಂದು ಸಾಕಷ್ಟು ಸುರಿ ಮಳೆ ಪ್ರಶ್ನೆಗಳು ಕೇಳಿಬಂದವು. ನಾನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಅದು ಯಶಸ್ವಿಯಾಗಲಿಲ್ಲ. International Tourism Year is a flop because Rajiv Gandhi murder; LTTE problem, ಇವೆಲ್ಲಾದರಕಾರಣದಿಂದ ಮಂಡಲ್ ಕಮೀಷನ್ ರಿಪೋರ್ಟ್ ವಿರುದ್ಧವಾಗಿ ಅಜಿಟೇಷನ್ ನಡೆಯಿತು. ಬಾಬ್ರಿ ಮಸೀದಿ ರಾಮಜನ್ಮ ಭೂಮಿ ವಿವಾದ ಪಂಜಾಬಿನಲ್ಲಿರತಕ್ಕಂಥ ಲಾ ಅಂಡ್ ಆರ್ಡರ್ ಪ್ರಾಬ್ಲಮ್, ಜಮ್ಮು ಮತ್ತು ಕಾಶ್ಮೀರದಲ್ಲಿರತಕ್ಕಂಥ ಚಳುವಳಿ, ಹಾಗೆಯೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾವೇರಿ ಬಗ್ಗೆ ಗಲಾಟೆ ಆಗಿರತಕ್ಕಂಥಾದ್ದು ಹೀಗಾಗಿ the tourism industry has suffered enough.

ಇದರಿಂದಾಗಿ ಯಾವ ಟ್ರಾವಲರ್ಸ್‌ಗಳಿಗೆ ಯಾವ ಪ್ಯಾಸೆಂಜರ್ಸ್‌ಗೆ ಸೇಫ್ಟಿ ಎನ್ನುವುದು ಇರಲಿಲ್ಲ. ಆಗ ಮೈಸೂರು ದಸರಾ ಟೈಮ್‌ನಲ್ಲಿ ಮೈಸೂರಿಗೆ ಯಾರೂ ಬರಲಿಕ್ಕೆ ಇಷ್ಟಪಡಲಿಲ್ಲ. ಆಮೇಲೆ ನಾವು ರೇಡಿಯೋ ಮೂಲಕ ದೂರದರ್ಶನದ ಮೂಲಕ, ಪತ್ರಿಕಾ ಮಾಧ್ಯಮದ ಮೂಲಕ ಏನೂ ಗಲಾಟೆ ಇಲ್ಲ, ನಾವೆಲ್ಲಾ ವ್ಯವಸ್ಥೆ ಮಾಡಿದ್ದೇವೆಂದು ತಿಳಿಸಿದ್ದೇವೆ. ನಮ್ಮ ಕೆ.ಆರ್.ಎಸ್. ಡ್ಯಾಮ್ ಸಿಡಿಸುತ್ತೇವೆಂದು ಥ್ರೆಟನಿಂಗ್ ಲೆಟರ್ಸ್‌ಗಳು ಬಂದವು. ಆಗ ನಾವು ನಮ್ಮ ಬೃಂದಾವನ ಮಾಡಿದೆವು. ನ್ಯಾಚುರಲ್ ಕಲಾಮೆಟೀಸ್ ಆಗಿ ರಂಗನ ತಿಟ್ಟುನಲ್ಲಿದ್ದ ಪಕ್ಷಿಗಳೆಲ್ಲಾ ಸತ್ತು ಹೋದವು. ಒಂದು ದೃಷ್ಟಿಯಿಂದ ನಾವು ಇದನ್ನೆಲ್ಲಾ ನೋಡಿದಾಗ ನಮ್ಮ ಇಂಟರ್ ನ್ಯಾಷನಲ್ ಟೂರಿಸಂಗಳಿಗೆ ಸರಿಯಾದ ಫೆಸಿಲಿಟೀಸ್ ಕೊಡಲಿಕ್ಕೆ ಆಗಲಿಲ್ಲ ಹಾಗೂ ಟೂರಿಸ್ಟ್‌ಗಳು ಸರಿಯಾಗಿ ಎಂಜಾಯ್ ಮಾಡಲಿಕ್ಕೆ ಆಗಲಿಲ್ಲ. ಆದ್ದರಿಂದಲೇ International Tourism year is a flop. ಅಂತ ಹೇಳತಕ್ಕಂಥ ಅನಿಸಿಕೆಯನ್ನು ನಾನು ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಹಾಗೆಯೇ ಕರ್ನಾಟಕ ರಾಜ್ಯದಲ್ಲಿ ಟೂರಿಸಂಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವ ಕೊಡಲಿಕ್ಕೆ ಆಗಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ನೇತಾರರು ಇದಕ್ಕೆ ಸಾಕಷ್ಟು ಒತ್ತು ಕೊಟ್ಟಿದ್ದಾರೆ. ಸಾಕಷ್ಟು ಹಣ ಕೊಡುತ್ತೇವೆಂದು ಹೇಳತಕ್ಕಂಥ ಭರವಸೆ ಕೊಟ್ಟಿದ್ದಾರೆ. ಮುಖ್ಯವಾಗಿ ಈ ಟೂರಿಸ್ಟ್ ಕಾನ್ಸೆಫ್ಟ್ ಪೊಟೆನ್ಷಿಯಾಲಿಟಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಇದೆ ಅದನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ ನಾವು ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. Government and private sector. ಇವೆರಡೂ ಇನ್‌ವೆಸ್ಟ್ ಮಾತ್ರ ಒಳ್ಳೆಯ ಫೆಸಿಲಿಟೀಸ್ ಕೊಡಲಿಕ್ಕೆ ಸಾಧ್ಯ, ಹಾಗೂ ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ ಅಂತ ಹೇಳತಕ್ಕಂಥ ನಂಬಿಕೆ ನನಗಿದೆ. ಆದ್ದರಿಂದ, ನಾನು ಜಾಸ್ತಿ ಹಣ ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ, ಗೌರ್ನಮೆಂಟ್ ಆಫ್ ಇಂಡಿಯಾದವರು ಕೇಂದ್ರ ಪುರಸ್ಕೃತ ಸ್ಕೀಮ್ಸ್‌ಗಳಲ್ಲಿ ಸಾಕಷ್ಟು ಹಣವನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೂ ಸಹ ಅವರು ಇನ್ನೂ ಕೊಡುವುದು ಬಾಕಿ ಇದೆ. ಸುಮಾರು 21 ಪ್ರಾಜೆಕ್ಟ್‌ಗಳು ಭಾರತ ಸರ್ಕಾರದ ಮುಂದೆ ಮಂಜೂರಾತಿಗಾಗಿ ಪೆಂಡಿಂಗ್ ಇವೆ. ಈ ಬಗ್ಗೆ ಕೇಂದ್ರ ಮಂತ್ರಿಗಳಿಗೆ ನಮ್ಮ ರಾಜ್ಯದ ಲೋಕಸಭಾ ಸದಸ್ಯರಿಗೆ ಮತ್ತು ರಾಜ್ಯ ಸಭಾ ಸದಸ್ಯರಿಗೆ ಪತ್ರವನ್ನು ಬರೆದಿದ್ದೇನೆ. ಅವರೂ ಸಹ ಇದನ್ನು ಪಾರ್ಲಿಮೆಂಟಿನಲ್ಲಿ ರೈಸ್ ಮಾಡಿದ್ದಾರೆ. ಇದರ ಬಗ್ಗೆ ಅಪ್ರೂವಲ್ ಕೊಡಿಸಿಕೊಡಿ ಎಂದು ಹೇಳತಕ್ಕಂಥ ಒತ್ತಾಯವನ್ನೂ ಕೂಡ ನಾನು ತಂದಿದ್ದೇನೆ. ಇದರ ಜೊತೆಗೆ ನ್ಯಾಷನಲ್ ಟೂರಿಸಂ ವರ್ಷದಲ್ಲಿ ಒಂದು ಬಹಳ ವಿಶೇಷವಾದ ಕಾರ್ಯಕ್ರಮವನ್ನು ಜಾರಿಗೊಳಿಸಲು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದ್ದೇವೆ. ಅದೇನೆಂದರೆ, ಪ್ಯಾಲೇಸ್ ಆನ್ ವೀಲ್ ಎಂದು ಹೇಳತಕ್ಕಂಥದ್ದರ ಬಗ್ಗೆ ಹೇಳಬೇಕೆಂದರೆ, ಗಾಲಿಗಳ ಮೇಲೆ ಅರಮನೆ ಎಂದು ಹೇಳುವ ಟ್ರೇನ್‌ನಲ್ಲಿ ಒಟ್ಟು 11 ಕೋಚ್ ಇರತಕ್ಕಂಥಾದ್ದು. ಅದರಲ್ಲಿ ಏರ್ ಕಂಡೀಷನ್ ಸೆಲೂನ್, ಊಟ ಹಾಗೂ ಇತರೆ ಎಲ್ಲಾ ರೀತಿಯ ವ್ಯವಸ್ಥೆಗಳಿವೆ. ಇದು ಗೋವಾ ಮತ್ತೆ ನಮ್ಮ ಕರ್ನಾಟಕದ ಜಾಯಿಂಟ್ ವೆಂಚರ್. ಕೇಂದ್ರ ಸರ್ಕಾರದಿಂದ ನಮಗೆ ಈಗಾಗಲೇ ಪತ್ರ ಬಂದಿದೆ. ನೀವು 88 ಲಕ್ಷ ರೂಪಾಯಿಗಳನ್ನು ಈ ಕೋಚ್‌ಗಳಿಗೆ, ಸೆಲೂನ್‌ಗಳಿಗೆ ಇಂಟೀರಿಯರ್ ಡೆಕೊರೇಟ್ ಮಾಡಲಿಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ. ಈ ದಿಶೆಯಲ್ಲಿ ಕರ್ನಾಟಕ ಮತ್ತು ಗೋವಾದಿಂದ ಮುಖ್ಯಮಂತ್ರಿಯವರು ಜಾಯಿಂಟ್ ಆಗಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟುಬಿಟ್ಟು ಜನವರಿ ಒಂದನೇ ತಾರೀಖಿನಿಂದ ಲಾಂಚ್ ಮಾಡುತ್ತೇವೆಂದು ಹೇಳತಕ್ಕದ್ದನ್ನು ಡಿಕ್ಲೇರ್ ಮಾಡಿಬಿಟ್ಟಿದ್ದರು. ಆಗ ಶ್ರೀಮಾನ್ ಜಾಫರ್ ಷರೀಫ್ ರವರು ಇನ್ನೂ ಕೋಚಸ್ ರೆಡಿ ಆಗಿಲ್ಲ, ನೀವು ಯಾವ ರೀತಿ ಪ್ರಾರಂಭ ಮಾಡುತ್ತೀರೆಂದು ಒಂದು ಅಬ್ಜೆಕ್ಷನ್ ತೆಗೆದರು. ಆದರೂ ಸಹ ನಮ್ಮ ಕಾತರತೆಯನ್ನು ನೋಡಿ, ರೈಲ್ವೆ ಮಿನಿಸ್ಟರ್‌ರವರು ನಮ್ಮ ರಾಜ್ಯದವರೇ ಆಗಿರುವ ಪ್ರಯುಕ್ತ ಅವರು ನಮ್ಮನ್ನು ಕರೆದು ಮೀಟಿಂಗ್ ಮಾಡಿ ಸೆಪ್ಟಂಬರ್ ಫಸ್ಟ್ ವೀಕ್‌ನಲ್ಲಿ ಇದನ್ನು ಲಾಂಚ್ ಮಾಡುತ್ತೇನೆ ಎಂಬ ಭರವಸೆಯನ್ನು ಕೊಟ್ಟಿದ್ದಾರೆ.

ನಿಜವಾಗಲೂ ನಾವು ಅವರನ್ನು ಅಭಿನಂದಿಸಬೇಕು. ಈ ಟ್ರೇನ್ ಗೋವಾದಿಂದ ಹೊರಟು ವಿಜಾಪುರ, ಹಂಪಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಮೈಸೂರು ಮೂಲಕ ಬೆಂಗಳೂರಿಗೆ ಬರಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಇದರ ರೇಟ್ಸ್ ನ್ಯಾಷನಲ್ ಟೂರಿಸ್ಟ್ಸ್‌ಗೆ, ಇಂಟರ್‌ನ್ಯಾಷನಲ್ ಟೂರಿಸ್ಟ್ಸ್‌ಗೆ ಯಾವ ರೀತಿಯಾಗಿ ಇರಬೇಕೆಂಬುದರ ಬಗ್ಗೆ ಈಗ ರೈಲ್ವೆ ಡಿಪಾರ್ಟ್‌ಮೆಂಟ್‌ನವರು, ಟೂರಿಸಂ ಡಿಪಾರ್ಟ್‌ಮೆಂಟಿನವರು, ಗೌರ್ನಮೆಂಟ್ ಆಫ್ ಇಂಡಿಯಾದವರು ಸೇರಿ ಚರ್ಚೆ ಮಾಡುತ್ತಿದ್ದಾರೆ. ಇಷ್ಟು ಕಾರ್ಯಕ್ರಮಗಳನ್ನು ನಾವು ಹೊಂದಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರು ಇನ್ನೂ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ಮನಃಪೂರ್ವಕವಾಗಿ ಸ್ವೀಕರಿಸಿ ಎಲ್ಲೆಲ್ಲಿ ನಮ್ಮ ವ್ಯಾಪ್ತಿಯಲ್ಲಿ, ನಮ್ಮ ಹಣಕಾಸಿನ ವ್ಯಾಪ್ತಿಯಲ್ಲಿ ಎಷ್ಟು ಡೆವಲಪ್ ಮಾಡಬೇಕೋ ಅದನ್ನು ಶಕ್ತಿ ಮೀರಿ ನಾವು ಡೆವಲಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ, ಈಗ ಕೆಲವು ಮಾನ್ಯ ಸದಸ್ಯರು ಹೇಳಿರುವ ವಿಷಯಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳಾದ ನಂಜಪ್ಪನವರು, ಶ್ರೀಮತಿ ಸುಮಾ ವಸಂತ್‌ರವರು, ಉಮೇಶ್ ಭಟ್‌ರವರು ಈ ನಮ್ಮ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಜಯಚಂದ್ರರವರು ಡಿಸ್ನಿ ಲ್ಯಾಂಡ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಿದ್ದೇವೆ. ಇದಕ್ಕಾಗಿ 327 ಎಕರೆ ಲ್ಯಾಂಡ್ ಇದೆ. ಚಿತ್ರನಗರಿ ಎಂದು ಮಾಡುತ್ತಿದ್ದೇವೆ. ಇದರ ಬಗ್ಗೆ ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ನಂಜನಗೂಡು ದೇವಸ್ಥಾನಕ್ಕೆ 5.25 ಲಕ್ಷ ರೂಪಾಯಿಗಳನ್ನು ಫ್ಲಡ್ ಲೈಟ್ ಹಾಕುವುದಕ್ಕೆ ಮಂಜೂರು ಮಾಡಿರುತ್ತೇವೆ. ಇದನ್ನು ದಯವಿಟ್ಟು ಮಾನ್ಯ ಮಹದೇವ್‌ರವರು ತಮ್ಮ ಕ್ಷೇತ್ರದಲ್ಲಿನ ಜನತೆಗೆ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ. ಡಾ. ನಂಜಪ್ಪನವರು ಶ್ರವಣಬೆಳಗೊಳದ ಬಗ್ಗೆ ಕೇಳಿದರು: ಅದರ ಬಗ್ಗೆ ನಾವು ಮೀಟಿಂಗ್ ಮಾಡಿರುತ್ತೇವೆ. ಅಲ್ಲಿ ಏರ್- ಸ್ಟ್ರಿಪ್ ಹಾಕಬೇಕೆಂದು ಹೇಳಿದರು, ಅದು ಭಾರಿ ಕಾಸ್ಟ್ಲಿ ಆಗುತ್ತದೆ, ನಮ್ಮ ಇಂಡಿಯನ್ ಟೂರಿಸ್ಟ್ ದೃಷ್ಟಿಯಿಂದ ಏರ್ ಸ್ಟ್ರಿಪ್ ಹಾಕಿ ನಡೆಸತಕ್ಕಂಥಾದ್ದು ಭಾರಿ ಕಾಸ್ಟ್ಲಿ ಆಗುತ್ತದೆ. ಆಮೇಲೆ ಕೆಲವು ಯಾತ್ರಾ ಸ್ಥಳಗಳ ಬಗ್ಗೆ ಹೇಳಿದರು. ಅದರ ಬಗ್ಗೆ ರಿಪೋರ್ಟ್ ತರಿಸಿ ಟೂರಿಸಂ ಡಿಪಾರ್ಟ್‌ಮೆಂಟ್ ಆಡಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆಮೇಲೆ ಶಿಶುನಾಳ ಷರೀಫರ ಊರು ಮತ್ತು ಕನಕದಾಸರ ಕಾಗಿನೆಲೆ ಸ್ಥಳಗಳನ್ನು ಟೂರಿಸ್ಟ್‌ಪ್ಲೇಸ್ ಮಾಡ ಬೇಕೆಂದು ಶ್ರೀಮಾನ್ ಕುನ್ನೂರ್ ಅವರು ಕೇಳಿದರು, ಇದರ ಬಗ್ಗೆ ಸಹ ವರದಿ ತರಿಸಿಕೊಂಡಿದ್ದೇನೆ. ಬಹಳ ಒಳ್ಳೆಯ ಜಾಗ. ಅದನ್ನು ಮಾಡಿಸುತ್ತೇವೆ ಎಂದು ಹೇಳುತ್ತೇನೆ. ಹಾಗೆಯೇ ನಮ್ಮ ಕರಾವಳಿ ಬಗ್ಗೆ ಏನೂ ಮಾಡಿಲ್ಲ, ಮರವಂತೆ ಬಗ್ಗೆ ಏನು ಮಾಡಿಲ್ಲ ಎಂದು ಹೇಳಿದರು. ಮರವಂತೆ ಬಗ್ಗೆ ಎಲ್ಲಾ ಮಾಡಿರುತ್ತೇವೆ. ಪ್ರಾಜೆಕ್ಟ್ ತಯಾರು ಮಾಡಿರುತ್ತೇವೆ, ಎಸ್ಟಿಮೇಟ್ ಮಾಡಿರುತ್ತೇವೆ, ಎಲ್ಲಾ ಮಾಡಿ ಕಳುಹಿಸಿದ್ದೇವೆ., ಆದರೆ ಪರಿಸರ ಇಲಾಖೆಯಿಂದ ಅಬ್ಜೆಕ್ಷನ್ ಆಗಿದೆ. ಇದರಿಂದಾಗಿ ಅದು ಹಾಗೆಯೇ ಕುಳಿತಿದೆ. ಅದನ್ನು ಅವರು ಅಂದರೆ ಕೇಂದ್ರ ಸರಕಾರದವರು ಕ್ಲಿಯರ್ ಮಾಡಬೇಕು. ಶಿವತಾಂಡವ ನೃತ್ಯದ ಬಗ್ಗೆ ಹೊಗಳಿದ್ದೀರಿ. ತಮಗೆ ಧನ್ಯವಾದಗಳು. ಶೃಂಗೇರಿ ಬಗ್ಗೆ ಶಾಮಣ್ಣನವರು ಹೇಳಿದ್ದಾರೆ. ಶೃಂಗೇರಿಗೆ ಅರ್ಧ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮೋಟಮ್ಮನವರೇ, ಕೆಮ್ಮಣ್ಣುಗುಂಡಿ, ಬಾಬಬುಡನಗಿರಿ, ಶೃಂಗೇರಿ ಇದಕ್ಕೆಲ್ಲಾ ನಾವು ಹಣ ಕೊಟ್ಟಿದ್ದೇವೆ. ಕೆಲಸ ನಡೆಯುತ್ತಿದೆ. ಮಾನ್ಯ ಪಿ.ಡಬ್ಲ್ಯೂ.ಡಿ ಸಚಿವರು ಇಲ್ಲಿದ್ದಾರೆ. ಅವರು ಬೇಗ ಕೆಲಸ ಮುಗಿಸಿಕೊಡಬೇಕೆಂದು ಉಪಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಶ್ರೀಮಾನ್ ವೆಂಕಟಪ್ಪನವರು ಮುಳುಬಾಗಿಲು ಬಗ್ಗೆ ಕೇಳುತ್ತಿದ್ದಾರೆ. ಅಲ್ಲಿ ಇಂಟೀರಿಯರ್ ಡೆಕೋರೇಷನ್ ಆಗಬೇಕು, ಅದು ಆದ ತಕ್ಷಣ ಅದನ್ನು ತಮಗೆ ಹ್ಯಾಂಡ್ ಓವರ್ ಮಾಡುತ್ತೇವೆ. ಮುಳುಬಾಗಿಲುನಲ್ಲಿ ವೇ ಸೈಡ್ ಫೆಸಿಲಿಟೀಸ್ ಹೋಟೆಲ್ ಅನ್ನು ಬಹಳ ಚೆನ್ನಾಗಿ ಕಟ್ಟಿದ್ದಾರೆ. ನಾನೂ ಹೋಗಿದ್ದೇನೆ. ಶ್ರೀಮಾನ್ ಅನಂತಕೃಷ್ಣರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಫಾರಿನ್‌ನಿಂದ ಏನೇನೋ ಲಿಟರೇಚರ್ ತಂದುಬಿಟ್ಟು ಹೇಳಿದ್ದಾರೆ. ಅಲ್ಲಿ ನೋಡಿರತಕ್ಕದ್ದರ ಬಗ್ಗೆ ಅವರು ಹೇಳಿದ್ದಾರೆ. ಅವರ ಸಲಹೆ ನಿಜವಾಗಲೂ ಸ್ವೀಕಾರಾರ್ಹವಾಗಿದೆ.

ನಮ್ಮ ಅಧಿಕಾರಿಗಳಿಗೆ ತಿಳಿಸುತ್ತೇನೆ. ಅವರು ಏನೇನು ಬರೆದುಕೊಟ್ಟಿದ್ದಾರೆ ಅದನ್ನು ಕಳುಹಿಸಿದ್ದೇನೆ. ಅದನ್ನು ಯಾವರೀತಿ ಜಾರಿಗೆ ಕೊಡಬೇಕು ಎಂಬುದನ್ನು ನೋಡುತ್ತೇವೆ. ಅದನ್ನು ಮಾಡೋಣ. ಶ್ರೀಮಾನ್ ರೇವಣ್ಣನವರು ಸಾವನದುರ್ಗದ ಅಭಿವೃದ್ಧಿ ಬಗ್ಗೆ ಪದೇ ಪದೇ ಕೇಳುತ್ತಿದ್ದಾರೆ ಮತ್ತು ಒಂದೊಂದು ಸಲ ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಅವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಜಾಗವನ್ನು ಐಡೆಂಟಿಫೈ ಮಾಡಿರುತ್ತೇವೆ. ಅದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಅವರು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಆ ಜಾಗವನ್ನು ನಮಗೆ ಹ್ಯಾಂಡ್ ಓವರ್ ಮಾಡಿಸಿದರೆ ನಾವು ಆಮೇಲೆ ಎಸ್ಟಿಮೇಟ್ ಮಾಡಿ ಡೆವಲಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ದೊಡ್ಡ ಆಲದಮರ ಇನ್ನಿತರ ಕಡೆಗಳಿಗೆ ಬಸ್ ಬಿಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಮಾಡೋಣ ಇಲ್ಲ ಎಂದು ಹೇಳುವುದಿಲ್ಲ, ಮಾಡಿಕೊಡುತ್ತೇವೆ ಎಂದು ಹೇಳುತ್ತೇನೆ. ಶ್ರೀಮತಿ ಸುಮಾ ವಸಂತ್‌ರವರು ಕೂರ್ಗ್‌ಗೆ ಏನೂ ಮಾಡಿಲ್ಲ ಎಂದು ಹೇಳಿದ್ದಾರೆ. ಅಲ್ಲಿಗೂ ಸಾಕಷ್ಟು ಅನುಕೂಲಗಳನ್ನು ಒದಗಿಸಿ ಕೊಟ್ಟಿದ್ದೇವೆ ಎಂದು ಹೇಳುತ್ತೇನೆ. ಎಲ್ಲಾ ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ತಾವು ನನ್ನ ಬೇಡಿಕೆಗಳನ್ನು ಮನಃಪೂರ್ವಕವಾಗಿ ಒಪ್ಪಿ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಹೇಳಿ ತಮಗೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ಇಂಧನ ಖಾತೆ ಮಂತ್ರಿಗಳು ತಮ್ಮ ಡಿಮ್ಯಾಂಡ್‌ಗಳಿಗೆ ಉತ್ತರ ನೀಡಬೇಕು.

ಇಂಧನ ಖಾತೆ ರಾಜ್ಯ ಸಚಿವರಿಂದ ಉತ್ತರ

ಶ್ರೀ ಎಂ. ರಾಮಪ್ಪ (ಇಂಧನ ಖಾತೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷಿಣಿಯವರೇ, ಬೇಡ್ತಿ ಯೋಜನೆ ಬಗ್ಗೆ ನಮ್ಮ ಉಮೇಶ್ ಭಟ್ಟರು ಹೇಳಿದ್ದಾರೆ. ಅವರು ಅದರಿಂದ ಸಮತೋಲನ ಆಗುವುದಿಲ್ಲ ಎಂದೇನೋ ಹೇಳಿದರು. ಆದರೆ, ಇವತ್ತು ಅಲ್ಲಿ ಲೆಕ್ಕಾಚಾರದ ಪ್ರಕಾರ 60 ಪೈಸೆಗೆ ಒಂದು ಯೂನಿಟ್ ಉತ್ಪಾದನೆ ಆಗುತ್ತದೆ. ಅಂದರೆ, ನಮಗೆ ಇದರಿಂದ ಬಹಳ ಉಪಯೋಗ ಆಗುತ್ತಿದೆ. ಅದನ್ನು ನಾವು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಅದನ್ನು ಬಿಡಲಿಕ್ಕೂ ಬರುವುದಿಲ್ಲ. ಆಗಲೇ ಈ ಬಗ್ಗೆ ಚಳುವಳಿ ನಡೆಯುತ್ತಿದೆ. ಎಂದರು. ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಏನೆಂದರೆ, ಅಲ್ಲಿ ಎಷ್ಟು ಕುಟುಂಬಗಳಿವೆಯೋ, ಆ ಒಂದೊಂದು ಕುಟುಂಬಕ್ಕೂ ಒಂದೊಂದು ಉದ್ಯೋಗ ಕೊಡಲು ನಾವು ತಯಾರಿದ್ದೇವೆ. ಹಾಗೇನೇ ಕಾಂಪನ್‌ಸೇಷನ್ ಸಹ ನಾವು ಕೊಡುತ್ತಿದ್ದೇವೆ. ಆಮೇಲೆ ಅಲ್ಲಿ 60ಪೈಸೆಗೆ ಒಂದು ಯೂನಿಟ್ ಉತ್ಪಾದನೆಯಾಗುತ್ತದೆ ಎಂಬುದೊಂದೇ ಅಲ್ಲ, ನೀರು ವೇಸ್ಟ್ ಕೂಡ ಆಗ್ತಿದೆ, ಅದನ್ನು ಸರಿಯಾಗಿ ಬಳಸಿಕೊಳ್ಳಬೇಕಾಗಿದೆ. ಇದರ ಬಗ್ಗೆ ಅವರಿಗೆ ನಾವು ಕೇಳಿಕೊಳ್ಳೋದು ಏನೆಂದರೆ, ಅವರು ಕೂಡ ಇದನ್ನೆಲ್ಲಾ ಒಪ್ಪಿಕೊಳ್ಳಬೇಕು, ಇನ್ನು ಮಿನಿ ಹೈಡಲ್ ಪವರ್ ಸ್ಕೀಮ್ಸ್ ಬಗ್ಗೆ ಬಹಳ ಮಂದಿ ಹೇಳುತ್ತಿದ್ದರು, ನಾವು ಈಗಾಗಲೇ ಐದಾರು ಜನ ಪ್ರೈವೇಟ್‌ನವರಿಗೆ ಅನುಮತಿ ಕೊಟ್ಟಿದ್ದೇವೆ. ಇನ್ನು ಮಿಕ್ಕವನ್ನೂ ಕೂಡ ಗುರ್ತಿಸಿದ್ದು, ಅವುಗಳ ಕೆಲಸವನ್ನೂ ಕೂಡ ನಾವು ಮಾಡಲು ರೆಡಿ ಆಗ್ತಿದ್ದೇವೆ. ಮತ್ತೆ ಆರ್.ಅಂಡ್ ವಿ ಲಾಸಸ್ ಏನಿದೆ, ಅದನ್ನು ಪ್ರತಿ ವರ್ಷ ಐದೈದು ಪರ್ಸೆಂಟ್ ನಾವು ಕಡಿಮೆ ಮಾಡುತ್ತಿದ್ದೇವೆ. ಮೊದಲು 19.1 ಇತ್ತು. ಇದನ್ನು ಕಡಿಮೆ ಮಾಡಿ ಕಳೆದ ವರ್ಷ ಚಿನ್ನದ ಪದಕ ಕೂಡ ನಾವು ತೆಗೆದುಕೊಂಡಿದ್ದೇವೆ. ರಾಯಚೂರು ಥರ್ಮಲ್ ಸ್ಟೇಷನ್ ಒಳ್ಳೆಯ ರೀತಿಯಲ್ಲಿ ಕೆಲಸಮಾಡಿದೆ ಅಂತ ಕೇಂದ್ರ ಸರ್ಕಾರ ನಮಗೆ 15 ಲಕ್ಷ ರೂಪಾಯಿಗಳ ಬಹುಮಾನ ಕೊಟ್ಟಿದೆ. ಪಂಪುಸೆಟ್ಟುಗಳ ವೋಲ್ಟೇಜ್ ಬಗ್ಗೆ ಹೇಳಬೇಕಾದರೆ ಅದನ್ನು ನಾವು ಇನ್ನೂ ಇಂಪ್ರೂವ್ ಮಾಡಬೇಕಾಗಿದೆ. ನಾಲ್ಕೈದು ತಿಂಗಳಲ್ಲಿ ಎಲ್ಲೆಲ್ಲಿ ಪಂಪುಸೆಟ್ಟುಗಳಿವೆ, ಅವುಗಳಿಗೆ ಸರಿಯಾಗಿ ವಿದ್ಯುತ್ ಒದಗಿಸಲು. . . .

ಶ್ರೀ ಕೆ. ಹರ್ಷಕುಮಾರಗೌಡ:- ಇನ್ನು ನಾಲ್ಕೈದು ತಿಂಗಳಲ್ಲಿ ಮಳೆ ಶುರುವಾಗುತ್ತದೆ, ಆಗ ಅದಷ್ಟು

ಡಿಮಾಂಡ್ ಇರೋದಿಲ್ಲ, ಈಗ ವೋಲ್ಟೇಜ್ ಇಲ್ಲದ ಕಾರಣ ಎಲ್ಲಾ ಕಡೆ ಮೋಟಾರ್‌ಗಳು ಸುಟ್ಟುಹೋಗುತ್ತಿವೆ.

ಶ್ರೀ ಎಂ. ಕಾಮಪ್ಪ:- ನಿಮ್ಮ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅಧಿಕಾರಿಗಳಿಗೆ ಅದನ್ನು ಸರಿ ಮಾಡಲೇಬೇಕು ಅಂತ ನಾನು ಹೇಳಿದ್ದೇನೆ. ವೋಲ್ಟೇಜ್ ಇಂಪ್ರೂವ್‌ಮೆಂಟ್ ಮಾಡುತ್ತೇವೆಂಬ ಭರವಸೆಯನ್ನು ನಾನು ಕೊಡುತ್ತೇನೆ, 10 ಹೆಚ್.ಪಿ. ಪಂಪುಸೆಟ್ಟುಗಳಿಗೆ ನಾವು ಇವತ್ತು ವಿನಾಯತಿ ಕೂಡ ಕೊಟ್ಟಿದ್ದೇವೆ. ಮಾನ್ಯ ಬಂಗಾರಪ್ಪನವರ ಸೂಚನೆ ಮೇರೆಗೆ ಇದನ್ನು ಮಾಡಿದ್ದೇವೆ. ಆದ್ದರಿಂದ, ತಾವೆಲ್ಲರೂ ಸಂತೋಷದಿಂದ ನನ್ನ ಖಾತೆಯ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 43,44,45,46,33,34 ಮತ್ತು 27 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 43 - ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣರಹಿತ)ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 124,22,00,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 - ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,80,87,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 70,66,25,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 - ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 141,35,38,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 29,48,38,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46 - ರೇವು ಮತ್ತು ಜಲ ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,11,000 ರೂಪಾಯಿಗಳಿಗಿಂತ ಮೀರಿದ ಮೊತ್ತನ್ನು ಮತ್ತು ಬಂಡವಾಳ ಖಾತೆಯಲ್ಲಿ 3,50,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33 - ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 56,47,85,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,00,23,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 34 - ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 259,63,21,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 559,68,79,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 - ವಾರ್ತಾ ಮತ್ತು ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,21,80,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,07,00,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಉಪಾಧ್ಯಕ್ಷಿಣಿಯವರು:- ಈಗ ಸಭೆ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ ಪುನಃ 9 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 9 ಗಂಟೆ 29 ನಿಮಿಷಗಳಿಗೆ ಮುಕ್ತಾಯವಾಗಿ, ಪುನ: ದಿನಾಂಕ 26ನೇ ಮಾರ್ಚಿ ಮಾಹೆ 1992ರ ಗುರುವಾರದಂದು ಬೆಳಿಗ್ಗೆ 9.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)